ಗುರುವಾರ, ಜನವರಿ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 20 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಪುಸ್ತಕಗಳಾಚೆಗೆ ಮಾಹಿತಿ ನೀಡುವ ಪರಿಕರಗಳಲ್ಲಿ ಅಟ್ಲಾಸ್ ಹೆಚ್ಚು ಪ್ರಯೋಜನಕಾರಿ.

ಆಳ-ಅಗಲ
ಪಂಜಾಬ್ ಅಖಾಡ: ಕಾಂಗ್ರೆಸ್‌ಗೆ ಎಎಪಿ ಸವಾಲು
ಒಬಿಸಿ ನಾಯಕರ ನಿರ್ಗಮನ: ಬಿಜೆಪಿಗೆ ಕಳವಳ 6
ಲಿಂಗನಮಕ್ಕಿ: 60 ಟಿಎಂಸಿ ಅಡಿ ನೀರು ಹೊರಕ್ಕೆ? 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,098 ▼	17,938 ▼	₹49,760 (ಬೆಂಗಳೂರು) ▲	₹65,100 (ಬೆಂಗಳೂರು) ▲	74.44 ▲

ಎರಡು ಅಲೆಯಲ್ಲಿ ಎಡವಿದರೂ ಸಜ್ಜಾಗದ ಸರ್ಕಾರ • ಐಸಿಯು ಸಹಿತ ಹಾಸಿಗೆಗಳ ಸಂಖ್ಯೆ 7,216 ಮಾತ್ರ

ಕೋವಿಡ್ ಉಲ್ಬಣಿಸಿದರೆ ಖಾಸಗಿ ಆಸ್ಪತ್ರೆಯೇ ಗತಿ!

• ವರುಣ ಹೆಗಡೆ

ಕಲಬುರಗಿ ಜಿಲ್ಲೆಯ ಯಡ್ರಾಮಿ ತಾಲ್ಲೂಕು ಆಸ್ಪತ್ರೆಯಲ್ಲಿ ದೂಳುಮಯವಾದ ಹಾಸಿಗೆಗಳು –ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡ್ ಮೂರನೇ ಅಲೆ ಎದುರಿಸಲು ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಸಂಖ್ಯೆಯನ್ನು ಹಲವು ಪಟ್ಟು ಹೆಚ್ಚಿಸಿರುವುದಾಗಿ ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ, ಕೋವಿಡ್ ಚಿಕಿತ್ಸೆಗೆ ಗೊತ್ತುಪಡಿಸಲಾದ 1.94 ಲಕ್ಷ ಹಾಸಿಗೆಗಳಲ್ಲಿ ಶೇ 73.71 ರಷ್ಟು ಹಾಸಿಗೆಗಳು ಖಾಸಗಿಯವರ ನಿಯಂತ್ರಣದಲ್ಲಿಯೇ ಇವೆ.

ಸರ್ಕಾರವು ಕೋವಿಡ್ ಚಿಕಿತ್ಸೆಗೆ ಮೀಸಲಿರಿಸಿದ ಹಾಸಿಗೆಗಳಲ್ಲಿ 51,093 ಹಾಸಿಗೆಗಳು ಮಾತ್ರ ಸರ್ಕಾರಿ ವ್ಯವಸ್ಥೆಯಡಿ ಇವೆ. ಇವುಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಹಾಸಿಗೆಗಳೂ ಸೇರಿವೆ. 1.43 ಲಕ್ಷ ಹಾಸಿಗೆಗಳು ಖಾಸಗಿ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳ ಅಡಿಯಲ್ಲಿ ಗುರುತಿಸಲಾಗಿದೆ.

ಆರೋಗ್ಯ ಕ್ಷೇತ್ರದ ತಜ್ಞರು ಅಂದಾಜಿಸಿರುವ ಪ್ರಕಾರ ಫೆಬ್ರುವರಿಯಲ್ಲಿ ಕೋವಿಡ್ ಉತ್ತುಂಗಕ್ಕೇರಿ, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಹೆಚ್ಚಳವಾಗಬಹುದು. ಹಾಗಾದಲ್ಲಿ, ಗಂಭೀರ ಆರೋಗ್ಯ ಸಮಸ್ಯೆ ಇರುವವರಿಗೆ ಚಿಕಿತ್ಸೆ ನೀಡಲು ಬೇಕಾಗುವ ಐಸಿಯು(ತೀವ್ರ ನಿಗಾ ಘಟಕ) ಹಾಸಿಗೆ 7,216 ಹಾಗೂ ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ 6,123 ಮಾತ್ರ. ಇದು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿರುವ ಸೌಲಭ್ಯ.

ಕೋವಿಡ್ ಎರಡನೇ ಅಲೆಯ ಬಳಿಕ ಸರ್ಕಾರವು ವೈದ್ಯಕೀಯ ಆಮ್ಲಜನಕ ತಯಾರಿಕಾ ಘಟಕಗಳ ನಿರ್ಮಾಣಕ್ಕೆ ಆದ್ಯತೆ ನೀಡಿತ್ತು. ಪೆಟ್ರೋಲಿಯಂ ಕಂಪನಿಗಳು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿಯಲ್ಲಿ 100 ಎಲ್‌ಪಿಎಂ (ಪ್ರತಿ ನಿಮಿಷಕ್ಕೆ ಸರಬರಾಜು) ಸಾಮರ್ಥ್ಯದ 28 ಆಮ್ಲಜನಕ ತಯಾರಿಕಾ ಘಟಕಗಳನ್ನು ಯಾದಗಿರಿ, ವಿಜಯಪುರ ಸೇರಿದಂತೆ ವಿವಿಧೆಡೆ ನಿರ್ಮಿಸಿಕೊಡುವುದಾಗಿ ಸರ್ಕಾರಕ್ಕೆ ಭರವಸೆ ನೀಡಿದ್ದವು. ಆದರೆ, ಇವು ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಪ್ರಾರಂಭ ಮಾಡಿಲ್ಲ. ಅದೇ ರೀತಿ, ರಾಜ್ಯ ಸರ್ಕಾರ ಹೊಸದಾಗಿ ಕೈಗೆತ್ತಿಕೊಂಡ 40 ಘಟಕಗಳ ಅಳವಡಿಕೆಯೂ ಬಹುತೇಕ ಕಡೆ ಪ್ರಗತಿಯಲ್ಲಿದೆ. ಇದರಿಂದಾಗಿ ರಾಜ್ಯದಲ್ಲಿ ಆಸ್ಪತ್ರೆ ದಾಖಲಾತಿ ಹೆಚ್ಚಳವಾದಲ್ಲಿ ಖಾಸಗಿ ವೈದ್ಯಕೀಯ ವ್ಯವಸ್ಥೆಯನ್ನೇ ಸರ್ಕಾರ ನೆಚ್ಚಿಕೊಳ್ಳಬೇಕಾಗಿದೆ.

ಸುಧಾರಿಸಿದೆಯೇ ಆರೋಗ್ಯ ವ್ಯವಸ್ಥೆ 1

ಓಮೈಕ್ರಾನ್ ತಳಿ ಪ್ರಕರಣಗಳ ಪತ್ತೆಯಿಂದಾಗಿ ಸೋಂಕಿತರ ಸಂಖ್ಯೆ ರಾಜ್ಯದಲ್ಲಿ ವೇಗವಾಗಿ ಹೆಚ್ಚಳವಾಗುತ್ತಿದೆ. ಸೋಂಕಿನ ತೀವ್ರತೆ ಕಡಿಮೆ ಇರುವುದರಿಂದ ಕೋವಿಡ್ ಪೀಡಿತರಲ್ಲಿ ಸದ್ಯ ಶೇ 7 ರಷ್ಟು ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆಗೆ ಒಳಪಡುತ್ತಿದ್ದಾರೆ. ಇಷ್ಟಾಗಿಯೂ, ರಾಜ್ಯದಲ್ಲಿ ಜನವರಿ ಅಂತ್ಯಕ್ಕೆ ಅಥವಾ ಫೆಬ್ರುವರಿ ಮೊದಲ ವಾರದ ವೇಳೆ 20 ಸಾವಿರದಿಂದ 70 ಸಾವಿರದವರೆಗೆ ಸೋಂಕಿತರು ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆಯಿದೆ ಎಂದು ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆ (ಐಎಸ್‌ಐ) ಮತ್ತು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸಂಶೋಧಕರು ವಿಶ್ಲೇಷಿಸಿದ್ದಾರೆ.

ಕೋವಿಡ್ ಮೊದಲ ಅಲೆಯಲ್ಲಿ 9.41 ಲಕ್ಷಕ್ಕೂ ಅಧಿಕ ಮಂದಿ ಕೋವಿಡ್ ಪೀಡಿತರಾಗಿದ್ದರು. ಸೋಂಕಿನ ತೀವ್ರತೆ ಕಡಿಮೆಯಿದ್ದರೂ 12 ಸಾವಿರಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದರು. ಎರಡನೇ ಅಲೆಯಲ್ಲಿ 20 ಲಕ್ಷಕ್ಕೂ ಅಧಿಕ ಮಂದಿ ಸೋಂಕಿತರಾಗಿ, 25 ಸಾವಿರಕ್ಕೂ ಅಧಿಕ ಮಂದಿ ಮೃತಪಟ್ಟಿದ್ದರು. ಎರಡನೇ ಅಲೆಯಲ್ಲಿ ದಿಢೀರ್ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡ ಪರಿಣಾಮ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ತಲೆದೋರಿದ್ದವು. ಸೋಂಕಿತರು ಐಸಿಯು ಹಾಸಿಗೆ, ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿರುವ ಹಾಸಿಗೆಗಳಿಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದರಿಂದಾಗಿ ಮರಣ ಪ್ರಕರಣಗಳ ಸಂಖ್ಯೆಯೂ ಏರುಗತಿ ಪಡೆದುಕೊಂಡಿತ್ತು. ಹೀಗಾಗಿ, ಎರಡೂ ಅಲೆ ಮುಗಿಯುವ ಹೊತ್ತಿಗೆ ರಾಜ್ಯದ 37 ಸಾವಿರಕ್ಕೂ ಹೆಚ್ಚು ಜನ ಪ್ರಾಣ ಕಳೆದುಕೊಂಡಿದ್ದರು.

ಖಾಸಗಿ ಆಸ್ಪತ್ರೆಗೆ ಪಾವತಿ: 2021ರ ಮಾರ್ಚ್ ಮೊದಲ ವಾರದಲ್ಲಿ ಶೇ 0.58 ರಷ್ಟಿದ್ದ ಸೋಂಕು ದೃಢ ಪ್ರಮಾಣ, ಏಪ್ರಿಲ್ ಅಂತ್ಯಕ್ಕೆ ಶೇ 25.44ಕ್ಕೆ ಏರಿಕೆಯಾಗಿತ್ತು. ಹೀಗಾಗಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಳ ಮಾಡುವ ಜತೆಗೆ ಖಾಸಗಿ ಆಸ್ಪತ್ರೆಗಳಲ್ಲಿನ ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಸರ್ಕಾರವು ಗುರುತಿಸಿತ್ತು. ಈ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರ ವೈದ್ಯಕೀಯ ವೆಚ್ಚವನ್ನು ಸರ್ಕಾರವೇ ಪಾವತಿಸಿತ್ತು.

ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಡಿ ಶಿಫಾರಸು ಮಾಡುವ ರೋಗಿಗೆ ದಿನವೊಂದಕ್ಕೆ ಸಾಮಾನ್ಯ ವಾರ್ಡ್‌ಗೆ ₹ 10 ಸಾವಿರ, ಐಸಿಯು ವಾರ್ಡ್‌ಗೆ ₹ 15 ಸಾವಿರ ಹಾಗೂ ವೆಂಟಿಲೇಟರ್ ಸಹಿತ ಐಸಿಯು ವಾರ್ಡ್‌ಗೆ ₹ 25 ಸಾವಿರ ನಿಗದಿ ಮಾಡಿತ್ತು. ಈಗ ಪುನಃ ಖಾಸಗಿ ವ್ಯವಸ್ಥೆಯಲ್ಲಿ ಶೇ 75 ರಷ್ಟು ಹಾಸಿಗೆಗಳನ್ನು ಗುರುತಿಸಿ, ಶಿಫಾರಸು ಪ್ರಕ್ರಿಯೆಯನ್ನು ಸರ್ಕಾರ ಪ್ರಾರಂಭಿಸಿದೆ.

5ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 5

ಎರಡನೇ ಅಲೆಯಲ್ಲಿ ವೈದ್ಯಕೀಯ ಆಮ್ಲಜನಕ ಸಮಸ್ಯೆಯಾಗಿತ್ತು. ಈಗ ಆಸ್ಪತ್ರೆಗಳೇ ಪ್ರತ್ಯೇಕ ಘಟಕಗಳನ್ನು ನಿರ್ಮಿಸಿಕೊಂಡಿವೆ. ಸದ್ಯದ ಪರಿಸ್ಥಿತಿ ನೋಡಿದರೆ ಹಾಸಿಗೆ ಸಮಸ್ಯೆಯಾಗದು

ಡಾ.ಎಚ್.ಎಂ. ಪ್ರಸನ್ನ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ

ಸದ್ಯ ಆಸ್ಪತ್ರೆ ದಾಖಲಾತಿ ಕಡಿಮೆಯಿದೆ. ಆದರೂ ಹೆಚ್ಚಿನ ಸಂಖ್ಯೆಯಲ್ಲಿ ಹಾಸಿಗೆಗಳ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ತಿಂಗಳ ಅಂತ್ಯದೊಳಗೆ ಎಲ್ಲ ಆಮ್ಲಜನಕ ತಯಾರಿಕಾ ಘಟಕಗಳು ಕಾರ್ಯಾರಂಭಿಸಲಿವೆ

ಡಿ. ರಂದೀಪ್
ಆರೋಗ್ಯ ಇಲಾಖೆ ಆಯುಕ್ತ

3ನೇ ಅಲೆ	ವೈದ್ಯಕೀಯ ವ್ಯವಸ್ಥೆ
ಕೋವಿಡ್ ಚಿಕಿತ್ಸೆಗೆ ಹಾಸಿಗೆ ಲಭ್ಯತೆ	1,94,363
ಪ್ರಯೋಗಾಲಯ	265
ಟ್ರಯಾಜ್ ಕೇಂದ್ರ	540
ಜಿನೋಮ್ ಸೀಕ್ವೆನ್ಸಿಂಗ್ ಪ್ರಯೋಗಾಲಯ	05
ಹೊಸ ಜಿನೋಮ್ ಸೀಕ್ವೆನ್ಸಿಂಗ್ ಪ್ರಯೋಗಾಲಯ	05
ವೈದ್ಯಕೀಯ ಸಿಬ್ಬಂದಿ (ವೈದ್ಯರು ಒಳಗೊಂಡಂತೆ)	82,543
ವೆಂಟಿಲೇಟರ್ (ಪಿ.ಎಂ ಕೇರ್ಸ್)	2,871
ಕೋವಿಡ್ ವಾರ್ ರೂಮ್	41
ವೈದ್ಯಕೀಯ ಆಮ್ಲಜನಕ ಘಟಕ	264

ವಿವಿಧ ಮಾದರಿ ಹಾಸಿಗೆಗಳ ವ್ಯವಸ್ಥೆ ವಿವರ

ವಿಭಾಗ	ಸಾಮಾನ್ಯ ಹಾಸಿಗೆ	ಎಚ್‌ಡಿಯು	ಐಸಿಯು	ಐಸಿಯು ವೆಂಟಿಲೇಟರ್
ಸರ್ಕಾರಿ ವೈದ್ಯಕೀಯ ಕಾಲೇಜುಗಳು	4,086	12,445	1,124	1,689
ಸರ್ಕಾರಿ ಆಸ್ಪತ್ರೆಗಳು	10,604	18,316	1,111	1,718
ಖಾಸಗಿ ವೈದ್ಯಕೀಯ ಕಾಲೇಜುಗಳು	21,850	11,138	1,441	1,027
ಖಾಸಗಿ ಆಸ್ಪತ್ರೆಗಳು	89,228	13,357	3,540	1,689
ಒಟ್ಟು	1,25,768	55,256	7,216	6,123

ಪ್ರಯೋಗಾಲಯ–ಪರೀಕ್ಷಾ ಸಾಮರ್ಥ್ಯ ಹೆಚ್ಚಳ



ನಿರ್ಬಂಧ ಸಡಿಲಿಕೆ?

ಮುಖ್ಯಮಂತ್ರಿ ನೇತೃತ್ವದಲ್ಲಿ ನಾಳೆ ಸಭೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಶುಕ್ರವಾರ ಉನ್ನತಮಟ್ಟದ ಸಭೆ ನಡೆಯಲಿದ್ದು, ವಾರಾಂತ್ಯದ ಕರ್ಫ್ಯೂ ಮತ್ತು ರಾತ್ರಿ ಕರ್ಫ್ಯೂವಿನಂತಹ ನಿರ್ಬಂಧಗಳ ಸಡಿಲಿಕೆ ಕುರಿತು ತೀರ್ಮಾನಕ್ಕೆ ಬರುವ ಸಾಧ್ಯತೆ ಇದೆ.

ಸುದ್ದಿಗಾರರ ಜತೆ ಬುಧವಾರ ಮಾತನಾಡುವಾಗ ಈ ಕುರಿತು ಸುಳಿವು ನೀಡಿದ ಮುಖ್ಯಮಂತ್ರಿ, ಬಿಗಿಯಾದ ನಿರ್ಬಂಧಗಳನ್ನು ಸಡಿಲಿಸಬೇಕು ಎಂಬ ಬೇಡಿಕೆ ಇದೆ. ಈ ಕುರಿತು ಶುಕ್ರವಾರದ ಸಭೆಯಲ್ಲಿ ಪುನರ್ ಪರಿಶೀಲಿಸಲಾಗುವುದು ಎಂದರು.

ಈ ಬಾರಿ ಕೋವಿಡ್ ತಗುಲಿದವರಲ್ಲಿ ಶೇಕಡ 94ರಷ್ಟು ಮಂದಿ ಮನೆಯಲ್ಲೇ ಪ್ರತ್ಯೇಕ ವಾಸದಲ್ಲಿದ್ದು, ಗುಣಮುಖರಾಗುತ್ತಿದ್ದಾರೆ. ಸಾಮಾನ್ಯ ಜ್ವರದಂತೆ ಕೋವಿಡ್ ಬಂದು, ವಾಸಿಯಾಗುತ್ತಿದೆ. ಆದ್ದರಿಂದ ದೈನಂದಿನ ಎಲ್ಲ ಚಟುವಟಿಕೆಗಳ ಜತೆಯಲ್ಲೇ ಕೋವಿಡ್ ನಿಯಂತ್ರಣ ನಿಯಮಗಳ ಪಾಲನೆಗೆ ಅವಕಾಶ ನೀಡಬೇಕು ಎಂದು ಹೆಚ್ಚು ಜನರು ಹೇಳುತ್ತಿದ್ದಾರೆ. ಈ ಕುರಿತು ಪರಿಶೀಲಿಸುವಂತೆ ತಜ್ಞರ ಸಮಿತಿಗೆ ಸೂಚನೆ ನೀಡಲಾಗಿತ್ತು ಎಂದು ಹೇಳಿದರು.

ಈ ಬಾರಿ ಕೋವಿಡ್ ತಗುಲಿದವರಲ್ಲಿ ಆಸ್ಪತ್ರೆಗೆ ದಾಖಲಾಗುತ್ತಿರುವವರ ಸಂಖ್ಯೆ ಕಡಿಮೆ ಇದೆ. ಸೋಂಕಿನ ಕುರಿತು ತಜ್ಞರು ಅಧ್ಯಯನ ಮಾಡುತ್ತಿದ್ದಾರೆ. ಕೋವಿಡ್ ನಿಯಂತ್ರಣ ಕುರಿತು ಶುಕ್ರವಾರ ಉನ್ನತಮಟ್ಟದ ಸಭೆ ನಡೆಯಲಿದೆ. ಆಗ ತಜ್ಞರು ಸ್ಪಷ್ಟ ಚಿತ್ರಣ ನೀಡಲಿದ್ದಾರೆ. ಬಳಿಕ ಮಾರ್ಗಸೂಚಿ ಪರಿಷ್ಕರಣೆ ಕುರಿತು ನಿರ್ಧಾರ ಮಾಡಲಾಗುವುದು ಎಂದರು.

ಇತರ ರಾಜ್ಯಗಳಲ್ಲಿ ಕೋವಿಡ್ ಮೂರನೇ ಅಲೆಯ ಬೆಳವಣಿಗೆ ಮೇಲೆ ತಜ್ಞರು ನಿಗಾ ವಹಿಸಿದ್ದಾರೆ. ಕರ್ನಾಟಕದಲ್ಲಿ ಕೋವಿಡ್‌ನ ಮೂರನೇ ಅಲೆ ವಿಳಂಬವಾಗಿ ಆರಂಭವಾಗಿದೆ. ಹೀಗಾಗಿ ಜನವರಿ ಕೊನೆಯ ವಾರ ಅಥವಾ ಫೆಬ್ರುವರಿ ಮೊದಲ ವಾರ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಏರುಗತಿ ಆರಂಭವಾಗಬಹುದು ಎಂದು ಅಂದಾಜಿಸಿದ್ದಾರೆ. ಮುಂದಿನ ಕ್ರಮಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದರು.

10ನೇ ಪುಟ ನೋಡಿ

‘ಶಾಲಾರಂಭ; ತಜ್ಞರ ಸಲಹೆಯೇ ಅಂತಿಮ’

‘ಕೋವಿಡ್ ಕಾರಣದಿಂದ ಕೆಲವು ಜಿಲ್ಲೆಗಳಲ್ಲಿ ಮುಚ್ಚಿರುವ ಶಾಲೆಗಳನ್ನು ಪುನರಾರಂಭ ಮಾಡುವುದಕ್ಕೆ ತಜ್ಞರ ಸಲಹೆಯೇ ಅಂತಿಮ’ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘ಕೆಲವು ಜಿಲ್ಲೆಗಳಲ್ಲಿ ಮಾತ್ರ ಎಲ್ಲ ಶಾಲೆಗಳನ್ನೂ ಬಂದ್ ಮಾಡಲಾಗಿದೆ. ಉಳಿದಂತೆ ಸೋಂಕು ಕಾಣಿಸಿಕೊಂಡ ಶಾಲೆಗಳನ್ನು ಮಾತ್ರ ಬಂದ್ ಮಾಡಲಾಗಿದೆ. ತಜ್ಞರು ಒಪ್ಪಿಗೆ ಸೂಚಿಸಿದರೆ ಬೆಂಗಳೂರು ನಗರದಲ್ಲೂ ತಕ್ಷಣ ಶಾಲೆಗಳಲ್ಲಿ ಭೌತಿಕ ತರಗತಿ ಪುನರಾರಂಭ ಮಾಡಲಾಗುವುದು’ ಎಂದರು.

‘ಈವರೆಗಿನ ಅಂಕಿ ಅಂಶಗಳ ಪ್ರಕಾರ, ಶಾಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸೋಂಕು ಹರಡಿಲ್ಲ. ಮನೆಗಳಲ್ಲೇ ಇರುವ ಮಕ್ಕಳಿಗೂ ಕೋವಿಡ್ ತಗುಲಿರುವ ಉದಾಹರಣೆಗಳಿವೆ. ಮಕ್ಕಳ ಪಾಲಿಗೆ ಶಾಲೆಗಳೇ ಸುರಕ್ಷಿತ ಎಂಬ ಭಾವನೆ ಇದೆ. ತಜ್ಞರು ನೀಡುವ ಸಲಹೆಗಳ ಆಧಾರದಲ್ಲಿ ಯಾವ ವಯಸ್ಸಿನ ಮಕ್ಕಳಿಗೆ ತರಗತಿಗಳನ್ನು ಪುನರಾರಂಭ ಮಾಡಬೇಕು ಎಂಬುದನ್ನು ನಿರ್ಧರಿಸಲಾಗುವುದು’ ಎಂದು ತಿಳಿಸಿದರು.

ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ
A Government of India Undertaking
Together We Can
ಗೃಹ ಸಾಲದ ಬಡ್ಡಿದರವನ್ನು ಕಡಿತಗೊಳಿಸಲಾಗಿದೆ
ಯಾವುದೇ ಮೊತ್ತಕ್ಕೆ
6.65% ಪ್ರ.ವ.
ಸೀಮಿತ ಅವಧಿಯ ಕೊಡುಗೆ
ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ಮತ್ತು ತಕ್ಷಣ ಅನುಮೋದನೆ ಪಡೆಯಿರಿ
ಕೆನರಾ ಕರೆ ಮಾಡಿ 1800 425 0018

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಕೋವಿಡ್‌ನಿಂದಾಗಿ ಈ ವರ್ಷವೂ ಪೂರ್ಣ ಪ್ರಮಾಣದಲ್ಲಿ ತರಗತಿಗಳಿಗೆ ಖುದ್ದು ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಆದರೆ ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ 7

ಒಳ ಪುಟಗಳು

‘ಡಿ.ಜೆ.ಹಳ್ಳಿ ಘಟನೆ ಭಯೋತ್ಪಾದನಾ ಕೃತ್ಯ’ 4A

ಚೀನಾದ ಪಿಎಲ್‌ಎನಿಂದ ಬಾಲಕನ ಅಪಹರಣ 4B

ಚಿನಕುರಳಿ
ಪ್ರಕಾಶ್ ಶೆಟ್ಟಿ

ವಿಮಾನ ನಿಲ್ದಾಣ ಸಿಬ್ಬಂದಿಯ ಸಮಯಪ್ರಜ್ಞೆ

ತಪ್ಪಿದ ಭಾರಿ ವಿಮಾನ ಅವಘಡ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಜನವರಿ 7ರಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೋಲ್ಕತ್ತ ಮತ್ತು ಭುವನೇಶ್ವರಕ್ಕೆ ತೆರಳುತ್ತಿದ್ದ ಇಂಡಿಗೋ ವಿಮಾನಗಳು ಏಕಕಾಲಕ್ಕೆ ಟೇಕ್ ಆಫ್ ಗೆ ಸಿದ್ಧವಾದ ಕಾರಣ ಸಂಭವಿಸಬೇಕಿದ್ದ ಭಾರಿ ದುರಂತ ಸ್ವಲ್ಪದರಲ್ಲಿಯೇ ತಪ್ಪಿದೆ ಎಂದು ತಿಳಿದು ಬಂದಿದೆ.

ಅಂದು ಎರಡು ವಿಮಾನಗಳು ಏಕಕಾಲಕ್ಕೆ ಒಂದೇ ದಿಕ್ಕಿನಲ್ಲಿ ಮೇಲೆ ಹಾರಲು ಸಜ್ಜಾಗಿದ್ದವು. ಆದರೆ, ತಾಂತ್ರಿಕ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ ದೊಡ್ಡ ಅನಾಹುತವೊಂದು ತಪ್ಪಿದೆ.

ಇಂಡಿಗೋ ಸಂಸ್ಥೆಗೆ ಸೇರಿದ್ದ 6E455 ಮತ್ತು 6E246 ಈ ಎರಡು ವಿಮಾನಗಳು ಒಂದೇ ರನ್ ವೇ ಗೆ ಬಂದು ಪರಸ್ಪರ ಡಿಕ್ಕಿಯಾಗಬೇಕಿತ್ತು. ಇದನ್ನು ಗಮನಿಸಿದ ರೇಡಾರ್ ಕಂಟ್ರೋಲ್ ಸಿಬ್ಬಂದಿ, ಒಂದು ವಿಮಾನವನ್ನು ಬಲಕ್ಕೆ ಮತ್ತೊಂದು ವಿಮಾನವನ್ನು ಎಡಕ್ಕೆ ಕಳುಹಿಸಿ ಅನಾಹುತ ತಪ್ಪಿಸಿದ್ದಾರೆ.

ಈ ಸಮಯದಲ್ಲಿ ಬೇರೆ ವಿಮಾನಗಳು ರನ್ ವೇ ಮೇಲೆ ಲ್ಯಾಂಡಿಂಗ್ ಆಗದ ಕಾರಣ ಹಾಗೂ ಸಿಬ್ಬಂದಿಯ ಎಚ್ಚರಿಕೆಯ ನಡೆಯಿಂದ ನೂರಾರು ಪ್ರಯಾಣಿಕರ ಪ್ರಾಣ ಉಳಿದಿದೆ. ಘಟನೆಯ ಕುರಿತು ವಿಮಾನ ನಿಲ್ದಾಣದ ಅಧಿಕಾರಿಗಳು ಸ್ಪಷ್ಟನೆ ಕೇಳಿದ್ದಾರೆ ಎಂಬ ಮಾಹಿತಿ ದೊರೆಕಿದೆ.

ತನಿಖೆಗೆ ಆದೇಶ

ನವದೆಹಲಿ (ಪಿಟಿಐ): ಬೆಂಗಳೂರು ವಿಮಾನ ನಿಲ್ದಾಣದಿಂದ ಹಾರಿದ ಎರಡು ಇಂಡಿಗೊ ವಿಮಾನಗಳ ನಡುವೆ ಉಂಟಾಗುತ್ತಿದ್ದ ಡಿಕ್ಕಿಯು ಸ್ವಲ್ಪದರಲ್ಲಿ ತಪ್ಪಿದ ಘಟನೆ ಬಗ್ಗೆ ತನಿಖೆ ನಡೆಸಲಾಗುವುದು, ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ವಾಯುಯಾನ ನಿಯಂತ್ರಣ ಸಂಸ್ಥೆ ಡಿಜಿಸಿಎ ಮುಖ್ಯಸ್ಥ ಅರುಣ್‌ಕುಮಾರ್ ಹೇಳಿದ್ದಾರೆ.

ಘಟನೆ ಬಗ್ಗೆ ವಿಮಾನ ಸಂಸ್ಥೆಯ ದಾಖಲೆ ಪುಸ್ತಕದಲ್ಲಿ ದಾಖಲಿಸಲಾಗಿಲ್ಲ. ಅಲ್ಲದೆ ಈ ಬಗ್ಗೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು (ಎಎಐ) ಇನ್ನೂ ವರದಿ ಮಾಡಿಲ್ಲ ಎಂದೂ ಅವರು ಹೇಳಿದರು. ಆದರೆ ಘಟನೆ ಬಗ್ಗೆ ಇಂಡಿಗೊ ಮತ್ತು ಎಎಐ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಚೆನ್ನವೀರ ಕಣವಿ ಆರೋಗ್ಯದಲ್ಲಿ ಮತ್ತಷ್ಟು ಏರುಪೇರು

ಧಾರವಾಡ: ಕವಿ ಡಾ.ಚೆನ್ನವೀರ ಕಣವಿ ಅವರ ಆರೋಗ್ಯದಲ್ಲಿ ಬುಧವಾರ ಮತ್ತಷ್ಟು ಏರುಪೇರು ಉಂಟಾಗಿದೆ.

ಅವರಿಗೆ ಚಿಕಿತ್ಸೆ ನೀಡುತ್ತಿರುವ ಎಸ್‌ಡಿಎಂ ಆಸ್ಪತ್ರೆ ಈ ಕುರಿತು ಹೆಲ್ತ್ ಬುಲೆಟಿನ್ ಬಿಡುಗಡೆ ಮಾಡಿದ್ದು, ಕಣವಿ ಅವರಿಗೆ ನೀಡುತ್ತಿರುವ ವೈದ್ಯಕೀಯ ಆಮ್ಲಜನಕದ ಪ್ರಮಾಣ ಮತ್ತಷ್ಟು ಹೆಚ್ಚಿಸಿರುವುದಾಗಿ ಹೇಳಿದೆ.

ಜ್ವರದಿಂದ ಬಳಲುತ್ತಿದ್ದ ಕಣವಿ ಅವರನ್ನು ಜ.14ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಕೋವಿಡ್ ಇರುವುದು ದೃಢಪಟ್ಟಿತ್ತು. ಅಲ್ಲಿಂದ ಅವರಿಗೆ ನಿರಂತರವಾಗಿ ವೈದ್ಯಕೀಯ ಆಮ್ಲಜನಕ ನೀಡಲಾಗುತ್ತಿದೆ. ಮಂಗಳವಾರ 8ಲೀಟರ್ ಆಮ್ಲಜನಕವನ್ನು ನೀಡಲಾಗಿದೆ.

‘ಕಣವಿ ಅವರು ದಾಖಲಾದ ದಿನವೇ ಅವರ ಆಸ್ಪತ್ರೆ ವೆಚ್ಚವನ್ನು ಸರ್ಕಾರದಿಂದ ಭರಿಸಲು ಕ್ರಮ ವಹಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ನಿತೇಶ್ ಕೆ. ಪಾಟೀಲ ತಿಳಿಸಿದ್ದಾರೆ.

ನಿವೃತ್ತಿಗೆ ಸಾನಿಯಾ ಮಿರ್ಜಾ ನಿರ್ಧಾರ

ಮೆಲ್ಬರ್ನ್ (ಪಿಟಿಐ): ಭಾರತದ ಟೆನಿಸ್ ತಾರೆ ಸಾನಿಯಾ ಮಿರ್ಜಾ ಅವರು ನಿವೃತ್ತಿ ಪಡೆಯಲು ನಿರ್ಧರಿಸಿದ್ದಾರೆ. ಮಹಿಳಾ ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಮಿಂಚು ಹರಿಸಿದ ಅವರು ಈ ಋತುವಿನ ನಂತರ ಕಣಕ್ಕೆ ಇಳಿಯುವುದಿಲ್ಲ ಎಂದು ಘೋಷಿಸಿದ್ದಾರೆ. ಸಿಂಗಲ್ಸ್‌ನಲ್ಲಿ ಒಂದು, ಡಬಲ್ಸ್‌ನಲ್ಲಿ 43 ಪ್ರಶಸ್ತಿಗಳನ್ನು ಹೈದರಾಬಾದ್‌ನ 35 ವರ್ಷದ ಈ ಆಟಗಾರ್ತಿ ಮುಡಿಗೇರಿಸಿಕೊಂಡಿದ್ದಾರೆ.

‘ದೇಹವು ಮೊದಲಿನಂತೆ ಆಟಕ್ಕೆ ಒಗ್ಗುತ್ತಿಲ್ಲ. ಹಿಂದಿನಂತೆ ಶಕ್ತಿಯನ್ನು ಒಗ್ಗೂಡಿಸುವುದಕ್ಕೂ ಆಗುವುದಿಲ್ಲ’ ಎಂದು ಅವರು ಆಸ್ಟ್ರೇಲಿಯನ್ ಓಪನ್ ಟೂರ್ನಿಯ ಮಹಿಳೆಯರ ಡಬಲ್ಸ್ ವಿಭಾಗದ ಮೊದಲ ಸುತ್ತಿನ ಸೋಲಿನ ನಂತರ ತಿಳಿಸಿದರು. ಸಾನಿಯಾ ಮಿರ್ಜಾ ಮೊದಲ ಮಗುವಿಗೆ ಜನ್ಮ ನೀಡಿದ ನಂತರ ಸುದೀರ್ಘ ಕಾಲ ಅಂಗಣದಿಂದ ಹೊರಗೆ ಉಳಿದಿದ್ದರು.

2ನೇ ಪುಟ ನೋಡಿ

ಉಪನಗರ ರೈಲು: ರಾಜ್ಯ ಸರ್ಕಾರದ ಸಹಕಾರ ಕೇಳಿದ ಕೇಂದ್ರ

₹4,185 ಕೋಟಿಗೆ ರೈಲ್ವೆ ಆಸ್ತಿ ನಗದೀಕರಣ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಉಪನಗರ ರೈಲು ಯೋಜನೆಯ ಅನುಷ್ಠಾನಕ್ಕೆ ನಗರದಲ್ಲಿರುವ ರೈಲ್ವೆ ಆಸ್ತಿಯಿಂದ ₹4,186 ಕೋಟಿಯಷ್ಟು ನಗದೀಕರಣಕ್ಕೆ(ಸಂಪನ್ಮೂಲ ಸಂಗ್ರಹಕ್ಕೆ) ಮುಂದಾಗಿರುವ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ(ಕೆ-ರೈಡ್), ಮೊದಲ ಹಂತದಲ್ಲಿ 56.38 ಎಕರೆ ಆಸ್ತಿ ನಗದೀಕರಣಕ್ಕೆ ಅಣಿಯಾಗಿದೆ.

ಜಾಗವನ್ನು ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡಿ ಅದರಿಂದ ಬರುವ ವರಮಾನವನ್ನು ಉಪನಗರ ರೈಲು ಯೋಜನೆಗೆ ಬಳಕೆ ಮಾಡಿಕೊಳ್ಳಲು ಆಲೋಚಿಸಿದೆ. ರಾಜ್ಯ ಸರ್ಕಾರ, ರೈಲ್ವೆ ಸಚಿವಾಲಯ ಜಂಟಿಯಾಗಿ ರಚಿಸಿರುವ ಕೆ–ರೈಡ್ ನಗರದಲ್ಲಿ ಉಪನಗರ ರೈಲ್ವೆ ಯೋಜನೆ ಅನುಷ್ಠಾನ ಮಾಡುತ್ತಿದೆ.

ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರಿಗೆ ಪತ್ರ ಬರೆದಿರುವ ರೈಲ್ವೆ ಭೂಮಿ ಅಭಿವೃದ್ಧಿ ಪ್ರಾಧಿಕಾರದ (ಆರ್‌ಎಲ್‌ಡಿಎ) ಉಪಾಧ್ಯಕ್ಷ ವೇದ ಪ್ರಕಾಶ್ ದುಬೇಜ ಅವರು, ಅಗತ್ಯ ಸಹಕಾರ ಕೋರಿದ್ದಾರೆ. ಮೂಲಸೌಕರ್ಯ ಅಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ವಿಶೇಷ ಆಯುಕ್ತ (ಯೋಜನೆ), ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೂ ಪತ್ರ ರವಾನಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಉಪನಗರ ರೈಲು ಯೋಜನೆಗೆ ಕೇಂದ್ರ ₹2,479 ಕೋಟಿ ಭರಿಸಲಿದೆ. ಆದರೆ, ಕೇಂದ್ರ ರೈಲ್ವೆ ಸಚಿವಾಲಯವು ಬಜೆಟ್ ಅನುದಾನದ ರೂಪದಲ್ಲಿ ನೀಡುವುದು ₹ 500 ಕೋಟಿ ಮಾತ್ರ. ಉಳಿದ ಮೊತ್ತವನ್ನು ರೈಲ್ವೆ ಜಾಗದ ನಗದೀಕರಣದಿಂದ ಕೆ-ರೈಡ್ ಹೊಂದಿಸಬೇಕಿದೆ. ರೈಲ್ವೆ ಇಲಾಖೆಗೆ ಸೇರಿದ ಖಾಲಿ ಜಾಗದ ನಗದೀಕರಣದ ಮೂಲಕ ₹ 4,815 ಕೋಟಿ ರೂಪಾಯಿ ಸಂಗ್ರಹಿಸಬಹುದು ಎಂದು ಅಂದಾಜಿಸಲಾಗಿದೆ. ಉಪನಗರ ರೈಲು ಯೋಜನೆಯ ಕಾರಿಡಾರ್‌ಗಳ ಅಸುಪಾಸಿನಲ್ಲಿರುವ ರೈಲ್ವೆ ಜಾಗದಲ್ಲಿ ಬಹುಮಹಡಿ ಕಟ್ಟಡಗಳಿಗೆ ಅನುಮತಿ ನೀಡುವಾಗ 5ರವರೆಗೆ ಫ್ಲೋರ್ ಏರಿಯಾ ರೇಷಿಯೊ (ಎಫ್‌ಎಆರ್) ಬಳಕೆಗೆ ಅವಕಾಶ ಕಲ್ಪಿಸುವ ಮೂಲಕ ಇಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸುವುದು ಈ ಯೋಜನೆಯ ಉದ್ದೇಶ.

ಈ ರೀತಿ ನಗದೀಕರಣಕ್ಕೆ ಸೂಕ್ತ ಎನಿಸಿರುವ 146 ಎಕರೆ ಜಾಗಗಳು 18 ಕಡೆ ಇವೆ ಎಂಬುದನ್ನು ಕೆ-ರೈಡ್ ಗುರುತಿಸಿದೆ. ಅದರಲ್ಲಿ 56.38 ಎಕರೆಯನ್ನು ಆರ್‌ಎಲ್‌ಡಿಎಗೆ ವಹಿಸಲು ರೈಲ್ವೆ ಮಂಡಳಿಯೂ ಒಪ್ಪಿಗೆ ಸೂಚಿಸಿದೆ. ಆಸ್ತಿ ನಗದೀಕರಣ ಪ್ರಕ್ರಿಯೆಗೆ ರೈಲ್ವೆ ಇಲಾಖೆಯ ಜತೆಗೆ ಬಿಬಿಎಂಪಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಹಾಗೂ ನಗರಾಭಿವೃದ್ಧಿ ಇಲಾಖೆಗಳ ಸಹಕಾರವೂ ಅಗತ್ಯ ಇದೆ.

‘ಮಧ್ಯಪ್ರವೇಶ ಇರಕೂಡದು’: ಉಪನಗರ ರೈಲು ಯೋಜನೆಗೆ ಮುಂದಿನ ದಿನಗಳಲ್ಲೂ ಅಗತ್ಯವಿಲ್ಲದ ರೈಲ್ವೆ ಭೂಮಿಯನ್ನು ನಗದೀಕರಣ ಮಾಡಿಕೊಳ್ಳಲು ಕೆ- ರೈಡ್ ಹೊರಟಿದೆ. ರಾಜ್ಯ ಸರ್ಕಾರ ಮಧ್ಯಪ್ರವೇಶ ಮಾಡದೆ ಸಹಕಾರ ನೀಡಬೇಕಿದೆ ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ್ ಹೇಳಿದರು.

ಉಪನಗರ ರೈಲು ಯೋಜನೆಯ ಕಾಮಗಾರಿ ಇನ್ನೂ ಆರಂಭವೇ ಆಗಿಲ್ಲ. ಕಾಮಗಾರಿ ಆರಂಭವಾದರೆ ನಗದೀಕರಣ ಕೂಡ ವೇಗವಾಗಿ ಆಗಲಿದೆ ಎಂದರು.

45 ವರ್ಷಕ್ಕೆ ಗುತ್ತಿಗೆ ವಹಿಸುವ ಉದ್ದೇಶ

56.38 ಎಕರೆ ಆಸ್ತಿಯನ್ನು ರೈಲ್ವೆ ಭೂ ಅಭಿವೃದ್ಧಿ ಪ್ರಾಧಿಕಾರಕ್ಕೆ 45 ವರ್ಷಗಳ ಅವಧಿಗೆ ಗುತ್ತಿಗೆಗೆ ವಹಿಸಲು ಉದ್ದೇಶಿಸಲಾಗಿದೆ.

ಮೆಜೆಸ್ಟಿಕ್ ಬಳಿಯ ಎಸ್‌ಬಿಸಿ ಎಂ.ಜಿ ಕಾಲೊನಿಯಲ್ಲಿ 650 ವಸತಿ ಗೃಹಗಳ ನಿರ್ಮಾಣ, ಕಂಟೋನ್ಮೆಂಟ್ ಕಾಲೊನಿಯಲ್ಲಿ 116 ವಸತಿ ಗೃಹಗಳ ನಿರ್ಮಾಣದ ಉದ್ದೇಶವನ್ನು ಆರ್‌ಎಲ್‌ಡಿಎ ಹೊಂದಿದೆ. ಇದರಿಂದ ನಾಲ್ಕೈದು ವರ್ಷಗಳಲ್ಲೇ ₹1,200 ಕೋಟಿ ವರಮಾನ ಬರಲಿದೆ ಎಂದು ಅಂದಾಜಿಸಿದೆ.

ಗುರುತಿಸಿರುವ 146 ಎಕರೆ ಪ್ರದೇಶದಲ್ಲಿ ಎಫ್‌ಎಆರ್ ಹೆಚ್ಚಳ ಮಾಡುವುದರಿಂದ ₹1,800 ಕೋಟಿ ವರಮಾನವನ್ನು ಕೆ-ರೈಡ್ ನಿರೀಕ್ಷೆ ಮಾಡಿದೆ.

ಜಾಹೀರಾತು

ಮಂಡಿನೋವಿಗೆ ಪುನರುತ್ಪಾದಕ ಚಿಕಿತ್ಸೆ

ಕಡಿಮೆ ವೆಚ್ಚದಲ್ಲಿ, ಗಂಟೆಗಟ್ಟಲೇ ಆಸ್ಪತ್ರೆ ವಾಸವಿಲ್ಲದೇ ನೋವು ಉಪಶಮನ.

ವಿಪರೀತ ಮಂಡಿನೋವಿನಿಂದ ಬಳಲುತ್ತಿದ್ದೆ. ಬಹಳಷ್ಟು ಬಗೆಯ ಚಿಕಿತ್ಸೆ ಮಾಡಿದರೂ ಜಗ್ಗಲಿಲ್ಲ ಈ ನೋವು. ಅದೇ ಸಮಯದಲ್ಲಿ ಒಂದು ದಿನಪತ್ರಿಕೆಯಲ್ಲಿ ಶಸ್ತ್ರಚಿಕಿತ್ಸೆಯಿಲ್ಲದೆ ನೋವು ವಾಸಿ ಮಾಡುವವರೆಂಬ ಲೇಖನ ಕಣ್ಣಿಗೆ ಬಿತ್ತು. ಹೇಗಿದ್ದರೂ ಒಂದು ಪ್ರಯತ್ನ ಮಾಡೋಣ ಎಂದು ಅಲಿವಿಯೇಟ್‌ನ ಕ್ಲಿನಿಕ್ಕಿಗೆ ಹೋದೆ. ಅಲ್ಲಿನ ವೈದ್ಯರು ನನ್ನ ಮಂಡಿಯನ್ನು ಕೂಲಂಕುಷವಾಗಿ ಪರೀಕ್ಷಿಸಿದ ನಂತರ ರಿಜೆನರೇಟಿವ್ ಥೆರಪಿ (ಪುನರುತ್ಪಾದಕ ಚಿಕಿತ್ಸೆ) ಸಲಹೆ ನೀಡಿದರು. ಅದನ್ನು ಪಡೆದ ನಂತರ ನನ್ನ ನೋವು ಕ್ರಮೇಣ ಕಡಿಮೆಯಾಗುತ್ತಾ ಬಂತು.

ಈಗ ನಾನು ನನ್ನ ದೈನಂದಿನ ಚಟುವಟಿಕೆಗಳನ್ನು ಕಿಂಚಿತ್ತೂ ನೋವಿನ ಬಾಧೆಯಿಲ್ಲದೆ ನಿರ್ವಹಿಸುತ್ತಿದ್ದೇನೆ ಎನ್ನುತ್ತಾರೆ ಸಂತಸದಿಂದ ಜಯನಗರದ ನಿವಾಸಿ ಶ್ರೀಮತಿ. ರೀಮಾ ಶೇಕ್ ರವರು.

ಇದು ಕೇವಲ ಇವರ ಅನುಭವ ಮಾತ್ರವೇ ಅಲ್ಲ. ಇದೇ ರೀತಿ ಮಂಡಿನೋವು ಮತ್ತಿತರ ನೋವುಗಳಿಂದ ಬಳಲುತ್ತಿರುವ ಸುಮಾರು 5000ಕ್ಕೂ ಹೆಚ್ಚು ಜನರ ಬಾಳಲ್ಲಿ ಆಶಾಕಿರಣವಾಗಿ ಬಂದಿದೆ ಬೆಂಗಳೂರಿನ ಸುಪ್ರಸಿದ್ಧ ಅಲಿವಿಯೇಟ್ ನೋವು ನಿವಾರಣಾ ಕೇಂದ್ರಗಳು.

ಈ ಚಿಕಿತ್ಸೆಯು ನೋವು ಆರಂಭಿಕ ಹಂತದಲ್ಲಿರುವವರಿಗೆ ಸೂಕ್ತವಾಗಿದೆ.

ಅಲಿವಿಯೇಟ್‌ನ ಆಧುನಿಕ ನೋವು ನಿವಾರಣಾ ವಿಧಾನಗಳು :

ಪ್ಲೇಟ್ಲೆಟ್ ರಿಚ್ ಪ್ಲಾಸ್ಮಾ (ಪಿ.ಆರ್.ಪಿ) ಚಿಕಿತ್ಸೆ : ಪಿಆರ್‌ಪಿ ಥೆರಪಿಯಲ್ಲಿ, ತೆಳುವಾದ ಸೂಜಿಯನ್ನು ಬಳಸಿ 20–30 ಮಿ.ಲಿ ರೋಗಿಯ ರಕ್ತವನ್ನು ತೆಗೆದುಕೊಳ್ಳಲಾಗುತ್ತದೆ. ವಿಶೇಷ ಯಂತ್ರವನ್ನು ಬಳಸಿ, 2 ಮಿಲಿ ಪ್ಲೇಟ್‌ಲೆಟ್ ಸಮೃದ್ಧ ಪ್ಲಾಸ್ಮಾವನ್ನು ರಕ್ತದಿಂದ ಹೊರತೆಗೆಯಲಾಗುತ್ತದೆ. ಇದರ ನಂತರ ಮೊಣಕಾಲಿನ ಹಾನಿಗೊಳಗಾದ ಪ್ರದೇಶಕ್ಕೆ ಚುಚ್ಚಲಾಗುತ್ತದೆ. ಈ ಪ್ರಕ್ರಿಯೆಯಿಂದ ಪ್ಲೇಟ್‌ಲೆಟ್ಗಳಿಂದ ಬಿಡುಗಡೆಯಾದ ಹಲವಾರು ಬೆಳವಣಿಗೆಯ ಅಂಶಗಳು ಮತ್ತು ಕಿಣ್ವಗಳು ಕೊಲಾಜನ್ (Collagen) ರಚನೆಮಾಡುತ್ತದೆ. ಆ ಮೂಲಕ ಹಾನಿಗೊಳಗಾದ ಮಂಡಿಯು ಪುನರುತ್ಪಾದನೆಗೊಳ್ಳುತ್ತದೆ. ಇದರಿಂದಾಗಿ ನೋವು ಕ್ರಮೇಣ ಕಡಿಮೆಯಾಗುತ್ತದೆ.

ಸ್ಟೆಮ್ ಸೆಲ್ (ಕಾಂಡಕೋಶಗಳ) ಥೆರಪಿ : ಕಾಂಡಕೋಶಗಳು ದೇಹದ ಸ್ವಂತ ಗುಣಪಡಿಸುವ ಶಕ್ತಿಯನ್ನು ಬಳಸಿಕೊಳ್ಳಲು ಪರಿಣಾಮಕಾರಿಯಾಗಿದೆ. ಚುಚ್ಚುಮದ್ದಿನ ಬಳಕೆಯಿಂದ ಹಾನಿಗೊಳಗಾದ ಸ್ಥಳಕ್ಕೆ ಕಾಂಡಕೋಶಗಳನ್ನು ಚುಚ್ಚಲಾಗುತ್ತದೆ. ಅವುಗಳಿಂದ ದೇಹದಲ್ಲಿ ಬಿಡುಗಡೆಯಾದ ಸೈಟೋಕೈನ್ಗಳು ಹಾನಿಗೊಳಗಾದ ಪ್ರದೇಶದ ಉರಿಯೂತವನ್ನು ಕಡಿಮೆ ಮಾಡಿ ಕೋಶಗಳ ನವೀಕರಣಕ್ಕೆ ಕಾರಣವಾಗುತ್ತವೆ.

ಈ ಥೆರಪಿಯನ್ನು ಸ್ಥಳೀಯ ಅರವಳಿಕೆ ಸಹಾಯದಿಂದ ಮಾಡಲಾಗುವುದರಿಂದ, ಯಾವುದೇ ಗಮನಾರ್ಹ ನೋವು ಅಥವಾ ಅಸ್ವಸ್ಥತೆ ಇರುವುದಿಲ್ಲ.

ಈ ಮೇಲಿನ ಪುನರುತ್ಪಾದಕ ಚಿಕಿತ್ಸೆಯು ಕೇವಲ ಒಂದೆರಡು ಗಂಟೆಗಳ ಪ್ರಕ್ರಿಯೆ ಆಗಿದ್ದು, ಮುಗಿದ ನಂತರ ರೋಗಿಯು ತಮ್ಮ ನಿತ್ಯ ಚಟುವಟಿಕೆಗಳಲ್ಲಿ ಕಿಂಚಿತ್ತೂ ಬಾಧೆಯಿಲ್ಲದೆ ತೊಡಗಿಸಿಕೊಳ್ಳಬಹುದು.

ಮಂಡಿನೋವಿನ ಹೊರತಾಗಿ ಭುಜ, ಪಾದದ ಮತ್ತು ಸೊಂಟ ನೋವಿಗೂ ಇಲ್ಲಿದೆ ಚಿಕಿತ್ಸೆ.

ಲಾಭಗಳು:
- ನೈಸರ್ಗಿಕ ಚಿಕಿತ್ಸಾ ವಿಧಾನ
- ಅಡ್ಡಪರಿಣಾಮಗಳು ಇಲ್ಲದೇ ನೋವಿನಿಂದ ಉಪಶಮನ
- ಶಸ್ತ್ರಚಿಕಿತ್ಸೆ ಇಲ್ಲದೇ ಮಾಡುವ ಹಲವಾರು ಚಿಕಿತ್ಸಾ ವಿಧಾನಗಳು ಅಲಿವಿಯೇಟ್‌ನಲ್ಲಿದೆ
- ಆಸ್ಪತ್ರೆ ವಾಸದ ಅಗತ್ಯವಿಲ್ಲ

ಮಂಡಿನೋವಿನ ಹೊರತಾಗಿ ಇಲ್ಲಿ ಬೆನ್ನು, ಕುತ್ತಿಗೆ, ಭುಜ, ಪಾದ, ಕ್ಯಾನ್ಸರ್ ನೋವು, ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆ ನೀಡಲಾಗುತ್ತದೆ.

ಅಲಿವಿಯೇಟ್
ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್
ಶಸ್ತ್ರಚಿಕಿತ್ಸೆ ಇಲ್ಲದೇ ನೋವು ನಿವಾರಣೆಗಾಗಿ
CALL NOW 080-28391888 96202 44761
ಅಲಿವಿಯೇಟ್ ರವರ ಕ್ಲಿನಿಕ್‌ಗಳು ಇಲ್ಲಿವೆ
ಸದಾಶಿವನಗರ | ಇಂದಿರಾನಗರ | ಟಿ. ದಾಸರಹಳ್ಳಿ
ಟಿ. ದಾಸರಹಳ್ಳಿ ಕೇಂದ್ರದಲ್ಲಿ ಕೋವಿಡ್–೧೯ ಲಸಿಕೆ ನೀಡುವ ಸೌಲಭ್ಯವಿದೆ.

ಕಾಮಗಾರಿಗೆ ಅಡ್ಡಿ: ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಜಯನಗರ ವ್ಯಾಪ್ತಿಯ ಸುಬ್ಬಣ್ಣ ಗಾರ್ಡನ್ ಬಳಿ ಕೆಪಿಟಿಸಿಎಲ್ ವತಿಯಿಂದ 66 ಕೆ.ವಿ. ಕೇಬಲ್ ಅಳವಡಿಕೆಯ ಕಾಮಗಾರಿಯನ್ನು ಕೆಲ ಪಟ್ಟಭದ್ರ ಹಿತಾಸಕ್ತಿಗಳು ತಡೆದಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಬಿಜೆಪಿಯ ಗೋವಿಂದರಾಜ ನಗರ ಮಂಡಲದ ಅಧ್ಯಕ್ಷ ವಿಶ್ವನಾಥ ಗೌಡ ಒತ್ತಾಯಿಸಿದ್ದಾರೆ.

'ಗೋವಿಂದರಾಜನಗರ ವ್ಯಾಪ್ತಿಯ ರಾಜಾಜಿನಗರದ ಕಾರ್ಡ್ ರಸ್ತೆಯ ಎಸ್.ಪಿ.ಎಸ್. ಶಾಲೆಯಿಂದ ಮೈಸೂರು ರಸ್ತೆಯವರೆಗೆ ತ್ವರಿತಗತಿಯಲ್ಲಿ ಕಾಮಗಾರಿ ನಡೆದಿದೆ. ಆದರೆ, ಸುಬ್ಬಣ್ಣ ಗಾರ್ಡನ್ ಬಳಿ ಕಾಮಗಾರಿಯನ್ನು ಎರಡು ತಿಂಗಳಿಂದ ನಿಲ್ಲಿಸಲಾಗಿದೆ' ಎಂದು ದೂರಿದ್ದಾರೆ.

ಬಿಜೆಪಿಯ ವಿಜಯನಗರ ಮಂಡಲದ ಅಧ್ಯಕ್ಷ ಟಿ.ವಿ.ಕೃಷ್ಣ,'ವಿಜಯನಗರ ಕ್ಷೇತ್ರದಲ್ಲಿ ಕಾಮಗಾರಿ ನಡೆಯದಂತೆ ಪಟ್ಟಭದ್ರ ಹಿತಾಸಕ್ತಿಗಳು ತಡೆಹಿಡಿದಿದ್ದಾರೆ. ಈ ಕಾಮಗಾರಿಯಿಂದ ಬಡವರಿಗೆ ಅನುಕೂಲವಾಗಲಿದ್ದು, ಗುತ್ತಿಗೆದಾರರಿಗೆ ಸೂಕ್ತ ನಿರ್ದೇಶನ ನೀಡಿ ಕಾಮಗಾರಿ ಆರಂಭಿಸಲು ಸೂಚಿಸಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ಪ್ರತಿಭಟನೆ ಮಾಡಬೇಕಾಗುವುದು' ಎಂದು ಎಚ್ಚರಿಸಿದ್ದಾರೆ.

ಕಾಮಗಾರಿ ಆರಂಭಿಸುವಂತೆ ಕೆಪಿಟಿಸಿಎಲ್‌ನ ಮುಖ್ಯ ಎಂಜಿನಿಯರ್‌ಗೆ ಮನವಿ ಸಲ್ಲಿಸಲಾಯಿತು. ಬಿಜೆಪಿ ಮುಖಂಡರಾದ ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ವಾಗೀಶ್, ದಾಸೇಗೌಡ ಇದ್ದರು.

ಸರ್ಕಾರಿ ಕಾರ್ಯಕ್ರಮದಲ್ಲಿ ಆಂಗ್ಲ ಭಾಷೆ: ಆಕ್ಷೇಪ

ಬೆಂಗಳೂರು: ಐಟಿ ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಇದೇ 16ರಂದು ಹಮ್ಮಿಕೊಂಡಿದ್ದ ರಾಷ್ಟ್ರೀಯ ನವೋದ್ಯಮ ದಿನ ಕಾರ್ಯಕ್ರಮದಲ್ಲಿ ಆಂಗ್ಲ ಭಾಷೆ ಬಳಸಿರುವುದಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಕ್ಷೇಪ ವ್ಯಕ್ತಪಡಿಸಿದೆ. ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವಂತೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಉಪನಗರ ರೈಲಿಗಾಗಿ ಆನ್‌ಲೈನ್ ಸಹಿ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪನಗರ ರೈಲು ಯೋಜನೆ ತ್ವರಿತ ಅನುಷ್ಠಾನ ಮತ್ತು ವಿಮಾನ ನಿಲ್ದಾಣ ಮಾರ್ಗದ ಕಾರಿಡಾರ್‌ಗೆ ಮೊದಲ ಆದ್ಯತೆ ನೀಡಲು ಒತ್ತಾಯಿಸಿ ರೈಲ್ವೆ ಹೋರಾಟಗಾರರು ಆನ್‌ಲೈನ್ ಸಹಿ ಸಂಗ್ರಹ ಅಭಿಯಾನ ಆರಂಭಿಸಿದ್ದಾರೆ.

ರಾಜಕುಮಾರ್ ದುಗಾರ್

ಉಪನಗರ ರೈಲು ಯೋಜನೆಯನ್ನು ಕೂಡಲೇ ಆರಂಭಿಸಬೇಕು ಎಂದು ಒತ್ತಾಯಿಸಿ ರೈಲ್ವೆ ಹೋರಾಟಗಾರ ರಾಜಕುಮಾರ್ ದುಗಾರ್ ಅವರು ಚೇಂಜ್ ಆರ್ಗ್‌ನಲ್ಲಿ ಆರಂಭಿಸಿರುವ ಅಭಿಯಾನಕ್ಕೆ ಎರಡೇ ದಿನಗಳಲ್ಲಿ 1,459 ಜನ ಸಹಿ ಹಾಕಿದ್ದಾರೆ.

ಯೋಜನೆಗೆ ಅನುಮೋದನೆ ದೊರೆತು ಒಂದೂವರೆ ವರ್ಷವೇ ಕಳೆದಿದೆ. ಒಂದೇ ಒಂದು ಇಟ್ಟಿಗೆಯನ್ನು ಕೆ-ರೈಡ್ ಇಟ್ಟಿಲ್ಲ. ವಿಮಾನ ನಿಲ್ದಾಣ ಮಾರ್ಗದ ಕಾಮಗಾರಿಗೆ ಮೊದಲ ಆದ್ಯತೆ ನೀಡಬೇಕಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಆದರೆ, ಕೆ-ರೈಡ್ ತನ್ನ ಆದ್ಯತೆ ಬದಲಿಸಿದೆ. ಇದು ಸರಿಯಾದ ನಿರ್ಧಾರ ಅಲ್ಲ ಎಂದು ರಾಜಕುಮಾರ್ ದುಗಾರ್ ಹೇಳಿದರು.

ವಿಮಾನ ನಿಲ್ದಾಣಕ್ಕೆ ಪ್ರತಿನಿತ್ಯ 1 ಲಕ್ಷ ಜನ ಪ್ರಯಾಣ ಮಾಡುತ್ತಿದ್ದಾರೆ. ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಆರಂಭವಾದರೆ ಪ್ರಯಾಣಿಕರ ಸಂಖ್ಯೆ ಮೂರು ಪಟ್ಟು ಹೆಚ್ಚಾಗುತ್ತದೆ. ಮುಂದಿನ ದಿನಗಳಲ್ಲಿ ಹೆಬ್ಬಾಳ ಮೇಲ್ಸೇತುವೆ ದಾಟುವುದೇ ಕಷ್ಟವಾಗಲಿದೆ ಎಂದರು.

ಉಪನಗರ ರೈಲು ಯೋಜನೆಗೆ ಸರ್ಕಾರ ಆದ್ಯತೆ ನೀಡುವ ಬದಲು ಮೆಟ್ರೊ ರೈಲು ಮಾರ್ಗಕ್ಕೆ ಆದ್ಯತೆ ನೀಡಿದೆ. ಸಿಲ್ಕ್ ಬೋರ್ಡ್, ಹೊರ ವರ್ತುಲ ರಸ್ತೆ, ಕೆ.ಆರ್.ಪುರ ಮಾರ್ಗದಿಂದ ಹೆಬ್ಬಾಳಕ್ಕೆ ಬರುವ ಹೊಸ ಮೆಟ್ರೊ ರೈಲು ಮಾರ್ಗದಿಂದ ಪ್ರಯಾಣಿಕರಿಗೆ ಅಷ್ಟೇನು ಅನುಕೂಲ ಆಗಲಾರದು ಎಂದು ಅವರು ಅಭಿಪ್ರಾಯಪಟ್ಟರು.

ಉಪನಗರ ರೈಲು ಯೋಜನೆಯನ್ನು ಮೊದಲು ಆರಂಭಿಸಿದರೆ ಸಾಕಷ್ಟು ಅನುಕೂಲಗಳಿವೆ. ಅದನ್ನು ಅರ್ಥ ಮಾಡಿಕೊಳ್ಳದೆ ಸರ್ಕಾರ ಆದ್ಯತೆ ಬದಲಿಸಿದರೆ ಸಂಚಾರ ದಟ್ಟಣೆ ಸಮಸ್ಯೆ ಉಲ್ಬಣಿಸಲಿದೆ ಎಂದರು.

ಬೆಟ್ಟಹಲಸೂರು ಗ್ರಾಮಪಂಚಾಯಿತಿಯ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಾಗಿ ಆಯ್ಕೆಯಾದ ಬಿ.ಎಂ.ನಾಗೇಶ್ ಮತ್ತು ವಿಮಲ ಗಣೇಶ್ ಅವರನ್ನು ಪಂಚಾಯಿತಿ ಸದಸ್ಯರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಅಭಿನಂದಿಸಿದರು

ಬೆಟ್ಟಹಲಸೂರು ಗ್ರಾ.ಪಂ ನಾಗೇಶ್ ಅಧ್ಯಕ್ಷ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಟ್ಟಹಲಸೂರು ಗ್ರಾಮಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಬಿ.ಎಂ.ನಾಗೇಶ್ ಹಾಗೂ ಉಪಾಧ್ಯಕ್ಷರಾಗಿ ವಿಮಲ ಗಣೇಶ್ ಆಯ್ಕೆಯಾಗಿದ್ದಾರೆ.

ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕಾಗಿ ಬುಧವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಾಗೇಶ್ ಮತ್ತು ಬಿಜೆಪಿ ಬೆಂಬಲಿತ ಅಭ್ಯರ್ಥಿ ಅನಿಲ್ ಕುಮಾರ್ ಸ್ಪರ್ಧಿಸಿದ್ದರು. ಕಾಂಗ್ರೆಸ್ ಬೆಂಬಲಿತ 17 ಹಾಗೂ ಬಿಜೆಪಿ ಬೆಂಬಲಿತ 9 ಸದಸ್ಯರನ್ನು ಒಳಗೊಂಡಂತೆ ಒಟ್ಟು 26 ಸದಸ್ಯ ಬಲ ಹೊಂದಿರುವ ಪಂಚಾಯಿತಿಯಲ್ಲಿ ನಾಗೇಶ್ 17 ಹಾಗೂ ಅನಿಲ್ ಕುಮಾರ್ 9 ಮತಗಳನ್ನು ಪಡೆದರು.

ಹಿಂದುಳಿದ ವರ್ಗ(ಅ)ಕ್ಕೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ವಿಮಲ ಗಣೇಶ್ 17 ಹಾಗೂ ಬಿಜೆಪಿ ಬೆಂಬಲಿತ ಸಾವಿತ್ರಮ್ಮ 9 ಮತಗಳನ್ನು ಪಡೆದರು.

ಕಾಂಗ್ರೆಸ್ ಮುಖಂಡರಾದ ಬಿ.ಕೆ. ಮಂಜುನಾಥಗೌಡ, ಕೆ.ಅಶೋಕನ್, ಬಿ.ಎನ್.ಮಂಜುನಾಥ್, ಪಂಚಮಿ ಶ್ರೀನಿವಾಸ್, ಬಿ.ಸಿ.ಶಿವರಾಜ್, ಎನ್. ಮುನಿಕೃಷ್ಣಪ್ಪ, ಬಿ.ಆರ್.ಪ್ರವೀಣ್, ಕುದುರೆಗೆರೆ ಕೃಷ್ಣಮೂರ್ತಿ, ಬಿ.ಎನ್. ಶ್ರೀನಿವಾಸಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

ನಿರಾಶ್ರಿತರ ಕೇಂದ್ರವಾದ ಆರೋಗ್ಯ ಕೇಂದ್ರ: ಎಎಪಿ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕ ಎಸ್.ಆರ್. ವಿಶ್ವನಾಥ್ ಅವರು ಯಲಹಂಕ ವ್ಯಾಪ್ತಿಯ ದೊಡ್ಡಬೆಟ್ಟಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಿರಾಶ್ರಿತರ ಕೇಂದ್ರವನ್ನಾಗಿ ಪರಿವರ್ತಿಸುತ್ತಿದ್ದಾರೆ. ರಾಜಕೀಯ ದುರುದ್ದೇಶದಿಂದ ಅವರು ಈ ರೀತಿ ನಡೆದುಕೊಳ್ಳುತ್ತಿದ್ದಾರೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಬೆಂಗಳೂರು ಘಟಕದ ಉಪಾಧ್ಯಕ್ಷ ಬಿ.ಟಿ.ನಾಗಣ್ಣ ದೂರಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ದೊಡ್ಡಬೆಟ್ಟಹಳ್ಳಿ ಆರೋಗ್ಯ ಕೇಂದ್ರವು ಮೂರು ವರ್ಷಗಳಿಂದ ಮುಚ್ಚಲ್ಪಟ್ಟಿತ್ತು. ಆರೋಗ್ಯ ಕೇಂದ್ರವನ್ನು ಪುನರಾರಂಭಿಸಲು ಆಮ್ ಆದ್ಮಿ ಪಾರ್ಟಿಯು ಪಾಲಿಕೆ ಅಧಿಕಾರಿಗಳಿಗೆ ಒತ್ತಾಯಿಸಿತ್ತು. ಪಾಳು ಬಿದ್ದಿದ್ದ ಕಟ್ಟಡವನ್ನು ಸ್ವಚ್ಛಗೊಳಿಸಿ ಕೊಡಲಾಗಿತ್ತು. ಆದರೆ, ಈಗ ಆರೋಗ್ಯ ಕೇಂದ್ರವನ್ನು ನಿರಾಶ್ರಿತರ ಕೇಂದ್ರವನ್ನಾಗಿ ಪರಿವರ್ತಿಸಲಾಗುತ್ತಿದೆ' ಎಂದು ದೂರಿದರು.

'ಶಾಸಕ ಎಸ್.ಆರ್.ವಿಶ್ವನಾಥ್ ಈ ವಿಚಾರವನ್ನು ರಾಜಕೀಯ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಆರೋಗ್ಯ ಕೇಂದ್ರ ಪುನರಾರಂಭಿಸಿದರೆ, ಎಎಪಿಗೆ ಮನ್ನಣೆ ಸಿಗುತ್ತದೆ ಎಂಬ ಕಾರಣಕ್ಕೆ ಅಡ್ಡಗಾಲು ಹಾಕುತ್ತಿದ್ದಾರೆ. ಅವರ ಕೀಳು ಮಟ್ಟದ ರಾಜಕೀಯದಿಂದ ಇಲ್ಲಿನ ಜನರು ಆರೋಗ್ಯ ಸೌಲಭ್ಯಗಳಿಂದ ವಂಚಿತರಾಗುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಎಎಪಿ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಸುಹಾಸಿನಿ ಫಣಿರಾಜ್, 'ಸ್ಥಳೀಯ ಶಾಸಕರನ್ನು ಎದುರು ಹಾಕಿಕೊಂಡು ಆರೋಗ್ಯ ಕೇಂದ್ರ ನಡೆಸಲು ಸಾಧ್ಯವಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ₹4 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಆರೋಗ್ಯ ಕೇಂದ್ರದಿಂದ ಜನರಿಗೆ ಯಾವುದೇ ಸೇವೆ ಸಿಗದಂತೆ ಮಾಡುತ್ತಿದ್ದಾರೆ. ಇದನ್ನು ಆರೋಗ್ಯ ಕೇಂದ್ರವಾಗಿಯೇ ಮುಂದುವರಿಸಿ, ನಿರಾಶ್ರಿತರ ಕೇಂದ್ರವನ್ನು ಬೇರೆ ಕಡೆ ತೆರೆಯಬೇಕು' ಎಂದು ಆಗ್ರಹಿಸಿದರು.

ಎಸ್.ಆರ್.ವಿಶ್ವನಾಥ್ ಪ್ರತಿಕ್ರಿಯಿಸಿ, 'ನಿರಾಶ್ರಿತರಿಗೆ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಬೇಕು ಎಂದು ಕೋರ್ಟ್ ಹೇಳಿತ್ತು. ನಿರಾಶ್ರಿತರು ರಸ್ತೆ ಬದಿಯಲ್ಲಿ ಮಲಗುತ್ತಿದ್ದರು. ಅಪಘಾತದಿಂದ ಕೆಲವು ಮಂದಿ ಮೃತಪಟ್ಟಿದ್ದಾರೆ. ಹೀಗಾಗಿ, ಮಾನವೀಯತೆಯ ನೆಲೆಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವ್ಯವಸ್ಥೆ ಮಾಡಲಾಗಿದೆ' ಎಂದು ಸ್ಪಷ್ಟಪಡಿಸಿದರು.

ಬ್ಯಾಪಿಸ್ಟ್ ಆಸ್ಪತ್ರೆಯಲ್ಲಿ ಡಬ್ಲ್ಯೂಸಿಎಚ್‌ಆರ್ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿ ಮತ್ತು ಮಗುವಿಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುವ ಸಲುವಾಗಿ ನಗರದ ಬ್ಯಾಪಿಸ್ಟ್ ಆಸ್ಪತ್ರೆಯಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಸಂಶೋಧನಾ ಕೇಂದ್ರ (ಡಬ್ಲ್ಯೂಸಿಎಚ್‌ಆರ್‌ಸಿ) ಆರಂಭವಾಗಿದೆ.

'ನೂತನ ಕೇಂದ್ರದಲ್ಲಿ ಒಳ ಹಾಗೂ ಹೊರ ರೋಗಿಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಅತ್ಯಾಧುನಿಕ ಸೌಕರ್ಯಗಳನ್ನು ಹೊಂದಿರುವ 23 ಹಾಸಿಗೆ ಸಾಮರ್ಥ್ಯದ ನವಜಾತ ಶಿಶುಗಳ ತೀವ್ರ ನಿಗಾ ಘಟಕ (ಎನ್‌ಐಸಿಯು), 11 ಹಾಸಿಗೆ ಸಾಮರ್ಥ್ಯದ ಮಕ್ಕಳ ತೀವ್ರ ನಿಗಾ ಘಟಕ, ಮೂರು ಶಸ್ತ್ರಚಿಕಿತ್ಸಾ ಕೊಠಡಿಗಳು ಹಾಗೂ ಸಿಬ್ಬಂದಿ ಮತ್ತು ಹೆರಿಗೆ ಕೊಠಡಿಗಳೂ ಈ ಕೇಂದ್ರದಲ್ಲಿವೆ. ಬ್ಯಾಪಿಸ್ಟ್ ಆಸ್ಪತ್ರೆಯಲ್ಲಿ ಈಗ ಎಲ್ಲ ಸೌಕರ್ಯಗಳೂ ಒಂದೇ ಸೂರಿನಡಿ ಸಿಗಲಿವೆ' ಎಂದು ಪ್ರಕಟಣೆ ತಿಳಿಸಿದೆ.

'ಬ್ಯಾಪಿಸ್ಟ್ ಆಸ್ಪತ್ರೆಯು ಅಮೆರಿಕದ ಬೇಲಾರ್ ವಿಶ್ವವಿದ್ಯಾಲಯ ಹಾಗೂ ಲಿವಿಂಗ್ ಆ್ಯಂಡ್ ಲರ್ನಿಂಗ್ ಸೆಂಟರ್ (ಎಲ್‌ಎಲ್‌ಸಿ) ಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದ ಅನ್ವಯ ಶುಶ್ರೂಷಕಿಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಸ್ಮಾರ್ಟ್ ತರಗತಿ ಕೋಣೆಗಳು, ಇ-ಕೆಫೆ ಹಾಗೂ ವಸತಿ ಸೌಲಭ್ಯ ಕಲ್ಪಿಸಲಾಗುತ್ತದೆ. ಇದರಿಂದ ಶುಶ್ರೂಷಕಿಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳ ಕಲಿಕೆಗೆ ಹೆಚ್ಚು ಅನುಕೂಲವಾಗಲಿದೆ' ಎಂದು ಹೇಳಲಾಗಿದೆ.

ನಿವೃತ್ತಿಗೆ ಸಾನಿಯಾ ಮಿರ್ಜಾ ನಿರ್ಧಾರ

ಒಂದನೇ ಪುಟದಿಂದ

2019ರ ಮಾರ್ಚ್‌ನಲ್ಲಿ ಮತ್ತೆ ಆಡಲು ಇಳಿದಿದ್ದರು. ಆದರೆ ಕೆಲವೇ ತಿಂಗಳಲ್ಲಿ ಅವರನ್ನು ಕೊರೋನಾ ಸೋಂಕು ಕಾಡಿತ್ತು.

'ನಿವೃತ್ತಿ ಘೋಷಿಸಲು ಕಾರಣಗಳು ಅನೇಕ ಇವೆ. ಇನ್ನು ಮುಂದೆ ನಾನು ಆಡುವುದಿಲ್ಲ ಎಂದು ಏಕಾಏಕಿ ಹೇಳುತ್ತಿಲ್ಲ. ಗಾಯಗಳಾದರೆ ಚೇತರಿಸಿಕೊಳ್ಳಲು ತುಂಬಾ ಸಮಯ ಹಿಡಿಯುತ್ತದೆ. ಮಗನಿಗೆ ಈಗ ಕೇವಲ ಮೂರು ವರ್ಷ. ಆತನೊಂದಿಗೆ ಬಹಳ ದೂರ ಪ್ರಯಾಣ ಮಾಡುವುದರ ಮೂಲಕ ಸಮಸ್ಯೆಗಳನ್ನು ತೊಂದೊಡ್ಡುತ್ತಿದ್ದೇನೆಯೋ ಎಂಬ ಆತಂಕ ಕಾಡುತ್ತಿದೆ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'ದೇಹ ಬಳಲುತ್ತಿದೆ. ಇಂದಿನ ಪಂದ್ಯದ ಸಂದರ್ಭದಲ್ಲಿ ಮೊಣಕಾಲು ನೋಯುತ್ತಿತ್ತು. ಪಂದ್ಯದ ಸೋಲಿಗೆ ಇದುವೇ ಕಾರಣ ಎಂದು ಹೇಳುವುದಿಲ್ಲ. ಆದರೆ ವಯಸ್ಸಾಗುತ್ತಿದೆ ಎಂಬುದರ ಲಕ್ಷಣಗಳು ಇವು ಎಂಬುದರ ಅರಿವಾಗಿದೆ' ಎಂದು ಸಾನಿಯಾ ನುಡಿದರು.

ಡಬಲ್ಸ್ ವಿಭಾಗದ ಪಂದ್ಯದಲ್ಲಿ ಸಾನಿಯಾ ಮಿರ್ಜಾ ಮತ್ತು ಉಕ್ರೇನ್‌ನ ನಾದಿಯಾ ಕಿಚೆನಾಕ್ 4-6, 6-7(5) ರಲ್ಲಿ ಸ್ಲೊವೇನಿಯಾದ ತಮಾರ ಜಿಡಾನ್ಸೆಕ್ ಮತ್ತು ಕಾಜಾ ಜುವಾನ್‌ಗೆ ಮಣಿದರು.

ನಗರದಲ್ಲಿ ಇಂದು

'ಹೃದಯ ಆರೈಕೆ ಮತ್ತು ನ್ಯೂರೊ ಟ್ರಾಮಾ ಕೇಂದ್ರ'ದ ಉದ್ಘಾಟನೆ: ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಅತಿಥಿ–ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ, ಸ್ಥಳ–ಶ್ರೀಲಕ್ಷ್ಮೀ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಹಳೇ ಬಡಾವಣೆ, ಕೆ.ಆರ್.ಪುರ, ಬೆಳಿಗ್ಗೆ 10

'ಎವಿಜಿಸಿ ಸೆಂಟರ್ ಆಫ್ ಎಕ್ಸಲೆನ್ಸ್' ಕೇಂದ್ರ ಉದ್ಘಾಟನೆ: ಐಟಿಬಿಟಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಅತಿಥಿ–ಶಾಸಕ ಅರವಿಂದ ಲಿಂಬಾವಳಿ, ಸ್ಥಳ–ಅಸೋಸಿಯೇಷನ್ ಆಫ್ ಬೆಂಗಳೂರು ಅನಿಮೇಷನ್ ಇಂಡಸ್ಟ್ರಿ, ನಲಪಾಡ್ ಬ್ರಿಗೇಡ್ ಸೆಂಟರ್, ಮಹದೇವಪುರ, ಬೆಳಿಗ್ಗೆ 11

'ಸಾಮಾಜಿಕ ಜೀವನದಲ್ಲಿ ಮಾನವೀಯ ಮೌಲ್ಯಗಳು' ಉಪನ್ಯಾಸ: ವೆಂಕಟೇಶ್ ಆರ್.ಚೌಥಾಯಿ, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘ, ಎಚ್. ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಸಂಜೆ 6.30

ನೈರುತ್ಯ ರೈಲ್ವೆ

[illegible]

... ವಿಚಾರಣಾಧಿಕಾರಿಗಳಿಗೆ ಸಮರ್ಥನೆಯು ಇದ್ದರೆ, ಅದನ್ನು ಲಿಖಿತ ಹೇಳಿಕೆಯಲ್ಲಿ ಸಲ್ಲಿಸಬೇಕು ಮತ್ತು ರೈಲ್ವೆ ನೌಕರರ ನಿಯಮಗಳು (ಡಿ&ಎ) 1968 ಅನ್ವಯ ವಿಚಾರಣಾಧಿಕಾರಿಗಳಿಗೆ ಅವಶ್ಯಕವೆಂದು ಕಂಡುಬಂದರೆ, ಅವರು ಸೂಚಿಸಿದ ದಿನ ಮತ್ತು ವೇಳೆಯಲ್ಲಿ ವಿಚಾರಣೆಗೆ (ಇದ್ದರೆ) ಹಾಜರಾಗಬೇಕು.

ಮೈಸೂರು 13.01.2022 ಸಹಿ/– (ಎ. ದೇವಸಹಾಯಂ) ಎಡಿಆರ್‌ಎಂ/ಐ/ಮೈಸೂರು ಮತ್ತು ಶಿಸ್ತು ಪ್ರಾಧಿಕಾರ

ಪಿಯುಬಿ/386/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021–22

S.W.Railways SWRRLY SWRRLY

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101

ದೂರವಾಣಿ ಸಂಖ್ಯೆ: ಕಛೇರಿ: 08156–270427 ಫ್ಯಾಕ್ಸ್: 08156–270427 ಇಮೇಲ್ : eemidcbpura@gmail.com

ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಬ/ತಾಂಸ/ಸ.ಇಂ–1&2/ ಟೆಂಡರ್ ಪ್ರಕಟಣೆ ಸಂಖ್ಯೆ: 12/2021–22, ದಿನಾಂಕ : 18/01/2022

4702 ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, [illegible]

... ಗುತ್ತಿಗೆದಾರರಿಂದ ಕರೆಯಲಾಗಿದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 28/02/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 04/03/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–270427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದೊಡ್ಡಬಳ್ಳಾಪುರ

ಟಿ.ಬಿ. ಸರ್ಕಲ್ ಹತ್ತಿರ, ತುಮಕೂರು ರಸ್ತೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ–561203

ದೂರವಾಣಿ: 080–8029799416 ಇ–ಮೇಲ್: apmc.dbpur@gmail.com

ಕ್ರ.ಸಂ.: ಕೃಉಮಾಸ/ದೊ/328/2021–22 ದಿನಾಂಕ: 19.01.2022

ಟೆಂಡರ್-ಕಂ-ಬಹಿರಂಗ ಹರಾಜು ಪ್ರಕಟಣೆ

ದೊಡ್ಡಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಗೌರಿಬಿದನೂರು ರಸ್ತೆಗೆ ಅಭಿಮುಖವಾಗಿರುವ 15 ಸಂಖ್ಯೆ ಸಣ್ಣ ವಾಣಿಜ್ಯ ಮಳಿಗೆಗಳ ಸಂಖ್ಯೆ GR/1, GR/2, GR/3, GR/4, ಹಾಗೂ GR/7 ರಿಂದ GR/17 ಮಳಿಗೆಗಳನ್ನು ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕದ ಆಧಾರದ ಮೇಲೆ 55 ತಿಂಗಳ ಅವಧಿಗೆ 11 ತಿಂಗಳಿಗೊಮ್ಮೆ ನವೀಕರಿಸುವ 33 ತಿಂಗಳಿಗೊಮ್ಮೆ ಪ್ರತಿಶತ ಶೇ. 5% ರಷ್ಟು ಲೀವ್ ಅಂಡ್ ಲೈಸೆನ್ಸ್ ಶುಲ್ಕವನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಆಸ್ತಿ ಹಂಚಿಕೆ) ನಿಯಮಾವಳಿ 2004ರನ್ವಯ ಹಂಚಿಕೆ ಮಾಡಲು ಉದ್ದೇಶಿಸಿದ್ದು, ಸಮಿತಿಯು ನಿಗದಿಪಡಿಸಿದ ನಮೂನೆಯಲ್ಲಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಾಣಿಜ್ಯ ಮಳಿಗೆಗಳ ವಿವರ	ಕಟ್ಟಡಗಳ ಒಟ್ಟು ಸಂಖ್ಯೆ	ಮಾಹೆಯಾನ ಲೀವ್ ಅಂಡ್ ಲೈಸೆನ್ಸ್ ಶುಲ್ಕ (ರೂ.ಗಳಲ್ಲಿ)	ಟೆಂಡರ್ ಫಾರ್ಮ್ ಶುಲ್ಕ (ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)	ಹಂಚಿಕೆ ವಿಧಾನ
15 ಸಂಖ್ಯೆ ಸಣ್ಣ ವಾಣಿಜ್ಯ ಮಳಿಗೆಗಳು. ಸಂಖ್ಯೆ GR/1, GR/2, GR/3, GR/4, ಹಾಗೂ GR/7 ರಿಂದ GR/17 ರವರೆಗೆ (ಪರಿಶಿಷ್ಟ ಜಾತಿಗೆ GR/2, GR/9 & ಪ.ಪಂಗಡಕ್ಕೆ GR/10 ನ್ನು ಕಾಯ್ದಿರಿಸಲಾಗಿದೆ)	15	4,500.00 4,100.00	500.00	9,000.00 8,200.00	ಟೆಂಡರ್–ಕಂ–ಬಹಿರಂಗ ಹರಾಜು

ಷರತ್ತು ಮತ್ತು ನಿಬಂಧನೆಗಳು

1. ವಾಣಿಜ್ಯ ಮಳಿಗೆಗಳನ್ನು ಪಡೆಯಲಿಚ್ಛಿಸುವವರು ರೂ. 500/– ಗಳನ್ನು (ಹಿಂತಿರುಗಿಸಲಾಗದ ಹಣ) ಹಾಗೂ ಮಳಿಗೆಗಳ ಸಂಖ್ಯೆ: ಜಿ.ಆರ್/01 ರಿಂದ ಜಿ.ಆರ್/04 ರವರೆಗೆ ಇಎಂಡಿ ಮೊತ್ತ ರೂ. 9,000/– ಗಳನ್ನು ಹಾಗೂ ಜಿಆರ್/07 ರಿಂದ ಜಿ.ಆರ್/17 ರವರೆಗೆ ಇಎಂಡಿ ಮೊತ್ತ ರೂ. 8,200/– ಗಳನ್ನು ಡಿ.ಡಿ. / ನಗದಾಗಿ ಪಾವತಿಸಿ ದಿನಾಂಕ: 21.01.2022 ರಿಂದ ದಿನಾಂಕ: 21.02.2022 ರ ಸಂಜೆ 05.00 ಗಂಟೆಯವರೆಗೆ ಟೆಂಡರ್ ಅರ್ಜಿ ಫಾರಂಗಳನ್ನು ಮತ್ತು ವಿವರಗಳನ್ನು ಸಮಿತಿಯಲ್ಲಿ ಪಡೆಯತಕ್ಕದ್ದು.
2. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 22.02.2022 ರಂದು ಬೆಳಗ್ಗೆ 10.30 ರಿಂದ 11.30 ಗಂಟೆಯೊಳಗೆ ಸಮಿತಿಯ ಸಭಾಂಗಣದಲ್ಲಿ ಟೆಂಡರ್ ಬಾಕ್ಸ್‌ನಲ್ಲಿ ಹಾಕತಕ್ಕದ್ದು. ನಂತರ ಬಂದ ಟೆಂಡರ್ ಫಾರಂಗಳನ್ನು ಸ್ವೀಕರಿಸಲಾಗುವುದಿಲ್ಲ. ಟೆಂಡರ್‌ನಲ್ಲಿ ಭಾಗವಹಿಸಿದ ಟೆಂಡರ್‌ದಾರರಿಗೆ ಅಂದೇ ಮಧ್ಯಾಹ್ನ 12.30ಕ್ಕೆ ಬಹಿರಂಗ ಹರಾಜು ನಡೆಸಲಾಗುವುದು.
3. ಇನ್ನುಳಿದ ಷರತ್ತು ಮತ್ತು ನಿಬಂಧನೆಗಳನ್ನು ಮತ್ತು ಹೆಚ್ಚಿನ ಮಾಹಿತಿಯನ್ನು ಅರ್ಜಿ ಫಾರ್ಮ್ ಪಡೆಯುವಾಗ ಪಡೆದುಕೊಳ್ಳಬಹುದಾಗಿದೆ ಹಾಗೂ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿಯವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ ಕೃಉಮಾಸ ದೊಡ್ಡಬಳ್ಳಾಪುರ | ವಾಸಾಸಂಇ/ಉನಿಕ/ಬೆಂಗ್ರಾಜ/391/2021–22 | ಸಹಿ/– ಅಧ್ಯಕ್ಷರು ಕೃಉಮಾಸ ದೊಡ್ಡಬಳ್ಳಾಪುರ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ದಕ್ಷಿಣ ವಲಯ,

9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು–560 001.

ಸಂಖ್ಯೆ: ಕಾಪಾಅ/ವಿ/ದ/ಟೆಂಡರ್/14/2021–22 ದಿನಾಂಕ: 19–01–2022

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ದ್ವಿ ಲಕೋಟೆ ಪದ್ಧತಿ)

(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ದಕ್ಷಿಣ ವಲಯ, ಬೃಬೆಂಮಪಾ, ಬೆಂಗಳೂರು ಇವರು ಹೆಸರಾಂತ ಯೋಜನಾ ನಿರ್ವಹಣಾ ಸಲಹಾ ಸೇವೆಗಾರರಿಂದ ಕೆಳಕಂಡ ವಿದ್ಯುತ್ ಕಾಮಗಾರಿಗಳಿಗಾಗಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು	ಸಲಹಾ ಸೇವೆಗಳ ಗರಿಷ್ಠ ಸೇವಾ ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1)	ಬಸವನಗುಡಿ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.154, 155, 156, 162, 163, 164ರಲ್ಲಿ ಸ್ಥಾಪನೆ, ಮೇಲ್ವಿಚಾರಣೆ, ಗುಣನಿಯಂತ್ರಣ ಹಾಗೂ ಬಿಲ್ ತಯಾರಿಕೆ ಹಾಳಾಗಿರುವ ರಸ್ತೆ ದೀಪ ಫಿಟ್ಟಿಂಗ್‌ಗಳನ್ನು ಒದಗಿಸುವ ಕೆಲಸಕ್ಕಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳು.	1.22	3050.00
2)	ಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.168, 169, 170, 171, 172, 177, 178, 179 ಮತ್ತು ಬಿಟಿಎಂ ಬಡಾವಣೆಯ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.146, 152, 172, 176, 147, 148, 151, 173ರಲ್ಲಿ ಸ್ಥಾಪನೆ, ಮೇಲ್ವಿಚಾರಣೆ, ಗುಣನಿಯಂತ್ರಣ ಹಾಗೂ ಬಿಲ್ ತಯಾರಿಕೆ ಹಾಳಾಗಿರುವ ರಸ್ತೆ ದೀಪ ಫಿಟ್ಟಿಂಗ್‌ಗಳನ್ನು ಒದಗಿಸುವ ಕೆಲಸಕ್ಕಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳು.	2.80	7000.00
3)	ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.118, 119, 142, 143, 144, 145, 153ರಲ್ಲಿ ಸ್ಥಾಪನೆ, ಮೇಲ್ವಿಚಾರಣೆ, ಗುಣನಿಯಂತ್ರಣ ಹಾಗೂ ಬಿಲ್ ತಯಾರಿಕೆ ಹಾಳಾಗಿರುವ ರಸ್ತೆ ದೀಪ ಫಿಟ್ಟಿಂಗ್‌ಗಳನ್ನು ಒದಗಿಸುವ ಕೆಲಸಕ್ಕಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳು.	1.18	2950.00
4)	ಪದ್ಮನಾಬನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.161, 181, 182, 183, 165, 166, 167, 180ರಲ್ಲಿ ಸ್ಥಾಪನೆ, ಮೇಲ್ವಿಚಾರಣೆ, ಗುಣನಿಯಂತ್ರಣ ಹಾಗೂ ಬಿಲ್ ತಯಾರಿಕೆ ಹಾಳಾಗಿರುವ ರಸ್ತೆ ದೀಪ ಫಿಟ್ಟಿಂಗ್‌ಗಳನ್ನು ಒದಗಿಸುವ ಕೆಲಸಕ್ಕಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳು.	1.92	4800.00
5)	ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.122, 123, 124, 134, 132, 133, 157, 158ರಲ್ಲಿ ಸ್ಥಾಪನೆ, ಮೇಲ್ವಿಚಾರಣೆ, ಗುಣನಿಯಂತ್ರಣ ಹಾಗೂ ಬಿಲ್ ತಯಾರಿಕೆ ಹಾಳಾಗಿರುವ ರಸ್ತೆ ದೀಪ ಫಿಟ್ಟಿಂಗ್‌ಗಳನ್ನು ಒದಗಿಸುವ ಕೆಲಸಕ್ಕಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳು.	1.34	3350.00

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 20–01–2022 ರಿಂದ ಡೌನ್‌ಲೋಡ್ ಮಾಡಬಹುದು. 2) ಭರ್ತಿಯಾದ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 27–01–2022ರ ಸಂಜೆ 4:00 ಗಂಟೆಯ ಮುಂಚೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29–01–2022ರ ಬೆಳಗ್ಗೆ 11:00 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ದಕ್ಷಿಣ ವಲಯ, ಬೃಬೆಂಮಪಾ.

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

MysoreSilk ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

3ನೇ ಮತ್ತು 4ನೇ ಮಹಡಿ, ಜನೋಪಯೋಗಿ ಕಟ್ಟಡ, ಎಂ.ಜಿ. ರಸ್ತೆ, ಬೆಂಗಳೂರು – 560 001.

ದೂ: 080–25586550/25586399 ಫ್ಯಾಕ್ಸ್: 080–25587020 ಇ–ಮೇಲ್: info@ksicsilk.com

ಸಂಖ್ಯೆ:ಕೆಎಸ್‌ಐಸಿ/ಎಸಿಸಿಟಿಸ್/ಎಸ್‌ಒಎ/ಐಎನ್‌ಎಸ್/2021–22 ದಿನಾಂಕ: 17.01.2022

ನೌಕಾ ಸಂಬಂಧಿ ವಿಮೆಯ ನವೀಕರಣಕ್ಕಾಗಿ ವಿಮಾದಾರರಿಂದ ಆಸಕ್ತಿ ಪ್ರಕಟಣೆ

ಸಾಗಾಣೆಯಲ್ಲಿರುವ ಸರಕುಗಳಿಗೆ ಒದಗಬಹುದಾದ ಹಾನಿಯನ್ನು ಭರಿಸುವ ನೌಕಾ ಸಂಬಂಧಿ ವಿಮೆಯ ಸ್ಪರ್ಧಾತ್ಮಕ ವಾರ್ಷಿಕ ದರಗಳನ್ನು ಶ್ರುತಪಡಿಸುವ 'ಆಸಕ್ತಿ ಪ್ರಕಟಣೆ'ಯನ್ನು ಪ್ರಖ್ಯಾತ ವಿಮಾ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ. ನಮ್ಮ ಪ್ರಧಾನ ಕಛೇರಿ, ರೇಷ್ಮಾಲಯ ಬೆಂಗಳೂರು / ಮೈಸೂರು / ಟಿ.ನರಸೀಪುರ / ನಮ್ಮ ಎಲ್ಲಾ ಮಾರಾಟ ಮಳಿಗೆಗಳು / ವಸ್ತು ಪ್ರದರ್ಶನ ಮಳಿಗೆಗಳು / ಗೂಡು ಮಾರುಕಟ್ಟೆ ಇತ್ಯಾದಿ ಭಾರತದಾದ್ಯಂತ ಸರಕುಗಳ ಗಮನ ಪ್ರತ್ಯಾಗಮನಗಳು ಈ ಸಾಗಾಣೆ ವಿಮೆಯ ವ್ಯಾಪ್ತಿಗೆ ಒಳಪಟ್ಟು, ರಸ್ತೆ / ರೈಲು / ಕೊರಿಯರ್ / ವಾಯು / ಅಂಚೆ ಇತ್ಯಾದಿಗಳಲ್ಲಿ ಒದಗಬಹುದಾದ ಎಲ್ಲಾ ಹಾನಿಗಳನ್ನು ಒಳಗೊಳ್ಳತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಮೇಲಿನ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ. ವಿವರವಾದ ಆಸಕ್ತಿ ಪ್ರಕಟಣೆಯನ್ನು "ನೌಕಾ ಸಂಬಂಧಿ ವಿಮಾ ನವೀಕರಣಕ್ಕಾಗಿ ಆಸಕ್ತಿ ಪ್ರಕಟಣೆ" ಎಂಬ ಶೀರ್ಷಿಕೆಯುಳ್ಳ ಮೊಹರಾದ ಲಕೋಟೆಯಲ್ಲಿ ವ್ಯವಸ್ಥಾಪಕ ನಿರ್ದೇಶಕರಿಗೆ ಈ ಮೇಲಿನ ವಿಳಾಸಕ್ಕೆ ದಿನಾಂಕ:25.01.2022ರಂದು ಅಥವಾ ಮುಂಚಿತವಾಗಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕೆಎಸ್‌ಐಸಿಯ ಪ್ರಧಾನ ವ್ಯವಸ್ಥಾಪಕರು (ಹಣಕಾಸು ಮತ್ತು ಲೆಕ್ಕ) ಇವರನ್ನು ಮೊಬೈಲ್ ಸಂಖ್ಯೆ: 9591812106 ಮೂಲಕ ಸಂಪರ್ಕಿಸಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಬೆಂ.ನ/ಜಿಎ/2911/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ರಾಷ್ಟ್ರೀಯ ಹೆದ್ದಾರಿ–206, ಬಿ.ಹೆಚ್. ರಸ್ತೆ, ಮಲ್ಲಸಂದ್ರ, ತುಮಕೂರು – 572 107.

ದೂರವಾಣಿ : 0816–2206464/2206533, ಫ್ಯಾಕ್ಸ್:0816–2207268, 2206760

ಇ–ಮೇಲ್ : tmuest77@gmail.com

ಸಂಖ್ಯೆ: ತುಹಾಒ/ಸಿಬ್ಬಂದಿ–3/ಸಿಎಲ್–3(1)/2021–22 ದಿನಾಂಕ: 19–01–2022

ಇ–ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ತುಮಕೂರು ಸಹಕಾರಿ ಹಾಲು ಒಕ್ಕೂಟವು ಈ ಕೆಳಕಂಡ ಕೆಲಸಗಳನ್ನು ಹೊರ ಗುತ್ತಿಗೆ ಮೂಲಕ ನೊಂದಾಯಿತ ಅರ್ಹ ಗುತ್ತಿಗೆದಾರ / ಏಜೆನ್ಸಿ ಸಂಸ್ಥೆಗಳಿಂದ ದ್ವೈವಾರ್ಷಿಕ ಅವಧಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಕೆಲಸಗಳ ವಿವರ ಈ ಕೆಳಗಿನಂತೆ ಇರುತ್ತವೆ.

1) ಒಕ್ಕೂಟದ ಪ್ರಧಾನ ಡೇರಿಯ ಪ್ರೀಪ್ಯಾಕ್ ಶಾಖೆಯಲ್ಲಿ ಹಾಲಿನ ಪೊಟ್ಟಣಗಳನ್ನು ಕ್ರೇಟುಗಳಿಗೆ ತುಂಬುವುದು, ವಿತರಣಾ ವಾಹನಗಳಿಗೆ ಸಾಗಿಸುವ, ರವಾನಿಸುವ, ಸಾರ್ಟ್‌ಔಟ್ ಮಾಡುವುದು, ಹಾಲಿನ ಕ್ರೇಟುಗಳ ಶುಚಿತ್ವ ಹಾಗೂ ಸಂಬಂಧಿಸಿದ ಇನ್ನಿತರೆ ಪೂರಕ ಕೆಲಸಗಳನ್ನು ನಿರ್ವಹಿಸುವುದು – ತುಂಡುಗುತ್ತಿಗೆ ಆಧಾರ.

ಕ್ರ. ಸಂ.	ಇ–ಟೆಂಡರ್ ಮೂಲಕ ನಮೂನೆಗಳನ್ನು ಪಡೆಯುವ ದಿನಾಂಕ	ಭರ್ತಿ ಮಾಡಿದ ಇ–ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಸಲ್ಲಿಸಲಾದ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ಇ–ಟೆಂಡರ್ ತೆರೆಯುವ ಸ್ಥಳ
1	20.01.2022	03.02.2022 ಸಂಜೆ 4.00 ಗಂಟೆಯವರೆಗೆ	05.02.2022 ಬೆಳಿಗ್ಗೆ 11.30 ಗಂಟೆಗೆ	ಆಡಳಿತ ಮಂಡಳಿಯ ಸಭಾಂಗಣ, ಹೆದ್ದಾರಿ 206 ಮಲ್ಲಸಂದ್ರ ತುಮಕೂರು

ಆಸಕ್ತಿಯುಳ್ಳ ನೊಂದಾಯಿತ ಅರ್ಹ ಗುತ್ತಿಗೆದಾರರು www.eproc.karnataka.gov.in ಮುಖಾಂತರ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳು ಟೆಂಡರ್ ಅರ್ಜಿಯಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ. ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

FRESHERS DATA ENTRY OPERATOR Required at Hombegowda Nagar, Near NIMHANS Hospital, Bangaluru, Immediately Below Degree/ 10/ 12, M/F. Contact: 9902127585, 9902999711, 9322928212.

PUBLIC NOTICE

PUBLIC NOTICE (ASC CENTRE & COLLEGE)
Civil Recruitment Test scheduled to be held on 23 and 30 Jan 22 at various locations in the country stands postponed. Fresh dates will be intimated later.

PERSONAL

Change of Name

I, DISHA VITTAL Residing at No.50, Shree Benaka, 2nd Cross, Vidya Nagar, Kurubarahalli, Mahalakshmipuram Layout, Bengaluru-560086have changed my name to DISHA ADITHYA W/o.Adithya Prashanth, vide affidavit dated 19.01.2022 Sworn before notary: Chandrakala, Bangalore

I, NAGARAJU residing at #396, Near MVJ College, Channasandra, Kadugodi Post, Bengaluru-560067 have changed my name to NAGARAJAIAH affidavit dated 19.01.2022 notary Veena.J, Bangalore-67.

I, MAMA Jigni alias Rukhiya Sultana D/o Afsar Pasha, R/o: 1st Main Kolar Taluk, S S Makan, Kolar- 563101, changed my name to Ruqiya Sultana for all purposes.

MERAJ ANJUM passport no S 1627519, w/o YUSUF AHMED ANSARI, has changed the name of her daughter born on 31.10.21 from MARIA MANAL YUSUF ANSARI to MANAAL YUSUF AHMED ANSARI vide affidavit dated 13.01.2022 sworn before Notary ARAVIND PATEL G.G.LAWLCL,213-2020

I, SAVITHA MANJUNATHA Residing at No.05, Dr.Raj Kumar Road, Chickbomasandra, GKVK Post, Bengaluru-560065 have changed my name to SAVITHA P. W/o. Manjunatha B A, vide affidavit dated : 17.01.2022 Sworn beforenotary: Aruna.V., Bengaluru

BUSINESS

Business Offers

Finance

NRI'S INVESTMENT And Finance Available On Low Interest Against Properties, Land And Building, Sites, Flats, Converted And Agriculture Lands Call: 7411265189

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information contact: 9880856233 /9845114560 9886213331

CONNECT

Congratulations
Smitha, Bengaluru, Karnataka
Homemaker and Entrepreneur participated in Mrs India Galaxy which was organised by Vibrant Concepts held in Delhi December 2021 & was selected in top 12 and awarded with the title ADVENTURES by Mr Gagan Verma (Mr India International)

Also received a Silver Medal for her outstanding performance in social activity and collected funds for the underprivileged women.
smitha_sureshkumar

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಸೇವೆಗಾಗಿ ವೃತ್ತಿ ತ್ಯಜಿಸಿದ ಚಾಲಕ • ಆಟೊವನ್ನೇ ಆಂಬುಲೆನ್ಸ್ ಆಗಿ ಮಾರ್ಪಾಡು

ಅಶಕ್ತರಿಗೆ ಆಸರೆಯಾಗಲು ಜೀವನ ಮುಡಿಪಿಟ್ಟ ಸಾರಥಿ

• ಶಿವರಾಜ ರಾಮನಾಳ

ಹೊಸ ಬೆಳಕು

ಬೆಂಗಳೂರು: 'ನನಗೆ ನಿಮ್ಮ ಕೈಲಾಗಿದ್ದನ್ನು ನೀಡಿ

ನಾನು ಬೇರೆಯವರಿಗೆ ನೆರವಾಗಲು ಸಹಾಯವಾಗುತ್ತದೆ...'

–ಇವು ಆಟೊ ಚಾಲಕರೊಬ್ಬರ ವಾಹನದ ಮೇಲಿದ್ದ ಸಾಲುಗಳು. ಕುತೂಹಲದಿಂದ ನೋಡಿದಾಗ ಪಿಪಿಇ ಕಿಟ್ ಧರಿಸಿದ್ದ ವ್ಯಕ್ತಿಯೊಬ್ಬರು ಕಾಣಿಸಿದರು. ಇವರು ನಿರಂತರವಾಗಿ ಕೋವಿಡ್ ರೋಗಿಗಳ ಸೇವೆಯಲ್ಲಿ ತೊಡಗಿರುವ 42 ವರ್ಷದ ಅಬ್ದುಲ್ ಕೆ. ಸೌದಾಗರ್.

ಬಡ ರೋಗಿಗಳು ಮತ್ತು ಅಶಕ್ತರ ಸೇವೆಗಾಗಿ ತಮ್ಮ ಜೀವನಕ್ಕೆ ಆಧಾರವಾಗಿದ್ದ ಆಟೊವನ್ನೇ ಚಿಕ್ಕ ಆಂಬುಲೆನ್ಸ್‌ಯನ್ನಾಗಿ ಮಾಡಿ ಸೇವೆ ಸಲ್ಲಿಸುತ್ತಿದ್ದಾರೆ. ಸೋಂಕಿತರು ಮತ್ತು ಸಾಮಾನ್ಯ ಜನರ ಅಂತ್ಯ ಸಂಸ್ಕಾರಕ್ಕೂ ಸೌದಾಗರ್ ನೆರವಾಗುತ್ತಿದ್ದಾರೆ.

'2020ರ ಮಾರ್ಚ್‌ನಲ್ಲಿ ಕೋವಿಡ್ ಆರಂಭವಾದ ಬಳಿಕ ಜನರು ಸಂಕಷ್ಟ ಅನುಭವಿಸುತ್ತಿರುವುದು ನೋವುಂಟು ಮಾಡಿತು. ಅಂದಿನಿಂದ ಆಟೋವನ್ನೇ ಚಿಕ್ಕ ಆಂಬುಲೆನ್ಸ್ ಮಾಡಿದೆ. ಆಸ್ಪತ್ರೆಗಳಿಗೆ ರೋಗಿಗಳನ್ನು ಸಾಗಿಸುವ ಕಾರ್ಯದಲ್ಲಿ ತೊಡಗಿದೆ. ಅವರಿಗೆ ಆಹಾರ ಮತ್ತು ಔಷಧಿ ಸಹ ಪೂರೈಸುತ್ತೇನೆ. ಹಣವಿಲ್ಲದ ರೋಗಿಗಳಿಗೆ ಊಟ, ನೀರಿನ ವ್ಯವಸ್ಥೆ ಮಾಡುತ್ತೇನೆ. 24 ಗಂಟೆಯೂ ಜನರ ಸೇವೆಗೆ ಸಿದ್ಧ. ನನ್ನ ಬದುಕಿನುದ್ದಕ್ಕೂ ಈ ಕಾರ್ಯ ಮುಂದುವರಿಯುತ್ತದೆ' ಎಂದು ನಿರ್ಲಿಪ್ತವಾಗಿ ನುಡಿಯುತ್ತಾರೆ ಸೌದಾಗರ್.

'ಕಡು ಬಡವರೊಬ್ಬರಿಗೆ ಆಸ್ಪತ್ರೆಗೆ ಶುಲ್ಕ ಪಾವತಿಸಲು ಮತ್ತು ಔಷಧಿಗೂ ದುಡ್ಡು ಇರಲಿಲ್ಲ. ಅವರಿಗೆ ಅಗತ್ಯವಿದ್ದ ₹ 2 ಸಾವಿರ ನೀಡಲು ನಾನು ಜನರ ಬಳಿ ಹೋಗಿ ಭಿಕ್ಷೆ ಬೇಡಿದೆ. ಈ ಬಗ್ಗೆ ಕೀಳರಿಮೆ ಇಲ್ಲ. ಜನರು ಹಣ ನೀಡಿದರೆ ವಾಹನದ ಪೆಟ್ರೋಲ್‌ಗೆ ಬಳಸುತ್ತೇನೆ. ನಾನು ಹಸಿವಿನಿಂದ ಇರುತ್ತೇನೆಯೇ ಹೊರತು ವೈಯಕ್ತಿಕ ಸುಖಕ್ಕಾಗಿ ಯಾವುದನ್ನೂ ದುರುಪಯೋಗಪಡಿಸಿಕೊಳ್ಳುವುದಿಲ್ಲ' ಎನ್ನುವುದು ಅವರ ಸ್ಪಷ್ಟ ನುಡಿಗಳು.

ಆಟೊ ಆಂಬುಲೆನ್ಸ್ ಜೊತೆ ಸೌದಾಗರ್

ಉಚಿತ ಸೇವೆ ಸಲ್ಲಿಸುತ್ತಿರುವ ಸೌದಾಗರ್ ಅವರು, ಹೆಬ್ಬಾಳದ ಬಾಡಿಗೆ ಮನೆಯಲ್ಲಿ ವಾಸಿಸುತ್ತಾರೆ. ಮಡದಿ ಮತ್ತು ಇಬ್ಬರು ಮಕ್ಕಳಿದ್ದಾರೆ. ಇವರ ಸೇವೆಗೆ ಕುಟುಂಬ ಬೆಂಬಲ ನೀಡಿದೆ. ಸೋದರ ಮಾವ ಇವರ ಕುಟುಂಬದ ಖರ್ಚು ವೆಚ್ಚವನ್ನು ನೋಡಿಕೊಳ್ಳುತ್ತಿದ್ದಾರೆ. ಶಾಸಕರು, ಕಾರ್ಪೊರೇಟರ್‌ಗಳು ಸೌದಾಗರ್ ಮಕ್ಕಳ ಶಿಕ್ಷಣ, ಕುಟುಂಬದ ದಿನಸಿ ಮೊದಲಾದವುಗಳ ವೆಚ್ಚ ನಿರ್ವಹಿಸುತ್ತಿದ್ದಾರೆ.

ಆಂಬುಲೆನ್ಸ್ ಆಗಿರುವ ಸ್ಕೂಟರ್

ಜೀವನ ನಿರ್ವಹಣೆಗೆ ಸೌದಾಗಾರ್ ಅವರು ಸಾಲ ಪಡೆದು ಆಟೊ ಖರೀದಿಸಿದ್ದರು. ಆದರೆ, ಸಾಲ ತೀರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ, ಈಗ ಅವರ ಆಟೊವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಇದರಿಂದ ಅವರು ಎದೆಗುಂದಲಿಲ್ಲ. ತಮ್ಮ ಸ್ನೇಹಿತ ನೀಡಿದ ದ್ವಿಚಕ್ರ ವಾಹನದಲ್ಲಿ ಎಂದಿನಂತೆ ಸೇವೆ ಮುಂದುವರಿಸಿದ್ದಾರೆ.

ಅಬ್ದುಲ್ ಕೆ.ಸೌದಾಗರ್: 9986903424

ಆಟೊ ಆಂಬುಲೆನ್ಸ್‌ನಲ್ಲಿನ ವಸ್ತುಗಳು

30 ಲೀಟರ್ ಆಮ್ಲಜನಕ ಸಿಲಿಂಡರ್, ಪಲ್ಸ್ ಆಕ್ಸಿಮೀಟರ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಸ್ಯಾನಿಟೈಸರ್ ಬಾಟಲ್, ಮಾಸ್ಕ್‌ಗಳು, ಉಷ್ಣಮಾಪಕ ಇತ್ಯಾದಿ ಸಾಮಗ್ರಿಗಳು.

ಸ್ಕೂಟರ್‌ನಲ್ಲಿ ಸ್ಯಾನಿಟೈಸರ್, ಮಾಸ್ಕ್, ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇರಿಸಲಾಗಿದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಅವರು ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದರು. ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್‌.ಪಿ.ರವಿಶಂಕರ್ ಹಾಗೂ ಇತರರು ಇದ್ದಾರೆ.

ಆರ್ಯವೈಶ್ಯ ಮಹಾಸಭಾದಿಂದ ಲ್ಯಾಪ್‌ಟಾಪ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿ ನಾವು ಸ್ವಶಕ್ತಿಯ ಮೇಲೆ ಮುಂದುವರೆಯುತ್ತೇವೆ ಎನ್ನುವ ಆತ್ಮವಿಶ್ವಾಸ ಇರಬೇಕು. ವೃದ್ಧಾಶ್ರಮ ಎಂಬ ಭಾವನೆಯನ್ನು ದೂರ ಮಾಡಿ, ಒಳ್ಳೆಯ ನಾಗರಿಕ ಗುಣಗಳನ್ನು ಬೆಳೆಸಿಕೊಳ್ಳಬೇಕು' ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಕಿವಿಮಾತು ಹೇಳಿದರು.

ಕರ್ನಾಟಕ ಆರ್ಯವೈಶ್ಯ ಮಹಾಸಭಾ ವತಿಯಿಂದ ನಗರದಲ್ಲಿ ನಡೆದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ಆರ್.ಪಿ.ರವಿಶಂಕರ್,'ಈ ವರ್ಷ ₹1.20 ಕೋಟಿ ವೆಚ್ಚದಲ್ಲಿ 198 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುತ್ತಿದೆ. ಈ ಮೊತ್ತವನ್ನು ಸಮಾಜದಿಂದ ಮತ್ತು ದಾನಿಗಳಿಂದ ಸಂಗ್ರಹಿಸಲಾಗಿದೆ. ಶಿಕ್ಷಣದಲ್ಲಿ ಗುಣಮಟ್ಟ ಕಾಪಾಡುವುದು ನಮ್ಮ ಉದ್ದೇಶ. ಮಕ್ಕಳು ಅವರ ಮನೆ ಬೆಳಗುವ ಜೊತೆಗೆ ದೇಶದ ಆಸ್ತಿಯಾಗಬೇಕು' ಎಂದರು.

'ಉನ್ನತ ಶಿಕ್ಷಣ ಮಾಡುವ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಲ್ಯಾಪ್‌ಟಾಪ್ ವಿತರಿಸಲಾಗುತ್ತಿದೆ. ಕೋವಿಡ್ ಇರುವುದರಿಂದ ಸದ್ಯ 40 ಮಂದಿಗೆ ಮಾತ್ರ ಲ್ಯಾಪ್‌ಟಾಪ್ ವಿತರಿಸಲಾಗಿದೆ. ಉಳಿದವರ ವಿಳಾಸಗಳಿಗೆ ಈ ವಾರಾಂತ್ಯದಲ್ಲಿ ಲ್ಯಾಪ್‌ಟಾಪ್ ತಲುಪಿಸಲಾಗುವುದು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಶೋಕ್ ಹಾರನಹಳ್ಳಿ ಅವರನ್ನು ಸನ್ಮಾನಿಸಲಾಯಿತು. ಬ್ರಿಗೇಡ್ ಹಾಸ್ಪಿಟಾಲಿಟಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ವಿನೀತ್ ವರ್ಮ ಭಾಗವಹಿಸಿದ್ದರು.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ವೇಮನ ಜಯಂತಿ ಕಾರ್ಯಕ್ರಮ ಮೊಟಕುಗೊಳಿಸಿದ್ದಕ್ಕೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪೂರ್ವ ತಾಲ್ಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ಮಹಾಯೋಗಿ ವೇಮನ 610 ನೇ ಜಯಂತೋತ್ಸವದಲ್ಲಿ ವಿಶೇಷ ತಹಶಿಲ್ದಾರ್ ನಾಗಪ್ರಶಾಂತ್ ಅವರು ರೆಡ್ಡಿ ಸಮುದಾಯದ ಜನಪ್ರತಿನಿಧಿಗಳಿಗೆ ವೇದಿಕೆಯಲ್ಲಿ ಮಾತನಾಡಲು ಅವಕಾಶ ನೀಡಿಲ್ಲ ಎಂದು ಆರೋಪಿಸಿ ಬಿಎಂಟಿಸಿ ಅಧ್ಯಕ್ಷ ಎನ್.ಎಸ್. ನಂದೀಶ್ ರೆಡ್ಡಿ ನೇತೃತ್ವದಲ್ಲಿ ರೆಡ್ಡಿ ಸಮುದಾಯದ ಮುಖಂಡರು ತಾಲ್ಲೂಕು ಕಚೇರಿ ಮುಂದೆ ಬುಧವಾರ ಪ್ರತಿಭಟನೆ ನಡೆಸಿದರು.

ಕಾರ್ಯಕ್ರಮ ಬೆಳಿಗ್ಗೆ 11 ಗಂಟೆಗೆ ಆರಂಭವಾಗಬೇಕಿತ್ತು. ಸಚಿವ ಬೈರತಿ ಬಸವರಾಜ ಅವರು ತಾಲ್ಲೂಕು ಆಸ್ಪತ್ರೆ ಅವ್ಯವಸ್ಥೆ ಕುರಿತು ಪರಿಶೀಲನೆಗೆ ತೆರಳಿದ್ದರಿಂದ ಹದಿನೈದು ನಿಮಿಷ ತಡವಾಗಿತ್ತು. ಸಚಿವರ ಬರುವಿಕೆಗಾಗಿ ವಿಶೇಷ ತಹಶಿಲ್ದಾರ್ ನಾಗಪ್ರಶಾಂತ್ ದಾರಿ ಕಾಯುತ್ತ ನಿಂತಿದ್ದರು. ಶಾಸಕ ಅರವಿಂದ ಲಿಂಬಾವಳಿ, ರಾಜ್ಯಸಭಾ ಸದಸ್ಯ ಕೆ.ಸಿ.ರಾಮಮೂರ್ತಿ, ಸಂಸದ ಪಿ.ಸಿ.ಮೋಹನ್, ನಂದೀಶ್ ರೆಡ್ಡಿ, ಪದ್ಮನಾಭ ರೆಡ್ಡಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬಿಎಂಟಿಸಿ ಅಧ್ಯಕ್ಷ ನಂದೀಶ್ ರೆಡ್ಡಿ ನೇತೃತ್ವದಲ್ಲಿ ರೆಡ್ಡಿ ಸಮುದಾಯದ ಮುಖಂಡರು ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಬೈರತಿ ಬಸವರಾಜ ತರಾತುರಿಯಲ್ಲಿ ಕಾರ್ಯಕ್ರಮ ಉದ್ಘಾಟಿಸಿ ಭಾಷಣ ಮಾಡಿ ನಿರ್ಗಮಿಸುತ್ತಿದ್ದಂತೆ ವಿಶೇಷ ತಹಶಿಲ್ದಾರ್ ಕಾರ್ಯಕ್ರಮ ಮೊಟಕುಗೊಳಿಸಿದರು. ಇದರಿಂದ ಕೆರಳಿದ ನಂದೀಶ್ ರೆಡ್ಡಿ ಅವರು, 'ಕೆ. ಸಿ.ರಾಮಮೂರ್ತಿ, ಪಿ.ಸಿ.ಮೋಹನ್, ಅವರಿಗೆ ನಾಗಪ್ರಶಾಂತ್ ಮಾತನಾಡಲು ಅವಕಾಶ ನೀಡಿಲ್ಲ. ಅವರ ತಲೆದಂಡವಾಗಬೇಕು' ಎಂದು ಪಟ್ಟು ಹಿಡಿದು ಧರಣಿ ನಡೆಸಿದರು.

ನಂತರ ಮಾತನಾಡಿದ ನಂದೀಶ್ ರೆಡ್ಡಿ, 'ತಾಲ್ಲೂಕು ಆಡಳಿತ ವತಿಯಿಂದ ಬೇರೆ ಬೇರೆ ಸಮುದಾಯದ ಜಯಂತಿಗಳನ್ನು ಅದ್ದೂರಿಯಾಗಿ ಆಚರಿಸಿ ರೆಡ್ಡಿ ಸಮುದಾಯದ ವೇಮನ ಜಯಂತಿಯನ್ನು ಮಾತ್ರ ಅಲ್ಪಾವಧಿಯಲ್ಲಿ ಕಾರ್ಯಕ್ರಮ ಮೊಟಕುಗೊಳಿಸಲಾಗಿದೆ. ಪೂರ್ವ ತಾಲ್ಲೂಕಿನಲ್ಲಿ ರೆಡ್ಡಿ ಸಮುದಾಯದವರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ನಮ್ಮ ಹಲವು ಬೇಡಿಕೆಗಳು ಇದ್ದು ನಮ್ಮ ಸಮುದಾಯದ ಪ್ರತಿನಿಧಿಗಳು ಮಾತನಾಡಲು ಅವಕಾಶ ನೀಡದೆ ಒಂದೇ ವಾಕ್ಯದಲ್ಲಿ ಕಾರ್ಯಕ್ರಮ ಮುಗಿಸಿ ವೇಮನನಿಗೆ ಅವಮಾನ ಮಾಡಲಾಗಿದೆ' ಎಂದು ದೂರಿದರು.

ವಸತಿ ರಹಿತರಿಗೆ ನಿವೇಶನ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸರ್ಕಾರಿ ಜಮೀನನ್ನು ಉಳಿಸಿ ವಸತಿ ರಹಿತರಿಗೆ ನಿವೇಶನ ನೀಡುವಂತೆ ಒತ್ತಾಯಿಸಿ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಹಾಗೂ ರಾಮಗೊಂಡನಹಳ್ಳಿ ಗ್ರಾಮಸ್ಥರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಕೆ.ಆರ್.ಪುರ ತಾಲ್ಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿದ ರಾಮಗೊಂಡನಹಳ್ಳಿ ಗ್ರಾಮಸ್ಥರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ವೇಣುಗೋಪಾಲ, 'ವರ್ತೂರು ಹೋಬಳಿಯ ರಾಮಗೊಂಡನಹಳ್ಳಿ ಸರ್ವೆ ನಂಬರ್ 105ರಲ್ಲಿ 6 ಎಕರೆ 27 ಗುಂಟೆ ಸರ್ಕಾರಿ ಭೂಮಿಯಿದ್ದು ಅದನ್ನು ಗ್ರಾಮದ ಕ್ಷೇಮಾಭಿವೃದ್ಧಿ ಸಂಘಕ್ಕೆ, ಶಾಲೆ ನಿರ್ಮಾಣ ಹಾಗೂ ಡಾ.ಬಿ. ಆರ್. ಅಂಬೇಡ್ಕರ್ ಅವರ ಉದ್ಯಾನಕ್ಕೆ ಮೀಸಲಿಡಬೇಕು. ಮುಳ್ಳೂರು, ಚನ್ನಸಂದ್ರ ಸೇರಿದಂತೆ ತಾಲ್ಲೂಕಿನಲ್ಲಿ ಸರ್ಕಾರಿ ಜಾಗಗಳಿದ್ದು ಸರ್ಕಾರಿ ಭೂಮಿಯನ್ನು ಉಳಿಸಿ ಅದನ್ನು ಬಡವರಿಗೆ ವಸತಿಹೀನರಿಗೆ ನಿವೇಶನಗಳನ್ನು ಹಂಚಬೇಕಾಗಿದೆ' ಎಂದು ತಿಳಿಸಿದರು.

ಕರ್ನಾಟಕ ದಲಿತ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಸೋರಹುಣಸೆ ಎನ್.ವೆಂಕಟೇಶ್ ಮಾತನಾಡಿ, 'ಪೂರ್ವ ತಾಲ್ಲೂಕಿನಲ್ಲಿ ಸುಮಾರು ₹1250 ಕೋಟಿ ಮೌಲ್ಯದ ಸರ್ಕಾರಿ ಭೂಮಿಗಳನ್ನು ನಕಲಿ ದಾಖಲೆ ಸೃಷ್ಟಿಸಿ ಭೂಗಳ್ಳರು ಭೂಮಿ ಕಬಳಿಸುತ್ತಿದ್ದಾರೆ. ಅಧಿಕಾರಿಗಳು ಭೂಗಳ್ಳರ ವಿರುದ್ಧ ಕೂಡಲೇ ಕ್ರಮ ಜರುಗಿಸಿ ಸರ್ಕಾರಿ ಜಮೀನನ್ನು ಉಳಿಸಿಕೊಳ್ಳಬೇಕು. ಈ ಭಾಗದಲ್ಲಿ ನೆಲೆಸಿರುವ ಕಡುಬಡವರಿಗೆ ಹದಿನೈದು ವರ್ಷದಿಂದ ಯಾವುದೇ ನಿವೇಶನ ನೀಡಿಲ್ಲ. ಕೋಟ್ಯಂತರ ಮೌಲ್ಯದ ಸರ್ಕಾರಿ ಜಮೀನು ಬಂಡವಾಳ ಶಾಹಿಗಳ ಪಾಲಾಗುತ್ತಿದೆ. ಅಧಿಕಾರಿಗಳು ಕೂಡ ಅಕ್ರಮದಲ್ಲಿ ಶಾಮೀಲು ಅಗಿದ್ದಾರೆ. ಸರ್ಕಾರ ಈ ಕೂಡಲೇ ಎಚ್ಚೆತ್ತುಕೊಂಡು ಒತ್ತುವರಿ ತೆರವುಗೊಳಿಸಿ ಬಡವರಿಗೆ ನಿವೇಶನ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ಕರ್ನಾಟಕ ದಲಿತ ರಕ್ಷಣಾ ವೇದಿಕೆ ಹಾಗೂ ರಾಮಗೊಂಡನಹಳ್ಳಿ ಗ್ರಾಮಸ್ಥರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ವಿಶೇಷ ತಹಶೀಲ್ದಾರ್ ನಾಗಪ್ರಶಾಂತ್ ಅವರಿಗೆ ಮನವಿ ಸಲ್ಲಿಸಿದರು.

FOR SALE

Prime Corporate Land, Mysore Road, Bengaluru.

- KIADB allotted corner land parcel measuring 1,17,347 Square Feet or 2.69 Acres available for sale as one parcel or in portions
- Located on Dodda Aladamara Main Road, Kengeri Hobli, off Mysore Road, Kumabalagodu Industrial Area
- Clear title and corporate ownership
- Touching BDA Nadapradbhu Kempegowda Layout, Mysore Road
- Direct access from Dodda Aladamara Main Road on one side and 40 feet road on the other side
- 0.5 Kms from Rajarajeshwari College of Engineering
- 1 km from Brigade Panorama
- 2 kms from Anchepalya Metro Station

For further details kindly contact us between 10 am – 5 pm
+91-9591599824
+91-9108987261

ರೈತ ವಿದ್ಯಾನಿಧಿ: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರ ಮಕ್ಕಳ ಶಿಕ್ಷಣಕ್ಕಾಗಿ ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆಯಡಿ ಶಿಷ್ಯವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ರಾಜ್ಯದಲ್ಲಿ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳಿಗೆ 2021–22ನೇ ಸಾಲಿನಿಂದ ಶಿಷ್ಯವೇತನ ನೀಡಲಾಗುವುದು.

8ರಿಂದ 10ನೇ ತರಗತಿಯ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳಿಗೆ ₹2 ಸಾವಿರ, ಪಿಯುಸಿ, ಐಟಿಐ, ಡಿಪ್ಲೊಮಾ ವಿದ್ಯಾರ್ಥಿಗಳಿಗೆ ₹2,500 ಹಾಗೂ ವಿದ್ಯಾರ್ಥಿನಿಯರಿಗೆ ₹3 ಸಾವಿರ, ಪದವಿ ವಿದ್ಯಾರ್ಥಿಗಳಿಗೆ ₹5 ಸಾವಿರ ಹಾಗೂ ವಿದ್ಯಾರ್ಥಿನಿಯರಿಗೆ ₹5,500, ವೃತ್ತಿಪರ ಕೋರ್ಸ್‌ನ ವಿದ್ಯಾರ್ಥಿಗಳಿಗೆ ₹7,500 ಹಾಗೂ ವಿದ್ಯಾರ್ಥಿನಿಯರಿಗೆ ₹8 ಸಾವಿರ, ಎಂಬಿಬಿಎಸ್, ಬಿಇ, ಬಿ.ಟೆಕ್ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ₹10 ಸಾವಿರ ಹಾಗೂ ವಿದ್ಯಾರ್ಥಿನಿಯರಿಗೆ ₹11 ಸಾವಿರ ಶಿಷ್ಯವೇತನ ನೀಡಲಾಗುವುದು.

ಅರ್ಜಿಗಳನ್ನು ಜಾಲತಾಣ https://ssp.postmatric.karnataka.gov.inನಲ್ಲಿ ಸಲ್ಲಿಸಬೇಕು. ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ ಹಾಗೂ ಎನ್‌ಪಿಸಿಐ ಮ್ಯಾಪಿಂಗ್ ಮಾಡಿಸಿರಬೇಕು. ತಂದೆ ಅಥವಾ ತಾಯಿಯ ರೈತರ ಗುರುತಿನ ಸಂಖ್ಯೆ (ಎಫ್‌ಐಡಿ) ಹೊಂದಿರಬೇಕು.

ಎಫ್‌ಐಡಿ ನೋಂದಾಯಿಸಲು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿನಿಲಯ ಪ್ರವೇಶ; ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಜ.27ರವರೆಗೆ ವಿಸ್ತರಿಸಲಾಗಿದೆ.

ಅರ್ಜಿಯನ್ನು www.bcwd.karnataka.gov.in ಮೂಲಕ ಸಲ್ಲಿಸಬಹುದು.

ಸಂಪರ್ಕ:080-22867628

'ಐಸಿಟಿ ಇನ್‌ಫ್ರಾಕಾನ್ ಕಂಪನಿಯ ಅವೈಜ್ಞಾನಿಕ ನಿರ್ವಹಣೆ'

ಆರ್‌ಟಿಇ ಶುಲ್ಕ ವಿಳಂಬ: ರುಪ್ಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುಜರಾತ್‌ನ ಐಸಿಟಿ ಇನ್‌ಫ್ರಾಕಾನ್ ಕಂಪನಿಯ ಅವೈಜ್ಞಾನಿಕ ಸಾಫ್ಟ್‌ವೇರ್ ನಿರ್ವಹಣೆಯಿಂದಾಗಿ ಕಳೆದ ಮೂರೂವರೆ ವರ್ಷಗಳಿಂದ ಆರ್‌ಟಿಇ ಶುಲ್ಕ ಸಕಾಲಕ್ಕೆ ಮರುಪಾವತಿಯಾಗುತ್ತಿಲ್ಲ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘ (ರುಪ್ಸಾ) ದೂರಿದೆ.

'ಶಿಕ್ಷಣ ಇಲಾಖೆಯ ಮಾಹಿತಿ ತಂತ್ರಜ್ಞಾನ ವಿಭಾಗದಲ್ಲಿ 50ಕ್ಕಿಂತ ಹೆಚ್ಚು ಅನುಭವಿ ತಾಂತ್ರಿಕ ಪರಿಣಿತರಿದ್ದಾರೆ. ಆದರೂ, ಸರ್ಕಾರ ಎಲ್ಲ ಬಗೆಯ ಸಾಫ್ಟ್‌ವೇರ್ ನಿರ್ವಹಣೆಯ ಜವಾಬ್ದಾರಿಯನ್ನು ಐಸಿಟಿ ಇನ್‌ಫ್ರಾಕಾನ್ ಕಂಪನಿಗೆ ನೀಡಿರುವುದು ಸಂಶಯ ಮೂಡಿಸಿದೆ' ಎಂದು ರುಪ್ಸ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ದೂರಿದ್ದಾರೆ.

'ನಿರ್ವಹಣೆಯ ಒಪ್ಪಂದವನ್ನು ಐದು ವರ್ಷಗಳಅವಧಿಗೆನೀಡಿದ್ದು,ಈಗಾಗಲೇ ನೂರಾರು ಕೋಟಿ ಮೊತ್ತವನ್ನು ಮುಂಗಡ ಪಾವತಿಸಲಾಗಿದೆ. ಆದರೆ, ಕಳೆದ ಮೂರುವರೆ ವರ್ಷಗಳಿಂದ ಶಾಲಾ–ಕಾಲೇಜುಗಳು ಹಾಗೂ ಶಿಕ್ಷಕರ ಭವಿಷ್ಯದ ಜತೆ ಈ ಸಂಸ್ಥೆ ಚೆಲ್ಲಾಟವಾಡುತ್ತಿದೆ' ಎಂದು ತಿಳಿಸಿದ್ದಾರೆ.

ಈ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಿಗೆ ಪತ್ರ ಬರೆದಿರುವ ಅವರು, 'ಸರ್ಕಾರಿ ಶಾಲೆಯ ಶಿಕ್ಷಕರ ವರ್ಗಾವಣೆಯನ್ನು ಪದೇ ಪದೇ ಮುಂದೂಡಲಾಗುತ್ತಿದೆ. ಇದೇ ರೀತಿ ಶಾಲೆಗಳ ಮಾನ್ಯತೆ ನವೀಕರಣ ಮತ್ತು 10ನೇ ತರಗತಿ ವಿದ್ಯಾರ್ಥಿಗಳ ನೋಂದಣಿಗೆ ಅಲೆದಾಡುವಂತಾಗಿದೆ. ತಾಂತ್ರಿಕ ದೋಷವೇ ಈ ಎಲ್ಲ ಸಮಸ್ಯೆಗಳಿಗೆ ಕಾರಣ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಕಂಪನಿಯ ವ್ಯಾಪಾರಿ ಮನೋಭಾವದ ನಿರ್ವಹಣೆಯಿಂದ ಇಡೀ ವ್ಯವಸ್ಥೆ ಗೊಂದಲದ ಗೂಡಾಗಿದೆ' ಎಂದು ವಿವರಿಸಿದ್ದಾರೆ.

'ಈ ಕಂಪನಿಗೆ ನೀಡಿರುವ ಜವಾಬ್ದಾರಿಯನ್ನು ವಾಪಸ್ ಪಡೆದು ಇಲಾಖೆಯಲ್ಲಿ ಕೆಲಸ ಇಲ್ಲದೆಯೇ ಇರುವ ಮಾಹಿತಿ ತಂತ್ರಜ್ಞಾನ ಘಟಕದ ಅಧಿಕಾರಿಗಳಿಗೆ ವಹಿಸಿಕೊಡಬೇಕು' ಎಂದು ಕೋರಿದ್ದಾರೆ.

ಚಿತ್ರಾವಳಿ

ವಿಘ್ನೇಶ್ವರ ಕಲಾ ಸಂಘವು ಮರಿಯಪ್ಪನ ಪಾಳ್ಯದ ಮಾತಾ ಅಮೃತಾನಂದಮಯಿ ಗೋಪುರದ ಬಳಿ ಹಮ್ಮಿಕೊಂಡಿದ್ದ ನಾಟಕೋತ್ಸವದಲ್ಲಿ 'ಕುರುಕ್ಷೇತ್ರ' ಪೌರಾಣಿಕ ನಾಟಕದ ಪ್ರದರ್ಶನ ನಡೆಯಿತು.

ವೇಮನರೆಡ್ಡಿ ಸೇವಾ ಟ್ರಸ್ಟ್ ಹಾಗೂ ವೇಮನರೆಡ್ಡಿ ಸಂಘದ ವತಿಯಿಂದ ಬೆಂಗಳೂರು ದಕ್ಷಿಣ ವ್ಯಾಪ್ತಿಯ ಕಾಚನಾಯಕನಹಳ್ಳಿಯಲ್ಲಿ ಬುಧವಾರ ನಡೆದ ವೇಮನ ಜಯಂತಿ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಅವರು ವೇಮನರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಮುಖಂಡರಾದ ಪ್ರಸನ್ನ ಕುಮಾರ್, ಕೂಡ್ಲು ಕೃಷ್ಣಾರೆಡ್ಡಿ, ವಿನಯ್, ಕಿರಣ್, ನವೀನ್, ಮುನಿರತ್ನ ಮುನಿರಾಜು, ಲೋಕೇಶ್, ರಾಮಸ್ವಾಮಿ ಹಾಗೂ ಇತರರು ಇದ್ದಾರೆ.

'ಸವಿತಾ ಪ್ರತಿಭಾನ್ವೇಷಣೆ' ವಿಶೇಷ ಸ್ಪರ್ಧೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸವಿತಾ ಮಹರ್ಷಿ ಜಯಂತಿ ಅಂಗವಾಗಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಸವಿತಾ ಸಮಾಜವು 'ಸವಿತಾ ಪ್ರತಿಭಾನ್ವೇಷಣೆ' ಶೀರ್ಷಿಕೆಯಡಿ ಸಮುದಾಯದವರಿಗಾಗಿ ವಿವಿಧ ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ ಏರ್ಪಡಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಸಿ.ವೆಂಕಟರಾಜು,'ವಿದ್ಯಾರ್ಥಿಗಳಿಗೆ ವಿವಿಧ ವಿಭಾಗಗಳಲ್ಲಿ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲಾಗಿದೆ. 1ರಿಂದ 4ನೇ ತರಗತಿ ವಿದ್ಯಾರ್ಥಿಗಳು ತಮ್ಮಿಷ್ಟದ ಚಿತ್ರ ಬಿಡಿಸಬಹುದು. 5ರಿಂದ 7ನೇ ತರಗತಿಯವರು ಯೋಗಾಸನ, 8ರಿಂದ 10ನೇ ತರಗತಿಯವರು 'ಕೋವಿಡ್ ಮತ್ತು ಅದರ ಪರಿಣಾಮ' ಕುರಿತು ಚಿತ್ರಗಳನ್ನು ರಚಿಸಬಹುದು' ಎಂದರು.

'ನಮ್ಮ ಸಮಾಜ ಮತ್ತು ನಮ್ಮ ಹಕ್ಕು' ವಿಷಯ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ಪಿಯುಸಿಯಿಂದ ಪದವಿವರೆಗಿನ ವಿದ್ಯಾರ್ಥಿಗಳು ಭಾಗವಹಿಸಬಹುದು. ಗೃಹಿಣಿಯರಿಗಾಗಿ ರಂಗೋಲಿ ಬಿಡಿಸುವ ಸ್ಪರ್ಧೆಯೂ ಇದೆ. ಸವಿತಾ ಸಮಾಜದ ವೃತ್ತಿಪರರಿಗಾಗಿ ಕೇಶಾಲಂಕಾರ, ಕೇಶವಿನ್ಯಾಸ, ಮೇಕಪ್, ಮೆಹಂದಿ, ಕ್ಷೌರ ಮಾಡುವುದು ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಏರ್ಪಡಿಸಿದ್ದೇವೆ' ಎಂದು ವಿವರಿಸಿದರು.

ಪ್ರಧಾನ ಕಾರ್ಯದರ್ಶಿ ರಂಗಶಾಮಯ್ಯ,'ಸ್ಪರ್ಧೆಗಳಲ್ಲಿ ಭಾಗವಹಿಸುವವರು https://forms.gle/59uzoySnbxdVtkus8 ಮೂಲಕ ಜ.28ರೊಳಗೆ ಅರ್ಜಿ ಸಲ್ಲಿಸಬಹುದು. ವಿಜೇತರಿಗೆ ವಿಶೇಷ ಪ್ರಶಸ್ತಿಗಳು, ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ಪರಿಕರಿಗಳನ್ನು ಬಹುಮಾನವಾಗಿ ನೀಡಲಾಗುವುದು' ಎಂದು ಹೇಳಿದರು.

ಸಂಪರ್ಕ:9036566693

ರೆಡ್‌ಕ್ರಾಸ್:ಮಾಹಿತಿ ನಮೂದಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಬೆಂಗಳೂರು ನಗರ ಜಿಲ್ಲಾ ಶಾಖೆಯಲ್ಲಿ ಕೆಲವು ಸದಸ್ಯರು ತಮ್ಮ ವಿಳಾಸ ಮತ್ತು ದೂರವಾಣಿ ಸಂಖ್ಯೆ ನಮೂದಿಸಿಲ್ಲ. ಸದಸ್ಯರು ಕೂಡಲೇ ಗುರುತಿನ ಚೀಟಿ, ಆಧಾರ್ ಕಾರ್ಡ್ ಹಾಗೂ ಭಾವಚಿತ್ರವನ್ನು ತಲುಪಿಸುವಂತೆ ಪ್ರಕಟಣೆ ತಿಳಿಸಿದೆ.

ಸದಸ್ಯರು ನೀಡುವ ದಾಖಲೆಗಳ ಮೇರೆಗೆ ಸಂಸ್ಥೆಯಿಂದ ಸದಸ್ಯರ ಗುರುತಿನ ಚೀಟಿ ನೀಡಲಾಗುವುದು. ಪ್ರಕಟಣೆ ಹೊರಡಿಸಿದ 15 ದಿನದೊಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ ವಿವರ ಸಲ್ಲಿಸಬೇಕು.

ವಿಳಾಸ:ಕಾರ್ಯದರ್ಶಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಮೊದಲನೆ ಮಹಡಿ, ಕಂದಾಯ ಭವನ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ | भारत सरकार का उपक्रम | A Government of India Undertaking
ಸಿಂಡಿಕೇಟ್ सिंडिकेट Syndicate
Together We Can

Azadi Ka Amrit Mahotsav

ಸಂತಸದ ಘಳಿಗೆ, ನಿಮ್ಮ ಬಳಿಗೆ.

ಕೆನರಾ ಚಿನ್ನದ ಸಾಲ
ನಿಮ್ಮ ಹಣಕಾಸಿನ ಅಗತ್ಯಗಳನ್ನು ತ್ವರಿತವಾಗಿ ಮತ್ತು ಸುಲಭವಾಗಿ ಪೂರೈಸಿಕೊಳ್ಳಿ
ವರ್ಷಕ್ಕೆ 7.25% ಬಡ್ಡಿ ದರದಲ್ಲಿ

ಗರಿಷ್ಠ ದರ ಪ್ರತಿ ಗ್ರಾಂಗೆ | ಕೃಷಿ ಸಾಲಕ್ಕಾಗಿ ಸರಳ ಬಡ್ಡಿ | ಕಡಿಮೆ ಪ್ರಕ್ರಿಯೆ ಶುಲ್ಕಗಳು | ಫ್ಲೆಕ್ಸಿಬಲ್ ಮರುಪಾವತಿ | ತ್ವರಿತ ವಿತರಣೆ

5 ಆಕರ್ಷಕ ಸಾಲದ ಕೊಡುಗೆಗಳು. 1 ಸರಳ ಪರಿಹಾರ

ಕೆನರಾ ಗೃಹ ಸಾಲಗಳು
ಕೆನರಾ ವಾಹನ ಸಾಲಗಳು
ಕೆನರಾ ಚಿನ್ನದ ಸಾಲ
ಕೆನರಾ ವೈಯಕ್ತಿಕ ಸಾಲ
ಕೆನರಾ ಶೈಕ್ಷಣಿಕ ಸಾಲ

ತ್ವರಿತ ಅನುಮೋದನೆ ಪಡೆಯಲು ಇಲ್ಲಿ ಸ್ಕ್ಯಾನ್ ಮಾಡಿ

ಷರತ್ತುಗಳು ಅನ್ವಯಿಸುತ್ತವೆ

www.canarabank.com | 1800 425 0018
canarabank | canarabankofficial | canarabankinsta

ಆರೋಪಿ ಎಸ್‌ಡಿಪಿಐ ಮುಖಂಡನ ಜಾಮೀನು ಅರ್ಜಿ ವಜಾ

‘ಡಿ.ಜೆ.ಹಳ್ಳಿ ಘಟನೆ ಭಯೋತ್ಪಾದನಾ ಕೃತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ’ಡಿ.ಜೆ. ಹಳ್ಳಿ (ದೇವರ ಜೀವನಹಳ್ಳಿ) ಹಾಗೂ ಕೆ.ಜಿ. ಹಳ್ಳಿ (ಕಾಡುಗೊಂಡನಹಳ್ಳಿ) ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಗಲಭೆ ಮೇಲ್ನೋಟಕ್ಕೆ ಭಯೋತ್ಪಾದನಾ ಕೃತ್ಯಕ್ಕೆ ಸಮನಾಗಿದೆ‘ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್‌, ಪ್ರಕರಣದ ಪ್ರಮುಖ ಆರೋಪಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ಕೆ.ಜಿ. ಹಳ್ಳಿ ವಾರ್ಡ್‌ ಅಧ್ಯಕ್ಷ ಇಮ್ರಾನ್ ಖಾನ್‌ಗೆ ಜಾಮೀನು ಮಂಜೂರು ಮಾಡಲು ನಿರಾಕರಿಸಿದೆ.

ಜಾಮೀನು ಕೋರಿ ಇಮ್ರಾನ್ ಅಹ್ಮದ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಅಲೋಕ್ ಆರಾಧೆ ಮತ್ತು ನ್ಯಾಯಮೂರ್ತಿ ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದ್ದು, ’ಅರ್ಜಿದಾರ ಎಸ್‌ಡಿಪಿಐ ಅಧ್ಯಕ್ಷರಾಗಿದ್ದು, ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ. ಮೇಲ್ನೋಟಕ್ಕೆ ಅವರ ವಿರುದ್ಧದ ಆರೋಪಗಳನ್ನು ನಂಬಲು ಸೂಕ್ತ ಕಾರಣಗಳಿವೆ‘ ಎಂದು ಹೇಳಿದೆ.

ವಿಚಾರಣೆಯಲ್ಲಿ ಎನ್‌ಐಎ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, ’ಸಮಾಜದ ಕಾನೂನು ಮತ್ತು ಶಾಂತಿ ಪಾಲನೆ ಕಾಪಾಡುವ ಪೊಲೀಸರ ಮೇಲೆಯೇ ಹಲ್ಲೆ, ಪೊಲೀಸ್ ಠಾಣೆಯ ಮೇಲೆ ಪೆಟ್ರೋಲ್ ಎರಚಿ ಸುಡುವುದು ಭಯೋತ್ಪಾದನೆಯ ಕೃತ್ಯ. ಪೊಲೀಸರಿಗೇ ಹೀಗಾದರೆ ಶ್ರೀಸಾಮಾನ್ಯರ ರಕ್ಷಣೆ ಹೇಗೆ ಸಾಧ್ಯ. ಆರೋಪಿ ಎಸ್‌ಡಿಪಿಐ ಮುಖಂಡನಾಗಿದ್ದು ಇಂತಹ ಕೃತ್ಯಗಳಿಗೆ ಪ್ರಚೋದನೆ ನೀಡಿರುವ ಕಾರಣ ಜಾಮೀನು ನೀಡಬಾರದು‘ ಎಂದು ಪ್ರತಿಪಾದಿಸಿದ್ದರು.

ಪ್ರಕರಣವೇನು?: ’ಪುಲಕೇಶಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರ ಸೋದರಳಿಯ ಪಿ.ನವೀನ್ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪ್ರವಾದಿ ಮೊಹಮ್ಮದರ ಕುರಿತು ಅವಹೇಳನಕಾರಿ ಅಂಶಗಳನ್ನು ಪ್ರಸ್ತಾಪಿಸಿದ್ದಾರೆ‘ ಎಂದು ಆರೋಪಿಸಿ 2020ರ ಆಗಸ್ಟ್ 11ರಂದು ರಾತ್ರಿ 8.45ರ ಸಮಯದಲ್ಲಿ ಕೆ.ಜಿ. ಹಳ್ಳಿ ಪೊಲೀಸ್ ಠಾಣೆ ಮುಂದೆ ಜಮಾವಣೆಗೊಂಡಿದ್ದ ಗುಂಪು ನವೀನ್ ಬಂಧನಕ್ಕೆ ಒತ್ತಾಯಿಸಿತ್ತು.

ನಂತರ ಉದ್ರಿಕ್ತ ಗುಂಪು ಹಿಂಸಾಚಾರಕ್ಕೆ ತಿರುಗಿ ಡಿ.ಜೆ. ಹಳ್ಳಿ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿತ್ತು. ಕೆ.ಜಿ. ಹಳ್ಳಿ ಠಾಣೆಯ ಮುಂದೆಯೂ ದಾಂದಲೆ ನಡೆಸಿ ವಾಹನಗಳನ್ನು ಸುಟ್ಟು ಹಾಕಿತ್ತು. ಅಲ್ಲದೇ, ಅಖಂಡ ಶ್ರೀನಿವಾಸ-ಮೂರ್ತಿ ಮನೆಗೂ ಬೆಂಕಿ ಹಚ್ಚಲಾಗಿತ್ತು. ಈ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ– 1967ರ (ಯುಎಪಿಎ), ಭಾರತೀಯ ದಂಡ ಸಂಹಿತೆ–1860 ಮತ್ತು ಆಸ್ತಿಪಾಸ್ತಿ ನಷ್ಟ ಪ್ರತಿಬಂಧಕ ಕಾಯ್ದೆ–1984ರ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿ-ಸಲಾಗಿತ್ತು.

38 ಆರೋಪಿಗಳು ಜೈಲಿನಲ್ಲಿ

ಪ್ರಕರಣದ ವಿಚಾರಣೆ ನಡೆಸುತ್ತಿರುವ ಎನ್‌ಐಎ ವಿಶೇಷ ನ್ಯಾಯಾಲಯ, ಆರೋಪಿ ಇಮ್ರಾನ್ ಖಾನ್ ಅರ್ಜಿಯನ್ನು ತಿರಸ್ಕರಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಇಮ್ರಾನ್ ಹೈಕೋರ್ಟ್‌ನಲ್ಲಿ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು.

2021ರ ಫೆಬ್ರುವರಿ 21ರಂದು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಯುಎಪಿಎ ಕಾಯ್ದೆಯಡಿ ಒಟ್ಟು 49 ಆರೋಪಿಗಳ ವಿರುದ್ಧ ದೋಷಾರೋಪ ಹೊರಿಸಲಾಗಿತ್ತು. ಇವರಲ್ಲಿ 11 ಜನ ಆರೋಪಿಗಳಿಗೆ ಡಿಫಾಲ್ಟ್ ಜಾಮೀನು (ದೋಷಾರೋಪಣೆ ಪಟ್ಟಿಯನ್ನು ತನಿಖಾಧಿಕಾರಿಯು ಕಾನೂನುಬದ್ಧ ಅವಧಿಯೊಳಗೆ ಕೋರ್ಟ್‌ಗೆ ಸಲ್ಲಿಸದೇ ಹೋದಾಗ ಅದೇ ಕಾರಣಕ್ಕಾಗಿ ಆರೋಪಿಗೆ ಲಭ್ಯವಾಗುವ ಜಾಮೀನು– ಮರಣದಂಡನೆ ಮತ್ತು ಜೀವಿತಾವಧಿ ಶಿಕ್ಷೆಗಳನ್ನೂ ಒಳಗೊಂಡ ಅಪರಾಧಗಳಿಗೆ) ದೊರೆತಿದೆ.

38 ಆರೋಪಿಗಳು ಕಳೆದ ಒಂದು ವರ್ಷ ಐದು ತಿಂಗಳಿನಿಂದ ಜೈಲಿನಲ್ಲಿದ್ದೇ ವಿಚಾರಣೆ ಎದುರಿಸುತ್ತಿದ್ದಾರೆ.

ಸಂಪ್ ಸ್ವಚ್ಛಗೊಳಿಸುವಾಗ ವಿದ್ಯುತ್ ಪ್ರವಹಿಸಿ ತಂದೆ–ಮಗ ಸಾವು

ಬೆಂಗಳೂರು: ನೀರಿನ ಸಂಪ್ ಸ್ವಚ್ಛ-ಗೊಳಿಸುವಾಗ ವಿದ್ಯುತ್ ಪ್ರವಹಿಸಿ ಅಪ್ಪ ಹಾಗೂ ಮಗ ಅಸುನೀಗಿದ್ದಾರೆ. ಈ ಸಂಬಂಧ ಆರ್‌.ಟಿ.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜು (36) ಹಾಗೂ ಅವರ ಮಗ ಸಾಯಿ (10) ಮೃತಪಟ್ಟವರು.

‘ಸುಲ್ತಾನ್ ಪಾಳ್ಯ ಬಳಿ ಇರುವ ರಾಮಕೃಷ್ಣ ವಸತಿ ಸಮುಚ್ಚಯದ-ಲ್ಲಿ ರಾಜು ಅವರು ಬುಧವಾರ ಬೆಳಿಗ್ಗೆ ಸಂಪ್ ಸ್ವಚ್ಛಗೊಳಿಸಲು ತೆರಳಿದ್ದರು. ಮಗನನ್ನೂ ಕರೆದುಕೊಂಡು ಹೋಗಿದ್ದರು. ಕೆಲಸ ಮಾಡುತ್ತಿದ್ದ ವೇಳೆ ವಿದ್ಯುತ್ ತಗುಲಿ ಸ್ಥಳದಲ್ಲೇ ಸಾವಿಗೀಡಾಗಿದ್ದಾ-ರೆ. ತಂದೆಯ ಚೀರಾಟ ಕಂಡ ಸಾಯಿ, ಅವರ ಬಳಿ ಓಡಿ ಹೋಗಿದ್ದಾನೆ. ಈ ವೇಳೆ ಆತನಿಗೂ ವಿದ್ಯುತ್ ತಗುಲಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಅಂಬೇಡ್ಕರ್ ಆಸ್ಪತ್ರೆಗೆ ರವಾನಿಸಲಾಗಿದೆ. ಘಟನೆಗೆ ವಸತಿ ಸಮುಚ್ಚಯದ ಮಾಲೀಕರ ನಿರ್ಲಕ್ಷ್ಯವೇ ಕಾರಣ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

ಮಗುವಿಗೆ ಮದ್ಯ ಕುಡಿಸಿದ ತಂದೆ: ಐವರಿಗೆ ನೋಟಿಸ್

ಬೆಂಗಳೂರು: ಮಗುವಿಗೆ ಮದ್ಯ ಕುಡಿಸಿದ್ದಲ್ಲದೆ ಅದನ್ನು ಪ್ರಶ್ನಿಸಿದ್ದಕ್ಕಾಗಿ ಪತ್ನಿಯನ್ನು ವಿವಸ್ತ್ರಗೊಳಿಸಿದ್ದ ವ್ಯಕ್ತಿ ಹಾಗೂ ಆತನ ಕುಟುಂಬದವರಿಗೆ ಬಸವೇಶ್ವರನಗರ ಠಾಣೆ ಪೊಲೀಸರು ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ.

‘ಸಂತ್ರಸ್ತೆಯ ಪತಿ ಸುನೀಲ್‌ಕುಮಾರ್, ಅತ್ತೆ ಮಲ್ಲಿಕಾ, ಮಾವ ಪಳನಿ, ಭಾವ ಶಾಂತಕುಮಾರ್ ಹಾಗೂ ಆತನ ಪತ್ನಿ ಸರಿತಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಇವರೆಲ್ಲಾ ಇತ್ತೀಚೆಗೆ ಒಟ್ಟಿಗೆ ಮದ್ಯಪಾನ ಮಾಡುತ್ತಿದ್ದರು. ಈ ವೇಳೆ ಮೂರು ವರ್ಷದ ಮಗುವಿಗೆ ಮದ್ಯಪಾನ ಮಾಡಿಸಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ. ವಿಚಾರಣೆಗೆ ಬರುವಂತೆ ಎಲ್ಲರಿಗೂ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

ನಿರುದ್ಯೋಗಿಗಳಿಗೆ ವೃತ್ತಿಪರ ತರಬೇತಿ

ಬೆಂಗಳೂರು: ಉನ್ನತಿ ಸೆಂಟರ್ ವತಿಯಿಂದ ನಿರುದ್ಯೋಗಿ ಯುವಕ, ಯುವತಿಯರಿಗೆ 40 ದಿನಗಳ ವೃತ್ತಿ ತರಬೇತಿ ನೀಡಲಾಗುವುದು.

ಜನವರಿ 31ರಿಂದ ತರಬೇತಿ ಪ್ರಾ-ರಂಭವಾಗಲಿದೆ. ಸ್ಪೋಕನ್ ಇಂಗ್ಲಿಷ್, ಕಂಪ್ಯೂಟರ್, ಜೀವನ ಕೌಶಲ, ವೃತ್ತಿಪರ ಕೌಶಲಗಳ ತರಬೇತಿ ನೀಡಲಾಗುವುದು. ತರಬೇತಿಗೆ ಕನಿಷ್ಠ ಶುಲ್ಕ ಇರುತ್ತದೆ. ಹೊರ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.

ಹೆಚ್ಚಿನ ಮಾಹಿತಿಗೆ ಸಂಸ್ಥೆಯ ವೆಬ್‌ಸೈಟ್ www.unnatiblr.org ಅಥವಾ 9900146423 ಅನ್ನು ಸಂಪ-ರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಉನ್ನತಿ ಸೆಂಟರ್, ಎನ್‌ಜಿಇಎಫ್ ಬಡಾವಣೆ, ಬೈಯ-ಪ್ಪನಹಳ್ಳಿ ಮೆಟ್ರೊ ನಿಲ್ದಾಣದ ಹತ್ತಿರ, ಸದಾನಂದ ನಗರ

ಪೊಲೀಸರಿಂದ ಲೈಂಗಿಕ ಕಿರುಕುಳ: ಮಹಿಳೆ ಆರೋಪ

ಬೆಂಗಳೂರು: ದೂರು ನೀಡಲು ಹೋದಾಗ ಹೆಣ್ಣೂರು ಠಾಣೆಯ ಇನ್‌ಸ್ಪೆಕ್ಟರ್ ವಸಂತ್‌ಕುಮಾರ್ ತನಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಮಹಿಳೆಯೊಬ್ಬರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ನೀಡಿದ್ದಾರೆ.

‘ಮನೆಯಲ್ಲಿ ಭೋಗ್ಯಕ್ಕೆ ಇದ್ದವರು ತನ್ನ ಮೇಲೆ ಹಲ್ಲೆ ನಡೆಸಿದ್ದರ ಕುರಿತು ದೂರು ನೀಡಲು ಹೋದಾಗ ಇನ್‌ಸ್ಪೆಕ್ಟರ್ ಅಸಭ್ಯವಾಗಿ ವರ್ತಿಸಿದ್ದಾರೆ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಿ’ ಎಂದು ಮನವಿ ಮಾಡಿದ್ದಾರೆ.

‘ಇನ್‌ಸ್ಪೆಕ್ಟರ್ ವಸಂತ್, ಪ್ರತಿ-ವಾದಿಗಳಿಗೆ ಕುಮ್ಮಕ್ಕು ನೀಡಿ ನನ್ನ ಮೇಲೆ ಪ್ರತಿದೂರು ದಾಖಲಿಸುವಂತೆ ಮಾಡಿದ್ದರು. ದೌರ್ಜನ್ಯ ಪ್ರಕರಣವ-ನ್ನೂ ದಾಖಲಿಸಿದ್ದರು. ಜಾಮೀನು ಪಡೆದಿದ್ದರೂ ನನ್ನನ್ನು ಪದೇ ಪದೇ ಠಾಣೆಗೆ ಕರೆಯುತ್ತಿದ್ದರು. ಕೊಠಡಿಗೆ ಕರೆದು ಕೈ ಹಿಡಿದು ಎಳೆದಾಡಿದ್ದರು. ನೀನು ನನಗೆ ಬೇಕೇ ಬೇಕು. ಕರೆದಲ್ಲೆಲ್ಲಾ ಬರಬೇಕು ಎಂದು ಪೀಡಿಸುತ್ತಿದ್ದಾರೆ’ ಎಂದು ಮಹಿಳೆ ಆರೋಪಿಸಿದ್ದಾರೆ.

‘ಶಕ್ತಿನಗರದಲ್ಲಿ ಸ್ವಂತ ಮನೆ ಹೊಂದಿದ್ದೇನೆ. ಕೆಲವು ವರ್ಷಗಳ ಹಿಂದೆ ಅದನ್ನು ವರಲಕ್ಷ್ಮಿ ಎಂಬುವರಿಗೆ ಭೋಗ್ಯಕ್ಕೆ ನೀಡಿದ್ದೆ. ಅದಕ್ಕಾಗಿ ₹7 ಲಕ್ಷ ಪಡೆದಿದ್ದೆ. ವರಲಕ್ಷ್ಮಿ ಅವರ ಕುಟುಂಬದವರು ಒಂದು ವರ್ಷದಿಂದ ನೀರಿನ ಬಿಲ್ ಪಾವತಿಸಿಲ್ಲ. ಅದನ್ನು ಪ್ರಶ್ನಿಸಲು ಇದೇ 13ರಂದು ಮನೆಗೆ ಹೋಗಿದ್ದಾಗ ಅವರೆಲ್ಲಾ ನನ್ನ ಮೇಲೆ ಹಲ್ಲೆ ನಡೆಸಿದ್ದರು. ಅವರಿಂದ ತಪ್ಪಿಸಿಕೊಂಡು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೆ. ಬಳಿಕ ಹೆಣ್ಣೂರು ಠಾಣೆಗೆ ದೂರು ನೀಡಲು ಹೋಗಿದ್ದೆ. ಇನ್‌ಸ್ಪೆಕ್ಟರ್ ವಸಂತ್ ದೂರು ದಾಖಲಿಸಿ-ಕೊಳ್ಳದೆ ನನ್ನನ್ನೇ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು’ ಎಂದು ವಿವರಿಸಿದ್ದಾರೆ.

ಹೆಮ್ಮಿಗೆಪುರ ವಾರ್ಡಿನ ಬಾಲಾಜಿ ಬಡಾವಣೆ ವ್ಯಾಪ್ತಿಯ ರಸ್ತೆ ಡಾಂಬರೀಕರಣ ಕಾಮಗಾರಿಗೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಚಾಲನೆ ನೀಡಿದರು. ಪಾಲಿಕೆ ಮಾಜಿ ಸದಸ್ಯ ಆರ್ಯ ಶ್ರೀನಿವಾಸ್, ಹೆಮ್ಮಿಗೆಪುರ ವಾರ್ಡ ಅಧ್ಯಕ್ಷ ಪ್ರಕಾಶ್, ಬಿಜೆಪಿ ನಗರ ಮಂಡಲ ಪ್ರಧಾನ ಕಾರ್ಯದರ್ಶಿ ವಾಜರಹಳ್ಳಿ ಶಶಿಕುಮಾರ್ ಇದ್ದಾರೆ

ಡ್ರಗ್ಸ್ ಮಾರಾಟ: ನೈಜೀರಿಯಾ ಪ್ರಜೆ ಸೇರಿ ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕ ವಸ್ತು ಮಾರಾಟ ಜಾಲ ಬೇಧಿಸಿರುವ ಎನ್‌ಸಿಬಿ ಬೆಂಗಳೂರು ವಲಯದ ಅಧಿಕಾರಿಗಳು 84 ಗ್ರಾಂ ಕೊಕೇನ್, 40 ಗ್ರಾಂ ಎಂಡಿಎಂಎ, ಹಶೀಶ್ ಹಾಗೂ ಗಾಂಜಾ ಜಪ್ತಿ ಮಾಡಿದ್ದಾರೆ. ನೈಜೀರಿಯಾದ ಪ್ರಜೆ ಹಾಗೂ ಚೆನ್ನೈನ ಮೂವರು ಪೆಡ್ಲರ್‌ಗಳ-ನ್ನು ಬಂಧಿಸಿದ್ದಾರೆ.

‘ಬಂಧಿತ ನೈಜೀರಿಯಾದ ಪ್ರಜೆ ಡ್ರಗ್ಸ್ ಮಾರಾಟ ಜಾಲದಲ್ಲಿ ಸಕ್ರಿ-ಯನಾಗಿದ್ದ. ಪೆಡ್ಲರ್‌ಗಳು ಈತನಿಂದ ಮಾದಕ ವಸ್ತುಗಳನ್ನು ಖರೀದಿಸುತ್ತಿದ್ದ-ರು. ಅದನ್ನು ಚೆನ್ನೈಗೆ ತೆಗೆದುಕೊಂಡು ಹೋಗಿ ಅಲ್ಲಿನ ಹೋಟೆಲ್, ಪಬ್ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾರುತ್ತಿದ್ದರು. ಚೆನ್ನೈನ ಪೆಡ್ಲರ್‌ಗಳು ನೈಜೀರಿಯಾದ ಪ್ರಜೆಯಿಂದ ಮಾದಕ ವಸ್ತು ಖರೀದಿಸಲು ಎಲೆಕ್ಟ್ರಾನಿಕ್ ಸಿಟಿಗೆ ಬಂದಿರುವ ಬಗ್ಗೆ ಖಚಿತ ಮಾಹಿತಿ ಲಭಿಸಿತ್ತು. ಅದರ ಆಧಾರದಲ್ಲಿ ದಾಳಿ ನಡೆಸಿ ನಾಲ್ವರನ್ನೂ ಬಂಧಿಸಲಾಗಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

‘ನೈಜೀರಿಯಾದ ಪ್ರಜೆಯು ವಿವಿಧ ಮಾದಕ ವಸ್ತುಗಳನ್ನು ಮಿಶ್ರಣ ಮಾಡಿ ಸೇವಿಸುವುದರ ಬಗ್ಗೆ ಖರೀದಿದಾರರಿಗೆ ಮಾಹಿತಿ ನೀಡುತ್ತಿದ್ದ. ಹಾಗೆ ಸೇವಿಸುವುದರಿಂದ ‘ನಶೆ’ ಹೆಚ್ಚಿಸಿ-ಕೊಳ್ಳಬಹುದು ಎಂದೂ ತಿಳಿಸುತ್ತಿದ್ದ. ಬಂಧಿತ ಮೂವರು ಪೆಡ್ಲರ್‌ಗಳು ತಮಿಳುನಾಡಿನ ವಿವಿಧ ಭಾಗಗಳಿಗೆ ಡ್ರಗ್ಸ್ ಮಾರುತ್ತಿದ್ದರು. ಇವರ ವಿರುದ್ಧ ಅಲ್ಲಿನ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಹಾಗೂ ಕೇರಳದಲ್ಲಿ ಎನ್‌ಡಿಪಿಎಸ್ ಕಾಯ್ದೆಯ ಅಡಿಯಲ್ಲಿ ಪ್ರಕರಣಗಳು ದಾಖಲಾಗಿದ್ದವು’ ಎಂದು ಮಾಹಿತಿ ನೀಡಿದ್ದಾರೆ.

ಬಂಧಿತರಿಂದ ಜಪ್ತಿ ಮಾಡಿರುವ ಮಾದಕ ವಸ್ತುಗಳು

ವಿ.ವಿ.ಪುರ ಠಾಣೆ ಪೊಲೀಸರಿಂದ ನಾಲ್ವರ ಬಂಧನ

ಜಾಮೀನಿಗೆ ಹಣ ಹೊಂದಿಸಲು ಗಾಂಜಾ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಸ್ಟಾರ್ ರಾಹುಲ್‌ನ ಜಾಮೀನಿಗಾಗಿ ಹಣ ಹೊಂದಿಸಲು ಗಾಂಜಾ ಮಾರಾಟಕ್ಕಿಳಿದಿದ್ದ ನಾಲ್ವರನ್ನು ವಿ.ವಿ.ಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ ₹ 6 ಲಕ್ಷ ಮೌಲ್ಯದ 20.6 ಕೆ.ಜಿ. ಗಾಂಜಾ, ಕೃತ್ಯಕ್ಕೆ ಬಳಸಿದ್ದ ಹೊಂಡಾ ಸಿಟಿ ಕಾರು, ಲಾಂಗ್, ನಗದು ಹಾಗೂ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ.

‘ರಾಘವನಗರದ ಎನ್. ಪುರುಷೋತ್ತಮ್ ಯಾನೆ ಮಂಜ (26), ಶ್ರೀನಗರದ ಆರ್.ಕಿರಣ್ (21), ಕಾಟನ್‌ಪೇಟೆಯ ವಿ.ಕಾರ್ತಿಕ್ (21) ಹಾಗೂ ಕನಕನಪಾಳ್ಯದ ಎಲ್.ರಾಹುಲ್ ಯಾನೆ ತೊಡೆ (28) ಬಂಧಿತರು. ಆರೋಪಿಗಳು ರೌಡಿಶೀಟರ್‌ಗಳಾದ ಕುಳ್ಳ ರಿಜ್ವಾನ್, ಸ್ಟಾರ್ ರಾಹುಲ್ ಹಾಗೂ ಭರತನ ಸಹಚರರಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ರೌಡಿಶೀಟರ್ ಸ್ಟಾರ್ ರಾಹುಲ್‌ನನ್ನು ಹನುಮಂತನಗರ ಠಾಣೆಯ ಪೊಲೀಸರು ಇದೇ 17ರಂದು ಕಾಲಿಗೆ ಗುಂಡು ಹೊಡೆದು ಬಂಧಿಸಿದ್ದರು. ಆತನಿಗೆ ಜಾಮೀನು ಕೊಡಿಸಲು ಕುಳ್ಳ ರಿಜ್ವಾನ್, ಭರತ ಹಾಗೂ ಆಟೊ ವಿಜಿ ಬಳಿ ಹಣ ಇರಲಿಲ್ಲ. ಹೀಗಾಗಿ ಹೊರ ರಾಜ್ಯದಿಂದ ಗಾಂಜಾ ತರಿಸಿಕೊಂಡು ಅದನ್ನು ದಾಸ್ತಾನು ಇಟ್ಟಿದ್ದರು. ಇದೇ 18ರಂದು ಬಂಧಿತ ಆರೋಪಿಗಳು ಭರತನ ಹೊಂಡಾ ಸಿಟಿ ಕಾರಿನ ಡಿಕ್ಕಿಯಲ್ಲಿ ಗಾಂಜಾ ಇಟ್ಟುಕೊಂಡು ಹಳೆ ಕೋಟೆ ಮೈದಾನದ ಎದುರಿರುವ ಕೆ.ಆರ್.ರಸ್ತೆಗೆ ಹೋಗಿದ್ದರು. ಅಲ್ಲಿ ಕಾರು ನಿಲ್ಲಿಸಿಕೊಂಡು ಕುಳ್ಳ ರಿಜ್ವಾನ್, ಭರತ ಹಾಗೂ ಆಟೊ ವಿಜಿಗಾಗಿ ಕಾಯುತ್ತಿದ್ದರು. ಈ ಬಗ್ಗೆ ಲಭಿಸಿದ ಖಚಿತ ಮಾಹಿತಿಯ ಆಧಾರದಲ್ಲಿ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಕೃತ್ಯಕ್ಕೆ ಬಳಸಿದ್ದ ಕಾರು ಜಪ್ತಿ ಮಾಡಲಾಗಿದೆ’ ಎಂದು ವಿವರಿಸಿದರು.

ಜಪ್ತಿ ಮಾಡಿರುವ ಗಾಂಜಾದೊಂದಿಗೆ ಆರೋಪಿಗಳಾದ ಪುರುಷೋತ್ತಮ್, ರಾಹುಲ್, ಕಿರಣ್ ಹಾಗೂ ಕಾರ್ತಿಕ್

‘ಬಂಧಿತ ಎಲ್.ರಾಹುಲ್ ಈ ಹಿಂದೆ ಅನೇಕ ಅಪರಾಧ ಪ್ರಕ-ರಣಗಳಲ್ಲಿ ಭಾಗಿಯಾಗಿದ್ದ. ಕೊಲೆ ಪ್ರಯತ್ನ ಹಾಗೂ ಇತರ ಪ್ರಕರಣಗಳ-ಲ್ಲಿ ಸಿದ್ದಾಪುರ, ಬನಶಂಕರಿ ಹಾಗೂ ಕೋಣನಕುಂಟೆ ಠಾಣೆ ಪೊಲೀಸರಿಗೆ ಬೇಕಾಗಿದ್ದ. ಆರೋಪಿ ಪುರುಷೋತ್ತಮ್ ನೆಲಮಂಗಲ ಬಳಿಯ ಎಸ್.ಎಸ್. ಟಿ.ಕಾರ್ಗೊ ಮೂವರ್ಸ್ ಎಂಬಲ್ಲಿ ಕೊರಿಯರ್ ವಾಹನದ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಕಿರಣ್ ಹಾಗೂ ಕಾರ್ತಿಕ್ ಈ ಹಿಂದೆ ಬೇಕರಿಗಳಲ್ಲಿ ಕೆಲಸ ಮಾಡುತ್ತಿದ್ದರು’ ಎಂದಿದ್ದಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿಯ ಆದೇಶ ರದ್ದು

ಅಗ್ರಹಾರ ಕೃಷ್ಣಮೂರ್ತಿಗೆ ಕಾನೂನು ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಅಕಾಡೆಮಿ ಹಣವನ್ನು ದುಂದುವೆಚ್ಚ ಮಾಡಿದ್ದು, ಇದರ ಬಾಬ್ತು ₹ 30 ಲಕ್ಷ ನಷ್ಟ ಭರ್ತಿಯಾಗಿ ಅವರಿಂದ ಪಡೆಯಬೇಕು' ಎಂಬ ಅಕಾಡೆಮಿಯ ಶಿಸ್ತು ಸಮಿತಿ ಆದೇಶವನ್ನು ರದ್ದುಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಇದೀಗ ರಾಜ್ಯ ಹೈಕೋರ್ಟ್ ವಿಭಾಗೀಯ ನ್ಯಾಯಪೀಠವೂ ಎತ್ತಿಹಿಡಿದಿದೆ.

ಈ ಮೊದಲು ಶಿಸ್ತು ಸಮಿತಿ ಅದೇಶ ಪ್ರಶ್ನಿಸಿ ಅಗ್ರಹಾರ ಕೃಷ್ಣಮೂರ್ತಿವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಬಿ. ಭಜಂತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿತ್ತು. ಈ

ಆದೇಶವನ್ನು ಪ್ರಶ್ನಿಸಿ ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರರು ಇದೇ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಮೇಲ್ಮನವಿ ವಿಚಾರಣೆ ನಡೆಸಿ ತೀರ್ಪು ಕಾಯ್ದಿರಿಸಿದ್ದ ನ್ಯಾಯಮೂರ್ತಿ ಎಸ್.ಸುಜಾತ ಹಾಗೂ ನ್ಯಾಯಮೂರ್ತಿ ರವಿ ಹೊಸಮನಿ ಅವರಿದ್ದ ವಿಭಾಗೀಯ ನ್ಯಾಯಪೀಠವು, ಬುಧವಾರ ಪ್ರಕಟಿಸಿತು. ಕಂಬಾರರ ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಸಿತು.

ಏಕಸದಸ್ಯ ನ್ಯಾಯಪೀಠ ಏನು ಹೇಳಿತ್ತು?: 'ಸಮಿತಿ, ತನ್ನ ಆದೇಶ ನೀಡುವ ಮುನ್ನ ನಡೆಸಿರುವ ವಿಚಾರಣಾ ಪ್ರಕ್ರಿಯೆ ಸರಿಯಿಲ್ಲ ಮತ್ತು ಬೈ-ಲಾ ಪ್ರಕಾರ, ನಿವೃತ್ತಿ ಹೊಂದಿದವರ ಮೇಲೆ ಈ ರೀತಿಯ ಕ್ರಮ ಕೈಗೊಂಡಿರುವುದು ಕಾನೂನು ಬಾಹಿರ' ಎಂದು ನ್ಯಾಯಮೂರ್ತಿ ಪಿ.ಬಿ.ಭಜಂತ್ರಿ ಅವರಿದ್ದ ಏಕಸದಸ್ಯ ನ್ಯಾಯಪೀಠ ತನ್ನ ಆದೇಶದಲ್ಲಿ ತಿಳಿಸಿತ್ತು.

ಕೃಷ್ಣಮೂರ್ತಿಯವರ ವಿರುದ್ಧದ ಆರೋಪವೇನು?: 'ಕೃಷ್ಣ ಮೂರ್ತಿ ಅವರು ಅಕಾಡೆಮಿ ಕಾರ್ಯಕ್ರಮಗಳಿಗೆ ನಿಗದಿಗಿಂತಲೂ ಹೆಚ್ಚಿನ ಅನುದಾನ ಬಿಡುಗಡೆ ಮಾಡಿದ್ದಾರೆ ಮತ್ತು ದೆಹಲಿಯಲ್ಲಿ ಕಚೇರಿ ಹೊಂದಿದ್ದು ಮೇಲಿಂದ ಮೇಲೆ ಬೆಂಗಳೂರಿಗೆ ಅಧಿಕೃತ ಪ್ರವಾಸ ಕೈಗೊಂಡು ಹಣ ದುರುಪಯೋಗ ಪಡಿಸಿಕೊಂಡಿದ್ದಾರೆ' ಎಂದು ಆರೋಪಿಸಲಾಗಿತ್ತು. ಈ ಕುರಿತಂತೆ ಶಿಸ್ತು ಸಮಿತಿ 2014ರ ಜೂನ್ 3ರಂದು ನಷ್ಟ ಭರ್ತಿ ಪಾವತಿಗೆ ಆದೇಶಿಸಿತ್ತು.

ಚೀನಾದ ಪಿಎಲ್‌ಎನಿಂದ ಬಾಲಕನ ಅಪಹರಣ

ಗುವಾಹಟಿ: ಭಾರತ–ಚೀನಾ ಗಡಿ ಸಮೀಪ ಮಂಗಳವಾರ ಸಂಜೆ ಬೇಟೆಯಾಡಲು ತೆರಳಿದ್ದ 17 ವರ್ಷದ ಯುವಕನೊಬ್ಬನನ್ನು ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ(ಪಿಎಲ್‌ಎ) ಅಪಹರಿಸಿದೆ ಎಂದು ಅರುಣಾಚಲ ಪ್ರದೇಶದ ಕಾಂಗ್ರೆಸ್ ಶಾಸಕ ನಿನಾಂಗ್ ಎರಿಂಗ್ ಮತ್ತು ಬಿಜೆಪಿ ಸಂಸದ ತಾಪಿರ್ ಗಾವೊ ಅವರು ಪ್ರತ್ಯೇಕ ಟ್ವೀಟ್ ಮಾಡಿದ್ದಾರೆ.

'ಸಿಯಾಂಗ್ ಜಿಲ್ಲೆಯ ಝಿಡೋ ಗ್ರಾಮದ ನಿವಾಸಿ ಮಿರಾಮ್ ತರೋನ್ ತನ್ನ ಸ್ನೇಹಿತನೊಂದಿಗೆ ಮಂಗಳವಾರ ಸಂಜೆ ಸುಮಾರು 6.30ಕ್ಕೆ ಬಿಶಿಂಗ್ ಗ್ರಾಮದ ಬಳಿ ಬೇಟೆಯಾಡಲು ಹೋಗಿದ್ದರು. ಈ ವೇಳೆ ಪಿಎಲ್‌ಎ ಮಿರಾಮ್‌ನನ್ನು ಅಪಹರಿಸಿದೆ. ಬಾಲಕನನ್ನು ರಕ್ಷಿಸಿ ಕರೆತರಲು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕ್ರಮಕೈಗೊಳ್ಳಬೇಕು' ಎಂದು ಬಿಜೆಪಿ ಸಂಸದ ತಾಪಿರ್ ಗಾವೊ ಅವರು ಟ್ವಿಟರ್‌ನಲ್ಲಿ ಮನವಿ ಮಾಡಿದ್ದಾರೆ.

ಮನೆ ಬಾಗಿಲಲ್ಲೇ ಕೋವಿಡ್ ತಪಾಸಣೆ

ಮಲ್ಲೇಶ್ವರ: ಕೊರೋನಾ ಪರೀಕ್ಷೆಗೆ ವಿನೂತನ ಡ್ರೈವ್ ಥ್ರೂ/ವಾಕ್ ಇನ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ ಕ್ಷೇತ್ರದ ವ್ಯಾಪ್ತಿಯಲ್ಲಿ ಆರಂಭಿಸಿರುವ ವಿನೂತನ 'ಡ್ರೈವ್ ಥ್ರೂ/ವಾಕ್ ಇನ್' ವ್ಯವಸ್ಥೆಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಬುಧವಾರ ಚಾಲನೆ ನೀಡಿದರು.

ಮನೆ ಮನೆಗೂ ತೆರಳಿ ತ್ವರಿತ ಗತಿಯಲ್ಲಿ ಕೋವಿಡ್ ಸೋಂಕು ಪರೀಕ್ಷೆ ಮತ್ತು ಸಾರ್ವಜನಿಕರು ತಾವಾಗಿಯೇ ವಾಹನಗಳಲ್ಲಿ ಬಂದು ಸೋಂಕು ಪರೀಕ್ಷೆ ಮಾಡಿಸಿಕೊಳ್ಳುವ ವ್ಯವಸ್ಥೆ ಇದಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, 'ಕೋವಿಡ್ ಸೋಂಕು ವೇಗವಾಗಿ ಹರಡುತ್ತಿದೆ. ಹೀಗಾಗಿ ಇಂತಹ ಸರಳ, ಸುಲಭ ಮತ್ತು ಸುರಕ್ಷಿತ ತಪಾಸಣಾ ವ್ಯವಸ್ಥೆ ಬೇಕಾಗಿತ್ತು. ಈ ಪರೀಕ್ಷೆಗಳು ಸಂಪೂರ್ಣ ಉಚಿತವಾಗಿವೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ಅದನ್ನು ಕೂಡ ಒದಗಿಸಲಾಗುವುದು' ಎಂದರು.

'ಸಾರ್ವಜನಿಕರು ದ್ವಿಚಕ್ರ ವಾಹನ, ಆಟೊ ರಿಕ್ಷಾ, ಕಾರು ಇತ್ಯಾದಿಗಳಲ್ಲಿ ಪರೀಕ್ಷೆ ಮಾಡಿಸಿಕೊಳ್ಳಲು ಬಂದರೆ ವೈದ್ಯಕೀಯ ಸಿಬ್ಬಂದಿ ತಾವೇ ಖುದ್ದಾಗಿ ಗಂಟಲು ದ್ರವ ಸಂಗ್ರಹಿಸಿಕೊಳ್ಳಲಿದ್ದಾರೆ. ಪರೀಕ್ಷೆಯ ಫಲಿತಾಂಶವನ್ನು ಆಯಾ ವ್ಯಕ್ತಿಗಳ ಮೊಬೈಲ್ ದೂರವಾಣಿಗೆ ರವಾನಿಸಲಾಗುವುದು. ಈ ಕೇಂದ್ರವು ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೂ ಕಾರ್ಯನಿರ್ವಹಿಸಲಿದೆ. ಇಲ್ಲಿ ಗಂಟಲು ದ್ರವ ಸಂಗ್ರಹಕಾರರು, ಪ್ರಯೋಗಾಲಯ ತಂತ್ರಜ್ಞರು ಮತ್ತು ಡೇಟಾ ಎಂಟ್ರಿ ಆಪರೇಟರುಗಳು ಇರುತ್ತಾರೆ. ಈ ವ್ಯವಸ್ಥೆಯನ್ನು ಮಲ್ಲೇಶ್ವರ ಕ್ಷೇತ್ರದ ಉಳಿದ ಭಾಗಗಳಿಗೂ ವಿಸ್ತರಿಸಲಾಗುವುದು. ಇಲ್ಲಿ ಯಾರು ಬೇಕಾದರೂ ಪರೀಕ್ಷೆ ಮಾಡಿಸಿಕೊಳ್ಳಬಹುದು' ಎಂದು ಹೇಳಿದರು.

ಮಲ್ಲೇಶ್ವರದಲ್ಲಿ ಬುಧವಾರ ಆರಂಭವಾದ 'ಡ್ರೈವ್ ಥ್ರೂ/ವಾಕ್ ಇನ್' ಕೇಂದ್ರದಲ್ಲಿ ಎನ್‌ಸಿಸಿ ಕೆಡೆಟ್‌ವೊಬ್ಬರ ಕೊರೊನಾ ಸೋಂಕಿನ ಪರೀಕ್ಷೆ ನಡೆಸಲಾಯಿತು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣ ಇದ್ದರು

ಇದೇ ಸಂದರ್ಭದಲ್ಲಿ ಸಚಿವರು, ಕ್ಷೇತ್ರದ 7 ವಾರ್ಡ್‌ಗಳ ವ್ಯಾಪ್ತಿಯಲ್ಲೂ ಪ್ರತಿಯೊಂದು ಮನೆಗೂ ಹೋಗಿ ಸೋಂಕು ಪರೀಕ್ಷೆ ಮಾಡಲಿರುವ ಸಂಚಾರಿ ತಪಾಸಣಾ ವಾಹನಗಳಿಗೆ ಹಸಿರು ನಿಶಾನೆ ತೋರಿಸಿದರು.

'ಈ ವಾಹನಗಳಲ್ಲಿ ಕೂಡ ನುರಿತ ವೈದ್ಯಕೀಯ ಸಿಬ್ಬಂದಿಗಳಿದ್ದು, ಸ್ಥಳದಲ್ಲೇ ಆರ್‌ಎಟಿ ಹಾಗೂ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಿದ್ದಾರೆ. ಅಗತ್ಯವೆನಿಸಿದರೆ ಗಂಟಲು ದ್ರವ ಸಂಗ್ರಹಿಸಿಕೊಳ್ಳಲಿದ್ದು, ಫಲಿತಾಂಶವನ್ನು ಸಂಬಂಧಿಸಿದ ವ್ಯಕ್ತಿಗಳ ಮೊಬೈಲಿಗೆ ಕಳಿಸಿ ಕೊಡಲಾಗುವುದು' ಎಂದು ಸಚಿವರು ತಿಳಿಸಿದರು.

'ಸೋಂಕಿತರ ಜತೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರ ತಪಾಸಣೆಯನ್ನೂ ಉಚಿತವಾಗಿ ನಡೆಸಲಾಗುವುದು. ಆದರೆ, ಇದಕ್ಕಾಗಿ ಯಾರನ್ನೂ ಒತ್ತಾಯ ಮಾಡುವುದಿಲ್ಲ' ಎಂದರು.

ಕೋವಿಡ್ ಉಸ್ತುವಾರಿ ಅಧಿಕಾರಿ ಉಜ್ವಲ್ ಕುಮಾರ್ ಘೋಷ್ ಮತ್ತು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳಾದ ಡಾ.ಮನೋರಂಜನ್ ಹೆಗ್ಡೆ, ಡಾ.ಸುಚೇತಾ, ಡಾ.ಪ್ರಕಾಶ್ ಇದ್ದರು.



'ಮುಂಬರುವ ವಾರಗಳಲ್ಲಿ ಕೋವಿಡ್ ಹೆಚ್ಚಳ ಸಾಧ್ಯತೆ'

ವಿಶ್ವಸಂಸ್ಥೆ/ಜಿನಿವಾ: ಕೊರೊನಾ ರೂಪಾಂತರ ತಳಿ ಓಮೈಕ್ರಾನ್ ಕ್ಷಿಪ್ರವಾಗಿ ಹರಡುತ್ತಿದೆ. ಈ ನಡುವೆ ರಜಾದಿನಗಳಲ್ಲಿ ಹೆಚ್ಚಿದ ಸಾಮಾಜಿಕ ಚಟುವಟಿಕೆಗಳು ಮತ್ತು ಜನರ ನಿರ್ಲಕ್ಷ್ಯದಿಂದಾಗಿ ಮುಂಬರುವ ವಾರಗಳಲ್ಲಿ ಪ್ರಕರಣಗಳಲ್ಲಿ ಏರಿಕೆ ಉಂಟಾಗಬಹುದು. ಆಸ್ಪತ್ರೆಗಳ ಮೇಲೆ ಉತ್ತಡ ಹೆಚ್ಚಾಗುವ ಸಾಧ್ಯತೆಗಳಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ-(ಡಬ್ಲ್ಯುಎಚ್‌ಒ) ಎಚ್ಚರಿಕೆ ನೀಡಿದೆ.



'ಜಾಗತಿಕವಾಗಿ ಕೋವಿಡ್–19 ಉಲ್ಬಣಗೊಂಡಿದೆ. ವಿಶೇಷವಾಗಿ ಯುರೋಪ್ ರಾಷ್ಟ್ರಗಳಲ್ಲಿ ಪ್ರಕರಣಗಳು ಏರುಗತಿಯಲ್ಲಿವೆ. ಆರಂಭದಲ್ಲಿ ಡೆಲ್ಟಾ ತಳಿಯ ಪ್ರಸರಣ ಹೆಚ್ಚಿತ್ತು' ಎಂದು ಡಬ್ಲ್ಯುಎಚ್‌ಒ ಬಿಡುಗಡೆ ಮಾಡಿರುವ ಸಾಂಕ್ರಾಮಿಕ ರೋಗದ ಸಾಪ್ತಾಹಿಕ ವರದಿಯಲ್ಲಿ ಹೇಳಲಾಗಿದೆ.

ಆದರೆ, 2021ರ ಆಗಸ್ಟ್ 21ರಲ್ಲಿ ಏರುಗತಿ ಕಂಡಿದ್ದ ಕೋವಿಡ್ ಸಾವಿನ ಪ್ರಕರಣಗಳಲ್ಲಿ ಸದ್ಯ ಇಳಿಕೆ ಕಂಡುಬಂದಿದೆ ಎಂದೂ ತಿಳಿಸಿದೆ.

'ಓಮೈಕ್ರಾನ್ ತಳಿಯು ಡಬ್ಲ್ಯುಎಚ್‌ಓನ ಎಲ್ಲಾ ಆರು ವಲಯಗಳಲ್ಲಿ ಹರಡಿದೆ. ಇಲ್ಲಿ ಡೆಲ್ಟಾ ತಳಿ ತೀವ್ರತೆ ಕಡಿಮೆಯಾಗಿದೆ. ಆದರೆ, ಓಮೈಕ್ರಾನ್ ಹೆಚ್ಚುತ್ತಿದೆ. ಕಳೆದ ವರ್ಷ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಓಮೈಕ್ರಾನ್ ಪ್ರಕರಣಗಳಲ್ಲಿ ಕ್ಷಿಪ್ರ ಏರಿಕೆಯನ್ನು ಕಂಡಿದ್ದ ದೇಶಗಳಲ್ಲಿ ಸದ್ಯ ಪ್ರಕರಣಗಳು ಕಡಿಮೆಯಾಗುತ್ತಿವೆ' ಎಂದು ಹೇಳಿದೆ.

'ಡಬ್ಲ್ಯುಎಚ್‌ಓನ ಎಲ್ಲಾ ಆರು ವಲಯಗಳಲ್ಲಿ ಈ ವಾರ 1.8 ಕೋಟಿ ಹೊಸ ಪ್ರಕರಣಗಳು ವರದಿಯಾಗಿವೆ. ಇದು ಕಳೆದ ವಾರಕ್ಕೆ ಹೋಲಿಸಿದರೆ ಶೇಕಡ 20ರಷ್ಟು ಹೆಚ್ಚು. ಅಲ್ಲದೆ ಹೊಸದಾಗಿ 45,000ಕ್ಕೂ ಹೆಚ್ಚು ಸಾವುಗಳು ವರದಿಯಾಗಿವೆ' ಎಂದು ಸಂಸ್ಥೆ ಮಾಹಿತಿ ನೀಡಿದೆ.



ನೀತಿ ರೂಪಿಸುವಲ್ಲಿ 'ಐಸೆಕ್' ಮಹತ್ವದ ಪಾತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ನೀತಿಗಳನ್ನು ರೂಪಿಸುವಲ್ಲಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ (ಐಸೆಕ್) ಪ್ರಮುಖ ಪಾತ್ರ ವಹಿಸುತ್ತಿದೆ' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮೆಚ್ಚುಗೆ ವ್ಯಕ್ತಪಡಿಸಿದರು.

ಬುಧವಾರ ನಡೆದ ಐಸೆಕ್‌ನ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಬಡತನವನ್ನು ಕಡಿಮೆ ಮಾಡಲು ಐಸೆಕ್ ನೀಡಿರುವ ಕೊಡುಗೆ ಅಪಾರ. ಕಳೆದ 50 ವರ್ಷಗಳಲ್ಲಿ ಸಂಸ್ಥೆಯು 934 ಪ್ರಾಜೆಕ್ಟ್‌ಗಳನ್ನು ಪೂರ್ಣಗೊಳಿಸಿರುವುದು ಶ್ಲಾಘನೀಯ' ಎಂದರು.

ಸಂಸ್ಥೆ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, 'ಕೃಷಿ, ಶಿಕ್ಷಣ, ಆರ್ಥಿಕ ಬೆಳವಣಿಗೆ, ನಗರೀಕರಣ, ವಿಕೇಂದ್ರೀಕರಣ, ರಾಜ್ಯಶಾಸ್ತ್ರ ಮತ್ತು ಜನಸಂಖ್ಯೆ ವಿಷಯದ ಕುರಿತು ಮಹತ್ವದ ಸಂಶೋಧನಾ ಕಾರ್ಯಗಳನ್ನು ಸಂಸ್ಥೆ ಕೈಗೊಂಡಿದೆ. 237 ಪುಸ್ತಕಗಳು ಮತ್ತು ಸುಮಾರು ಎರಡು ಸಾವಿರ ಲೇಖನಗಳನ್ನು ಸಂಸ್ಥೆಯ ಪ್ರಾಧ್ಯಾಪಕರು ಪ್ರಕಟಿಸಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷ ಪ್ರೊ ಸುಖದೇವ್ ತೋರಾಟ್ ಮಾತನಾಡಿ, 'ಪ್ರೊ. ವಿಕೆಆರ್‌ವಿ ರಾವ್ ಅವರು ಐಸೆಕ್ ಸ್ಥಾಪಿಸಲು ಮೂಲ ಕಾರಣರು. ತಮ್ಮ ಮನೆಯಲ್ಲಿನ ಮೂರು ಕೊಠಡಿಗಳಲ್ಲಿ ಈ ಸಂಸ್ಥೆಯನ್ನು ಆರಂಭಿಸಿದ್ದರು. ಬಾಡಿಗೆ ಕಟ್ಟಡದಲ್ಲಿಯೂ ಕೆಲ ದಿನಗಳ ಕಾಲ ಸಂಸ್ಥೆ ನಡೆಯಿತು. ಬಳಿಕ, ಸುಂದರವಾದ ಸ್ಥಳದಲ್ಲಿ ಸಂಸ್ಥೆ ಆರಂಭವಾಯಿತು' ಎಂದು ವಿವರಿಸಿದರು.

'ಈ ಸಂಸ್ಥೆಯನ್ನು ರಾಜ್ಯ ಸಾರ್ವಜನಿಕ ಸಂಶೋಧನಾ ವಿಶ್ವವಿದ್ಯಾಲಯ ಅಥವಾ ಡೀಮ್ಡ್ ಸಾರ್ವಜನಿಕ ರಾಜ್ಯ ವಿಶ್ವವಿದ್ಯಾಲಯ ಅಥವಾ ಐಐಟಿ ಮಾದರಿಯಲ್ಲಿ ರಾಷ್ಟ್ರೀಯ ಮಹತ್ವದ ಸಂಸ್ಥೆಯನ್ನಾಗಿ ಘೋಷಿಸಬೇಕು' ಎಂದು ಅವರು ಕೋರಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, 'ಐಸೆಕ್ ಸಂಸ್ಥೆಯ ಶೈಕ್ಷಣಿಕ ವಲಯದಲ್ಲಿ ಅತ್ಯುತ್ತಮ ಸಂಶೋಧನೆಗಳನ್ನು ಕೈಗೊಂಡಿದೆ' ಎಂದು ಶ್ಲಾಘಿಸಿದರು. ಐಸೆಕ್ ನಿರ್ದೇಶಕ ಪ್ರೊ. ಡಿ. ರಾಜಶೇಖರ್ ಇದ್ದರು.

ಬೊಮ್ಮಾಯಿ–ಕಟೀಲ್ ಭೇಟಿ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ರಾತ್ರಿ ಬಿಜೆಪಿ ಕಚೇರಿಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತು ಇತರ ಪದಾಧಿಕಾರಿಗಳ ಜತೆಗೆ ಸಭೆ ನಡೆಸಿದರು.

ನಿಗಮ- ಮಂಡಳಿಗಳ ಅಧ್ಯಕ್ಷರನ್ನು ಬದಲಿಸುವ ಬಗ್ಗೆ, ಕೋವಿಡ್ ನಿಯಂತ್ರಣ ಮತ್ತು ಗಣರಾಜ್ಯೋತ್ಸವ ಅಚರಣೆಗೆ ಸಂಬಂಧಿಸಿದಂತೆ ಬೊಮ್ಮಾಯಿ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ನಿಗಮ- ಮಂಡಳಿಗಳಲ್ಲಿ ಪಕ್ಷದ ಕಾರ್ಯಕರ್ತರಿಗೆ ಆದ್ಯತೆ ನೀಡಲು ಒತ್ತಾಯ ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಈ ಮಾತುಕತೆ ಮಹತ್ವ ನಡೆದಿದೆ. ಇದಲ್ಲದೆ ಸಂಪುಟ ಪುನಾರಚನೆ ವಿಚಾರವಾಗಿ ಪಕ್ಷದ ವರಿಷ್ಠರ ಜತೆ ಚರ್ಚಿಸಲು ಸದ್ಯವೇ ದೆಹಲಿಗೆ ಹೋಗಲು ಬೊಮ್ಮಾಯಿ ಚಿಂತನೆ ನಡೆಸಿದ್ದಾರೆ ಎಂದು ಮೂಲಗಳು ಮಾಹಿತಿ ನೀಡಿವೆ.

ಸಭೆಯಲ್ಲಿ ಪಕ್ಷದ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್ ಇದ್ದರು.

ಮಾರಿಷಸ್‌ಗೆ ಎಚ್‌ಎಎಲ್ ಹೆಲಿಕಾಪ್ಟರ್ ರಫ್ತು

ಬೆಂಗಳೂರು: ಮಿತ್ರ ದೇಶಗಳಿಗೆ ರಕ್ಷಣಾ ಉತ್ಪನ್ನಗಳ ರಫ್ತು ಹೆಚ್ಚಿಸುವ ಕೇಂದ್ರ ಸರ್ಕಾರದ ಉದ್ದೇಶಕ್ಕೆ ಪೂರಕವಾಗಿ ಎಚ್‌ಎಎಲ್ ತನ್ನ ಸುಧಾರಿತ ಹಗುರ ಹೆಲಿಕಾಪ್ಟರ್‌ಗಳನ್ನು (ಎಎಲ್‌ಎಚ್–3) ರಫ್ತು ಮಾಡುವ ಒಪ್ಪಂದಕ್ಕೆ ಮಾರಿಷಸ್ ಸರ್ಕಾರದ ಜತೆ ಒಪ್ಪಂದಕ್ಕೆ ಸಹಿ ಮಾಡಿದೆ.

ದ್ವೀಪ ರಾಷ್ಟ್ರ ಮಾರಿಷಸ್ ತನ್ನ ಪೊಲೀಸ್ ಪಡೆಯಲ್ಲಿ ಈ ಹೆಲಿಕಾಪ್ಟರ್‌ಗಳನ್ನು ಬಳಸಿಕೊಳ್ಳಲಿದೆ. ಈಗಾಗಲೇ ಎಚ್‌ಎಎಲ್ ನಿರ್ಮಿತ ಎಎಲ್‌ಎಚ್ ಮತ್ತು ಡೋನಿಯರ್ 228 ವಿಮಾನಗಳನ್ನು ಬಳಸುತ್ತಿದೆ. ಹೊಸ ಒಪ್ಪಂದ ಎರಡೂ ರಾಷ್ಟ್ರಗಳ ಮಧ್ಯೆ ಮೂರು ದಶಕಗಳಿಂದ ಇರುವ ಬಾಂಧವ್ಯ ಇನ್ನಷ್ಟು ವೃದ್ಧಿಸಲಿದೆ ಎಂದು ಎಚ್‌ಎಎಲ್ ಪ್ರಕಟಣೆ ತಿಳಿಸಿದೆ.

ಎಚ್‌ಎಎಲ್ ಹೆಲಿಕಾಪ್ಟರ್ ವಿಭಾಗದ ಜನರಲ್ ಮ್ಯಾನೇಜರ್ ಬಿ.ಕೆ.ತ್ರಿಪಾಠಿ ಮತ್ತು ಮಾರಿಷಸ್ ಪ್ರಧಾನಿಯವರ ಗೃಹ ವ್ಯವಹಾರಗಳ ಕಾರ್ಯದರ್ಶಿ ಒ.ಕೆ. ದಬ್ಬಿನ್ ಅವರು ಕಾನ್ಪುರದ ಎಚ್‌ಎಎಲ್ ಕಚೇರಿಯಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

ಎಎಲ್‌ಎಚ್ ಎಂಕೆ–3 ಹೆಲಿಕಾಪ್ಟರ್ ಬಹು ಉಪಯೋಗಿ ಮತ್ತು ವಿಭಿನ್ನ ಕಾರ್ಯಾಚರಣೆಗಳಲ್ಲಿ ಬಳಸಬಹುದಾದ 5.5 ಟನ್ ದರ್ಜೆಯದ್ದಾಗಿದೆ. ಭಾರತ ಮತ್ತು ವಿದೇಶಗಳಲ್ಲಿ ನೈಸರ್ಗಿಕ ದುರಂತದ ಸಂದರ್ಭಗಳಲ್ಲಿ ಜೀವ ರಕ್ಷಣೆಗೆ ಬಳಸಲಾಗಿದೆ. ಈವರೆಗೆ 335 ಎಎಲ್‌ಎಚ್‌ಗಳನ್ನು ತಯಾರಿಸಲಾಗಿದೆ ಎಂದು ಪ್ರಕಟಣೆ ಹೇಳಿದೆ.

ಬಹುತೇಕ ಕಡೆ ಕಾರ್ಯನಿರ್ವಹಿಸದ ವೈದ್ಯಕೀಯ ಆಮ್ಲಜನಕ ಘಟಕಗಳು

ಹಿಂದುಳಿದ ತಾಲ್ಲೂಕು: ಸುಧಾರಿಸದ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ರಾಜ್ಯದಲ್ಲಿ ಕೋವಿಡ್ ಉಲ್ಬಣ
- ಆಸ್ಪತ್ರೆಗಳಲ್ಲಿನ ಸಿದ್ಧತೆ ಬಗ್ಗೆ ಪ್ರಜಾವಾಣಿ ಪರಿಶೀಲನೆ
- ಕಾರ್ಯನಿರ್ವಹಿಸದ ಆಮ್ಲಜನಕ ಘಟಕಗಳು ಪತ್ತೆ

ಬೆಂಗಳೂರು: ಕೋವಿಡ್ ಮೂರನೇ ಅಲೆಯಲ್ಲಿ ಪ್ರಕರಣಗಳ ಸಂಖ್ಯೆ ಜಿಲ್ಲೆಗಳಲ್ಲಿಯೂ ಹೆಚ್ಚಳವಾಗುತ್ತಿವೆ. ಹೀಗಾಗಿ, ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳ ಆಸ್ಪತ್ರೆಗಳಲ್ಲಿನ ಸಿದ್ಧತೆ ಬಗ್ಗೆ 'ಪ್ರಜಾವಾಣಿ' ಪರಿಶೀಲನೆ ನಡೆಸಿದೆ. ಬಹುತೇಕ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ ಘಟಕಗಳು ಕಾರ್ಯನಿರ್ವಹಿಸದೆ ಇರುವುದು ಪತ್ತೆಯಾಗಿದೆ.

ಕೋವಿಡ್ ಎರಡನೇ ಅಲೆಯಲ್ಲಿ ಗ್ರಾಮೀಣ ಪ್ರದೇಶದ ಜನರೂ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಿದ್ದರು. ಹಿಂದುಳಿದ ತಾಲ್ಲೂಕುಗಳಲ್ಲಿನ ಸರ್ಕಾರಿ ಆಸ್ಪತ್ರೆಗಳು ಮೂಲಸೌಕರ್ಯದ ಕೊರತೆಯಿಂದ ಸೋಂಕಿತರಿಗೆ ಚಿಕಿತ್ಸೆ ಒದಗಿಸುವಲ್ಲಿ ಎಡವಿದ್ದವು.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಮೊಳಕಾಲ್ಮುರು ಅತ್ಯಂತ ಹಿಂದುಳಿದ ತಾಲ್ಲೂಕು. ಈ ಎರಡೂ ತಾಲ್ಲೂಕುಗಳಲ್ಲಿ ಹಂಚಿಕೆಯಾಗಿರುವ ಮೊಳಕಾಲ್ಮುರು ವಿಧಾನಸಭಾ ಕ್ಷೇತ್ರವನ್ನು ಸಾರಿಗೆ ಸಚಿವ ಬಿ.ಶ್ರೀರಾಮುಲು ಪ್ರತಿನಿಧಿಸುತ್ತಿದ್ದಾರೆ. ಎರಡೂ ಕಡೆಯ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕ (ಐಸಿಯು) ಸ್ಥಾಪನೆಯಾಗಿವೆ. ಐಸಿಯು ನಿರ್ವಹಣೆಗೆ ಮೂವರು ವೈದ್ಯರನ್ನು ನಿಯೋಜಿಸಲಾಗಿದೆ. ಆದರೆ, ಆಮ್ಲಜನಕ ಉತ್ಪಾದನಾ ಘಟಕಗಳು ಇನ್ನೂ ಕಾರ್ಯಾರಂಭಗೊಂಡಿಲ್ಲ. ಘಟಕಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಬಾಕಿ ಇದೆ.

ಚಾಮರಾಜನಗರ ಜಿಲ್ಲೆಯ ಹನೂರು ಅನ್ನು ಪ್ರತ್ಯೇಕ ತಾಲ್ಲೂಕು ಎಂದು ಘೋಷಣೆ ಮಾಡಿ ಮೂರು ವರ್ಷ ಕಳೆದರೂ, ಅಲ್ಲಿನ ಆಸ್ಪತ್ರೆ ಇನ್ನೂ ಮೇಲ್ದರ್ಜೆಗೆ ಏರಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರವಾಗಿಯೇ ಇದೆ. ಇಲ್ಲಿ ಕೋವಿಡ್ ಚಿಕಿತ್ಸೆಗೆ ಯಾವುದೇ ವ್ಯವಸ್ಥೆ ಇಲ್ಲ. ಸೋಂಕಿತರು ಚಿಕಿತ್ಸೆಗಾಗಿ ಕೊಳ್ಳೇಗಾಲ ಇಲ್ಲವೇ ಚಾಮರಾಜನಗರಕ್ಕೆ ಬರಬೇಕು. ಇಲ್ಲವೇ ಕಾಮಗೆರೆಯಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಬೇಕು.

ಹನೂರು ತಾಲ್ಲೂಕಿನ ರಾಮಾಪುರ ಹೋಬಳಿ ಕೇಂದ್ರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರದಲ್ಲಿ 18 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಮೀಸಲಿರಿಸಲಾಗಿದೆ. ಎಲ್ಲ ಹಾಸಿಗೆಗಳಿಗೆ ಆಮ್ಲಜನಕ ಪೂರೈಕೆ ವ್ಯವಸ್ಥೆ ಇನ್ನಷ್ಟೇ ಆಗಬೇಕಿದೆ. ಸಮುದಾಯ ಕೇಂದ್ರಕ್ಕೆ 300 ಎಲ್‌ಪಿಎಂ ಸಾಮರ್ಥ್ಯದ ಆಮ್ಲಜನಕ ಉತ್ಪಾದನಾ ಘಟಕ ಮಂಜೂರಾಗಿದ್ದು, ಇನ್ನೂ ಅಳವಡಿಕೆ ಆಗಿಲ್ಲ.

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ, ಕೋವಿಡ್-19 ಚಿಕಿತ್ಸೆಗೆ ಅಗತ್ಯವಿರುವ ವೈದ್ಯಕೀಯ ಆಮ್ಲಜನಕ ಉತ್ಪಾದನಾ ಘಟಕ ನಿರ್ಮಾಣದ ಕೆಲಸ ಇತ್ತೀಚೆಗೆ ಆರಂಭವಾಗಿದೆ.

ಇದ್ದೂ ಇಲ್ಲದಂತಾಗಿರುವ ಐಸಿಯು: ತಜ್ಞರು–ತಂತ್ರಜ್ಞರ ಕೊರತೆಯಿಂದಾಗಿ ಚಿಕ್ಕಮಗಳೂರು ಕೊಪ್ಪ ತಾಲ್ಲೂಕು ಆಸ್ಪತ್ರೆಯ ತೀವ್ರ ನಿಗಾ ಘಟಕವು (ಐಸಿಯು) ಇದ್ದೂ ಇಲ್ಲದಂತಾಗಿದೆ. ಈ ಆಸ್ಪತ್ರೆಯಲ್ಲಿ ವೈದ್ಯರು, ಅರವಳಿಕೆ ತಜ್ಞರು ಇಲ್ಲ. ಎಂಟು ವೆಂಟಿಲೇಟರ್‌ಗಳು ಇವೆ. ಆದರೆ, ತಂತ್ರಜ್ಞರು ಇಲ್ಲದೆ ಅವು ಕಾರ್ಯನಿರ್ವಹಿಸುತ್ತಿಲ್ಲ. ಶೃಂಗೇರಿ ತಾಲ್ಲೂಕು ಆಸ್ಪತ್ರೆಯಲ್ಲಿ ಐಸಿಯು ಹಾಸಿಗೆ ಇಲ್ಲ.

ತರೀಕೆರೆ, ಎನ್‌.ಆರ್‌.ಪುರ, ಕೊಪ್ಪ ತಾಲ್ಲೂಕು ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕ ಘಟಕದ ಸಿವಿಲ್ ಕಾಮಗಾರಿ ನಡೆಯುತ್ತಿದೆ.

ತುಮಕೂರು ಜಿಲ್ಲೆ ಪಾವಗಡ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ತೀವ್ರ ನಿಗಾ ಘಟಕ ಕಾರ್ಯನಿರ್ವಹಿಸುತ್ತಿದ್ದು, ತೀವ್ರ ನಿಗಾ ಘಟಕದಲ್ಲಿ 5 ಹಾಸಿಗೆ ಇವೆ. ಎರಡನೇ ಅಲೆಯ ವೇಳೆಯಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಿದ ಕಾರಣ ಒಟ್ಟು 50 ಆಮ್ಲಜನಕ ಬೆಡ್ ವ್ಯವಸ್ಥೆ ಮಾಡಲಾಗಿದೆ.

ಪಿಎಂ ಕೇರ್ ಅನುದಾನದಲ್ಲಿ ಒಂದು ಆಮ್ಲಜನಕ ಘಟಕವನ್ನು ಪ್ರಾರಂಭಿಸಲಾಗಿತ್ತು, 100 ಎಲ್‌ಪಿಎಂ (ಪ್ರತಿ ನಿಮಿಷಕ್ಕೆ ಸರಬರಾಜು) ಸಾಮರ್ಥ್ಯದ ಘಟಕ ಕಾರ್ಯ ನಿರ್ವಹಿಸುತ್ತಿದೆ.

(ಮಾಹಿತಿ- ಮೈಸೂರು, ಹುಬ್ಬಳ್ಳಿ, ಮಂಗಳೂರು, ದಾವಣಗೆರೆ, ಕಲಬುರಗಿ, ಬೆಂಗಳೂರು ಗ್ರಾಮಾಂತರ ಬ್ಯೂರೋ)

ದೂಳು ತಿನ್ನುತ್ತಿರುವ ಬೆಡ್, ಆಮ್ಲಜನಕ ಸೋರಿಕೆ

• ಮಂಜುನಾಥ ದೊಡಮನಿ

ಯಡ್ರಾಮಿ (ಕಲಬುರಗಿ ಜಿಲ್ಲೆ): ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಿಂದುಳಿದ ತಾಲ್ಲೂಕಾಗಿರುವ ಯಡ್ರಾಮಿಯಲ್ಲಿ ಕೋವಿಡ್ ಮೂರನೇ ಅಲೆ ಎದುರಿಸಲು ಆಸ್ಪತ್ರೆ ಸಜ್ಜುಗೊಂಡಿಲ್ಲ.

100 ಬೆಡ್ ಸಾಮರ್ಥ್ಯದ ತಾಲ್ಲೂಕು ಆಸ್ಪತ್ರೆಯಲ್ಲಿ 30 ಬೆಡ್ ಮಾತ್ರ ಇವೆ. ಇದರಲ್ಲೇ ಕೋವಿಡ್ ಸೋಂಕಿತರಿಗೆ ಇರುವ ಬೆಡ್‌ಗಳು ಹಿಡಿದ್ದು, ದೂಳು ತಿನ್ನುತ್ತಿವೆ. 30 ಹೊಸ ಆಕ್ಸಿಜನ್ ಸಿಲಿಂಡರ್‌ಗಳ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಕತ್ತಲ ಕೋಣೆಯಲ್ಲಿ ಇಟ್ಟ ಕೆಲ ಆಕ್ಸಿಜನ್ ಸಿಲಿಂಡರ್‌ಗಳು ಸೋರಿಕೆಯಾಗುತ್ತಿವೆ.

ಸಾಮಾನ್ಯ ರೋಗಿಗಳ ವಾರ್ಡ್‌ಗಳಲ್ಲಿ ಕೂಡ ರಾತ್ರಿ ಪಾಳಿಯಲ್ಲಿ ವೈದ್ಯರೇ ಇಲ್ಲ!

ಜೇವರ್ಗಿ ಮತ್ತು ಯಡ್ರಾಮಿ ತಾಲ್ಲೂಕು ಸೇರಿಸಿ ಯಾಳವಾರದಲ್ಲಿ ಒಂದು ಕ್ವಾರಂಟೈನ್ ಕೇಂದ್ರ ತೆರೆಯಲಾಗಿದೆ. ಇದುವರೆಗೆ ಮೂಲಸೌಕರ್ಯ ಕಲ್ಪಿಸಿಲ್ಲ.

ವಡಗೇರಾ, ಅರಳಗುಂಡಗಿ, ಇಜೇರಿ, ಮಳ್ಳಿ ಸೇರಿ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ಸಿಬ್ಬಂದಿ ಇದ್ದಾರೆ. ಬಳಬಟ್ಟಿ, ಕಡಕೋಳ, ಕಾಚಾಪುರ, ಮಾಗಣಗೇರಾ, ಕುರಳಗೇರಾ, ಬಿಳವಾರ, ಆಲೂರ, ಮುತ್ತಕೋಡ, ಇಜೇರಿ ಸೇರಿ 16 ಆರೋಗ್ಯ ಉಪ ಕೇಂದ್ರಗಳಲ್ಲಿ ಸೋಂಕಿತರ ಉಪಚಾರಕ್ಕೆ ಏನೂ ಇಲ್ಲ. ವೈರಾಣು ಅಂಟಿಕೊಂಡವರಿಗೆ ಹೇಗೆ ಚಿಕಿತ್ಸೆ ನೀಡಬೇಕು ಎಂಬ ಬಗ್ಗೆ ಕೆಲ ಸಿಬ್ಬಂದಿಗೆ ತರಬೇತಿ ನೀಡಿದ್ದೇ ಇದುವರೆಗಿನ ದೊಡ್ಡ ಸಿದ್ಧತೆ.

ಕೋವಿಡ್ ಉಲ್ಬಣಿಸಿದರೆ ಖಾಸಗಿ ಆಸ್ಪತ್ರೆಯೇ ಗತಿ!

ಒಂದನೇ ಪುಟದಿಂದ

ಕೋವಿಡ್ ಚಿಕಿತ್ಸೆಗೆ ಎರಡನೇ ಅಲೆಯಲ್ಲಿ 63,761 ಹಾಸಿಗೆಗಳನ್ನು ಮೀಸಲಿರಿಸಲಾಗಿತ್ತು. ಆ ಸಂಖ್ಯೆ ಈಗ ಎರಡು ಪಟ್ಟು ಹೆಚ್ಚಾಗಿದೆ. ಆದರೆ, ಬಹುತೇಕ ಹಾಸಿಗೆಗಳು ಖಾಸಗಿ ಆಸ್ಪತ್ರೆಗಳಲ್ಲಿಯೇ ಇವೆ. ಐಸಿಯು ಹಾಸಿಗೆಗಳ ಸಂಖ್ಯೆ 3,321ರಿಂದ 7,216ಕ್ಕೆ, ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆಗಳ ಸಂಖ್ಯೆಯನ್ನು 3,014ರಿಂದ 6,123ಕ್ಕೆ ಹಾಗೂ ಎಚ್‌ಡಿಯು ಹಾಸಿಗೆಗಳನ್ನು 26,817ರಿಂದ 55,256ಕ್ಕೆ ಹೆಚ್ಚಳ ಮಾಡಲಾಗಿದೆ.

'ಕೋವಿಡ್ ಎರಡನೇ ಅಲೆಯಲ್ಲಿ ವೈದ್ಯಕೀಯ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯದಿಂದ ಸೋಂಕಿತರು ಸಮಸ್ಯೆ ಎದುರಿಸಬೇಕಾಯಿತು. ಆಗ ಪರಿಸ್ಥಿತಿ ಕೈಮೀರಿ ಹೋಗಿತ್ತು. ಆದರೆ, ಈಗ ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿದ್ದರೂ ಶೇ 90ಕ್ಕೂ ಅಧಿಕ ಮಂದಿ ಮನೆ ಆರೈಕೆಗೆ ಒಳಗಾಗುತ್ತಿದ್ದಾರೆ. ಸೋಂಕಿನ ತೀವ್ರತೆ ಕಡಿಮೆಯಿದೆ. ಹೀಗಾಗಿ, ಈ ಬಾರಿ ಹಾಸಿಗೆ ಸಮಸ್ಯೆ ತಲೆದೋರದು' ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ತಾಲ್ಲೂಕು ಆಸ್ಪತ್ರೆ: ಸಜ್ಜಾಗದ ಆಮ್ಲಜನಕ ಘಟಕ

ಕೋವಿಡ್ ಎರಡನೇ ಅಲೆಯಲ್ಲಿ ಶೇ 17 ರಷ್ಟು ಕೋವಿಡ್ ಪೀಡಿತರಿಗೆ ವೈದ್ಯಕೀಯ ಆಮ್ಲಜನಕ ಸಂಪರ್ಕ ಹೊಂದಿದ್ದ ಹಾಸಿಗೆಗಳು ಬೇಕಾಗಿದ್ದವು. ಶೇ 3 ರಷ್ಟು ಮಂದಿ ತೀವ್ರ ನಿಗಾ ಘಟಕಕ್ಕೆ ದಾಖಲಾಗಿದ್ದರು. ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆಯಿಂದ 23 ಮಂದಿ ಕೋವಿಡ್ ಪೀಡಿತರು ಮೃತಪಟ್ಟಿದ್ದರು.

ಪಿ.ಎಂ ಕೇರ್ಸ್ ಅನುದಾನದಡಿ ತುಮಕೂರಿನ ಪಾವಗಡ, ಶಿವಮೊಗ್ಗದ ಶಿಕಾರಿಪುರ ಸೇರಿದಂತೆ 6 ಕಡೆ ಹೊಸದಾಗಿ ತಲಾ 100 ಎಲ್‌ಪಿಎಂ ಸಾಮರ್ಥ್ಯದ ಪ್ರೆಷರ್ ಸ್ವಿಂಗ್ ಅಡ್ಸಾರ್ಪ್ಶನ್ (ಪಿಎಸ್‌ಎ) ಆಮ್ಲಜನಕ ತಯಾರಿಕಾ ಘಟಕಗಳನ್ನು ನಿರ್ಮಾಣ ಮಾಡಲಾಗಿದೆ. ರಾಜ್ಯ ಸರ್ಕಾರವು ವಿವಿಧ ಜಿಲ್ಲಾ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ 500 ಹಾಗೂ 390 ಲೀಟರ್ ಸಾಮರ್ಥ್ಯದ ಘಟಕಗಳನ್ನು ನಿರ್ಮಾಣ ಮಾಡಿದೆ. ಸದ್ಯ 222 ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಚಿಕ್ಕಮಗಳೂರಿನ ಕೊಪ್ಪ, ವಿಜಯಪುರದ ಇಂಡಿ ಸೇರಿದಂತೆ 40ಕ್ಕೂ ಅಧಿಕ ತಾಲ್ಲೂಕು ಆಸ್ಪತ್ರೆಗಳಲ್ಲಿ ಘಟಕಗಳು ಪೂರ್ಣ ಪ್ರಮಾಣದಲ್ಲಿ ಸಜ್ಜಾಗಿಲ್ಲ.

ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯಲ್ಲಿ ಆರಂಭಿಸಲಾದ ಕೋವಿಡ್–19 ಐಸೊಲೇಷನ್ ವಾರ್ಡ್‌ನಲ್ಲಿನ ಆಮ್ಲಜನಕ ಉಪಕರಣಗಳನ್ನು ಆರೋಗ್ಯ ಕಾರ್ಯಕರ್ತರು ಪರಿಶೀಲಿಸಿದರು.

'ಪೊಲೀಸರು ಅಪರಾಧದಲ್ಲಿ ಭಾಗಿಯಾದರೆ ಕಠಿಣ ಕ್ರಮ'

ಬೆಂಗಳೂರು: ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗುವ ಪೊಲೀಸ್ ಸಿಬ್ಬಂದಿ ವಿರುದ್ಧ ಕಾನೂನಿನ ಪ್ರಕಾರ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಆರಗ ಜ್ಞಾನೇಂದ್ರ

ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಿ, ಸಾರ್ವಜನಿಕರ ಪ್ರಾಣ ಮತ್ತು ಆಸ್ತಿ ರಕ್ಷಿಸಬೇಕಾದ ಹೊಣೆಗಾರಿಕೆ ಹೊಂದಿರುವ ಪೊಲೀಸರೇ ಅಪರಾಧ ಎಸಗುವುದನ್ನು ಸಹಿಸುವುದಿಲ್ಲ. ಪೊಲೀಸ್ ಇಲಾಖೆಯ ಸಿಬ್ಬಂದಿ ಅಪರಾಧದಲ್ಲಿ ಭಾಗಿಯಾಗಿರುವುದು ಪತ್ತೆಯಾದರೆ ಅವರ ವಿರುದ್ಧ ಕಠಿಣ ಕ್ರಮ ನಿಶ್ಚಿತ' ಎಂದರು.

ಮುಖ್ಯಮಂತ್ರಿಯವರ ನಿವಾಸದ ಸಮೀಪ ಭದ್ರತಾ ಕಾರ್ಯಕ್ಕೆ ನಿಯೋಜಿಸಿದ್ದ ಇಬ್ಬರು ಪೊಲೀಸರು ಗಾಂಜಾ ಮಾರಾಟದಲ್ಲಿ ತೊಡಗಿರುವುದು ಪತ್ತೆಯಾಗಿದೆ. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಪೊಲೀಸ್ ಸಿಬ್ಬಂದಿಯೇ ಅಪರಾಧ ಕೃತ್ಯದಲ್ಲಿ ಭಾಗಿಯಾಗಿರುವುದನ್ನು ಪತ್ತೆ ಮಾಡಿರುವ ಪೊಲೀಸ್ ಅಧಿಕಾರಿಗಳನ್ನು ಅಭಿನಂದಿಸಲಾಗುವುದು. ಅವರಿಗೆ ಸೂಕ್ತ ಬಹುಮಾನ ಘೋಷಿಸಲು ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಇದ್ದಾರೆ. ಅವರಲ್ಲಿ ಬೆರಳೆಣಿಕೆಯಷ್ಟು ಮಂದಿ ಕಾನೂನು ಬಾಹಿರ ಕೃತ್ಯದಲ್ಲಿ ಭಾಗಿಯಾದರೂ ಇಲಾಖೆಯ ಕುರಿತು ಸಾರ್ವಜನಿಕರಲ್ಲಿ ಕೆಟ್ಟ ಭಾವನೆ ಬೆಳೆಯುತ್ತದೆ. ಅಂತಹ ಸಿಬ್ಬಂದಿಗಳನ್ನು ಅಮಾನತು ಮಾಡುವುದಷ್ಟೇ ಅಲ್ಲ, ಸೇವೆಯಿಂದ ವಜಾಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು ಎಂದರು.

ಕೊಪ್ಪಳ ಗವಿಮಠದ ಗವಿಸಿದ್ಧೇಶ್ವರ ಮಹಾರಥೋತ್ಸವವು ಬುಧವಾರ ಬೆಳಗಿನ ಜಾವ 4.15ಕ್ಕೆ ಜರುಗಿತು –ಪ್ರಜಾವಾಣಿ ಚಿತ್ರ: ಭರತ್ ಕಂದಕೂರ

ಬೆಳಗಿನ ಜಾವ ಗವಿಸಿದ್ಧೇಶ್ವರ ರಥ ಎಳೆದ ಭಕ್ತರು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಇಲ್ಲಿನ ಗವಿಮಠದ ಜಗದ್ಗುರು ಗವಿಸಿದ್ಧೇಶ್ವರ ಮಹಾರಥೋತ್ಸವವು ಬುಧವಾರ ಬೆಳಗಿನ ಜಾವ 4.15ಕ್ಕೆ ಸಾಂಪ್ರದಾಯಿಕವಾಗಿ ನೆರವೇರಿತು. ಮಠದ ಪೀಠಾಧಿಪತಿ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ರಥೋತ್ಸವಕ್ಕೆ ಚಾಲನೆ ನೀಡಿದರು.

ರಥವನ್ನು ಯಾವ ಸಮಯದಲ್ಲಿ ಎಳೆಯಲಾಗುತ್ತದೆ ಎಂಬ ಗೊಂದಲ ಮಂಗಳವಾರ ತಡರಾತ್ರಿವರೆಗೂ ಇತ್ತು. ಆಡಳಿತ ಮಂಡಳಿಯು ಯಾವುದೇ ಅಧಿಕೃತ ಹೇಳಿಕೆಯನ್ನೂ ನೀಡಿರಲಿಲ್ಲ. 'ಹರ, ಹರ ಮಹಾದೇವ', 'ಗವಿಸಿದ್ಧಮಹಾರಾಜ್‌ಕೀಜೈ' ಎಂಬ ಘೋಷಣೆಯೊಂದಿಗೆ ಭಕ್ತರು ರಥವನ್ನು ಪಾದಗಟ್ಟೆಯವರೆಗೆ ಎಳೆದರು. ಕೋವಿಡ್ ನಿಯಮ ಉಲ್ಲಂಘನೆಯಾದಂತೆ ನೋಡಿಕೊಳ್ಳಲು ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಬಿಎಸ್‌ವೈ ಭೇಟಿ ಮಾಡಿದ ಬೊಮ್ಮಾಯಿ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಶಾಸಕ ಬಿ.ಎಸ್. ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದರು.



ಬೊಮ್ಮಾಯಿ

ಇದೊಂದು ಸೌಹಾರ್ದದ ಭೇಟಿಯಾಗಿತ್ತು. ಹೊಸ ವರ್ಷದ ದಿನ ಭೇಟಿ ಮಾಡಿದ್ದು ಬಿಟ್ಟರೆ ಆ ನಂತರ ಭೇಟಿ ಆಗಿರಲಿಲ್ಲ. ಆದ್ದರಿಂದ ಬಂದಿದ್ದರು ಎಂದು ಮೂಲಗಳು ತಿಳಿಸಿವೆ.

ಡ್ರಗ್ಸ್ ಪ್ರಕರಣ: ಇನ್‌ಸ್ಪೆಕ್ಟರ್, ಪಿಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪ್ರಕರಣದ ತನಿಖೆಯಲ್ಲಿ ಕರ್ತವ್ಯಲೋಪ ಎಸಗಿದ ಆರೋಪದಡಿ ಆರ್‌.ಟಿ.ನಗರ ಠಾಣೆಯ ಇನ್‌ಸ್ಪೆಕ್ಟರ್ ಅಶ್ವತ್ಥಗೌಡ ಹಾಗೂ ಪಿಎಸ್‌ಐ ವೀರಭದ್ರ ಅವರನ್ನು ಅಮಾನತು ಮಾಡಲಾಗಿದೆ. ಈ ಸಂಬಂಧ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಬುಧವಾರ ಆದೇಶ ಹೊರಡಿಸಿದ್ದಾರೆ.

ಆಗ್ನೇಯ ವಿಭಾಗದ ಡಿಸಿಪಿ ಶ್ರೀನಾಥ್ ಜೋಶಿ ಹಾಗೂ ವಿಐಪಿ ವಿಭಾಗದ ಡಿಸಿಪಿ ಮಂಜುನಾಥ್ ಬಾಬು ಅವರಿಗೆ ನೋಟಿಸ್ ನೀಡಲಾಗಿದೆ. ಅದಕ್ಕೆ ಉತ್ತರಿಸುವಂತೆಯೂ ಸೂಚಿಸಲಾಗಿದೆ.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಆರ್‌.ಟಿ.ನಗರದಲ್ಲಿರುವ ಖಾಸಗಿ ಮನೆಯ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಇಬ್ಬರು ಪೊಲೀಸರು ಸೇರಿ, ನಾಲ್ವರನ್ನು ಡ್ರಗ್ಸ್ ಸಾಗಣೆ ಮಾಡುತ್ತಿದ್ದ ಆರೋಪದಡಿ ಪೊಲೀಸರು ಮಂಗಳವಾರ ಬಂಧಿಸಿದ್ದರು. ಕೋರಮಂಗಲ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಸಂತೋಷ್ ಹಾಗೂ ಕಾನ್‌ಸ್ಟೆಬಲ್ ಶಿವಕುಮಾರ್‌ಗೆ ಬುಧವಾರ ಜಾಮೀನು ಮಂಜೂರಾಗಿತ್ತು. ಪ್ರಕರಣದ ತನಿಖೆಯಲ್ಲಿ ಲೋಪ ಆಗಿರುವುದು ಇದರಿಂದ ದೃಢಪಟ್ಟಿತ್ತು. ಹೀಗಾಗಿಯೇ ಇನ್‌ಸ್ಪೆಕ್ಟರ್ ಹಾಗೂ ಪಿಎಸ್‌ಐ ಅವರನ್ನು ಅಮಾನತು ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಆರೋಪಿಗಳು ಎಲ್ಲಿಂದ ಮಾದಕ ವಸ್ತುಗಳನ್ನು ತರುತ್ತಿದ್ದರು, ಅದನ್ನು ಹೇಗೆ ಮಾರಾಟ ಮಾಡುತ್ತಿದ್ದರು, ಯಾರೊಂದಿಗೆಲ್ಲ ನಂಟು ಹೊಂದಿದ್ದರು ಎಂಬುದರ ಬಗ್ಗೆ ಪೊಲೀಸರು ಸರಿಯಾಗಿ ಮಾಹಿತಿ ಕಲೆಹಾಕಿರಲಿಲ್ಲ. ಅಗತ್ಯ ಪುರಾವೆಗಳನ್ನೂ ಸಂಗ್ರಹಿಸಿರಲಿಲ್ಲ. ಆರೋಪಿಗಳಿಗೆ ಸುಲಭವಾಗಿ ಜಾಮೀನು ಸಿಗಲು ಅಗತ್ಯವಿರುವ ಎಲ್ಲ ಅನುಕೂಲವನ್ನೂ ಮಾಡಿಕೊಟ್ಟಿದ್ದರು' ಎಂದು ಹೇಳಿವೆ.

'ಸಿಬ್ಬಂದಿಯ ಪೂರ್ವಾಪರ ಪರಿಶೀಲಿಸದೆ ಅವರನ್ನು ಮುಖ್ಯಮಂತ್ರಿಯವರ ನಿವಾಸಕ್ಕೆ ಭದ್ರತೆಗೆ ನಿಯೋಜಿಸಿದ್ದಕ್ಕಾಗಿ ಡಿಸಿಪಿಗಳಿಗೆ ನೋಟಿಸ್ ನೀಡಲಾಗಿದೆ. ಅದಕ್ಕೆ ಶೀಘ್ರವೇ ಉತ್ತರಿಸುವಂತೆ ಸೂಚಿಸಲಾಗಿದೆ' ಎಂದು ತಿಳಿಸಿವೆ.

ಆಡುಗೋಡಿಯಲ್ಲಿರುವ ಪೊಲೀಸ್ ವಸತಿ ಸಮುಚ್ಚಯದಲ್ಲಿ ಸಂತೋಷ್ ಹಾಗೂ ಶಿವಕುಮಾರ್ ವಾಸವಿದ್ದರು. ಅವರನ್ನು ಮುಖ್ಯಮಂತ್ರಿಯವರ ಮನೆ ಬಂದೋಬಸ್ತ್‌ಗೆ ಆಗಾಗ ನಿಯೋಜಿಸಲಾಗುತ್ತಿತ್ತು. ಅದೇ ಮನೆ ಬಳಿಯೇ ಡ್ರಗ್ಸ್ ಸಾಗಿಸುವ ಸಂದರ್ಭದಲ್ಲಿ ಅವರಿಬ್ಬರು ಸಿಕ್ಕಿಬಿದ್ದಿದ್ದರು. ಗಾಂಜಾ ಪೆಡ್ಲರ್‌ಗಳನ್ನು ಬೆದರಿಸಿ ಹಣ ಕಿತ್ತುಕೊಳ್ಳುವ ಸಂಚು ಅವರದ್ದಾಗಿತ್ತು. ಈ ಸಂಗತಿಯನ್ನು ಪೊಲೀಸರು ಎಫ್‌ಐಆರ್‌ನಲ್ಲೂ ಉಲ್ಲೇಖಿಸಿದ್ದರು.

ಮುಖ್ಯಮಂತ್ರಿ ಜತೆ ಶೀಘ್ರ ಚರ್ಚೆ: ಶಾಸಕ ಎಂ.ಪಿ. ಕುಮಾರಸ್ವಾಮಿ

ಪಿಟಿಸಿಎಲ್ ಕಾಯ್ದೆ ತಿದ್ದುಪಡಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ಕುರಿತು ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ವಕೀಲ ಹರಿರಾಮ್ ಮಾತನಾಡಿದರು. ಜ್ಞಾನಪ್ರಕಾಶ ಸ್ವಾಮೀಜಿ, ಶಾಸಕ ಎಂ.ಪಿ.ಕುಮಾರಸ್ವಾಮಿ, ಷಡಕ್ಷರ ಮುನಿ ದೇಶಿಕೇಂದ್ರ ಸ್ವಾಮೀಜಿ, ಬಸವನಾಗಿ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಭೂ ಪರಭಾರೆ ನಿಷೇಧ ಕಾಯ್ದೆಗೆ (ಪಿಟಿಸಿಎಲ್) ಸಮಗ್ರ ತಿದ್ದುಪಡಿ ಮಾಡುವಂತೆ ಬುಧವಾರ ನಗರದಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಸರ್ಕಾರಕ್ಕೆ ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

'ಪಿಟಿಸಿಎಲ್ ಕಾಯ್ದೆ ಸಂರಕ್ಷಣಾ ಸಮಿತಿ' ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ವಿಧಾನ ಮಂಡಲ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ, 'ಪಿಟಿಸಿಎಲ್ ಕಾಯ್ದೆ ತಿದ್ದುಪಡಿ ವಿಷಯವನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗುವುದು. ಮೂವತ್ತು ಪ್ರಮುಖರನ್ನು ಒಳಗೊಂಡ ನಿಯೋಗ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಮನವರಿಕೆ ಮಾಡಿಕೊಡಲಿದೆ' ಎಂದು ವಿವರಿಸಿದರು.

'ಶೇಕಡ 75ರಷ್ಟು ಅಧಿಕಾರಿಗಳು ನಮ್ಮ ವಿರುದ್ಧವಾಗಿದ್ದಾರೆ. ಆದರೂ, ಹೋರಾಟ ಕೈಬಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮುಂದಿನ ಬಜೆಟ್ ಅಧಿವೇಶನದಲ್ಲಿಯೂ ಈ ವಿಷಯ ಪ್ರಸ್ತಾಪಿಸಲಾಗುವುದು. 51 ಪರಿಶಿಷ್ಟ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋರಾಟ ಮುಂದುವರಿಸಲಾಗುವುದು' ಎಂದು ತಿಳಿಸಿದರು.

ಜೆಡಿಎಸ್ ಶಾಸಕ ಎಚ್‌.ಕೆ. ಕುಮಾರಸ್ವಾಮಿ ಮಾತನಾಡಿ, 'ನಮ್ಮ ಜನರ ಹಿತ ಕಾಪಾಡುವುದು ಮುಖ್ಯ. ಪಿಟಿಸಿಎಲ್ ಕಾಯ್ದೆಯ ತಿದ್ದುಪಡಿಗೆ ಸಂಬಂಧಿಸಿದಂತೆ ಸದನದ ಹೊರಗೆ ಹೋರಾಟ ನಡೆಸಲಾಗಿದೆ. ಸದನದ ಒಳಗೂ ಎಲ್ಲ ಶಾಸಕರು ಒಗ್ಗೂಡಿ ಹೋರಾಟ ನಡೆಸುವ ಅಗತ್ಯವಿದೆ' ಎಂದು ಹೇಳಿದರು.

ಸಮಿತಿ ಕಾರ್ಯಾಧ್ಯಕ್ಷ ಹರಿರಾಮ್, 'ಈ ಕಾಯ್ದೆಯಲ್ಲಿರುವ ಕಾಲ ಮಿತಿ ಎನ್ನುವ ಅಂಶಕ್ಕೆ ತಿದ್ದುಪಡಿ ಮಾಡಿ, ಯಾವುದೇ ಸಮಯದಲ್ಲಿ ಪ್ರಕರಣ ದಾಖಲು ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

ವಕೀಲ ಮೋಹನ್ ಕುಮಾರ್ ಅವರು, 'ಭೂಮಿ ಪರಭಾರೆಯಾದ ನಿರ್ದಿಷ್ಟ ಸಮಯದೊಳಗೆ ಅರ್ಜಿ ಸಲ್ಲಿಸಿಲ್ಲ ಎಂಬ ಒಂದೇ ಕಾರಣ ನೀಡಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ನಿರ್ದಿಷ್ಟ ಸಮಯ ಎಂದರೆ ಎಷ್ಟು ಎಂಬುದನ್ನೂ ಸುಪ್ರೀಂ ಕೋರ್ಟ್ ಹೇಳಿಲ್ಲ. ಪಿಟಿಸಿಎಲ್‌ಗೆ ಸಂಬಂಧಿಸಿದ ಎಲ್ಲ ಪ್ರಕರಣಗಳು ನ್ಯಾಯಾಲಯದಲ್ಲಿ ವಜಾಗೊಳಿಸಲಾಗುತ್ತಿದೆ. ಹೀಗಾಗಿ, ತಿದ್ದುಪಡಿಯು ಸಹ ಈ ಹಿಂದಿನ ಎಲ್ಲ ಪ್ರಕರಣಗಳಿಗೂ ಅನ್ವಯವಾಗುವಂತೆ ಮಾಡಬೇಕು. ಇಲ್ಲದಿದ್ದರೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ' ಎಂದು ಅಭಿಪ್ರಾಯಪಟ್ಟರು.

ಉರಿಲಿಂಗ ಪೆದ್ದಿ ಮಠದ ಜ್ಞಾನ ಪ್ರಕಾಶ್ ಸ್ವಾಮೀಜಿ ಮಾತನಾಡಿ, 'ಮೂವರು ಸಚಿವರು ಈ ಕಾಯ್ದೆಯ ತಿದ್ದುಪಡಿಗೆ ವಿರುದ್ಧವಾಗಿದ್ದಾರೆ. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಈ ವಿಷಯದ ಕಡತವನ್ನು ಸಭೆಯಲ್ಲಿ ಹಾಜರುಪಡಿಸಲು ಮುಂದಾದಾಗ ಅಧಿಕಾರಿಗೆ ಸಚಿವರೊಬ್ಬರು ತರಾಟೆಗೆ ತೆಗೆದುಕೊಂಡರು' ಎಂದು ದೂರಿದರು.

ಪಿಟಿಸಿಎಲ್ ಕಾಯ್ದೆ ತಿದ್ದುಪಡಿಯಿಂದ ನಮ್ಮ ಸಮುದಾಯದ ಲಕ್ಷಾಂತರ ಜನ ಕೋಟ್ಯಧಿಪತಿಗಳಾಗುತ್ತಾರೆ. ಶಾಸಕರು ಒಗ್ಗೂಡಿ ಹೋರಾಟ ಮಾಡಬೇಕು.
ಡಾ.ಎಂ. ವೆಂಕಟಸ್ವಾಮಿ
ಸಮತಾ ಸೈನಿಕ ದಳದ ರಾಜ್ಯ ಘಟಕದ ಅಧ್ಯಕ್ಷ

ತಿದ್ದುಪಡಿಗೆ ಕೆಲ ಮನುವಾದಿ ಅಧಿಕಾರಿಗಳು ತಡೆವೊಡ್ಡುತ್ತಿದ್ದಾರೆ. ಪರಿಶಿಷ್ಟರ ಆಸ್ತಿ ಹಕ್ಕು ಕಸಿಯುವ ಯತ್ನ ನಡೆಯುತ್ತಿದೆ. ಕಾನೂನಿಗೆ ತಿದ್ದುಪಡಿ ಮಾಡುವ ಅಗತ್ಯವಿದೆ.
ಶ್ರೀಧರ್ ಕಲಿವೀರ, ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ

ಕಾಯ್ದೆ ತಿದ್ದುಪಡಿಯಿಂದ ಭೂಮಿ ಕಳೆದುಕೊಂಡ ರಾಜ್ಯದ ಸಹಸ್ರಾರು ದಲಿತ ಕುಟುಂಬಗಳಿಗೆ ಅನುಕೂಲವಾಗುತ್ತದೆ. ಸಂಘಟನೆಗಳ ಹೋರಾಟದ ಜೊತೆ ನಾವಿದ್ದೇವೆ.
ಷಡಕ್ಷರಮುನಿ ಸ್ವಾಮೀಜಿ
ಕೋಡಿಹಳ್ಳಿ ಆದಿಜಾಂಬವ ಮಠ

ಸಿಎಂ ನನ್ನ ವಿರುದ್ಧ ದೂರು ನೀಡಿಲ್ಲ: ನಿರಾಣಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನನ್ನ ವಿರುದ್ಧ ವರಿಷ್ಠರಿಗೆ ದೂರು ನೀಡಿದ್ದಾರೆ ಎಂಬುದು ಸತ್ಯಕ್ಕೆ ದೂರವಾದುದು' ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರು ಹೇಳಿದ್ದಾರೆ.

'ನಮ್ಮ ಮಧ್ಯೆ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಅವರ ಬಗ್ಗೆ ಅಸಮಾಧಾನವೂ ಇಲ್ಲ. ಒಂದೇ ತಾಯಿಯ ಮಕ್ಕಳಂತೆ ಇದ್ದೇವೆ. ಮೂವತ್ತು ವರ್ಷಗಳಿಂದ ಸಂಬಂಧವಿದೆ. ಅವರು ನನ್ನ ವಿರುದ್ಧ ವರಿಷ್ಠರಿಗೆ ದೂರು ನೀಡಲು ಸಾಧ್ಯವಿಲ್ಲ' ಎಂದು ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಕೆಲವರು ಸುಖಾಸುಮ್ಮನೆ ಇಲ್ಲ ಸಲ್ಲದ ಗಾಳಿ ಸುದ್ದಿಯನ್ನು ಹಬ್ಬಿಸುತ್ತಾರೆ. ನನ್ನ ವಿರುದ್ಧ ವರಿಷ್ಠರಿಗೆ ದೂರು ನೀಡಲು ಸಾಧ್ಯವೇ ಇಲ್ಲ. ಕೇವಲ ರಾಜಕೀಯ ಮಾತ್ರವಲ್ಲ, ಬೇರೆ ಕಾರಣಗಳಿಂದ ನಾನು ತಪ್ಪು ಹೆಜ್ಜೆ ಇಟ್ಟಾಗಲೂ ಬೊಮ್ಮಾಯಿ ತಿಳಿ ಹೇಳುತ್ತಾ ಬಂದಿದ್ದಾರೆ. ಈಗಲೂ ಅಷ್ಟೇ, ಅವರ ಬಗ್ಗೆ ಯಾವುದೇ ನನಗೆ ಅಸಮಾಧಾನವಿಲ್ಲ. ಅದೇ ರೀತಿ ಅವರಿಗೂ ನನ್ನ ಮೇಲೆ ಅಸಮಾಧಾನವಿಲ್ಲ' ಎಂದು ಅವರು ಹೇಳಿದರು.

'ಬೊಮ್ಮಾಯಿ ತಮ್ಮ ಅವಧಿಯನ್ನು ಪೂರ್ಣಗೊಳಿಸಲಿದ್ದು, 2023ರ ಬಳಿಕವೂ ಅವರೇ ಮುಖ್ಯಮಂತ್ರಿ ಆಗುತ್ತಾರೆ. ಬಸವರಾಜ ಬೊಮ್ಮಾಯಿ ಅವರು ಉತ್ತಮವಾಗಿ ಆಡಳಿತ ನೀಡುತ್ತಿದ್ದಾರೆ' ಎಂದು ಅವರು ತಿಳಿಸಿದರು.

'ನಾನು ಪಕ್ಷದ ರಾಷ್ಟ್ರೀಯ ನಾಯಕರು, ಸಂಘಪರಿವಾರದ ನಾಯಕರನ್ನು ಭೇಟಿಯೇ ಮಾಡಿಲ್ಲ. ಭೇಟಿ ಮಾಡಿದ್ದು ಸಾಬೀತು ಮಾಡಿದರೆ ನೀವು ಹೇಳಿದಂತೆ ಕೇಳುತ್ತೇನೆ. ನನ್ನ ಮನಸ್ಸಿನ ಭಾವನೆಗಳನ್ನು ಹಂಚಿಕೊಂಡಿದ್ದೇನೆ. ಬೇರೆಯವರು ಏನು ಹೇಳಿದ್ದಾರೋ ನನಗೆ ಗೊತ್ತಿಲ್ಲ' ಎಂದು ಅವರು ತಿಳಿಸಿದರು.

'ಸಂಪುಟ ವಿಸ್ತರಣೆ ಮುಖ್ಯಮಂತ್ರಿಯವರ ಪರಮಾಧಿಕಾರ. ಸೂಕ್ತ ಸಂದರ್ಭದಲ್ಲಿ ಭರ್ತಿ ಮಾಡುತ್ತಾರೆ. ಸಚಿವರನ್ನು ಕೈಬಿಡುವ ವಿಚಾರವೂ ಮುಖ್ಯಮಂತ್ರಿಯವರ ಪರಮಾಧಿಕಾರ. ಅವರ ನಿರ್ಧಾರಕ್ಕೆ ಬಿಟ್ಟಿದ್ದು' ಎಂದು ಹೇಳಿದರು.

ಪಂಚಮಸಾಲಿ ಸಂಘ: ಅಧ್ಯಕ್ಷರಾಗಿ ಜಿ.ಪಿ.ಪಾಟೀಲ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ರಾಜ್ಯ ಘಟಕದ ನೂತನ ಅಧ್ಯಕ್ಷರಾಗಿ ಬಾಗಲಕೋಟೆ ಜಿಲ್ಲೆ ಇಳಕಲ್‌ನ ಜಿ.ಪಿ.ಪಾಟೀಲ ಹಾಗೂ ಕಾರ್ಯಾಧ್ಯಕ್ಷರಾಗಿ ಕೊಪ್ಪಳದ ಸೋಮನಗೌಡ ಎಂ.ಪಾಟೀಲ ಅವರನ್ನು ಆಯ್ಕೆ ಮಾಡಲಾಗಿದೆ.

ಜಿ.ಪಿ.ಪಾಟೀಲ

ಸೋಮನಗೌಡ ಎಂ.ಪಾಟೀಲ

ಬೆಂಗಳೂರಿನ ಸಂಘದ ಕಾರ್ಯಾಲಯದಲ್ಲಿ ಬುಧವಾರ ನಡೆದ ಕಾರ್ಯಕಾರಿ ಸಮಿತಿಯಲ್ಲಿ ಇವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಸೆಕೆಂಡರಿ ಅಗ್ರಿಕಲ್ಚರ್' ನಿರ್ದೇಶನಾಲಯ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಇಲಾಖೆ ನಿರ್ದೇಶಕರ ನೇತೃತ್ವದಲ್ಲಿ 13 ಸದಸ್ಯರನ್ನು ಒಳಗೊಂಡ 'ಸೆಕೆಂಡರಿ ಅಗ್ರಿಕಲ್ಚರ್' ನಿರ್ದೇಶನಾಲಯ ಸ್ಥಾಪಿಸಲಾಗಿದೆ.

ರಾಜ್ಯದಲ್ಲಿ ರೈತರ ಆದಾಯ ಹೆಚ್ಚಿಸುವ ಉದ್ದೇಶದಿಂದ ಹೊಸ ನಿರ್ದೇಶನಾಲಯ ಸ್ಥಾಪಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದರು. ಈ ಸಂಬಂಧ ಈಗ ಆದೇಶ ಹೊರಡಿಸಲಾಗಿದೆ.

ರೈತರ ಆದಾಯ ಹೆಚ್ಚಿಸಲು ಸ್ಥಳೀಯವಾಗಿ ಲಭ್ಯವಿರುವ ಕೃಷಿ ಮತ್ತು ಇತರ ಜೈವಿಕ ಸಂಪನ್ಮೂಲಗಳ ಪ್ರಾಥಮಿಕ ಉತ್ಪನ್ನ ಮತ್ತು ಉಪ ಉತ್ಪನ್ನಗಳನ್ನು ಕಚ್ಚಾ ವಸ್ತುವಾಗಿ ಬಳಸಿಕೊಂಡು ಸಂಸ್ಕರಣೆ, ಪ್ಯಾಕಿಂಗ್ ಹಾಗೂ ಸೂಕ್ತ ಬ್ರ್ಯಾಂಡ್ ಮೂಲಕ ಮಾರುಕಟ್ಟೆ ಕಲ್ಪಿಸುವುದು ಸೆಕೆಂಡರಿ ಅಗ್ರಿಕಲ್ಚರ್‌ನ ಮುಖ್ಯ ಉದ್ದೇಶ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದ್ದಾರೆ.

ಸ್ಥಳೀಯವಾಗಿ ಉತ್ಪಾದಿಸಲಾದ ಕಚ್ಚಾವಸ್ತುವು ಗ್ರಾಮ ಮಟ್ಟದಲ್ಲಿ ಪ್ರಾಥಮಿಕ ಸಂಸ್ಕರಣೆಗೆ ಒಳಗಾಗಿದ್ದರೆ ಮತ್ತು ಅಂತಹ ಕಚ್ಚಾ ವಸ್ತುಗಳಿಂದ ಮೌಲ್ಯವರ್ಧಿತಗೊಳಿಸುವ ಪ್ರಾಥಮಿಕ ಉತ್ಪಾದನೆಯನ್ನು ಉದ್ಯಮಕ್ಕೆ ಸರಬರಾಜು ಮಾಡಿದರೆ ಅದನ್ನು ಸೆಕೆಂಡರಿ ಕೃಷಿಯಾಗಿ ಪರಿಗಣಿಸಬಹುದು.

ಜೇನು ಸಾಕಣೆ, ಜೈವಿಕ ಗೊಬ್ಬರ ಘಟಕಗಳು, ಸಾವಯವ ಬಣ್ಣ ಅಥವಾ ಡೈ ತಯಾರಿಕೆ, ಅಣಬೆ, ರೇಷ್ಮೆ ಹುಳು ಸಾಕಣೆ, ನರ್ಸರಿ ಇತ್ಯಾದಿಗಳಂತಹ ಸಣ್ಣ ಪ್ರಮಾಣದ ಚಟುವಟಿಕೆಗಳು ಸೆಕೆಂಡರಿ ಕೃಷಿಗೆ ಉತ್ತಮ ಉದಾಹರಣೆಯಾಗಿದೆ. ಸ್ಥಳೀಯವಾಗಿ ಸುತ್ತ-ಮುತ್ತಲಿನ ಪ್ರದೇಶದಲ್ಲಿ ಲಭ್ಯವಾಗುವ ಮೂಲ/ ಕಚ್ಚಾ ವಸ್ತುಗಳನ್ನು ಮಾನವ ಶಕ್ತಿ, ಕೌಶಲ್ಯಗಳನ್ನು ಮೂಲವಾಗಿ ಉಪಯೋಗಿಸಿಕೊಂಡು ಅಳವಡಿಸುವ ಸಮಗ್ರ ಚಟುವಟಿಕೆಗಳು ಸೆಕೆಂಡರಿ ಕೃಷಿಗೆ ಉತ್ತಮ ಉದಾಹರಣೆ ಎಂದು ಅವರು ಹೇಳಿದರು.

ಸಿಗಂದೂರು ಸೇತುವೆ ಕಾಮಗಾರಿಗೆ ನೆರವಾಗಲು ಎನ್‌ಎಚ್‌ಎಐಯಿಂದ ಪತ್ರ

ಲಿಂಗನಮಕ್ಕಿ: 60 ಟಿಎಂಸಿ ಅಡಿ ನೀರು ಹೊರಕ್ಕೆ?

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಶಿವಮೊಗ್ಗ: ಸಾಗರ ತಾಲ್ಲೂಕಿನ ಸಿಗಂದೂರು–ತುಮರಿ ಸೇತುವೆ ಕಾಮಗಾರಿಗಾಗಿ ಲಿಂಗನಮಕ್ಕಿ ಜಲಾಶಯದ ನೀರಿನ ಮಟ್ಟವನ್ನು 1,760 ಅಡಿಗೆ ತಗ್ಗಿಸಬೇಕು ಎಂದು ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಎಚ್‌ಎಐ) ಕೆಪಿಸಿಗೆ ಪತ್ರ ಬರೆದಿರುವುದು ವಿವಾದ ಹುಟ್ಟುಹಾಕಿದೆ.

ಲಿಂಗನಮಕ್ಕಿ ಜಲಾಶಯದಲ್ಲಿ ಪ್ರಸ್ತುತ 151.64 ಟಿಎಂಸಿ ಅಡಿ ನೀರಿದೆ. (ಸಮುದ್ರಮಟ್ಟದಿಂದ 1804.15 ಅಡಿ) ಹೆದ್ದಾರಿ ಪ್ರಾಧಿಕಾರದ ಪತ್ರಕ್ಕೆ ಕೆಪಿಸಿ ಮನ್ನಣೆ ನೀಡಿದರೆ 60 ಟಿಎಂಸಿ ಅಡಿ ನೀರು ಹೊರಗೆ ಹಾಕಬೇಕಾಗುತ್ತದೆ. ಇದು ಬೇಸಿಗೆ ಸಮಯದಲ್ಲಿ ಜಲ ವಿದ್ಯುತ್ ಉತ್ಪಾದನೆ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಸರ್ಕಾರದ ಬೊಕ್ಕಸಕ್ಕೂ ಹೊರೆಯಾಗಲಿದೆ.

2018 ಫೆ.19ರಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಸೇತುವೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರು.

ಶರಾವತಿ ಹಿನ್ನೀರಿನಲ್ಲಿ ನಿರ್ಮಾಣವಾಗುತ್ತಿರುವ ಸಿಗಂದೂರು ಸೇತುವೆ

ಮಧ್ಯಪ್ರದೇಶ ಮೂಲದ ದಿಲೀಪ್ ಬಿಲ್ಡ್‌ಕಾನ್ ಕಂಪನಿ ತುಮರಿ ಸೇತುವೆ ನಿರ್ಮಾಣದ ಗುತ್ತಿಗೆ ಪಡೆದಿದೆ.

ಸಾಗರ ನಗರದ ಶಿವಪ್ಪ ನಾಯಕ ವೃತ್ತದಿಂದ ಸಿಗಂದೂರು ಸಮೀಪದ ಮರಕುಟುಕದವರೆಗೆ 78 ಕಿ.ಮೀ. ಹೊಸ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗುತ್ತಿದೆ. ಮಾರ್ಗಮಧ್ಯದಲ್ಲಿ ಬರುವ ಅಂಬಾರಗೋಡ್ಲು-ಕಳಸವಳ್ಳಿ ಮಧ್ಯೆ ₹ 423.15 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಿಸಲಾಗುತ್ತಿದೆ. ಸೇತುವೆ ಪೂರ್ಣಗೊಂಡರೆ ಬೈಂದೂರು–ರಾಣೆಬೆನ್ನೂರು ರಾಷ್ಟ್ರೀಯ ಹೆದ್ದಾರಿಗೆ ಈ ಸೇತುವೆ ಸಂಪರ್ಕ ಕಲ್ಪಿಸಲಿದೆ.

2.5 ಕಿ.ಮೀ. ಉದ್ದ, 16 ಮೀಟರ್ ಅಗಲದ 30ರಿಂದ 55 ಮೀಟರ್ ಎತ್ತರದ, 17 ಪಿಲ್ಲರ್ ಒಳಗೊಂಡ ಕೇಬಲ್ ತಂತ್ರಜ್ಞಾನ ಆಧಾರಿತ ಸೇತುವೆ ಕಾರ್ಯ ಶೇ 35ರಷ್ಟು ಪೂರ್ಣಗೊಂಡಿದೆ. ನಿಯಮದಂತೆ ಕಂಪನಿ ಕಾಮಗಾರಿಯನ್ನು 2023ರ ಮೇ ವೇಳೆಗೆ ಪೂರ್ಣಗೊಳಿಸಬೇಕಿದೆ. ಈ ಬಾರಿ ಸುರಿದ ಹಿಂಗಾರು ಮಳೆಯಿಂದ ಜಲಾಶಯದಲ್ಲಿ ಸಾಕಷ್ಟು ನೀರಿದೆ. ಹಾಗಾಗಿ, ನೀರಿನ ಪ್ರಮಾಣ ತಗ್ಗಿಸುವಂತೆ ಕೋರಿದ್ದಾರೆ.

'ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಂಜಿನಿಯರ್ ಬರೆದ ಪತ್ರ ತಲುಪಿದೆ. ದಿಢೀರನೆ ಅಷ್ಟೊಂದು ಪ್ರಮಾಣದ ನೀರನ್ನು ನದಿಗೆ ಹರಿಸಲು, ವಿದ್ಯುತ್ ಉತ್ಪಾದನೆಗೆ ಬಳಸಲು ಸಾಧ್ಯವಿಲ್ಲ. ಹಾಗಾಗಿ, ಮಾರ್ಗದರ್ಶನ ಕೋರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ' ಎಂದು ಶರಾವತಿ ಕಣಿವೆ ಪ್ರದೇಶದ ಕೆಪಿಸಿ ಮುಖ್ಯ ಎಂಜಿನಿಯರ್ ಮಹೇಶ್ ಪ್ರತಿಕ್ರಿಯಿಸಿದರು.

ಸೇತುವೆ ವಿಳಂಬವಾದರೆ ಯಾರಿಗೂ ನಷ್ಟವಿಲ್ಲ. ಜಲಾಶಯದ ನೀರು ಹರಿಯಬಿಟ್ಟರೆ ನದಿಗೇ ನಷ್ಟ. ಸರ್ಕಾರ ಆತುರದ ನಿರ್ಧಾರ ತೆಗೆದುಕೊಳ್ಳಬಾರದು ಎನ್ನುವುದು ಸ್ಥಳೀಯರ ಒತ್ತಾಯ.

'ಸೇತುವೆ ಕಾಮಗಾರಿಗೆ ಜಲಾಶಯದ ನೀರು ತಗ್ಗಿಸುವ ಕುರಿತು ಸರ್ಕಾರ ಅಧಿಕೃತ ಆದೇಶ ಹೊರಡಿಸದಿದ್ದರೂ ಅನಧಿಕೃತವಾಗಿ ನದಿಗೆ ನೀರು ಹರಿಸಲಾಗುತ್ತಿದೆ. ನೀರು ತಗ್ಗಿಸುವ ನೆಪದಲ್ಲಿ ಖಾಸಗಿ ವಿದ್ಯುತ್ ಕಂಪನಿಗಳಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ' ಎಂದು ಆರೋಪಿಸುತ್ತಾರೆ ಸಾಗರದ ಮಾಜಿ ಶಾಸಕ ಗೋಪಾಲಕೃಷ್ಣ ಬೇಳೂರು.

1,469.8 ಮೆಗಾವಾಟ್ ವಿದ್ಯುತ್ ಉತ್ಪಾದನೆ

44.35 ಕೋಟಿ ಘನ ಮೀಟರ್ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿರುವ ಲಿಂಗನಮಕ್ಕಿ ಜಲಾಶಯದ ನೀರು ಬಳಸಿಕೊಂಡು ಮಹಾತ್ಮಗಾಂಧಿ, ಶರಾವತಿ, ಲಿಂಗನಮಕ್ಕಿ ಹಾಗೂ ಗೇರುಸೊಪ್ಪ ಘಟಕಗಳು ಗರಿಷ್ಠ 1,469.8 ಮೆಗಾವಾಟ್ ವಿದ್ಯುತ್ ಉತ್ಪಾದಿಸುತ್ತಿವೆ. ಈ ವಿದ್ಯುದಾಗರಗಳು 1964ರಿಂದಲೂ ರಾಜ್ಯದ ಬೇಡಿಕೆಯಲ್ಲಿ ಅಗ್ರಪಾಲು ವಿದ್ಯುತ್ ಪೂರೈಸುತ್ತಿವೆ. ಈಚೆಗೆ ತುರ್ತು ಸಮಯದ ಉತ್ಪಾದನೆಗೆ ಮೀಸಲಿಡಲಾಗಿದೆ.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ: ಸಮಾಜವಾದಿ ಪಕ್ಷದತ್ತ ಸರಿದ ಮೌರ್ಯ, ಚೌಹಾಣ್, ರಾಜ್‌ಭರ್

ಒಬಿಸಿ ನಾಯಕರ ನಿರ್ಗಮನ: ಬಿಜೆಪಿಗೆ ಕಳವಳ

• ಸಂಜಯ ಪಾಂಡೆ

ದಾರಾ ಸಿಂಗ್ ಚೌಹಾಣ್ ಅವರನ್ನು ಅಖಿಲೇಶ್ ಅವರು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡ ಸಂದರ್ಭ

ರ‍್ಯಾಲಿಯೊಂದರಲ್ಲಿ ಓಂ ಪ್ರಕಾಶ್ ರಾಜ್‌ಭರ್ ಪಿಟಿಐ ಚಿತ್ರಗಳು

ಲಖನೌ: ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ ನೇತೃತ್ವದ ಸಂಪುಟದಲ್ಲಿ ಸಚಿವರಾಗಿದ್ದ ಸ್ವಾಮಿ ಪ್ರಸಾದ್ ಮೌರ್ಯ ಮತ್ತು ದಾರಾ ಸಿಂಗ್ ಚೌಹಾಣ್ ಹಾಗೂ ಬಿಜೆಪಿಯ ಜತೆಗೆ ಮೈತ್ರಿ ಮಾಡಿಕೊಂಡಿದ್ದ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಮುಖ್ಯಸ್ಥ ಓಂ ಪ್ರಕಾಶ್ ರಾಜ್‌ಭರ್ ಅವರು ಈಗ ಸಮಾಜವಾದಿ ಪಕ್ಷದ (ಎಸ್‌ಪಿ) ಜತೆಗೆ ಇದ್ದಾರೆ. ಇವರೆಲ್ಲರೂ ಇತರ ಹಿಂದುಳಿದ ವರ್ಗಗಳ (ಒಬಿಸಿ) ನಾಯಕರಾಗಿದ್ದರೂ ಭಿನ್ನ ಸಮುದಾಯಗಳನ್ನು ಪ್ರತಿನಿಧಿಸುವವರು. ಪೂರ್ವಾಂಚಲದಲ್ಲಿ (ಉತ್ತರ ಪ್ರದೇಶದ ಪೂರ್ವ ಭಾಗ) ಒಬಿಸಿ ಮತಗಳೇ ನಿರ್ಣಾಯಕ. ರಾಜ್ಯದಲ್ಲಿ ಅಧಿಕಾರಕ್ಕೆ ಬರಬೇಕಿದ್ದರೆ ಪೂರ್ವಾಂಚಲದಲ್ಲಿ ಗಣನೀಯ ಕ್ಷೇತ್ರಗಳನ್ನು ಗೆಲ್ಲಲೇಬೇಕು.

ಈ ಕಾರಣಕ್ಕಾಗಿಯೇ ಬಿಜೆಪಿ ಪಾಳಯದಿಂದ ಇವರೆಲ್ಲರ ನಿರ್ಗಮನ ಬಿಜೆಪಿಯ ಕಳವಳಕ್ಕೆ ಕಾರಣವಾಗಿದೆ. 2017ರ ವಿಧಾನಸಭಾ ಚುನಾವಣೆ ಮತ್ತು 2019ರ ಲೋಕಸಭಾ ಚುನಾವಣೆಯಲ್ಲಿ ಈ ಭಾಗದಲ್ಲಿ ಬಿಜೆಪಿ ಜಯಭೇರಿ ಬಾರಿಸಿತ್ತು. ಈ ಪ್ರಮುಖ ನಾಯಕರು ಇಲ್ಲದಿರುವುದು ಈ ಭಾಗದಲ್ಲಿ ಬಿಜೆಪಿ ಗೆಲುವಿನ ಸಾಧ್ಯತೆಯನ್ನು ಕುಗ್ಗಿಸಿದೆ.

2017ರ ವಿಧಾನಸಭಾ ಚುನಾವಣೆಯಲ್ಲಿ ಈ ಭಾಗದ 164 ಕ್ಷೇತ್ರಗಳ ಪೈಕಿ 115ರಲ್ಲಿ ಬಿಜೆಪಿ ಗೆದ್ದಿತ್ತು. ಅಪ್ನಾ ದಳ ಮತ್ತು ಎಸ್‌ಬಿಎಸ್‌ಪಿ ಜತೆಗಿನ ಮೈತ್ರಿ ಇದಕ್ಕೆ ಮುಖ್ಯ ಕಾರಣ. ಬಿಜೆಪಿಯ ಮಿತ್ರ ಪಕ್ಷಗಳು 16 ಕ್ಷೇತ್ರಗಳಲ್ಲಿ ಗೆದ್ದಿದ್ದವು. ಎಸ್‌ಪಿ 17 ಮತ್ತು ಬಿಎಸ್‌ಪಿ 14 ಕ್ಷೇತ್ರಗಳಲ್ಲಿ ಗೆಲುವು ಕಂಡಿದ್ದವು. ಕಾಂಗ್ರೆಸ್‌ಗೆ ಎರಡು ಕ್ಷೇತ್ರಗಳು ಮಾತ್ರ ದಕ್ಕಿದ್ದವು.

ಪೂರ್ವಾಂಚಲದ ಜಾತಿ ಲೆಕ್ಕಾಚಾರದತ್ತ ಕಣ್ಣಾಡಿಸಿದರೆ ರಾಜ್‌ಭರ್, ಮೌರ್ಯ ಮತ್ತು ಚೌಹಾಣ್ ಸಮುದಾಯಗಳು ಎಷ್ಟು ಮುಖ್ಯ ಎಂಬುದು ಅರ್ಥವಾಗುತ್ತದೆ.

ಐದು ಬಾರಿ ಶಾಸಕರಾಗಿರುವ ಸ್ವಾಮಿ ಪ್ರಸಾದ್ ಮೌರ್ಯ ಅವರು ಒಬಿಸಿ ಸಮುದಾಯದ ಅತ್ಯಂತ ಪ್ರಭಾವಿ ನಾಯಕ ಎಂದು ಗುರುತಿಸಿಕೊಂಡವರು. ಪೂರ್ವಾಂಚಲದಲ್ಲಿ ಮಾತ್ರವಲ್ಲದೆ, ಕುಶಿನಗರ, ರಾಯಬರೇಲಿ, ಬದಾಯೂಂ ಮತ್ತು ಶಾಜಹಾನ್‌ಪುರ ಸೇರಿದಂತೆ ರಾಜ್ಯದ ಮಧ್ಯ ಭಾಗದಲ್ಲಿಯೂ ಅವರ ಪ್ರಭಾವ ಇದೆ.

ಮೌರ್ಯ ಅವರಿಗೆ ಬಿಜೆಪಿಯಲ್ಲಿ ಎಷ್ಟು ಮಹತ್ವವಿತ್ತು ಎಂದರೆ, ಪ್ರಧಾನಿ ನರೇಂದ್ರ ಮೋದಿ ಅವರು ಕುಶಿನಗರ ವಿಮಾನ ನಿಲ್ದಾಣವನ್ನು ಕೆಲ ದಿನಗಳ ಹಿಂದೆ ಉದ್ಘಾಟನೆ ಮಾಡಿದ ಕಾರ್ಯಕ್ರಮದಲ್ಲಿ ಅವರಿಗೆ ವೇದಿಕೆಯಲ್ಲಿ ಸ್ಥಾನ ನೀಡಲಾಗಿತ್ತು. ಪೂರ್ವ ಮತ್ತು ಮಧ್ಯ ಭಾಗದ ಜಿಲ್ಲೆಗಳಲ್ಲಿ ಮೌರ್ಯ ಸಮುದಾಯದ ಜನಸಂಖ್ಯೆ ಗಣನೀಯವಾಗಿದೆ.

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ರಾಜ್‌ಭರ್ ಸಮುದಾಯದ ಪ್ರಮಾಣ ಶೇ ಮೂರರಿಂದ ನಾಲ್ಕು ಮಾತ್ರ. ಆದರೆ, ಗಾಜಿಪುರ, ಬಲಿಯಾ, ಮೌ, ವಾರಾಣಸಿ, ಚಂದೌಲಿ, ಆಜಂಗಡ, ಅಂಬೇಡ್ಕರ್ ನಗರ, ಬಹ್ರೈಚ್ ಮತ್ತು ಮಹಾರಾಜ್‌ಗಂಜ್ ಜಿಲ್ಲೆಗಳಲ್ಲಿ ಈ ಸಮುದಾಯದ ಜನರು ಶೇ 17ರಷ್ಟಿದ್ದಾರೆ.ಈ ಸಮುದಾಯದ ಮತಗಳು ತಪ್ಪಿದರೆ, ಬಿಜೆಪಿಯ ಗೆಲುವಿನ ಮೇಲೆ ಅದು ಪರಿಣಾಮ ಬೀರಲಿದೆ. ಆಜಂಗಡ, ಮೌ, ಗಾಜಿಪುರ ಮತ್ತು ಬಲಿಯಾ ಜಿಲ್ಲೆಗಳಲ್ಲಿ ಚೌಹಾಣ್ ಸಮುದಾಯದ ಜನಸಂಖ್ಯೆ ಗಣನೀಯವಾಗಿದೆ. 12ಕ್ಕೂ ಹೆಚ್ಚು ಕ್ಷೇತ್ರಗಳ ಫಲಿತಾಂಶದ ಮೇಲೆ ಪ್ರಭಾವ ಬೀರುವ ಸಾಮರ್ಥ್ಯ ಈ ಸಮುದಾಯಕ್ಕೆ ಇದೆ.

ನಷ್ಟ ಸರಿದೂಗಿಸುವ ಯತ್ನ

ಸ್ವಾಮಿ ಪ್ರಸಾದ್ ಮೌರ್ಯ, ದಾರಾ ಸಿಂಗ್ ಚೌಹಾಣ್ ಮತ್ತು ಓಂ ಪ್ರಕಾಶ್ ರಾಜ್‌ಭರ್ ಅವರ ನಿರ್ಗಮನವು ಪಕ್ಷದ ಚುನಾವಣಾ ಅವಕಾಶಗಳ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ ಎಂದು ಬಿಜೆಪಿಯ ಮುಖಂಡರು ಬಹಿರಂಗವಾಗಿ ಹೇಳುತ್ತಿದ್ದಾರೆ. ಆದರೆ, ಪಕ್ಷದ ಮೂಲಗಳು ಬೇರೆಯದೇ ಚಿತ್ರಣ ನೀಡುತ್ತವೆ. 2017ರ ಚುನಾವಣೆಯಲ್ಲಿ ಬಿಜೆಪಿಗೆ ಶೇ 40ರಷ್ಟು ಮತಗಳು ಸಿಕ್ಕಿದ್ದವು. ಎಸ್‌ಪಿಯ ಮತ ಪ್ರಮಾಣ ಶೇ 20ರಷ್ಟಿತ್ತು. ಪೂರ್ವಾಂಚಲದಲ್ಲಿ ಬಿಜೆಪಿಗೆ ಒಬಿಸಿಯ ಶೇ 44ರಷ್ಟು ಮತಗಳು ಸಿಕ್ಕಿದ್ದವು. ಒಬಿಸಿ ಮತಗಳಲ್ಲಿ ಗಣನೀಯವಾದ ಕುಸಿತವು ಬಿಜೆಪಿಯ ಸ್ಥಾನ ಗಳಿಕೆಯ ಮೇಲೆ ಪರಿಣಾಮ ಬೀರಲಿದೆ.

ಒಬಿಸಿ ಮಿತ್ರ ಪಕ್ಷಗಳಾದ ನಿಶಾದ್ ಪಾರ್ಟಿ ಮತ್ತು ಅಪ್ನಾ ದಳಕ್ಕೆ ಹೆಚ್ಚು ಕ್ಷೇತ್ರಗಳನ್ನು ಬಿಜೆಪಿ ಬಿಟ್ಟುಕೊಟ್ಟಿದೆ. ಇದು ಕೂಡ ಬಿಜೆಪಿಯ ಕಳವಳಗಳಿಗೆ ಕನ್ನಡಿ ಹಿಡಿಯುತ್ತದೆ. 'ನಿಶಾದ್ ಪಾರ್ಟಿ ಮತ್ತು ಅಪ್ನಾ ದಳದ ಹೆಚ್ಚು ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಮೂಲಕ ನಷ್ಟವನ್ನು ಸರಿದೂಗಿಸುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ' ಎಂದು ಲಖೌನದ ರಾಜಕೀಯ ವಿಶ್ಲೇಷಕರೊಬ್ಬರು ಹೇಳಿದ್ದಾರೆ.

ಅಖಿಲೇಶ್ ಸ್ಪರ್ಧೆ ಬಹುತೇಕ ಖಚಿತ

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಸಾಧ್ಯತೆ ದಟ್ಟವಾಗಿದೆ. ಅಖಿಲೇಶ್ ಸ್ಪರ್ಧಿಸಿದರೆ, ಅವರಿಗೆ ಇದು ಮೊದಲ ವಿಧಾನಸಭೆ ಚುನಾವಣೆ ಇದಾಗಲಿದೆ.

ಅಖಿಲೇಶ್ ಅವರು ಈಗ ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿರುವ ಆಜಂಗಡದ ವ್ಯಾಪ್ತಿಯಲ್ಲಿರುವ ಗೋಪಾಲಪುರ ವಿಧಾನಸಭೆ ಕ್ಷೇತ್ರದಿಂದ ಅಖಿಲೇಶ್ ಸ್ಪರ್ಧಿಸಲಿದ್ದಾರೆ ಎಂದು ಎಸ್‌ಪಿ ಮೂಲಗಳು ತಿಳಿಸಿವೆ. ಈ ಕ್ಷೇತ್ರವು ಉತ್ತರ ಪ್ರದೇಶದ ಪೂರ್ವಾಂಚಲ ಪ್ರದೇಶದಲ್ಲಿದೆ.

ಕ್ಷೇತ್ರ ಆಯ್ಕೆಯ ಕುರಿತು ಅಖಿಲೇಶ್ ಯಾವ ಸುಳಿವನ್ನೂ ನೀಡಿಲ್ಲ. ಆದರೆ ಅವರು ಪೂರ್ವಾಂಚಲ ಪ್ರದೇಶದಿಂದಲೇ ಸ್ಪರ್ಧಿಸಲಿದ್ದಾರೆ ಎಂದು ಮೂಲಗಳು ಹೇಳಿವೆ. 'ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗೋರಖಪುರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಅದು ಕೂಡಾ ಪೂರ್ವಾಂಚಲ ಪ್ರದೇಶದ ಒಂದು ಕ್ಷೇತ್ರ. ಅಖಿಲೇಶ್ ಕೂಡಾ ಪೂರ್ವಾಂಚಲ ಪ್ರದೇಶದ ಕ್ಷೇತ್ರದಿಂದಲೇ ಸ್ಪರ್ಧಿಸಿದರೆ, ನಮ್ಮ ಪಕ್ಷದ ಬೆಂಬಲಿಗರು ಮತ್ತು ಕಾರ್ಯಕರ್ತರಿಗೆ ಧನಾತ್ಮಕ ಸಂದೇಶ ನೀಡಿದಂತಾಗುತ್ತದೆ' ಎಂದು ಎಸ್‌ಪಿಯ ಹಿರಿಯ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಕಳೆದ ಐದು ವಿಧಾನಸಭಾ ಚುನಾವಣೆಗಳಲ್ಲಿ ಗೋಪಾಲಪುರ ಕ್ಷೇತ್ರದಲ್ಲಿ ಎಸ್‌ಪಿ ನಾಲ್ಕು ಬಾರಿ ಗೆದ್ದಿದೆ. ಹೀಗಾಗಿ ಈ ಕ್ಷೇತ್ರವನ್ನು ಎಸ್‌ಪಿಯ ಸುರಕ್ಷಿತ ಕ್ಷೇತ್ರ ಎಂದು ಪರಿಗಣಿಸಲಾಗಿದೆ. 2017ರ ಚುನಾವಣೆಯಲ್ಲಿ ಎಸ್‌ಪಿ ಅಭ್ಯರ್ಥಿ ನಫೀಸ್ ಅಹಮದ್ ಅವರು 15 ಸಾವಿರ ಮತಗಳ ಅಂತರದಿಂದ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಿದ್ದರು.

ಅಖಿಲೇಶ್ ಸ್ಪರ್ಧೆ ಕುರಿತು ಅಂತಿಮ ನಿರ್ಧಾರ ತೆಗೆದುಕೊಳ್ಳುವುದಕ್ಕಾಗಿ ಜಿಲ್ಲೆಯ ಮುಖಂಡರ ಜೊತೆ ಪಕ್ಷದ ನಾಯಕರು ಚರ್ಚೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪಕ್ಷದ ಬಯಸಿದರೆ ಸ್ಪರ್ಧಿಸುತ್ತೇನೆ ಎಂದು ಅಖಿಲೇಶ್ ಹೇಳಿದ್ದರು. ಯೋಗಿ ಆದಿತ್ಯನಾಥ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸದೇ ಇದ್ದರೆ ಅಖಿಲೇಶ್ ಕೂಡಾ ಸ್ಪರ್ಧಿಸುವುದಿಲ್ಲ ಎಂದು ಪಕ್ಷದ ನಾಯಕರು ಹೇಳಿದ್ದರು.

ಗೋವಾ: ಎನ್‌ಸಿಪಿ–ಶಿವಸೇನಾ ಮೈತ್ರಿ

ಪಣಜಿ: ಗೋವಾ ವಿಧಾನಸಭೆ ಚುನಾವಣೆಗಾಗಿ ಎನ್‌ಸಿಪಿ ಮತ್ತು ಶಿವಸೇನಾ ಚುನಾವಣೋತ್ತರ ಮೈತ್ರಿ ಮಾಡಿಕೊಂಡಿವೆ. ಆದರೆ, ಮೂರು ಪಕ್ಷಗಳ ಮೈತ್ರಿ ಮಾತುಕತೆಯಿಂದ ಕಾಂಗ್ರೆಸ್ ಹಿಂದಕ್ಕೆ ಸರಿಯಿತು ಎಂದು ಈ ಎರಡೂ ಪಕ್ಷಗಳು ಆರೋಪಿಸಿವೆ. ಮಹಾರಾಷ್ಟ್ರದಲ್ಲಿ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಪಕ್ಷಗಳು ಸೇರಿಕೊಂಡು ಮಹಾವಿಕಾಸ ಅಘಾಡಿ (ಎಂವಿಎ) ಎಂಬ ಮೈತ್ರಿಕೂಟ ರಚಿಸಿ ಸರ್ಕಾರ ನಡೆಸುತ್ತಿವೆ.

'ಎಂವಿಎಯನ್ನು ಮಹಾರಾಷ್ಟ್ರದಿಂದ ಗೋವಾಕ್ಕೆ ವಿಸ್ತರಿಸಲು ನಾವು ಬಯಸಿದ್ದೆವು. ಇಲ್ಲಿ ಕಾಂಗ್ರೆಸ್ ಪಕ್ಷವು ಮುಖ್ಯ ಪಾತ್ರ ವಹಿಸಬಹುದಿತ್ತು. ನಾವು (ಸೇನಾ ಮತ್ತು ಎನ್‌ಸಿಪಿ) ಕೆಲವು ಕ್ಷೇತ್ರಗಳಲ್ಲಿ ಸ್ಪರ್ಧಿಸಬಹುದಿತ್ತು' ಎಂದು ಎನ್‌ಸಿಪಿ ಮುಖಂಡ ಪ್ರಫುಲ್ ಪಟೇಲ್ ಹೇಳಿದ್ದಾರೆ.

'ಕಾಂಗ್ರೆಸ್ ಜತೆಗೆ ಮಾತನಾಡಲು ನಾವು ಯತ್ನಿಸಿದ್ದೆವು. ಕುಳಿತು ಮಾತನಾಡೋಣ, ಈಗಿನ ಸರ್ಕಾರವನ್ನು ಎದುರಿಸಲು ಕಾರ್ಯತಂತ್ರ ರೂಪಿಸೋಣ ಎಂದಿದ್ದೆವು. ಶಿವಸೇನಾದ ಸಂಜಯ ರಾವುತ್ ಅವರೂ ಇಂತಹುದೇ ಮಾತು ಆಡಿದ್ದರು. ಆದರೆ, ಅವರು 'ಆಯಿತು' ಎಂದೂ ಹೇಳಲಿಲ್ಲ, 'ಬೇಡ' ಎಂದೂ ಹೇಳಲಿಲ್ಲ. ಅವರು ನಮಗೆ ಸಾಕಷ್ಟು ಕ್ಷೇತ್ರಗಳನ್ನು ಬಿಟ್ಟುಕೊಡಲಿಲ್ಲ' ಎಂದು ಪಟೇಲ್ ಹೇಳಿದ್ದಾರೆ.

'ಎನ್‌ಸಿಪಿ ಮತ್ತು ಸೇನಾ ಜತೆಗೆ ಸ್ಪರ್ಧಿಸಲಿವೆ. ಪ್ರತೀ ಪಕ್ಷದಿಂದ 10–12 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಿದ್ದೇವೆ. ಮುಂದಿನ 3–4 ದಿನಗಳಲ್ಲಿ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಲಿದೆ' ಎಂದು ಅವರು ತಿಳಿಸಿದ್ದಾರೆ.

ಗೋವಾ: ಅರವಿಂದ ಕೇಜ್ರಿವಾಲ್ ಅವರಿಂದ ಅಚ್ಚರಿಯ ಆಯ್ಕೆ

ಅಮಿತ್ ಪಾಲೇಕರ್ ಎಎಪಿ ಸಿ.ಎಂ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಗೋವಾ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಅಮಿತ್ ಪಾಲೇಕರ್ (ಎಡದಿಂದ ಎರಡನೆಯವರು) ಅವರ ಹೆಸರನ್ನು ಬುಧವಾರ ಘೋಷಿಸಲಾಯಿತು–ಪಿಟಿಐ ಚಿತ್ರ

ಪಣಜಿ (ಪಿಟಿಐ): ಗೋವಾ ವಿಧಾನಸಭಾ ಚುನಾವಣೆಗೆ ಸಜ್ಜಾಗಿರುವ ಆಮ್ ಆದ್ಮಿ ಪಕ್ಷವು (ಎಎಪಿ) ಮುಖ್ಯಮಂತ್ರಿ ಅಭ್ಯರ್ಥಿಯಾಗಿ ವಕೀಲ ಹಾಗೂ ರಾಜಕಾರಣಿ ಅಮಿತ್ ಪಾಲೇಕರ್ ಅವರ ಹೆಸರನ್ನು ಬುಧವಾರ ಘೋಷಿಸಿದೆ. 46 ವರ್ಷದ ಪಾಲೇಕರ್ ಅವರು ಕಳೆದ ಅಕ್ಟೋಬರ್‌ನಲ್ಲಿ ಎಎಪಿ ಸೇರ್ಪಡೆಯಾಗಿದ್ದರು. ಇವರನ್ನು ಸೇಂಟ್ ಕ್ರೂಸ್ ವಿಧಾನಸಭಾ ಕ್ಷೇತ್ರದಿಂದ ಪಕ್ಷ ಕಣಕ್ಕಿಳಿಸಲಿದೆ.

ಅಮಿತ್ ಪಾಲೇಕರ್ ಅವರ ಹೆಸರು ಪ್ರಕಟಿಸಿದ ಎಎಪಿ ಸಂಚಾಲಕ ಹಾಗೂ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, 'ಗೋವಾ ಜನರು ಬದಲಾವಣೆ ಬಯಸಿದ್ದಾರೆ ಎಂದಿದ್ದಾರೆ. 'ಎಎಪಿಗೆ ರಾಜ್ಯದಲ್ಲಿ ಭಾರಿ ಪ್ರತಿಕ್ರಿಯೆ ವ್ಯಕ್ತವಾಗಿದೆ. ದೆಹಲಿ ಮಾದರಿಯ ಆಡಳಿತದಿಂದ ಗೋವಾದ ಜನರು ಸಾಕಷ್ಟು ಪ್ರಭಾವಿತರಾಗಿದ್ದಾರೆ' ಎಂದರು.

ಈ ಬಾರಿ ಚುನಾವಣೆಯಲ್ಲಿ ರಾಜ್ಯದ ಹೊಸ ಮುಖಗಳಿಗೆ ಪಕ್ಷ ಆದ್ಯತೆ ನೀಡಿದೆ. ಪಾಲೇಕರ್ ಅವರು ಗೋವಾಕ್ಕಾಗಿ ತಮ್ಮ ಜೀವನವನ್ನೇ ಮುಡುಪಿಡಲು ಸಿದ್ಧವಾಗಿದ್ದಾರೆ ಎಂದು ಕೇಜ್ರಿವಾಲ್ ಹೇಳಿದ್ದಾರೆ. ಅಮಿತ್ ಪಾಲೇಕರ್ ಅವರು ಗೋವಾದ ಭಂಡಾರಿ ಸಮುದಾಯಕ್ಕೆ ಸೇರಿದ್ದಾರೆ. ಎಎಪಿ ಜಾತಿ ರಾಜಕಾರಣದಲ್ಲಿ ತೊಡಗಿದೆ ಎಂಬ ಆರೋಪವನ್ನು ಕೇಜ್ರಿವಾಲ್ ತಳ್ಳಿಹಾಕಿದ್ದಾರೆ. ಈವರೆಗೆ ರಾಜ್ಯದಲ್ಲಿ ಮಾಡಲಾದ ಜಾತಿ ರಾಜಕಾರಣವನ್ನು ತಮ್ಮ ಪಕ್ಷ ಬದಲಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ಅಮಿತ್ ಪಾಲೇಕರ್ ಯಾರು?

ಅಮಿತ್ ಪಾಲೇಕರ್ ಅವರು ರಾಜಕೀಯಕ್ಕೆ ಹೊಸಬರಾಗಿದ್ದು, ಆಮ್ ಆದ್ಮಿ ಪಕ್ಷವು ಇವರನ್ನು ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಘೋಷಿಸುವ ಮೂಲಕ ಅಚ್ಚರಿ ಮೂಡಿಸಿದೆ. ಪಾಲೇಕರ್ ಅವರು ಗೋವಾದ ಒಬಿಸಿ ವರ್ಗದ ಭಂಡಾರಿ ಸಮುದಾಯಕ್ಕೆ ಸೇರಿದವರು. ಗೋವಾದಲ್ಲಿ ಈ ಸಮುದಾಯಕ್ಕೆ ಸೇರಿದ ಶೇ 35ರಷ್ಟು ಜನರಿದ್ದಾರೆ.

ಹಳೆ ಗೋವಾದ ಯುನೆಸ್ಕೊ ಪಾರಂಪರಿಕ ಸ್ಥಳಗಳಲ್ಲಿ ಕಾನೂನು ಉಲ್ಲಂಘಿಸಿ ಕಟ್ಟಡ ನಿರ್ಮಾಣವನ್ನು ವಿರೋಧಿಸಿ ಪಾಲೇಕರ್ ಅವರು ಇತ್ತೀಚೆಗೆ ಉಪವಾಸ ಸತ್ಯಾಗ್ರಹ ನಡೆಸಿದ್ದರು. ಸೇವ್ ಓಲ್ಡ್ ಗೋವಾ ಆ್ಯಕ್ಷನ್ ಕಮಿಟಿ (ಎಸ್‌ಒಜಿಎಸಿ) ನಡೆಸಿದ್ದ ಪ್ರತಿಭಟನೆಯಲ್ಲಿ ಅವರು ಭಾಗಿಯಾಗಿದ್ದರು. ಐದು ದಿನಗಳವರೆಗೆ ಉಪವಾಸ ನಡೆಸಿದ್ದರು. ಈ ಸತ್ಯಾಗ್ರಹವನ್ನು ಕೇಜ್ರಿವಾಲ್ ಹೊಗಳಿದ್ದರು.

ಸಾಮಾಜಿಕ ಕಾರ್ಯಕರ್ತರಾಗಿ ಹಾಗೂ ತಮ್ಮ ಸಮುದಾಯದ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲೇಕರ್ ಹೆಸರು ಮಾಡಿದ್ದಾರೆ. ಇದನ್ನು ಗಮನಿಸಿದ್ದ ಕೇಜ್ರಿವಾಲ್, ಅವರನ್ನು ಪಕ್ಷಕ್ಕೆ ಬರಮಾಡಿಕೊಂಡಿದ್ದರು. ಇದೀಗ ರಾಜ್ಯದಲ್ಲಿ ಪಕ್ಷದ ಸಾರಥ್ಯವನ್ನು ನೀಡಿದ್ದಾರೆ. ರಾಜ್ಯದ 'ಪ್ರಾಮಾಣಿಕ ವ್ಯಕ್ತಿ'ಗೆ ಚುನಾವಣೆಯ ನೇತೃತ್ವ ವಹಿಸಲಾಗಿದೆ ಎಂದಿರುವ ಕೇಜ್ರಿವಾಲ್ ಅವರ ಮಾತುಗಳಲ್ಲಿ, ಭ್ರಷ್ಟಾಚಾರ ರಹಿತ ಹಾಗೂ ವಿವಾದ ರಹಿತ ರಾಜಕಾರಣಿಯನ್ನು ಪರಿಚಯಿಸುವ ಉದ್ದೇಶ ವ್ಯಕ್ತವಾಗಿದೆ. ಉತ್ತರ ಗೋವಾ ಹಾಗೂ ದಕ್ಷಿಣ ಗೋವಾಗಳೆರಡನ್ನೂ ಒಂದೇ ರೀತಿಯಲ್ಲಿ ನೋಡುವ ಪಾಲೇಕರ್ ಅವರ ವ್ಯಕ್ತಿತ್ವವನ್ನು ಪಕ್ಷ ಪರಿಗಣಿಸಿದೆ ಎನ್ನಲಾಗಿದೆ. ಇದೇ ಸಮುದಾಯದ ರವಿ ನಾಯಕ್ ಎಂಬುವರು ಮುಖ್ಯಮಂತ್ರಿಯಾಗಿದ್ದರು.

ಗೋವಾವನ್ನು ಭ್ರಷ್ಟಾಚಾರ ಮುಕ್ತ ಮಾಡುತ್ತೇನೆ. ರಾಜ್ಯದ ವೈಭವ ಮರಳಿ ಪಡೆಯಲು ಪಕ್ಷವು ಸಹಾಯ ಮಾಡುತ್ತದೆ. ನಾನು ಹೇಳಿದ ಪ್ರತಿ ಮಾತನ್ನೂ ಉಳಿಸಿಕೊಳ್ಳುತ್ತೇನೆ.
ಅಮಿತ್ ಪಾಲೇಕರ್
ಎಎಪಿ ಮುಖ್ಯಮಂತ್ರಿ ಅಭ್ಯರ್ಥಿ

ಮುಲಾಯಂ ಸೊಸೆ ಅಪರ್ಣಾ ಬಿಜೆಪಿ ಸೇರ್ಪಡೆ

ಪ್ರಜಾವಾಣಿ ವಾರ್ತೆ



ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಅಪರ್ಣಾ ಅವರು ಬಿಜೆಪಿ ಕೇಂದ್ರ ಕಚೇರಿಯಲ್ಲಿ ಬುಧವಾರ ಭೇಟಿಯಾದರು ಪಿಟಿಐ ಚಿತ್ರ

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ಸಂಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ಸೊಸೆ ಅಪರ್ಣಾ ಸಿಂಗ್ ಅವರು ಬಿಜೆಪಿಗೆ ಬುಧ ವಾರ ಸೇರ್ಪಡೆ ಆದರು. ಹಲವು ಸಚಿವರು, ಮುಖಂಡರು ಬಿಜೆಪಿ ತೊರೆದು ಎಸ್‌ಪಿ ಸೇರುತ್ತಿರುವ ಸಂದರ್ಭದಲ್ಲಿಯೇ ಅಪರ್ಣಾ ಅವರು ಬಿಜೆಪಿ ಸೇರಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್, 'ಎಸ್‌ಪಿ ಸಿದ್ಧಾಂತವನ್ನು ಬಿಜೆಪಿಗೆ ಅಪರ್ಣಾ ಒಯ್ಯುತ್ತಾರೆ ಎಂಬ ವಿಶ್ವಾಸ ಇದೆ. ನಾವು ಯಾರಿಗೆ ಟಿಕೆಟ್ ನೀಡಲ್ಲವೂ ಅವರಿಗೆ ಬಿಜೆಪಿ ಟಿಕೆಟ್ ನೀಡುತ್ತಿರುವುದನ್ನು ನೋಡಲು ಸಂತೋಷವಾಗುತ್ತಿದೆ' ಎಂದಿದ್ದಾರೆ.

ಮುಲಾಯಂ ಅವರಿಗೆ ಎರಡನೇ ಪತ್ನಿಯಲ್ಲಿ ಜನಿಸಿದ ಮಗ ಪ್ರತೀಕ್ ಅವರ ಹೆಂಡತಿ ಅಪರ್ಣಾ. ಮೂಲಗಳ ಪ್ರಕಾರ, ಅಪರ್ಣಾ ಅವರು ಲಖನೌ ಕಂಟೋನ್ಮೆಂಟ್ ಕ್ಷೇತ್ರದಿಂದ ಎಸ್‌ಪಿ ಟಿಕೆಟ್‌ನಲ್ಲಿ ಸ್ಪರ್ಧಿಸಲು ಬಯಸಿದ್ದರು. ಆದರೆ ಚುನಾವಣೆಯಲ್ಲಿ ಅಪರ್ಣಾ ಗೆಲ್ಲುವ ಸಾಧ್ಯತೆ ಇಲ್ಲ ಎಂಬ ಕಾರಣ ಮುಂದೊಡ್ಡಿ ಅವರಿಗೆ ಟಿಕೆಟ್ ನೀಡಲು ಅಖಿಲೇಶ್ ನಿರಾಕರಿಸಿದ್ದರು.

ಅಪರ್ಣಾ ಅವರಿಗೆ ಕಂಟೋನ್ಮೆಂಟ್ ಕ್ಷೇತ್ರದಿಂದ ಟಿಕೆಟ್ ನೀಡಲಾಗುವುದು ಎಂದು ಬಿಜೆಪಿ ಮೂಲಗಳು ತಿಳಿಸಿವೆ.

2017ರ ವಿಧಾನಸಭೆ ಚುನಾವಣೆಯಲ್ಲಿ ಅಪರ್ಣಾ ಲಖನೌ ಕಂಟೋನ್ಮೆಂಟ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆದರೆ ಬಿಜೆಪಿ ಸ್ಪರ್ಧಿ ರೀಟಾ ಬಹುಗುಣ ಜೋಶಿ ಅವರ ಎದುರು ಸೋತಿದ್ದರು. ಈಗ, ಪ್ರಯಾಗ್‌ರಾಜ್‌ನ ಸಂಸದರಾಗಿರುವ ರೀಟಾ ಬಹುಗಣ ಜೋಶಿ ಅವರು ತಮ್ಮ ಮಗ ಮಾಯಾಂಕ್ ಜೋಶಿ ಅವರಿಗೆ ಲಖನೌ ಕಂಟೋನ್ಮೆಂಟ್ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಪಡೆದುಕೊಳ್ಳುವ ಪ್ರಯತ್ನದಲ್ಲಿದ್ದಾರೆ.

ಅಪರ್ಣಾ ಅವರ ಸೇರ್ಪಡೆಯಿಂದ ಬಿಜೆಪಿಗೆ ಲಾಭವಿಲ್ಲ ಎಂದು ಎಸ್‌ಪಿ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ. 'ಅಪರ್ಣಾ ಸೇರ್ಪಡೆಯಿಂದ ಎಸ್‌ಪಿಗೆ ಮುಖಭಂಗ ಆಗಿದೆ ಎಂಬುದನ್ನು ಹೊರತುಪಡಿಸಿದರೆ ಈ ಬೆಳವಣಿಗೆಗೆ ಬೇರೆ ಯಾವ ರೀತಿಯ ರಾಜಕೀಯ ಮಹತ್ವವೂ ಇಲ್ಲ. ಅವರಿಗೆ ಜನರ ಬೆಂಬಲ ಇಲ್ಲ. ಹೀಗಾಗಿ ಅವರಿಂದ ಬಿಜೆಪಿಗೆ ಯಾವ ಲಾಭವೂ ಇಲ್ಲ' ಎಂದು ಎಸ್‌ಪಿ ಮುಖಂಡರು ಹೇಳಿದ್ದಾರೆ.

ಈ ಹಿಂದೆಯೂ ಅಪರ್ಣಾ ಮತ್ತು ಅಖಿಲೇಶ್ ಯಾದವ್ ನಡುವೆ ಹಲವಾರು ವಿಷಯಗಳಿಗೆ ಸಂಬಂಧಿಸಿ ಬಿನ್ನಾಭಿಪ್ರಾಯಗಳು ಎದ್ದಿದ್ದವು. ಅಪರ್ಣಾ ಅವರು ಹಲವು ಬಾರಿ ಪ್ರಧಾನಿ ನರೇಂದ್ರ ಮೋದಿ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಹೊಗಳಿದ್ದರು. ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರಕ್ಕೆ ದೇಣಿಗೆಯನ್ನೂ ನೀಡಿ ಸುದ್ದಿಯಾಗಿದ್ದರು.

ಮುಲಾಯಂ ಸಿಂಗ್ ಯಾದವ್ ಮತ್ತು ಅವರ ಸಹೋದರ, ಎಸ್‌ಪಿ ಸಹ ಸಂಸ್ಥಾಪಕ ಶಿವ್‌ಪಾಲ್ ಸಿಂಗ್ ಯಾದವ್ ಅವರು ಬಿಜೆಪಿ ಸೇರದಂತೆ ಅಪರ್ಣಾ ಅವರ ಮನವೊಲಿಸಲು ಪ್ರಯತ್ನಿಸಿದರು. ಆದರೆ ವಿಫಲರಾದರು ಎಂದು ಮೂಲಗಳು ತಿಳಿಸಿವೆ.

ಅಪರ್ಣಾ ಅವರನ್ನು ಲಖನೌ ಕಂಟೋನ್ಮೆಂಟ್ ಕ್ಷೇತ್ರದಿಂದ ಸ್ಪರ್ಧೆಗಿಳಿಸುವುದು ಬಿಜೆಪಿಗೆ ಅಷ್ಟು ಸುಲಭವಿಲ್ಲ. ಈ ನಡೆಯಿಂದ ರೀಟಾ ಬಹುಗಣ ಜೋಶಿ ಅವರನ್ನು ಎದುರು ಹಾಕಿಕೊಂಡಂತಾಗುತ್ತದೆ ಎಂದು ಬಿಜೆಪಿಯ ಮೂಲಗಳು ತಿಳಿಸಿವೆ.

ಚುನಾವಣಾ ಕಣದಲ್ಲಿ...

- **ನೊಯ್ಡಾದಿಂದ ಮಹಿಳೆ ಸ್ಪರ್ಧೆ:** 2017ರಲ್ಲಿ ಮಹಿಳಾ ಅಭ್ಯರ್ಥಿಯೇ ಇಲ್ಲದಿದ್ದ ಉತ್ತರ ಪ್ರದೇಶದ ನೊಯ್ಡಾ ಎ ಕ್ಷೇತ್ರದಿಂದ ಕಾಂಗ್ರೆಸ್‌ನ ಅಭ್ಯರ್ಥಿ ಪಂಖುರಿ ಪಾಠಕ್ ಅವರು ಬುಧವಾರ ನಾಮಪತ್ರ ಸಲ್ಲಿಸಿದ್ದಾರೆ. ಕಾನೂನು ಸಲಹೆಗಾರ್ತಿ ಆಗಿರುವ ಪಾಠಕ್ (29) ಅವರು ಈ ಹಿಂದೆ ಎಸ್‌ಪಿಯಲ್ಲಿ ಇದ್ದರು. ಅವರು 2018ರಲ್ಲಿ ಕಾಂಗ್ರೆಸ್ ಸೇರಿದ್ದರು. ಈಗ ಅವರು ಉತ್ತರ ಪ್ರದೇಶ ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ವಿಭಾಗದ ಉಪಾಧ್ಯಕ್ಷರಾಗಿದ್ದಾರೆ. ಉತ್ತರ ಪ್ರದೇಶ ಚುನಾವಣೆಯಲ್ಲಿ ಶೇ 40ರಷ್ಟು ಕ್ಷೇತ್ರಗಳಲ್ಲಿ ಮಹಿಳೆಯರನ್ನು ಕಣಕ್ಕೆ ಇಳಿಸಲು ಕಾಂಗ್ರೆಸ್ ನಿರ್ಧರಿಸಿದೆ
- **ಮೈತ್ರಿ ಅಂತಿಮ:** ಉತ್ತರ ಪ್ರದೇಶದಲ್ಲಿ ಅಪ್ನಾ ದಳ ಮತ್ತು ನಿಶಾದ್ ಪಾರ್ಟಿಯ ಜತೆಗಿನ ಮೈತ್ರಿಯನ್ನು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಬುಧವಾರ ಪ್ರಕಟಿಸಿದ್ದಾರೆ. ಎನ್‌ಡಿಎಯ ಭಾಗವಾಗಿರುವ ಮೂರೂ ಪಕ್ಷಗಳು ವಿಧಾನಸಭೆ ಚುನಾವಣೆಯಲ್ಲಿ ಜತೆಯಾಗಿ ಹೋರಾಡಲಿವೆ ಎಂದು ನಡ್ಡಾ ಹೇಳಿದ್ದಾರೆ. ಅಪ್ನಾ ದಳದ ಅನುಪ್ರಿಯಾ ಪಟೇಲ್ ಮತ್ತು ನಿಶಾದ್ ಪಾರ್ಟಿಯ ಸಂಜಯ್ ನಿಶಾದ್ ಅವರು ಪ್ರಧಾನಿ ನರೇಂದ್ರ ಮೋದಿಯನ್ನು ಹೊಗಳಿದ್ದಾರೆ. ಕೇಂದ್ರ ಸರ್ಕಾರವು ಒಬಿಸಿ ಹಿತಾಸಕ್ತಿಗಳ ಪರವಾಗಿ ಕೆಲಸ ಮಾಡುತ್ತಿದೆ ಎಂದಿದ್ದಾರೆ. ಮೈತ್ರಿಕೂಟದ ಕ್ಷೇತ್ರ ಹಂಚಿಕೆ ಇನ್ನಷ್ಟೇ ಆಗಬೇಕಿದೆ
- **ರಾಜೀನಾಮೆ:** ಉತ್ತರ ಪ್ರದೇಶ ವಿಧಾನಸಭೆಯ ಉಪ ಸ್ಪೀಕರ್ ನಿತಿನ್ ಅಗರ್‌ವಾಲ್ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಸಮಾಜವಾದಿ ಪಕ್ಷದಿಂದ ಹರ್‌ದೋಯಿ ಕ್ಷೇತ್ರದಿಂದ ಗೆದ್ದಿದ್ದ ಅವರು ಬಿಜೆಪಿ ಬೆಂಬಲದಿಂದಾಗಿ ಉಪ ಸ್ಪೀಕರ್ ಆಗಿ ಆಯ್ಕೆಯಾಗಿದ್ದರು. ಈಗ ಅವರು ಸಮಾಜವಾದಿ ಪಕ್ಷದ ಸದಸ್ಯತ್ವಕ್ಕೂ ರಾಜೀನಾಮೆ ನೀಡಿದ್ದಾರೆ. ಈ ಬಾರಿ ಅವರು ಹರ್‌ದೋಯಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲಿದ್ದಾರೆ ಎನ್ನಲಾಗಿದೆ
- **'ಕಾಸಿಗಾಗಿ ಸುದ್ದಿ ಬೇಡ':** ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ 'ಕಾಸಿಗಾಗಿ ಸುದ್ದಿ' ಪ್ರಕಟಿಸಬಾರದು ಎಂದು ಭಾರತೀಯ ಪ್ರೆಸ್ ಕೌನ್ಸಿಲ್, ಮುದ್ರಣ ಮಾಧ್ಯಮಗಳಿಗೆ ಸೂಚನೆ ನೀಡಿದೆ. ಪತ್ರಿಕಾ ಸಂಹಿತೆಯನ್ನು ಪಾಲಿಸಬೇಕು ಎಂದೂ ಹೇಳಿದೆ. ಜನ ಪ್ರಾತಿನಿಧ್ಯ ಕಾಯ್ದೆಯ ಅಂಶಗಳನ್ನು ಉಲ್ಲಂಘಿಸಿ ಯಾವುದೇ ಸುದ್ದಿ ಅಥವಾ ಲೇಖನ ಪ್ರಕಟಿಸಬಾರದು ಎಂದೂ ಹೇಳಿದೆ (ಆಧಾರ: ಪಿಟಿಐ)

ಪ್ರಧಾನಿ ಮೌನದಿಂದ ಚೀನಾ ಸೇನೆ ಅತಿಕ್ರಮಣ ಹೆಚ್ಚುತ್ತಿದೆ: ರಾಹುಲ್

ನವದೆಹಲಿ(ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಮೌನದಿಂದ ಪಕ್ಕದ ಚೀನಾದ ಗಡಿ ಆಕ್ರಮಣ ಹೆಚ್ಚುತ್ತಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಪ್ಯಾನ್‌ಗಾಂಗ್ ಸರೋವರದ ಬಳಿ ಭಾರತದ ಜಾಗದಲ್ಲಿ ಚೀನಾ ಸೇತುವೆ ನಿರ್ಮಿಸುತ್ತಿದೆ ಎನ್ನಲಾದ ಉಪಗ್ರಹ ಆಧಾರಿತ ವಿಡಿಯೊ ಒಂದನ್ನು ಬುಧವಾರ ಟ್ವಿಟರ್‌ನಲ್ಲಿ ಹಂಚಿಕೊಂಡು ಅವರು ಈ ಆರೋಪ ಮಾಡಿದ್ದಾರೆ.

'ಚೀನಾ ನಮ್ಮ ದೇಶದಲ್ಲಿ ಸೇತುವೆಯನ್ನು ನಿರ್ಮಿಸುತ್ತಿದೆ. ಪ್ರಧಾನಿಯವರ ಮೌನದಿಂದಾಗಿ ಪಿಎಲ್‌ಎ (ಚೀನಾ ಸೇನೆ) ಉತ್ಸಾಹ ಹೆಚ್ಚುತ್ತಿದೆ. ಈ ಸೇತುವೆಯನ್ನು ಉದ್ಘಾಟನೆ ಮಾಡಲು ನಮ್ಮ ಪ್ರಧಾನಿ ಹೋದರೂ ಹೋಗಬಹುದು ಎಂಬ ಭಯವಿದೆ' ಎಂದು ರಾಹುಲ್ ಗಾಂಧಿ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಲಡಾಕ್ ಬಳಿಯ ಪ್ಯಾನ್‌ಗಾಂಗ್ ಸರೋವರದ ದಕ್ಷಿಣ ತೀರದಿಂದ ಉತ್ತರ ತೀರಕ್ಕೆ ಸೇತುವೆ ನಿರ್ಮಾಣವಾಗುತ್ತಿರುವ ಹಾಗೂ ಅಲ್ಲಿ ಬೃಹತ್ ಕ್ರೇನ್‌ಗಳು ಬೀಡು ಬಿಟ್ಟಿರುವ ದೃಶ್ಯಗಳನ್ನು ವಿಡಿಯೊದಲ್ಲಿ ನೋಡಬಹುದಾಗಿದೆ.

ಚನ್ನಿ ಸಂಬಂಧಿಗೆ ಸೇರಿದ ₹8 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮರಳು ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ವಶಪಡಿಸಿಕೊಂಡಿದ್ದ ₹10 ಕೋಟಿ ಪೈಕಿ ₹8 ಕೋಟಿ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಸಂಬಂಧಿಗೆ ಸೇರಿದ್ದು ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ. ಉಳಿದ ₹ 2 ಕೋಟಿ ಹಣವನ್ನು ಸಂದೀಪ್ ಕುಮಾರ್ ಎಂಬುವರಿಂದ ಜಪ್ತಿ ಮಾಡಲಾಗಿದೆ. ಇತರರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲು ಇ.ಡಿ. ಸಮನ್ಸ್ ಜಾರಿಗೊಳಿಸುವ ಸಾಧ್ಯತೆಯಿದೆ.

ಚನ್ನಿ ಅವರ ಸಂಬಂಧಿ ಭೂಪೀಂದರ್ ಸಿಂಗ್ ಹನಿ ಅವರಿಗೆ ಸೇರಿದ ಜಾಗಗಳು ಸೇರಿದಂತೆ, ಚಂಡೀಗಡ, ಮೊಹಾಲಿ, ಲುಧಿಯಾನ ಹಾಗೂ ಪಠಾಣ್‌ಕೋಟ್‌ನ 10ಕ್ಕೂ ಹೆಚ್ಚು ಸ್ಥಳಗಳಲ್ಲಿ ಇ.ಡಿ. ಅಧಿಕಾರಿಗಳು ಮಂಗಳವಾರ ಶೋಧ ನಡೆಸಿದ್ದರು. ಈ ಶೋಧ ಕಾರ್ಯಾಚರಣೆಯು ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿತ್ತು. ದೇಶದ ಏಕೈಕ ದಲಿತ ಮುಖ್ಯಮಂತ್ರಿಯನ್ನು ಗುರಿಯಾಗಿಸಿ ದಾಳಿ ನಡೆಸಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು.

ಅಕ್ರಮ ಮರಳು ಗಣಿಗಾರಿಕೆಗೆ ಸಂಬಂಧಿಸಿದಂತೆ ಪಂಜಾಬ್ ಪೊಲೀಸರು 2018ರಲ್ಲಿ ಎಫ್‌ಐಆರ್ ದಾಖಲಿಸಿದ ನಂತರ ಇ.ಡಿ. ಶೋಧ ಕಾರ್ಯಾಚರಣೆ ನಡೆದಿದೆ. ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಕುದ್ರತ್‌ದೀಪ್ ಸಿಂಗ್ ಜೊತೆ ಹನಿ ಅವರ ನಂಟಿನ ಕುರಿತು ಸಂಸ್ಥೆ ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಿಂಗ್ ಮತ್ತು ಹನಿ ವ್ಯಾಪಾರದಲ್ಲಿ ಪಾಲುದಾರರು ಎಂದು ಅವರು ಹೇಳಿದ್ದಾರೆ. ಯಾವುದೇ ತಪ್ಪು ಮಾಡಿಲ್ಲ ಎಂದು ಮುಖ್ಯಮಂತ್ರಿ ಚನ್ನಿ ಮತ್ತು ಹನಿ ಇಬ್ಬರೂ ಸ್ಪಷ್ಟಪಡಿಸಿದ್ದಾರೆ.

ಗಣಿಗಾರಿಕೆಗೆ ಉದ್ದೇಶಿಸಿದ್ದ ಜಾಗಗಳನ್ನು ಬಿಟ್ಟು ಇತರೆಡೆ ಮರಳು ಗಣಿಗಾರಿಕೆ ನಡೆಸಲಾಗಿದ್ದು, ಇದರಲ್ಲಿ ತೊಡಗಿರುವ ಮಾಫಿಯಾದವರು ಹಣವನ್ನು ಬೇನಾಮಿ ಖಾತೆಗಳಿಗೆ ವರ್ಗಾಯಿಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇವಿಎಂ ಬಳಕೆ ಪ್ರಶ್ನಿಸಿ ಪಿಐಎಲ್: ವಿಚಾರಣೆಗೆ 'ಸುಪ್ರೀಂ' ಸಮ್ಮತಿ

ಇವಿಎಂ

ನವದೆಹಲಿ (ಪಿಟಿಐ): ಚುನಾವಣೆಗಳಲ್ಲಿ ಮತಪತ್ರಗಳ ಬದಲಾಗಿ ವಿದ್ಯುನ್ಮಾನ ಮತ ಯಂತ್ರಗಳ (ಇವಿಎಂ) ಬಳಕೆಗೆ ಅವಕಾಶ ನೀಡಿರುವ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ನಿಯಮದ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಪಿಐಎಲ್ ಅನ್ನು ವಿಚಾರಣೆಗೆ ನಿಗದಿಪಡಿಸಲು ಸುಪ್ರೀಂಕೋರ್ಟ್ ಬುಧವಾರ ಒಪ್ಪಿಗೆ ನೀಡಿತು.

ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ನ್ಯಾಯಪೀಠಕ್ಕೆ ವಕೀಲ ಎಂ.ಎಲ್.ಶರ್ಮಾ ಎಂಬುವವರು ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

'ಇವಿಎಂಗಳ ಬಳಕೆಗೆ ಪ್ರಜಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 61ಎ ಅವಕಾಶ ಕಲ್ಪಿಸುತ್ತದೆ. ಆದರೆ, ಕಾಯ್ದೆಯ ಈ ನಿಯಮವನ್ನು ಸಂಸತ್‌ನಲ್ಲಿ ಅಂಗೀಕರಿಸಿಲ್ಲ. ಹೀಗಾಗಿ ಈ ನಿಯಮವನ್ನು ಜಾರಿಗೊಳಿಸಬಾರದು' ಎಂದು ಶರ್ಮಾ ಅವರು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

ನುಡಿ–ಕಿಡಿ



ಉತ್ತರ ಪ್ರದೇಶದ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಯೋಗಿ ಆದಿತ್ಯನಾಥ ಅವರ ಆಳ್ವಿಕೆಯಲ್ಲಿ ಸುರಕ್ಷಿತರಾಗಿದ್ದಾರೆ. ಸಮಾಜವಾದಿ ಪಕ್ಷದ ಸ್ಥಾಪಕ ಮುಲಾಯಂ ಸಿಂಗ್ ಸೊಸೆ ಅಪರ್ಣಾ ಯಾದವ್ ಮತ್ತು ಸ್ವಾಮಿ ಪ್ರಸಾದ್ ಮೌರ್ಯ ಅವರ ಮಗಳು ಸಂಘಮಿತ್ರ ಅವರು ತಾವು ಬಿಜೆಪಿಯಲ್ಲಿ ಇದ್ದರೆ ಸುರಕ್ಷಿತ ಎಂದು ನಂಬಿರುವುದೇ ಅದಕ್ಕೆ ಸಾಕ್ಷಿ

ಅನುರಾಗ್ ಠಾಕೂರ್, ಕೇಂದ್ರ ಸಚಿವ

ರೈತರ ಆದಾಯ ದ್ವಿಗುಣದ ಬಗ್ಗೆ ಮಾತನಾಡಲು ಏನಿದೆ? ಬಿಜೆಪಿ ಸರ್ಕಾರವು ಹೆಚ್ಚುವರಿ ತೆರಿಗೆ ಹೊರೆಯನ್ನು ಅವರ ಮೇಲೆ ಹೇರಿದೆ. ಇದೇ ಮೊದಲ ಬಾರಿಗೆ ಕೃಷಿಗೆ ಬಳಸುವ ಸಲಕರಣೆಗಳ ಮೇಲೆ ತೆರಿಗೆ ಹಾಕಲಾಗಿದೆ. ಆದಾಯ ದುಪ್ಪಟ್ಟು ಆಗಲೇ ಇಲ್ಲ. ಬದಲಿಗೆ ಅವರ ಸಂಕಷ್ಟಗಳು ನೂರು ಪಟ್ಟು ಹೆಚ್ಚಾದವು

ರಣದೀಪ್ ಸುರ್ಜೇವಾಲಾ, ಕಾಂಗ್ರೆಸ್‌ನ ಮುಖ್ಯ ವಕ್ತಾರ

ಅಭಿವೃದ್ಧಿ, ಉತ್ತಮ ಆಳ್ವಿಕೆ, ರಾಷ್ಟ್ರೀಯತೆಯನ್ನು ನಮ್ಮ ಕಾರ್ಯಸೂಚಿ ಮಾಡಿಕೊಂಡಿದ್ದೆವು. ಈ ಹಿಂದೆ ಇದ್ದ ವಂಶಾಡಳಿತವು ಸ್ವಜನ ಪಕ್ಷಪಾತ ಮತ್ತು ರಾಜ್ಯದ ಬಡವರ, ರೈತರ ಮತ್ತು ಯುವ ಜನರ ಶೋಷಣೆಗೆ ಕಾರಣವಾಗಿತ್ತು. ಇದು ಅಸುರಕ್ಷತೆಯ ವಾತಾವರಣ ಸೃಷ್ಟಿಸಿತ್ತು

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

ಮರಳು ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ನನ್ನನ್ನು ಸಿಲುಕಿಸುವ ಪ್ರಯತ್ನ ನಡೆದಿದೆ. ಪ್ರಧಾನಿಯವರು ಹಿಂದಿರುಗಿದ್ದರಲ್ಲಿ ನನ್ನ ತಪ್ಪು ಏನಿದೆ? (ಪ್ರಧಾನಿ ನರೇಂದ್ರ ಮೋದಿ ಅವರು ಭದ್ರತಾ ಲೋಪದ ಕಾರಣ ಕಾರ್ಯಕ್ರಮದಲ್ಲಿ ಭಾಗವಹಿಸದೆ ಕೆಲ ದಿನಗಳ ಹಿಂದೆ ಹಿಂದಿರುಗಿದ್ದರು) ನನ್ನ ಮೇಲೆ ಪ್ರತೀಕಾರ ಏಕೆ?

ಚರಣ್‌ಜಿತ್ ಸಿಂಗ್ ಚನ್ನಿ, ಪಂಜಾಬ್ ಮುಖ್ಯಮಂತ್ರಿ

5ಜಿ ವಿವಾದ: ಅಮೆರಿಕಕ್ಕೆ ಹಲವು ವಿಮಾನಗಳ ಯಾನ ರದ್ದು

ದುಬೈ (ಎಪಿ): ಮೊಬೈಲ್‌ಗಳಲ್ಲಿ ಬಳಸುವ 5ಜಿ ಸೇವೆಯಿಂದ ಅಮೆರಿಕದ ವಿಮಾನ ನಿಲ್ದಾಣಗಳ ವ್ಯಾಪ್ತಿಯಲ್ಲಿ ವಿಮಾನಗಳ ತಂತ್ರಜ್ಞಾನಕ್ಕೆ ತೊಡಕಾಗಬಹುದು ಎಂಬ ಭೀತಿಯ ಹಿನ್ನೆಲೆಯಲ್ಲಿ ಅಮೆರಿಕಕ್ಕೆ ತೆರಳಬೇಕಾದ ಹಲವು ವಿಮಾನ ಸೇವೆಗಳನ್ನು ಬುಧವಾರ ರದ್ದುಪಡಿಸಲಾಗಿದೆ ಇಲ್ಲವೇ ಬದಲಿ ವಿಮಾನಗಳನ್ನು ಕಳುಹಿಸಿಕೊಡಲಾಗಿದೆ.

ಅಮೆರಿಕದ ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ 5ಜಿ ತರಂಗಾಂತರ ಬಳಸುತ್ತಿರುವ ವಿಮಾನನಿಲ್ದಾಣಗಳಿಗೆ ತೆರಳುವುದಕ್ಕೆ ಹಲವು ವಿಮಾನಗಳಿಗೆ ಅನುಮತಿ ನೀಡಿದೆ. ಆದರೆ ಬೋಯಿಂಗ್ 777 ವಿಮಾನಗಳು ಈ ಪಟ್ಟಿಯಲ್ಲಿ ಇಲ್ಲ. ಇದುವೇ ಸಮಸ್ಯೆಯ ಮೂಲವಾಗಿದ್ದು, ಹೀಗಾಗಿ ಎಮಿರೇಟ್ಸ್ ಸಂಸ್ಥೆಗೆ ಬಹಳ ದೊಡ್ಡ ಕಷ್ಟ ಎದುರಾಗಿದೆ. ಎಮಿರೇಟ್ಸ್ ಸಂಸ್ಥೆ ಹೆಚ್ಚಾಗಿ ಬೋಯಿಂಗ್ 777 ವಿಮಾನವನ್ನೇ ಬಳಸುತ್ತಿರುವುದರಿಂದ ವಿಮಾನಯಾನ ಸೇವೆಗೆ ಧಕ್ಕೆ ಉಂಟಾಗುವಂತಾಗಿದೆ.

ಬಿಪಿನ್ ರಾವತ್ ಸಹೋದರ ಬಿಜೆಪಿಗೆ ಸೇರ್ಪಡೆ

ನವದೆಹಲಿ (ಪಿಟಿಐ): ಇತ್ತೀಚೆಗೆ ಹೆಲಿಕಾಪ್ಟರ್ ಅಪಘಾತದಲ್ಲಿ ನಿಧನರಾದ ಸೇನಾಪಡೆಗಳ ಮುಖ್ಯಸ್ಥರಾಗಿದ್ದ ಜನರಲ್ ಬಿಪಿನ್ ರಾವತ್ ಅವರ ಸಹೋದರ ವಿಜಯ್ ರಾವತ್ ಅವರು ಬುಧವಾರ ಬಿಜೆಪಿ ಪಕ್ಷವನ್ನು ಸೇರಿದ್ದಾರೆ.

ಉತ್ತರಾಖಂಡದಲ್ಲಿ ಬಿಜೆಪಿ ಅವರನ್ನು ಕಣಕ್ಕಿಳಿಸಬಹುದು ಎಂದು ಮೂಲಗಳು ತಿಳಿಸಿವೆ.

ಕರ್ನಲ್ ಆಗಿ ಸೇನೆಯಿಂದ ನಿವೃತ್ತರಾಗಿರುವ ವಿಜಯ್ ರಾವತ್ ಅವರು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ರಾಜ್ಯಸಭಾ ಸಂಸದ ಅನಿಲ್ ಬಲುನಿ ಅವರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು.

ಮಾಜಿ ಸೇನಾಧಿಕಾರಿಯೂ ಆಗಿರುವ ತಮ್ಮ ತಂದೆ ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದರು ಎಂದಿರುವ ರಾವತ್, ಪಕ್ಷಕ್ಕಾಗಿ ಕೆಲಸ ಮಾಡುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರನ್ನು ವಿಶಿಷ್ಟವಾದ ದೃಷ್ಟಿಕೋನ ಮತ್ತು ಮನಸ್ಥಿತಿಯನ್ನು ಹೊಂದಿರುವ ವ್ಯಕ್ತಿ ಎಂದು ಕೊಂಡಾಡಿದ್ದಾರೆ.

ಅವರು ಚೌಕಟ್ಟಿನ ಹೊರಗೆ ಯೋಚಿಸುತ್ತಾರೆ. ಅವರ ಎಲ್ಲಾ ಪ್ರಯತ್ನಗಳು ದೇಶವನ್ನು ಸುಧಾರಣೆಯ ಕಡೆಗೆ ಕೊಂಡೊಯ್ಯುತ್ತವೆ ಎಂದು ರಾವತ್ ಹೇಳಿದರು.

ವಿಜಯ್ ರಾವತ್ ಅವರನ್ನು ಪಕ್ಷಕ್ಕೆ ಸ್ವಾಗತಿಸಿದ ಧಾಮಿ, ದಿವಂಗತ ಸಿಡಿಎಸ್ ಬಿಪಿನ್ ರಾವತ್ ಅವರು ನಿವೃತ್ತಿಯ ನಂತರ ರಾಜ್ಯಕ್ಕಾಗಿ ಕೆಲಸ ಮಾಡಲು ಬಯಸಿದ್ದರು. ಅವರ ಕಿರಿಯ ಸಹೋದರ ಅವರ ಆಶಯವನ್ನು ಪೂರೈಸುತ್ತಾರೆ ಎಂದು ಅವರು ಹೇಳಿದರು.

ವಿಜಯ್ ರಾವತ್ ಮತ್ತು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ – ಪಿಟಿಐ ಚಿತ್ರ

ವಕೀಲರು ವರ್ಚುವಲ್ ವಿಚಾರಣೆಗೆ ಮೊಬೈಲ್ ಬಳಸಬಹುದು: ಸಿಜೆಐ

ನವದೆಹಲಿ: ಲ್ಯಾಪ್‌ಟಾಪ್ ಅಥವಾ ಕಂಪ್ಯೂಟರ್ ಇಲ್ಲದ ವಕೀಲರು ವರ್ಚುವಲ್ ವಿಚಾರಣೆಯ ವೇಳೆ ಮೊಬೈಲ್ ಫೋನ್ ಬಳಸಬಹುದು ಎಂದು ಮುಖ್ಯ ನ್ಯಾಯಮೂರ್ತಿ ಎನ್. ವಿ. ರಮಣ ಅವರು ಹೇಳಿದ್ದಾರೆ.

ಆದರೆ ಮೊಬೈಲ್ ಫೋನ್ ಬಳಸುವುದಿದ್ದಲ್ಲಿ, ಸೂಕ್ತವಾದ ಸ್ಥಳದಲ್ಲಿ ಇರಿಸಿ, ವಕೀಲರ ಮುಖ ಸ್ಪಷ್ಟವಾಗಿ ಕಾಣಿಸುವಂತಿರಬೇಕು ಮತ್ತು ಧ್ವನಿ ಸ್ಪಷ್ಟವಾಗಿರಬೇಕು ಎಂದು ಸಿಜೆಐ ಹೇಳಿದ್ದಾರೆ.

ಆನ್‌ಲೈನ್ ಮೂಲಕ ನಡೆಯುವ ವಿಚಾರಣೆಯ ವೇಳೆ ಹಲವು ವಕೀಲರು ಸರಿಯಾಗಿ ಮೊಬೈಲ್ ಬಳಸುತ್ತಿಲ್ಲ ಮತ್ತು ವಿಚಾರಣೆಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ಮುಖ್ಯ ನ್ಯಾಯಮೂರ್ತಿ ಅವರನ್ನು ಒಳಗೊಂಡಿದ್ದ ಪೀಠ ಅಸಮಾಧಾನ ವ್ಯಕ್ತಪಡಿಸಿತ್ತು.

ಕೋವಿಡ್ ನಿರ್ಬಂಧಗಳಿರುವುದರಿಂದ ಸುಪ್ರೀಂಕೋರ್ಟ್‌ನಲ್ಲಿ 2020ರ ಮಾರ್ಚ್‌ನಿಂದ ವರ್ಚುವಲ್ ವಿಚಾರಣೆಗಳನ್ನು ನಡೆಸಲಾಗುತ್ತಿದೆ.

ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳಿಗೆ ಅಟ್ಲಾಸ್ ಎಂಬ ಆಪ್ತಮಿತ್ರ

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳಿಗೆ ಪುಸ್ತಕಗಳಾಚೆಗೆ ಮಾಹಿತಿ ನೀಡುವ ಪರಿಕರಗಳಲ್ಲಿ ಅಟ್ಲಾಸ್ ಹೆಚ್ಚು ಪ್ರಯೋಜನಕಾರಿ. ಮಾಹಿತಿ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಲು, ನಕ್ಷೆ ಆಧಾರಿತ ಪರಿಣತಿಯನ್ನು ತೀಕ್ಷ್ಣಗೊಳಿಸಲು ಅಟ್ಲಾಸ್ ಪುಸ್ತಕಗಳನ್ನು ಆಕರವಾಗಿ ಬಳಸಬಹುದು.

ಆರ್.ಬಿ. ಗುರುಬಸವರಾಜ



ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತಯಾರಿ ನಡೆಸುವಾಗ ಪುಸ್ತಕಗಳಷ್ಟೇ ಪುಸ್ತಕಗಳಾಚೆಗಿನ ಮಾಹಿತಿ ಒದಗಿಸುವಲ್ಲಿ ಅಟ್ಲಾಸ್ ಪ್ರಮುಖ ಪರಿಕರವಾಗಿದೆ. ಚಿತ್ರ, ಕೋಷ್ಟಕ, ರೇಖಾಚಿತ್ರಗಳಷ್ಟೇ ಅಟ್ಲಾಸ್ ಕೂಡ ಒಂದು ಮುಖ್ಯ ಆಕರ. ಈ ಲೇಖನದಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷಾ ತಯಾರಿಯಲ್ಲಿ ಅಟ್ಲಾಸ್‌ನ ಪ್ರಾಮುಖ್ಯ ಮತ್ತು ವಿವಿಧ ಪರೀಕ್ಷಾ ಸಿದ್ಧತೆಯ ನಿಯಮಿತ ಓದುವಿಕೆಯಲ್ಲಿ ಅಟ್ಲಾಸ್ ಬಳಸುವ ವಿಧಾನವನ್ನು ಚರ್ಚಿಸೋಣ.

ಅಟ್ಲಾಸ್ ಎಂದರೆ

'ಅಟ್ಲಾಸ್' ಎಂದರೆ ನಕ್ಷೆಗಳ ಸಂಗ್ರಹ ಎಂದರ್ಥ. ಪೌರಾಣಿಕ ಗ್ರೀಕ್ ವ್ಯಕ್ತಿ ಅಟ್ಲಾಸ್‌ನಿಂದ ಈ ಪದ ಬಂದಿರಬಹುದೆಂದು ನಂಬಲಾಗಿದೆ. ಇದು ಭೂಮಿಯ ವಿವಿಧ ನಕ್ಷೆಗಳ ಸಂಗ್ರಹ. ಭಾರತ, ಅಮೆರಿಕ ಅಥವಾ ಯೂರೋಪ್‌ನಂತಹ ಭೂಮಿಯ ನಿರ್ದಿಷ್ಟ ಪ್ರದೇಶದ ನಕ್ಷೆಗಳು ಇದರಲ್ಲಿ ಲಭ್ಯ. ಅಟ್ಲಾಸ್‌ಗಳಲ್ಲಿನ ನಕ್ಷೆಗಳು ಭೌಗೋಳಿಕ ಲಕ್ಷಣಗಳು, ಪ್ರದೇಶದ ಭೂದೃಶ್ಯದ ಸ್ಥಳಾಕೃತಿ ಮತ್ತು ರಾಜಕೀಯ ಗಡಿಗಳನ್ನು ತೋರಿಸುತ್ತವೆ. ಜೊತೆಗೆ ಒಂದು ಪ್ರದೇಶದ ಹವಾಮಾನ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಅಂಕಿ–ಅಂಶಗಳನ್ನೂ ಒದಗಿಸುತ್ತವೆ.

ಅಟ್ಲಾಸ್‌ನಲ್ಲಿ ರೂಪಿಸಿರುವ ನಕ್ಷೆಗಳು ಪುಸ್ತಕಗಳ ರೂಪ ಪಡೆದಿವೆ. ಹಾಗಾಗಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವವರಿಗೆ ಇದು ಒಂದು ಮಾರ್ಗದರ್ಶಿ ಕೈಪಿಡಿ. ಪರೀಕ್ಷೆಯ ಸಿದ್ಧತೆಗೆ ಮಹತ್ವದ ಪೂರಕ ಸಂಪನ್ಮೂಲ.

ಪರೀಕ್ಷೆ ಸಿದ್ಧತೆಯಲ್ಲಿ ಅಟ್ಲಾಸ್

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕೇಳುವ ಭೂಗೋಳದ ಪ್ರಶ್ನೆಗಳಿಗೆ ನಿಖರ ಹಾಗೂ ಸುಲಭವಾಗಿ ಉತ್ತರಿಸಲು ಅಟ್ಲಾಸ್ ನೆರವಾಗುತ್ತದೆ. ಭೂಗೋಳದ ಹೆಚ್ಚಿನ ಪ್ರಶ್ನೆಗಳು ನಕ್ಷೆ ಆಧಾರಿತ ಪ್ರಶ್ನೆಗಳಾಗಿರುತ್ತವೆ. ಆದ್ದರಿಂದ ವಿದ್ಯಾರ್ಥಿಗಳು ನಕ್ಷೆ/ಭೂಪಟ ಓದುವಿಕೆಯನ್ನು ಆಗಾಗ್ಗೆ ನವೀಕರಿಸಿಕೊಳ್ಳಬೇಕಾಗುತ್ತದೆ.

ವಿಶೇಷವಾಗಿ ಐ.ಎ.ಎಸ್. ಐ.ಪಿ.ಎಸ್.ನಂತಹ ನಾಗರಿಕ ಸೇವಾ ಹುದ್ದೆಗಳಿಗೆ ನಡೆಸುವ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಭೂಗೋಳ, ಅಂತರಾಷ್ಟ್ರೀಯ ವಿಚಾರ, ಪರಿಸರ ಮತ್ತು ವಿಪತ್ತು ನಿರ್ವಹಣೆ ಕುರಿತು ಪ್ರಶ್ನೆಗಳಿರುತ್ತವೆ. ಐ.ಎ.ಎಸ್ ಮುಖ್ಯ ಪರೀಕ್ಷೆ ಯಲ್ಲಿನ ವಿವರಣಾತ್ಮಕ ಉತ್ತರ ಬರವಣಿಗೆಗೆ ಅಟ್ಲಾಸ್‌ನಲ್ಲಿನ ನಕ್ಷೆ ಓದುವಿಕೆ ತುಂಬಾ ಸಹಾಯಕವಾಗಿರುತ್ತದೆ. ಈ ಹಿಂದಿನ ಪ್ರಿಲಿಮ್ಸ್ ಹಾಗೂ ಮೇನ್ಸ್ ಪರೀಕ್ಷೆಗಳಲ್ಲಿ ಕೇಳಿದ್ದ ಹೆಚ್ಚಿನ ಪ್ರಶ್ನೆಗಳು ಅಟ್ಲಾಸ್ ಆಧಾರಿತವಾಗಿರುವುದನ್ನು ಗಮನಿಸಬಹುದು.

ಅಟ್ಲಾಸ್ ಓದುವುದು ಹೇಗೆ?

ಅಟ್ಲಾಸ್ ಓದುವಿಕೆಯನ್ನು ಎರಡು ವಿಧಗಳಾಗಿ ವರ್ಗೀಕರಿಸಬಹುದು. ಒಂದು ಸ್ಥಿರ ನಕ್ಷೆಯ ಓದುವಿಕೆ ಮತ್ತು ಇನ್ನೊಂದು ಪ್ರಸ್ತುತ ವ್ಯವಹಾರಗಳ ಆಧಾರದ ಮೇಲೆ ನಕ್ಷೆ ಓದುವುದು.

ಸ್ಥಿರ ನಕ್ಷೆ ಓದುವಿಕೆ: ಇದರಲ್ಲಿ ವಿದ್ಯಾರ್ಥಿಗಳು ಅಟ್ಲಾಸ್ ಜೊತೆಗೆ ಭೌಗೋಳಿಕ ವಿಷಯವನ್ನು ಅನುಸರಿಸಬೇಕು. ಭಾರತ ಅಥವಾ ವಿಶ್ವ ಭೂಗೋಳವನ್ನು ಓದುವಾಗ ವಿದ್ಯಾರ್ಥಿಗಳು ತಮ್ಮದೇ ಆದ ಅಟ್ಲಾಸ್(ನಕ್ಷೆಯ ಪುಸ್ತಕ) ಹೊಂದಿರಬೇಕು.

ಉದಾಹರಣೆಗೆ: ಭಾರತದ ಮುಂಗಾರು ಮಾರುತಗಳ ಬಗ್ಗೆ ಅಧ್ಯಯನ ಮಾಡುವಾಗ ನಿಮ್ಮ ಅಟ್ಲಾಸ್ ಇದ್ದರೆ, ಅದರಲ್ಲಿ ಮುಂಗಾರು ಮಾರುತದಲ್ಲಿರುವ ನೈರುತ್ಯ ಮತ್ತು ಈಶಾನ್ಯ ಮಾರುತಗಳ ಬಗ್ಗೆ ನಕ್ಷೆ ಸಹಿತ ಸುಲಭವಾಗಿ ಕಲಿಯಬಹುದು. ನೈರುತ್ಯ ಮತ್ತು ಈಶಾನ್ಯದ ನಡುವಿನ ವ್ಯತ್ಯಾಸದ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು, ಅಟ್ಲಾಸ್‌ನಲ್ಲಿ ನೀಡಿದ ಗಾಳಿಯ ಹಿಮ್ಮುಖ ಮತ್ತು ಮುಮ್ಮುಖ ಚಲನೆಯ ಗುರುತುಗಳು ಸಹಾಯ ಮಾಡುತ್ತವೆ. ಪರಿಕಲ್ಪನಾ ತಿಳುವಳಿಕೆಯ ಹೊರತಾಗಿ, ವಿದ್ಯಾರ್ಥಿಗಳು ವಿಶ್ವ ಮತ್ತು ಭಾರತೀಯ ಭೌಗೋಳಿಕತೆಗೆ ಸಂಬಂಧಿಸಿದ ಸ್ಥಿರ ನಕ್ಷೆಯ ಮಾಹಿತಿಯನ್ನು ಅಟ್ಲಾಸ್ ಮೂಲಕ ನವೀಕರಿಸಿಕೊಳ್ಳಬಹುದು. ಇದರಿಂದ ಪರೀಕ್ಷೆಯಲ್ಲಿ ನಿಖರವಾಗಿ ಉತ್ತರಿಸಲು ಸಹಾಯವಾಗುತ್ತದೆ.

ಸ್ಥಿರ ನಕ್ಷೆಯಲ್ಲಿ ಭೂಗೋಳಕ್ಕೆ ಸಬಂಧಿಸಿದ ಪ್ರಮುಖ ಸಾಗರಗಳು, ಸಮುದ್ರಗಳು, ಕೊಲ್ಲಿಗಳು, ತೊರೆಗಳು, ಪರ್ವತ ಶ್ರೇಣಿಗಳು, ಅತ್ಯುನ್ನತ ಶಿಖರಗಳು, ಮೌಂಟೇನ್ ಪಾಸ್‌ಗಳು, ಪ್ರಮುಖ ಪ್ರಸ್ಥಭೂಮಿಗಳು, ಸರೋವರಗಳು, ನದಿಗಳು, ಜಲಾನಯನ ಪ್ರದೇಶಗಳು, ಬಂದರುಗಳು, ವಿಮಾನ ನಿಲ್ದಾಣಗಳು, ಹೆದ್ದಾರಿಗಳು, ಜ್ವಾಲಾಮುಖಿಗಳು, ಭೂಕಂಪದ ಪ್ರದೇಶಗಳು ಹೀಗೆ ಹತ್ತಾರು ಅಂಶಗಳ ಬಗ್ಗೆ ಸ್ಪಷ್ಟ ಜ್ಞಾನ ಪಡೆಯಬಹುದು. ಇನ್ನು ರಾಜಕೀಯ ಭೂಗೋಳಕ್ಕೆ ಸಂಬಂಧಿಸಿಂತೆ ಅಂತಾರಾಷ್ಟ್ರೀಯ ಗಡಿಗಳು, ದ್ವೀಪಗಳು, ದೇಶಗಳು, ರಾಜ್ಯಗಳು, ಪ್ರಮುಖ ನಗರಗಳು, ಪ್ರಮುಖ ಕೈಗಾರಿಕಾ ಪ್ರದೇಶಗಳು ಮುಂತಾದ ಅಂಶಗಳನ್ನು ಸಹ ನಕ್ಷೆ ಆಧಾರಿತವಾಗಿ ಕಲಿಯಬಹುದು.

ವ್ಯವಹಾರಗಳ ಆಧಾರಿತ ನಕ್ಷೆ ಓದುವಿಕೆ

ವೃತ್ತಪತ್ರಿಕೆಗಳಲ್ಲಿ ಪ್ರಚಲಿತ ವಿದ್ಯಮಾನಗಳನ್ನು ಓದುವಾಗ, ಯಾವಾಗಲೂ ಅಟ್ಲಾಸ್ ಅನ್ನು ಕೈಯಲ್ಲಿಟ್ಟುಕೊಂಡಿರಬೇಕು. ವಿಶೇಷವಾಗಿ ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸುದ್ದಿಯಲ್ಲಿರುವ ನಗರಗಳು ಮತ್ತು ಪ್ರದೇಶಗಳನ್ನು ಅಟ್ಲಾಸ್ ಮೂಲಕ ಗುರುತಿಸಿಕೊಂಡರೆ ಕಲಿಕೆ ಪರಿಪೂರ್ಣವಾಗುತ್ತದೆ. ಪ್ರಮುಖ ಅಂತಾರಾಷ್ಟ್ರೀಯ ಸಮಸ್ಯೆಗಳಿಗೆ ನಕ್ಷೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಲು ಅಟ್ಲಾಸ್ ಹೆಚ್ಚು ಸಹಾಯ ಮಾಡುತ್ತದೆ. ಜೊತೆಗೆ ವಿವಿಧ ದೇಶಗಳ ಗಡಿ ವಿವಾದ, ಅಣೆಕಟ್ಟು ಸಮಸ್ಯೆಗಳು ಇತ್ಯಾದಿ ಭೌಗೋಳಿಕತೆಗೆ ಸಂಬಂಧಿಸಿದ ಸಮಸ್ಯೆಗಳಿಂದ ನಕ್ಷೆ ಆಧಾರಿತ ಪ್ರಶ್ನೆಗಳ ಸಂಭವನೀಯತೆ ಹೆಚ್ಚಿರುತ್ತದೆ.

ಈ ಕಾರಣಗಳಿಗಲ್ಲದೇ, ವಿಷಯವನ್ನು ಚೆನ್ನಾಗಿ ಗ್ರಹಿಸಲು, ದೇಶದ ರಾಜ್ಯಗಳು ಮತ್ತು ಅವುಗಳ ರಾಜಧಾನಿಗಳು, ಕೇಂದ್ರಾಡಳಿತ ಪ್ರದೇಶಗಳು, ದೇಶದ ಇತರ ಪ್ರಮುಖ ನಗರಗಳ ಮೇಲೆ ಅಧ್ಯಯನ ಗಮನ ಕೇಂದ್ರೀಕರಿಸಲು ಅಟ್ಲಾಸ್ ಪ್ರಮುಖ ಮಾಹಿತಿ ನೀಡುತ್ತದೆ. ವಿಷಯಾಧಾರಿತ ಜ್ಞಾಪಕ ತಂತ್ರಗಳನ್ನು ಉತ್ತೇಜಿಸಲು ಅಟ್ಲಾಸ್ ಆಪ್ತಮಿತ್ರ ಎನಿಸುತ್ತದೆ.

ಭೂಗೋಳವು ಪ್ರಾಥಮಿಕವಾಗಿ ಜನ, ಸಂಸ್ಕೃತಿ ಮತ್ತು ಸಮುದಾಯಗಳ ಅಧ್ಯಯನದೊಂದಿಗೆ ವ್ಯವಹರಿಸುತ್ತದೆ. ಈ ದೃಷ್ಟಿ ಕೋನಗಳ ಆಳವಾದ ಜ್ಞಾನ ಹೊಂದಲು, ವಿವಿಧ ಸ್ಥಳಗಳ ಸ್ಥಳಗಳ ಬಗ್ಗೆ ಸ್ಪಷ್ಟ ಮಾಹಿತಿಗಾಗಿ ಅಟ್ಲಾಸ್ ಅಧ್ಯಯನ ತುಂಬಾ ಪ್ರಯೋಜನಕಾರಿ.

ಇತಿಹಾಸಕ್ಕೆ ಸಂಬಂಧಿದಂತೆ ವಿವಿಧ ನಾಗರಿಕತೆಗಳು, ರಾಜರ ಆಳ್ವಿಕೆಯ ಪ್ರದೇಶಗಳು, ಸಾಮ್ರಾಜ್ಯಗಳ ವಿಸ್ತರಣೆ, ಶಾಸನ ಸ್ಥಳಗಳ ಮಾಹಿತಿ, ಪುರಾತತ್ವ ಶಾಸ್ತ್ರದ ಉತ್ಖನನಗಳು, ಪ್ರಾಚೀನ ಸ್ಮಾರಕಗಳು ಮತ್ತು ಐತಿಹಾಸಿಕ ಸ್ಥಳಗಳ ಬಗ್ಗೆ ಅಟ್ಲಾಸ್ ಸ್ಪಷ್ಟವಾದ ತಿಳುವಳಿಕೆಯನ್ನು ನೀಡುತ್ತದೆ.

ಅಟ್ಲಾಸ್ ಬಳಕೆಯ ವಿಧಾನ

1. ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸ್ಥಳ ಆಧಾರಿತ ಪ್ರಶ್ನೆಗಳಿರುತ್ತವೆ. ಅದಕ್ಕಾಗಿ ಅಟ್ಲಾಸ್‌ನಲ್ಲಿ ನದಿಗಳು, ಪರ್ವತಗಳು, ಸರೋವರಗಳು, ಹಿಮನದಿಗಳು ಮುಂತಾದ ಪ್ರಮುಖ ಸ್ಥಳಗಳನ್ನು ಗುರುತಿಸಿಕೊಳ್ಳಿ.
2. ಅಟ್ಲಾಸ್ ಅನ್ನು ವಿವಿಧ ಪರಿಕಲ್ಪನೆ ಆಧಾರಿತವಾಗಿ ಸಂಯೋಜಿತ ಅಧ್ಯಯನ ನಡೆಸಿ. ಒಂದು ಸ್ಥಳದ ನಾಗರಿಕತೆಯ ವಿವರಗಳು, ಲಕ್ಷಣಗಳು, ಐತಿಹಾಸಿಕ ಪುರಾವೆಗಳು, ಶಾಸನಗಳು, ಸ್ಥಳ ಪುರಾಣ, ಕೈಗಾರಿಕೆಗಳು, ರಾಜಕೀಯ ಚಟುವಟಿಕೆಗಳು, ಆರ್ಥಿಕ ಅಂಶಗಳು, ಹವಾಮಾನ ಮತ್ತು ವಾಯುಗುಣ, ರಸ್ತೆಗಳು, ಸಂಪರ್ಕ ವ್ಯವಸ್ಥೆಗಳು, ಪ್ರಚಲಿತ ಘಟನಾವಳಿಗಳು ಇತ್ಯಾದಿ ಅಂಶಗಳನ್ನು ಆಧರಿಸಿ ಒಂದೆಡೆ ಸಂಯೋಜಿತ ಮಾಹಿತಿಯನ್ನು ದಾಖಲಿಸಿಟ್ಟುಕೊಂಡರೆ ಪರೀಕ್ಷೆಗಳಲ್ಲಿ ಉತ್ತರಿಸಲು ಸುಲಭವಾಗುತ್ತದೆ.
3. ಅಟ್ಲಾಸ್‌ನಲ್ಲಿ ಮೊದಲು ವಿಶ್ವ, ನಂತರ ಖಂಡ ಮತ್ತು ದೇಶಗಳ ಮಾಹಿತಿಯನ್ನು ಅಧ್ಯಯನ ಮಾಡಿ.
4. ಸಾಗರಗಳು, ಸರೋವರಗಳು, ಕೊಲ್ಲಿಗಳು, ನದಿಗಳು, ಪರ್ವತಗಳು, ಕಣಿವೆಗಳು, ಮೈದಾನಗಳು, ಮರುಭೂಮಿಗಳು, ಸಮುದ್ರತೀರಗಳು, ಬಂದರುಗಳು ಇಂಥ ವೈಶಿಷ್ಟ್ಯಗಳನ್ನು ಒಟ್ಟಾರೆಯಾಗಿ ನೆನಪಿಟ್ಟುಕೊಳ್ಳಿ.
5. ತಮ್ಮ ಅಧ್ಯಯನ ಸ್ಥಳದಲ್ಲಿ ಯಾವಾಗಲೂ ಕೈಗೆ ಸಿಗುವಂತೆ ಅಟ್ಲಾಸ್ ಇಟ್ಟುಕೊಳ್ಳಬೇಕು.

ಸಾಮಾನ್ಯ ಜ್ಞಾನ

ಭಾಗ 5

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ವಿಶೇಷ ಮೀಸಲು ಸಬ್-ಇನ್‌ಸ್ಪೆಕ್ಟರ್ (ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ) ಹುದ್ದೆಗಳು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ಶೀಘ್ರದಲ್ಲೇ ನಡೆಯಲಿವೆ. ಈ ಎರಡೂ ಪರೀಕ್ಷೆಗಳಲ್ಲಿರುವ 'ಸಾಮಾನ್ಯ ಜ್ಞಾನ ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1) ಇತ್ತೀಚಿಗೆ ರಾಷ್ಟ್ರೀಯ 'ವೀರ್ ಬಾಲ ದಿವಸ್' ಎಂದು ಯಾವ ದಿನವನ್ನು ಆಚರಿಸಲು ನಿರ್ಧರಿಸಿದ್ದಾಗಿ ಪ್ರಧಾನಮಂತ್ರಿ ಘೋಷಿಸಿದರು?
ಎ) ಡಿಸೆಂಬರ್ 31 ಬಿ) ಜನವರಿ 1
ಸಿ) ಡಿಸೆಂಬರ್ 26 ಡಿ) ಮಾರ್ಚ್ 6
ಉತ್ತರ: ಸಿ

2) ₹1.5 ಕೋಟಿ ವೆಚ್ಚದಲ್ಲಿ 5 ಎಕರೆ ಪ್ರದೇಶದಲ್ಲಿ ಬೆಳೆ ತಳಿ ಶುದ್ಧತಾ ಪರೀಕ್ಷಾ ಕೇಂದ್ರ ಸ್ಥಾಪಿಸಲು ನಿಶ್ಚಯಿಸಲಾಗಿದೆ. ಹಾಗಾದರೆ ಅದು ಎಲ್ಲಿದೆ?
ಎ) ವಿಜಯಪುರದ ಸಿಂದಗಿ ತಾಲೂಕಿನ ಆಲಮೇಲ
ಬಿ) ಹಾಸನದ ಚನ್ನರಾಯಪಟ್ಟಣದ ದೊಡ್ಡಹಳ್ಳಿ
ಸಿ) ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಬಿದರಗೆರೆ
ಡಿ) ಧಾರವಾಡ ಜಿಲ್ಲೆಯಲ್ಲಿರುವ ಧಾರವಾಡ
ಉತ್ತರ: ಎ

3) ಮಗಾವ್ ಎಂಬ ಹೆಸರಿನ ಇಲಿಗೆ ತರಬೇತಿ ನೀಡಿ ನೆಲಬಾಂಬ್ ಪತ್ತೆ ಹಚ್ಚಲು ಬಳಸಲಾಗಿತ್ತು. ಹಾಗಾದರೆ ಈ ಪ್ರಾಣಿಯು(ಇಲಿಯು) ಯಾವ ದೇಶಲ್ಲಿ ಅತಿ ಹೆಚ್ಚು ಸೇವೆ ಒದಗಿಸಿತ್ತು?
ಎ) ಕಾಂಬೋಡಿಯಾ ಬಿ) ತಾಂಜಿನಿಯಾ
ಸಿ) ಇಂಗ್ಲೆಂಡ್ ಡಿ) ನೇಪಾಳ
ಉತ್ತರ: ಎ

4) ಇಸ್ರೊದ ಮುಖ್ಯಸ್ಥರನ್ನಾಗಿ ಯಾರನ್ನು ನೇಮಕ ಮಾಡಲಾಗಿದೆ?
ಎ) ಎಸ್ ಸೋಮನಾಥ್ ಬಿ) ಟೆಸ್ಸಿ ಥಾಮಸ್
ಸಿ) ಜೈಯ ಶಂಕರ್ ಸ್ವಾಮಿ ಡಿ) ಜೋಜೋ ಮೆಥ್ಯೋ
ಉತ್ತರ: ಎ

5) ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕವಿಜೇತ ಬಾಕ್ಸರ್ ಲವ್ಲಿನಾ ಬರ್ಗೊಹೈನ್ ಅವರನ್ನು ಯಾವ ರಾಜ್ಯದಲ್ಲಿ ಡಿಎಸ್‌ಪಿಯಾಗಿ ನೇಮಕ ಮಾಡಲಾಗಿದೆ?
ಎ) ಅಸ್ಸಾಂ ಬಿ) ಮಣಿಪುರ
ಸಿ) ಉತ್ತರ ಪ್ರದೇಶ ಡಿ) ಮಹಾರಾಷ್ಟ್ರ
ಉತ್ತರ:ಎ

6) ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾಗಿ ಯಾರನ್ನು ನೇಮಕ ಮಾಡಲಾಗಿದೆ?
ಎ) ಜಿ. ಆರ್. ಹೆಗಡೆ ಮಶಿಗದ್ದೆ
ಬಿ) ಎಂ. ಆರ್. ಹೆಗಡೆ ಇಟಗಿ
ಸಿ) ಡಾ. ಜಿ.ಎಲ್. ಹೆಗಡೆ ಮಣಕಿ
ಡಿ) ಸಂಧ್ಯಾರಾವ್ ಸಿದ್ದಾಪುರ
ಉತ್ತರ:ಸಿ

7) ಇತ್ತೀಚಿಗೆ ಬಿಳಿ ಮೊಸಳೆ ಮರಿಯೊಂದು ಪತ್ತೆಯಾಯಿತು. ಅಪರೂಪದ ಈ ಪ್ರಾಣಿಗೆ ಶ್ವೇತ ಎಂದು ಹೆಸರಿಸಲಾಗಿದೆ. ಹಾಗಾದರೆ ಅದು ಎಲ್ಲಿ ಪತ್ತೆಯಾಯಿತು?
ಎ) ನಂದನ ಕಾನನ ರಾಷ್ಟ್ರೀಯ ಉದ್ಯಾನವನ
ಬಿ) ಮಾನಸ ವೈಲ್ಡ್ ಲೈಫ್ ಸೆಂಚುರಿ
ಸಿ) ಒಡಿಶಾ ರಾಷ್ಟ್ರೀಯ ಉದ್ಯಾನವನ
ಡಿ) ಬಂಡಿಪುರ ರಾಷ್ಟ್ರೀಯ ಉದ್ಯಾನವನ
ಉತ್ತರ: ಸಿ

8) ಇತ್ತೀಚಿಗೆ ಭೂಮಿಯ ಮೇಲೆ ಕೃತಕ ಸೂರ್ಯ ಹಾಗೂ ಕೃತಕ ಚಂದ್ರನನ್ನು ಸೃಷ್ಟಿ ಮಾಡಿದ ದೇಶ ಯಾವುದು?
ಎ) ಅಮೆರಿಕ ಬಿ) ಉತ್ತರ ಕೊರಿಯಾ
ಸಿ) ಇಸ್ರೇಲ್ ಡಿ) ಚೀನಾ
ಉತ್ತರ: ಡಿ

9) ಈ ಕೆಳಗೆ ಉಲ್ಲೇಖಿಸಿರುವವರಲ್ಲಿ ಯಾರನ್ನು ಭಾರತದ ಮೊದಲ ಮುಸ್ಲಿಂ ಶಿಕ್ಷಕಿ, ಶಿಕ್ಷಣ ತಜ್ಞೆ ಎಂದು ಗೌರವಿಸಲಾಗಿದೆ?
ಎ) ಸೈಯದಾ ಮಲ್ಲಿಕ್ ಬಿ) ಆಯೇಷಾ ಫಾತಿಮಾ
ಸಿ) ಫಾತಿಮಾ ಶೇಖ್ ಡಿ) ಮೇಲಿನ ಯಾರೂ ಅಲ್ಲ
ಉತ್ತರ: ಸಿ

10) ಜಲಾಂತರ್ಗಾಮಿ ನೌಕೆಗಳು, ಹಡಗುಗಳು, ವಿಮಾನಗಳು ಅಥವಾ ಭೂಮಿಯ ಮೇಲಿನಿಂದ ಉಡಾಯಿಸಬಲ್ಲ ಬ್ರಹ್ಮೋಸ್ ಸೂಪರ್‌ಸಾನಿಕ್ ಕ್ರೂಸ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಯಿತು. ಹಾಗಾದರೆ ಈ ಕ್ಷಿಪಣಿಯನ್ನು ಭಾರತ ಯಾವ ದೇಶದ ಸಹಯೋಗದಲ್ಲಿ ಉತ್ಪಾದಿಸುತ್ತದೆ?
ಎ) ಅಮೆರಿಕ ಬಿ) ಜರ್ಮನಿ
ಸಿ) ಫ್ರಾನ್ಸ್ ಡಿ) ರಷ್ಯಾ
ಉತ್ತರ: ಡಿ

11) ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಯೋಜನೆ : 'ಅಭಾ' (Arogya Bharat Health Accounts - ABHA) ಕುರಿತಾದ ಹೇಳಿಕೆಗಳನ್ನು ಗಮನಿಸಿ.
1) ಡಿಜಿಟಲ್ ಹೆಲ್ತ್ ಮಿಷನ್‌ಗೆ ಹೊಸ ನಾಮಕರಣ: ಅಭಾ ಎಂದು ಹೆಸರಿಡಲಾಗಿದೆ.
2) 'ಅಭಾ'ದಲ್ಲಿ ಭಾರತೀಯರು ತಮ್ಮ ಆರೋಗ್ಯ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸಿ, ಸಂಗ್ರಹಿಸಲು ಅವಕಾಶ ಸಿಗಲಿದೆ.
3) ಪ್ರಧಾನಿ ನರೇಂದ್ರ ಮೋದಿ ಅವರು ಆ. 15, 2020ರಂದು ಡಿಜಿಟಲ್ ಆರೋಗ್ಯ ಯೋಜನೆಯನ್ನು ಘೋಷಿಸಿದ್ದರು. ಸೆ. 27ರಿಂದ ಜಾರಿಗೊಳಿಸಲಾಯಿತು. ಯೋಜನೆ ಅರಂಭವಾದಾಗಿನಿಂದ ಈವರೆಗೆ ಸುಮಾರು 15 ಕೋಟಿ ಹೆಲ್ತ್ ಐಡಿಗಳನ್ನು ರೂಪಿಸಲಾಗಿದೆ. 15,000 ವೈದ್ಯಕೀಯ ಸಂಸ್ಥೆಗಳು ಹಾಗೂ 7,400 ವೈದ್ಯರು ಈ ಸೌಲಭ್ಯ ಬಳಸುತ್ತಿದ್ದಾರೆ.
4) ಅಭಾ ಯೋಜನೆಯನ್ವಯ ಎಲ್ಲ ಭಾರತೀಯರು 14 ಅಂಕಿಗಳ ವಿಶಿಷ್ಟ ಆರೋಗ್ಯ ಗುರುತಿನ ಸಂಖ್ಯೆಯನ್ನು (Health Identification Number) ಪಡೆಯಲಿದ್ದಾರೆ.
ಎ) ಹೇಳಿಕೆ 1, 2 ಮತ್ತು 4 ಮಾತ್ರ ಸರಿಯಾಗಿದೆ.
ಬಿ) ಹೇಳಿಕೆ 1ರಿಂದ 4ರ ತನಕ ಎಲ್ಲವೂ ಸರಿಯಾಗಿದೆ ಸಿ) ಹೇಳಿಕೆ 1ರಿಂದ 4ರ ತನಕ ಯಾವುದೂ ಸರಿಯಾಗಿಲ್ಲ ಡಿ) ಯಾವುದೂ ಅಲ್ಲ.
ಉತ್ತರ:ಬಿ

12) ಸಾವಿನ ಅಂಚಿನಲ್ಲಿರುವ ವ್ಯಕ್ತಿಯೋರ್ವನಿಗೆ 'ಹಂದಿ ಹೃದಯ'ವನ್ನು ಕಸಿ ಮಾಡುವ ಮೂಲಕ ಯಾವ ದೇಶದ ವೈದ್ಯರು ಐತಿಹಾಸಿಕ ಸಾಧನೆಯನ್ನು ಮಾಡಿದ್ದಾರೆ?
ಎ) ಸ್ವೀಡನ್ ಬಿ) ಅಮೆರಿಕ ಸಿ) ಜರ್ಮನಿ ಡಿ) ಚೀನಾ
ಉತ್ತರ: ಬಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನಲ್

ನಿಮಗಿದು ಗೊತ್ತೇ?

ಮೋಟಾರ್ ರೇಸ್

1894ರ ಜುಲೈ 22ರಲ್ಲಿ ಮೊದಲ ಮೋಟಾರ್ ರೇಸ್(ಕಾರ್ ರೇಸ್, ಆಟೊ ರೇಸ್ ಹೆಸರಿನಿಂದಲೂ ಕರೆಯುತ್ತಾರೆ) ಆರಂಭವಾಯಿತು. ಈ ರೇಸ್‌ನಲ್ಲಿ 21 ಕಾರುಗಳು ಭಾಗವಹಿಸಿದ್ದವು.

1895ರ ಜೂನ್ 11ರಂದು ಮೋಟರ್ ರೇಸ್ ಪ್ಯಾರಿಸ್‌ನಿಂದ ಬೋರ್ಡಿಯೌಕ್ಸ್‌ವರೆಗೆ ನಡೆಯಿತು. ಈ ಎರಡು ಸ್ಥಳಗಳ ನಡುವಣ ದೂರ 1178 ಕಿಮೀ. ಆನಂತರದ ದಿನಗಳಲ್ಲಿ ಹೆಚ್ಚಿನ ರೇಸ್ ಕಾರ್‌ಗಳು ವೃತ್ತಾಕಾರದಲ್ಲಿ ನಡೆಯುತ್ತಿದ್ದವು.

ವಿಶ್ವದ ಅತ್ಯಂತ ಹಳೆಯ ಕಾರುಗಳ ಮೊಟ್ಟಮೊದಲ ರೇಸ್ 1905ರ ಸೆಪ್ಟಂಬರ್ 14ರಂದು ಆರಂಭವಾಯಿತು. ಇಂತಹ ಕಾರ್‌ಗಳ ರೇಸ್ ಈಗಲೂ ಕೂಡಾ ನಡೆಯುತ್ತಿದೆ. ಆರ್.ಎ.ಸಿ. ಟೂರಿಸ್ಟ್ ಟ್ರೋಫಿಗಾಗಿ ಪ್ರತಿವರ್ಷ ಈ ಪಂದ್ಯ ನಡೆಯುತ್ತದೆ.

ಉತ್ತರ ಕೆರೊಲಿನಾದ ರಿಚರ್ಡ್ ಪೆರಿ ಗಂಟೆಗೆ 275 ಕಿ.ಮೀ ವೇಗದಲ್ಲಿ 80 ಕಿ.ಮೀ ದೂರವನ್ನು 17 ನಿಮಿಷ 27 ಸೆಕೆಂಡ್‌ಗಳಲ್ಲಿ ಪೂರೈಸಿದರು.

ಫ್ರಾನ್ಸ್‌ನ ಫ್ರಾಂಕೊಯಿಸ್ ಲ್ಯಾಕೆಟ್ 1935ರ ಜುಲೈ 22 ರಿಂದ 1936ರ ಜುಲೈ 26ರವರೆಗೆ, 370 ದಿನಗಳ ಪೈಕಿ 363 ದಿನಗಳ ಕಾಲ, ಸತತವಾಗಿ ಕಾರ್ ಓಡಿಸಿ 4 ಲಕ್ಷ ಕಿ.ಮೀ ದೂರ ಪ್ರಯಾಣಿಸಿ ದಾಖಲೆ ನಿರ್ಮಿಸಿದ.

ಫ್ರಾನ್ಸ್‌ನ ಎಂಟು ಜನರು 1933ರ ಮಾರ್ಚ್‌ನಿಂದ ಜುಲೈವರೆಗೆ, ಗಂಟೆಗೆ 93 ಕಿ.ಮೀ ವೇಗದಲ್ಲಿ 133 ದಿನ 17 ಗಂಟೆ 37 ನಿಮಿಷಗಳ ಕಾಲ ಸತತವಾಗಿ ಕಾರ್ ಓಡಿಸಿದರು.

1911ರ ಜೂನ್ 24ರಂದು ಅರ್ಜೆಂಟೀನಾದ ಜೂನ್ ಮಾನ್ಯುಯಲ್ ಫೆಂಗಿಯೊ ವಿಶ್ವದ ಅತಿ ಶ್ರೇಷ್ಠ ಮೋಟಾರ್ ಚಾಲಕನೆಂಬ ಖ್ಯಾತಿ ಪಡೆದಿದ್ದರು. ಇತ್ತೀಚೆಗೆ ಫಾರ್ಮುಲಾ ಒನ್ ಕಾರ್ ರೇಸ್ ಹೆಚ್ಚು ಪ್ರಸಿದ್ಧಿ ಪಡೆದಿದೆ.

ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಪ್ರಾಧಿಕಾರ (ಎಸ್ ಎಸ್ ಸಿ) 2ನೇ ಹಂತದ ಪರೀಕ್ಷೆಗೆ ಪೂರ್ವ ಸಿದ್ಧತೆ – ಕುರಿತ ಲೇಖನಕ್ಕಾಗಿ ಇಲ್ಲಿ ಕ್ಲಿಕ್ ಮಾಡಿ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3lmFvab

ಪ್ರಜಾವಾಣಿ ಉದ್ಯೋಗ ವಾರ್ತೆ

ಕೇಂದ್ರ ರೈಲ್ವೆ ಇಲಾಖೆಯಲ್ಲಿ ಅಪ್ರೆಂಟಿಸ್ ಹುದ್ದೆಗಳು

ಕೇಂದ್ರ ರೈಲ್ವೆ ವಿಭಾಗದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ವಿವರ: ಫಿಟ್ಟರ್, ಟರ್ನರ್, ಎಲೆಕ್ಟ್ರೀಷಿಯನ್, ಮೆಕಾನಿಸ್ಟ್, ಪ್ಲಂಬರ್, ಪೇಂಟರ್

ಒಟ್ಟು ಹುದ್ದೆಗಳ ಸಂಖ್ಯೆ: 2422

ಸ್ಥಳ: ದೇಶದೆಲ್ಲೆಡೆ

ವಿದ್ಯಾರ್ಹತೆ: ಹುದ್ದೆಗಳಿಗೆ ಸಂಬಂಧಿಸಿದಂತೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಐಟಿಐ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರಬೇಕು.

ತರಬೇತಿ ಭತ್ಯೆ: ಭಾರತ ಸರ್ಕಾರದ ನಿಯಮಗಳ ಅನ್ವಯ ತರಬೇತಿ ಭತ್ಯೆ ನೀಡಲಾಗುವುದು.

ವಯೋಮಿತಿ ಸಡಿಲಿಕೆ: ಜನವರಿ 2022ಕ್ಕೆ ಅನ್ವಯವಾಗುವಂತೆ ಕನಿಷ್ಠ 15, ಗರಿಷ್ಠ 24 ವರ್ಷದರಾಗಿರಬೇಕು. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷಗಳ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ₹100. ಎಸ್‌ಸಿ / ಎಸ್‌ಟಿ / ಅಂಗವಿಕಲ/ ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ.

ನೇಮಕಾತಿ ವಿಧಾನ: ಎಸ್‌ಎಸ್‌ಎಲ್‌ಸಿ ಹಾಗೂ ಐಟಿಐನಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಮೆರಿಟ್ ಲಿಸ್ಟ್ ತಯಾರಿಸಿ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಅರ್ಜಿ ಸಲ್ಲಿಸುವ ವಿಧಾನ: ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಅಧಿಕೃತ ವೆಬ್‌ಸೈಟ್ https://www.rrccr.com ಗೆ ಲಾಗಿನ್ ಆಗಿ ಅರ್ಜಿ ಸಲ್ಲಿಸುವ ಮಾಹಿತಿಯನ್ನು ಪಡೆಯಬಹುದು. ಇತರೆ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿ ಸಲ್ಲಿಸಲು ಕೊನೆಯ ದಿನ: 16, ಫೆಬ್ರುವರಿ, 2022

ವೆಬ್‌ಸೈಟ್: https://www.rrccr.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Poem - 1: Grandma Climbs a Tree

Englsih

ಎಸ್ಸೆಸ್ಸೆಲ್ಸಿ

1. Summary of the poem OR

According to the poet Ruskin Bond, Grandma was a genius/ unique. Justify. OR

Narrator of the poem and his father were very considerate towards grandma. Justify.

Grandma learnt to climb the trees at the age of six by her brother. She was called 'genius' because she was a gifted person. Even at the age of 62 she could climb the trees and enjoying with a child like attitude. One day she climbed the tree but could not come down. When the doctor suggested her to take bed rest, she rejected and felt that would be like a hell lying in the bed. Grandma asked her son to build a house on top of the tree.

He built a house on tree top. In the same way the glasses and tray were supplied by the poet to drink sherry on the tree. It shows her strangeness and freedom in living as she wishes.

2. Why does the poet's grandmother assert her right to reside in a tree?

The poet's grandmother was a lover of nature. She could climb the trees even at the age of 62 and enjoying herself in the branches. In fact she refused the doctor's advice and felt that taking rest in a bed would be like a brief season in hell.It shows her simplicity and child like attitude.

3. What had the doctor recommended? What was her reaction to the advice?

The doctor recommended her to take rest for a week in bed, but she did not accept the advice. She felt that taking rest in a bed would be like a brief season in hell. She liked to live on the tree top as a lover of nature instead of living in a homely atmosphere. It shows her simplicity and innocence.

4. How the poet's grandmother was fulfilled her wish by her son?

Grandma ordered her son to build a house on the tree top. He built a house with windows and door. She sits there in a state upholding her right to reside in a tree. The poet supplied the glasses and tray to drink sherry on the tree top, by the way grandmother was fulfilled her wish.



Grandma Climbs a Tree

Picture Credit: Karnataka Govt. 10th Class English Text book

Annappa Shetty, SRP in English,Hassan

ಮಾತೃಕೆಗಳು (MATRICES)

ಗಣಿತ

ದ್ವಿತೀಯ ಪಿಯುಸಿ

3) (.........ಹಿಂದಿನ ಸಂಚಿಕೆಯಿಂದ

$$\begin{bmatrix} x+3 & z+4 & 2y-7 \\ -6 & a-1 & 0 \\ b-3 & -21 & 0 \end{bmatrix} = \begin{bmatrix} 0 & 6 & 3y-2 \\ -6 & -3 & 2c+2 \\ 2b+4 & -21 & 0 \end{bmatrix}$$

ಆದಾಗ a, b, c, x, y ಮತ್ತು z ಗಳ ಬೆಲೆಯನ್ನು ಕಂಡುಹಿಡಿಯಿರಿ.

ಪರಿಹಾರ: ದತ್ತ ಮಾತೃಕೆಗಳು ಸಮವಾಗಿರುವುದರಿಂದ, ಅವುಗಳ ಅನುರೂಪ (corrosponding) ಅಂಶಗಳು ಸಮವಾಗಿರುತ್ತವೆ.

ಅನುರೂಪ ಅಂಶಗಳನ್ನು ಹೋಲಿಸಿದಾಗ, ನಾವು

$x + 3 = 0,\quad z + 4 = 6,\quad 2y - 7 = 3y - 2$

$a - 1 = -3,\quad 0 = 2c + 2\quad b - 3 = 2b + 4,$

ಪಡೆಯುತ್ತೇವೆ.

ಇವುಗಳನ್ನು ಸರಳಗೊಳಿಸಿದಾಗ,

$a = -2, b = -7, c = -1, x = -3, y = -5$ ಮತ್ತು $z = 2$ ದೊರೆಯುತ್ತದೆ.

ಮಾತೃಕೆಗಳ ಸಂಕಲನ (Addition of matrices)

ಫಾತಿಮಾಳು, A ಮತ್ತು B ಎಂಬ ಸ್ಥಳಗಳಲ್ಲಿ ಎರಡು ಕಾರ್ಖಾನೆಗಳನ್ನು ಹೊಂದಿದ್ದಾಳೆ ಎಂದುಕೊಳ್ಳೋಣ, ಪ್ರತಿಯೊಂದು ಕಾರ್ಖಾನೆಯು 1, 2 ಮತ್ತು 3 ಎಂಬ ಲೇಬಲ್ ಇರುವ ಮೂರು ವಿಭಿನ್ನ ರೀತಿಯ ಹುಡುಗರ ಮತ್ತು ಹುಡುಗಿಯರ ಕ್ರೀಡಾ ಶೂಗಳನ್ನು ತಯಾರಿಸುತ್ತವೆ.

ಪ್ರತಿಯೊಂದು ಕಾರ್ಖಾನೆಯು ತಯಾರಿಸುವ ವಸ್ತುಗಳನ್ನು ಮಾತೃಕೆಗಳ ರೂಪದಲ್ಲಿ ಕೆಳಗಿನಂತೆ ತೋರಿಸಲಾಗಿದೆ

ಕಾರ್ಖಾನೆ – A

	ಹುಡುಗರು	ಹುಡುಗಿಯರು
1	80	60
2	75	65
3	90	85

ಕಾರ್ಖಾನೆ – B

	ಹುಡುಗರು	ಹುಡುಗಿಯರು
1	90	50
2	70	55
3	75	75

ಒಂದು ವೇಳೆ ಫಾತಿಮಾಳು, ಪ್ರತಿಯೊಂದು ರೀತಿಯ ದರಗಳ ಕ್ರೀಡಾ ಶೂಗಳ ಒಟ್ಟು ಉತ್ಪಾದನೆಯನ್ನು ತಿಳಿದುಕೊಳ್ಳಬೇಕಾಗಿದೆ ಎಂದಾಗ ಒಟ್ಟು ಉತ್ಪಾದನೆಯ

1ನೇ ರೀತಿಯಲ್ಲಿ : (80 + 90) ಹುಡುಗರಿಗೆ, (60 + 50) ಹುಡುಗಿಯರಿಗೆ

2ನೇ ರೀತಿಯಲ್ಲಿ : (75 + 70) ಹುಡುಗರಿಗೆ, (65 + 55) ಹುಡುಗಿಯರಿಗೆ

3ನೇ ರೀತಿಯಲ್ಲಿ : (90 + 75) ಹುಡುಗರಿಗೆ, (85 + 75) ಹುಡುಗಿಯರಿಗೆ

ಇದನ್ನು ಮಾತೃಕೆಯ ರೂಪದಲ್ಲಿ

$$\begin{bmatrix} 80+90 & 60+50 \\ 75+70 & 65+55 \\ 90+75 & 85+75 \end{bmatrix}$$ ಹೀಗೆ ತೋರಿಸಬಹುದು.

ಈ ಮಾತೃಕೆಯು ಮೇಲಿನ ಎರಡು ಮಾತೃಕೆಗಳ ಮೊತ್ತ(sum)ವಾಗಿರುತ್ತದೆ

ಮಾತೃಕೆಗಳ ಗುಣಾಕಾರ
Multiplication of matrices

$$* \; A=\begin{bmatrix} 5 & -3 \\ -1 & 2 \end{bmatrix} \& B=\begin{bmatrix} -2 & -1 \\ 4 & 7 \end{bmatrix}$$

- ಆದರೆ AB ಕಂಡುಹಿಡಿಯಿರಿ

ಪರಿಹಾರ:-

$$A=\begin{bmatrix} 5 & -3 \\ -1 & 2 \end{bmatrix} \quad \& \quad B=\begin{bmatrix} -2 & -1 \\ 4 & 7 \end{bmatrix}$$

$$AB=\begin{bmatrix} 5 & -3 \\ -1 & 2 \end{bmatrix} \times \begin{bmatrix} -2 & -1 \\ 4 & 7 \end{bmatrix}$$

$$AB=\begin{bmatrix} (5\times -2)+(-3\times 4) & (5\times -1)+(-3\times 7) \\ (-1\times -2)+(2\times 4) & (-1\times -1)+(2\times 7) \end{bmatrix}$$

$$AB=\begin{bmatrix} -10-12 & -5-21 \\ 2+8 & 1+14 \end{bmatrix}=\begin{bmatrix} -22 & -26 \\ 10 & 15 \end{bmatrix}$$

ಇತರೆ ಸಮಸ್ಯೆಗಳು (Problems):-

1) $A=\begin{bmatrix} 7 & 6 \\ -3 & -4 \end{bmatrix}$ ಆದರೆ A' ಕಂಡುಹಿಡಿಯಿರಿ

ಪರಿಹಾರ:- $A=\begin{bmatrix} 7 & 6 \\ -3 & -4 \end{bmatrix}$

ಕಂಬಸಾಲು ಮತ್ತು ಅಡ್ಡ ಸಾಲುಗಳನ್ನು ಅದಲು ಬದಲು ಮಾಡುವುದರಿಂದ A' ಪಡೆಯಬಹುದು ಆದ್ದರಿಂದ

$$A'=\begin{bmatrix} 7 & -3 \\ 6 & -4 \end{bmatrix}$$

2) $\begin{bmatrix} 1 & 3 \\ 5 & -2 \end{bmatrix}\begin{bmatrix} x \\ y \end{bmatrix}=\begin{bmatrix} -2 & 3 \\ 0 & 1 \end{bmatrix}\begin{bmatrix} 2 \\ -1 \end{bmatrix}$; ಆದರೆ x & y. ಕಂಡುಹಿಡಿಯಿರಿ

ಪರಿಹಾರ:-

$$\begin{bmatrix} 1 & 3 \\ 5 & -2 \end{bmatrix}\begin{bmatrix} x \\ y \end{bmatrix}=\begin{bmatrix} -2 & 3 \\ 0 & 1 \end{bmatrix}\begin{bmatrix} 2 \\ -1 \end{bmatrix}$$

$$\begin{bmatrix} x+3y \\ 5x-2y \end{bmatrix}=\begin{bmatrix} -7 \\ -1 \end{bmatrix}$$

$\Rightarrow x+3y=-7$ ....(i)

$\& \; 5x-2y=-1$ ....(ii)

Solving eqns (i) and (ii) we get,

$x=-1$ and $y=-2$

3) $A=\begin{bmatrix} \cos\theta & \sin\theta \\ -\sin\theta & \cos\theta \end{bmatrix}$ ಆದರೆ $A^2=\begin{bmatrix} \cos 2\theta & \sin 2\theta \\ -\sin 2\theta & \cos 2\theta \end{bmatrix}$ ಎಂದು ಸಾಧಿಸಿ

ಪರಿಹಾರ

$$A^2 = A\times A$$

$$=\begin{bmatrix} \cos\theta & \sin\theta \\ -\sin\theta & \cos\theta \end{bmatrix}\times\begin{bmatrix} \cos\theta & \sin\theta \\ -\sin\theta & \cos\theta \end{bmatrix}$$

$$=\begin{bmatrix} \cos^2\theta-\sin^2\theta & \cos\theta\sin\theta+\sin\theta\cos\theta \\ -\sin\theta\cos\theta-\sin\theta\cos\theta & -\sin^2\theta+\cos^2\theta \end{bmatrix}$$

$$=\begin{bmatrix} \cos 2\theta & 2\sin\theta\cos\theta \\ -2\sin\theta\cos\theta & \cos 2\theta \end{bmatrix}$$

$$\therefore A^2=\begin{bmatrix} \cos 2\theta & \sin 2\theta \\ -\sin 2\theta & \cos 2\theta \end{bmatrix}$$

4) $A=\begin{bmatrix} 5 \\ 4 \\ 3 \end{bmatrix}, B=\begin{bmatrix} 3 \\ -1 \\ 2 \end{bmatrix}$; ಆದರೆ $AB^T \neq A^TB$ ಎಂದು ತೋರಿಸಿ

(ಮುಂದುವರಿಯುವುದು.......)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ದ್ವಿತೀಯ ಪಿಯುಸಿ ಗಣಿತದ 'ಡಿಟರ್ಮಿನೆಂಟ್ಸ್' ಅಧ್ಯಾಯದ ಮಾದರಿ ಪ್ರಶ್ನೋತ್ತರಕ್ಕಾಗಿ ಈ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3fDrDwg

ಸುಭಾಷಿತ

ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.

-ತೀ.ನಂ.ಶ್ರೀ.

ಕೋವಿಡ್ ನಿಯಮ ಉಲ್ಲಂಘನೆ: ಆಡಳಿತ ಪಕ್ಷದ ಮುಖಂಡರು ಕಾನೂನಿಗೆ ಅತೀತರೇ?

ಕೋವಿಡ್ ನಿಯಮಗಳನ್ನು ಪಾಲಿಸುವ ಹೊಣೆಗಾರಿಕೆ ಎಲ್ಲರ ಮೇಲೆಯೂ ಸಮಾನವಾಗಿ ಇದೆ. ಈ ವಿಷಯದಲ್ಲಿ ಜನಪ್ರತಿನಿಧಿಗಳ ಜವಾಬ್ದಾರಿ ಇನ್ನೂ ಹೆಚ್ಚು. ಆದರೆ, ಆ ಹೊಣೆಯನ್ನು ಸಂಪೂರ್ಣವಾಗಿ ಮರೆತಂತಿರುವ ಆಡಳಿತಾರೂಢ ಬಿಜೆಪಿಯ ಕೆಲವು ಶಾಸಕರು ಪೈಪೋಟಿಗೆ ಬಿದ್ದವರಂತೆ ಕೋವಿಡ್ ನಿಯಮಗಳ ಉಲ್ಲಂಘನೆ ಮಾಡುತ್ತಿರುವುದು ವರದಿಯಾಗಿದೆ. ಕೋವಿಡ್ ನಿಯಮ ಉಲ್ಲಂಘಿಸಿ ಪಾದಯಾತ್ರೆ ನಡೆಸಿದ ಕಾಂಗ್ರೆಸ್ ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಲು ಉತ್ಸಾಹ ತೋರಿದ್ದ ಅಧಿಕಾರಿಗಳು, ಕಾನೂನು ಉಲ್ಲಂಘಿಸಿದ ಆಡಳಿತ ಪಕ್ಷದ ಶಾಸಕರ ವಿರುದ್ಧ ಮಾತ್ರ ಯಾವುದೇ ಕ್ರಮ ಜರುಗಿಸದೇ ಇರುವುದನ್ನು ಕರ್ತವ್ಯ ನಿರ್ವಹಣೆಯ ವೈಫಲ್ಯ ಎಂದೇ ಅರ್ಥೈಸಬೇಕಾಗುತ್ತದೆ. 'ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ' ಎನ್ನುವ ಧೋರಣೆಯು ಯಾವ ಕಾರಣಕ್ಕೂ ಒಪ್ಪತಕ್ಕದ್ದಲ್ಲ. ತಪ್ಪನ್ನು ಯಾರೇ ಮಾಡಿದರೂ ಅದು ತಪ್ಪೇ. ತಪ್ಪು ಮಾಡಿದವರು ಯಾವ ಪಕ್ಷಕ್ಕೆ ಸೇರಿದ್ದರೂ ಎಂತಹ ಪ್ರಭಾವಿ ವ್ಯಕ್ತಿಗಳಾದರೂ ಅವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕಾದುದು ಅಧಿಕಾರಿಗಳ ನೈತಿಕ ಹೊಣೆ. ಸೋಂಕು ಕ್ಷಿಪ್ರವಾಗಿ ಹರಡುತ್ತಿರುವ ಸಂಕಷ್ಟದ ಸನ್ನಿವೇಶದಲ್ಲಿ ತಮ್ಮ ಜವಾಬ್ದಾರಿ ಅರಿತು ಇತರರಿಗೆ ಮಾದರಿಯಾಗುವಂತೆ ವರ್ತಿಸಬೇಕಿದ್ದ ಜನಪ್ರತಿನಿಧಿಗಳು, ವೈಯಕ್ತಿಕ ಪ್ರತಿಷ್ಠೆಗಾಗಿ ಸಾರ್ವಜನಿಕರ ಆರೋಗ್ಯವನ್ನೇ ಪಣಕ್ಕೆ ಒಡ್ಡಿರುವುದು ಅಕ್ಷಮ್ಯ. ಆಡಳಿತ ಪಕ್ಷದ ಕೆಲವು ಶಾಸಕರು ಯಾವುದೇ ಅನುಮತಿ ಪಡೆಯದೆ ಮನಸೋಇಚ್ಛೆ ಕಾರ್ಯಕ್ರಮ ಆಯೋಜಿಸಿದರೂ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಮೌನ ವಹಿಸಿದ್ದು ಆಶ್ಚರ್ಯ ಉಂಟು ಮಾಡುತ್ತದೆ.

> ಸಾರ್ವಜನಿಕ ಆರೋಗ್ಯದ ಕುರಿತು ಸರ್ಕಾರಕ್ಕೆ ಕಿಂಚಿತ್ತಾದರೂ ಕಾಳಜಿಯಿದ್ದರೆ, ಕೋವಿಡ್ ನಿಯಮಾವಳಿ ಪಾಲಿಸದ ಎಲ್ಲರನ್ನೂ ಕಾನೂನಿನ ಕಟಕಟೆಯಲ್ಲಿ ನಿಲ್ಲಿಸುವಂತಹ ಕೆಲಸವನ್ನು ಮಾಡಬೇಕು

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆಯೋಜಿಸಿದ್ದ ವಿಧಾನಪರಿಷತ್ ಸದಸ್ಯರ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ಸಮ್ಮುಖದಲ್ಲೇ ಕೋವಿಡ್ ನಿಯಮಗಳ ಉಲ್ಲಂಘನೆಯಾದ ಕುರಿತು ವರದಿಯಾಗಿತ್ತು. ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಗೃಹ ಇಲಾಖೆಯ ಹೊಣೆ ಹೊತ್ತಿರುವ ಆರಗ ಜ್ಞಾನೇಂದ್ರ ಅವರು ತಮ್ಮ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಎಳ್ಳು ಅಮಾವಾಸ್ಯೆ ಜಾತ್ರೆಯನ್ನು ಉದ್ಘಾಟಿಸಿದ್ದರು. ಜನ ಗುಂಪುಗೂಡುವುದಕ್ಕೆ ನಿರ್ಬಂಧ ಹೇರಿದ ಸಂದರ್ಭ ಇದು. ಇಂತಹ ಸನ್ನಿವೇಶದಲ್ಲಿ ಆಯೋಜಕರೊಂದಿಗೆ ಜಾತ್ರೆಯಲ್ಲಿ ಸ್ವತಃ ಪಾಲ್ಗೊಂಡ ಅವರ ನಡೆ ಸರಿಯಲ್ಲ. ಆಳಂದ ಶಾಸಕ ಸುಭಾಷ್ ಗುತ್ತೇದಾರ್ ಅವರು ಸಂಘಟಿಸಿದ್ದ ಪ್ರತಿಭಟನೆಯಲ್ಲೂ ನೂರಾರು ಜನ ಪಾಲ್ಗೊಂಡಿದ್ದರು. 'ಜನ ಗುಂಪುಗೂಡಬಾರದು' ಎಂಬ ನಿಯಮವನ್ನು ಅಲ್ಲಿಯೂ ಗಾಳಿಗೆ ತೂರಲಾಗಿತ್ತು. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಯಂತಹ ಜವಾಬ್ದಾರಿಯುತ ಹುದ್ದೆ ಹೊಂದಿರುವ ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ 'ಹೋರಿ ಬೆದರಿಸುವ ಸ್ಪರ್ಧೆ'ಯಲ್ಲಿ ಪಾಲ್ಗೊಳ್ಳುವ ಮೂಲಕ ಕೋವಿಡ್ ನಿಯಮ ಉಲ್ಲಂಘಿಸಿದ ದೂರು ಎದುರಿಸಿದರು. ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಅನಿಲ್ ಬೆನಕೆ ಅವರು ಕೋವಿಡ್ ಕ್ಷಿಪ್ರವಾಗಿ ಹರಡುತ್ತಿರುವ ಸಂದರ್ಭದಲ್ಲಿಯೇ 'ಎಮ್ಮೆ ಓಟದ ಸ್ಪರ್ಧೆ' ನಡೆಸುವ ಉಮೇದು ಪ್ರದರ್ಶಿಸಿದರು. ಗಾಲಿ ಜನಾರ್ದನ ರೆಡ್ಡಿ, ಎಸ್.ವಿ. ರಾಮಚಂದ್ರ ಮೊದಲಾದವರಿಗೆ ಜನರ ಆರೋಗ್ಯಕ್ಕಿಂತ ಜನ್ಮದಿನ ಆಚರಿಸಿಕೊಳ್ಳುವುದೇ ಹೆಚ್ಚಿನ ಮಹತ್ವದ ಸಂಗತಿಯಾಗಿ ಗೋಚರಿಸಿತು. ಕೋವಿಡ್ ಸಂದರ್ಭದಲ್ಲೂ ಜನ್ಮದಿನದ ಸಮಾರಂಭಗಳಲ್ಲಿ ನೂರಾರು ಜನರನ್ನು ಸೇರಿಸುವ ಮೂಲಕ ಪ್ರತಿಷ್ಠೆಯನ್ನು ಪ್ರದರ್ಶಿಸಲಾಯಿತು. ಪ್ರಧಾನಿ ಆರೋಗ್ಯಕ್ಕಾಗಿ ಮೃತ್ಯುಂಜಯ ಹೋಮ ಆಯೋಜಿಸಿದ ಶಾಸಕ ಹರೀಶ್ ಪೂಂಜ ಅವರಿಗೆ ಜನರ ಆರೋಗ್ಯ ನಗಣ್ಯವಾಗಿ ಕಂಡಿತು. ಮೇಲಿನ ಎಲ್ಲರೂ ಬಿಜೆಪಿಗೆ ಸೇರಿದವರು. ಈ ಎಲ್ಲ ಸಂದರ್ಭಗಳಲ್ಲಿ ಸೇರಿದ್ದ ಹೆಚ್ಚಿನ ಜನ ಮಾಸ್ಕ್ ಧರಿಸಿರಲಿಲ್ಲ. ವೈಯಕ್ತಿಕ ಅಂತರವನ್ನೂ ಕಾಪಾಡಿಕೊಂಡಿರಲಿಲ್ಲ ಎಂದು ಮಾಧ್ಯಮಗಳು ವರದಿ ಮಾಡಿವೆ. ಎಲ್ಲೋ ಒಂದು ಕಡೆ ಅಲ್ಲ, ರಾಜ್ಯದ ಹಲವು ಭಾಗಗಳಲ್ಲಿ ಹೀಗೆ ಆಡಳಿತ ಪಕ್ಷದ ಶಾಸಕರೇ ಕೋವಿಡ್ ನಿಯಮ ಉಲ್ಲಂಘನೆ ಮಾಡುತ್ತಿದ್ದರೂ ಮೌನ ವಹಿಸಿದ ಅಧಿಕಾರಿಗಳು, ತಾವು ಸೇವೆಯಲ್ಲಿರುವುದು ಜನರ ಹಿತ ಕಾಯುವುದಕ್ಕಾಗಿಯೋ ಅಥವಾ ಪಕ್ಷಪಾತದಿಂದ ಕೆಲಸ ಮಾಡುವುದಕ್ಕಾಗಿಯೋ ಎಂಬುದನ್ನು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕು.

ರಾಜ್ಯದಲ್ಲಿ ಕೋವಿಡ್ ಮೂರನೇ ಅಲೆ ಗರಿಷ್ಠ ಮಟ್ಟ ತಲುಪಿದಾಗ ದಿನಕ್ಕೆ 1.2 ಲಕ್ಷದವರೆಗೂ ಪ್ರಕರಣಗಳು ದಾಖಲಾಗುವ ಸಾಧ್ಯತೆ ಇದೆ ಎಂದು ಸರ್ಕಾರವೇ ಹೇಳಿದೆ. ಸಾರ್ವಜನಿಕ ಆರೋಗ್ಯದ ಕುರಿತು ಅದಕ್ಕೆ ಕಿಂಚಿತ್ತಾದರೂ ಕಾಳಜಿಯಿದ್ದರೆ ಕೋವಿಡ್ ನಿಯಮಾವಳಿ ಕಟ್ಟುನಿಟ್ಟಾಗಿ ಜಾರಿಯಾಗುವಂತೆ ನೋಡಿಕೊಳ್ಳಬೇಕು. ತಪ್ಪು ಮಾಡಿದ ಎಲ್ಲರನ್ನೂ ಕಾನೂನಿನ ಕಟಕಟೆಯಲ್ಲಿ ನಿಲ್ಲಿಸುವಂತಹ ಕೆಲಸವನ್ನೂ ಮಾಡಬೇಕು. ಕೋವಿಡ್ ನಿಯಮ ಉಲ್ಲಂಘನೆ ಆಗುತ್ತಿದ್ದರೂ ಸುಮ್ಮನೆ ಕೈಕಟ್ಟಿ ಕುಳಿತಿದ್ದ ಅಧಿಕಾರಿಗಳ ವಿರುದ್ಧವೂ ಶಿಸ್ತುಕ್ರಮ ಜರುಗಿಸಬೇಕು. ಜನಹಿತ ಮರೆತು ವರ್ತಿಸುವವರು ಜನಪ್ರತಿನಿಧಿಗಳಾಗಲು ಲಾಯಕ್ಕಲ್ಲ. ಜನರ ಆರೋಗ್ಯ ಮರೆತು ಬೇಜವಾಬ್ದಾರಿಯಿಂದ ನಡೆದುಕೊಂಡ ತಮ್ಮ ಪಕ್ಷದ ಶಾಸಕರ ಕಿವಿ ಹಿಂಡುವ ಕೆಲಸವನ್ನು ಮುಖ್ಯಮಂತ್ರಿ ಮಾಡಬೇಕು. ಇಲ್ಲದಿದ್ದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ವಿಷಯದಲ್ಲಿ ಸರ್ಕಾರ ಪಕ್ಷಪಾತ ಧೋರಣೆ ಅನುಸರಿಸುತ್ತಿದೆ ಎಂಬ ಆರೋಪಗಳಿಗೆ ಇನ್ನಷ್ಟು ಇಂಬು ದೊರೆತಂತಾಗುತ್ತದೆ ಅಷ್ಟೆ.

ದಿನದ ಟ್ವೀಟ್

ನಮ್ಮಲ್ಲೂ ಆಗಬೇಕಾಗಿದೆ

ಮದ್ಯದ ಚಿಲ್ಲರೆ ಮಾರಾಟ ದರ ಕಡಿತಗೊಳಿಸಲು, ವಿಮಾನ ನಿಲ್ದಾಣಗಳು ಮತ್ತು ಆಯ್ದ ಸೂಪರ್ ಮಾರ್ಕೆಟ್‌ಗಳಲ್ಲಿ ಮದ್ಯ ಮಾರಾಟಕ್ಕೆ ಅನುಮತಿ ನೀಡಲು ಮಧ್ಯಪ್ರದೇಶ ಸರ್ಕಾರ ನಿರ್ಧರಿಸಿದೆ. ಕರ್ನಾಟಕದಲ್ಲೂ ಇಂತಹ ಸುಧಾರಣೆಗಳ ಅಗತ್ಯವಿದೆ.

ಮೋಹನ್‌ದಾಸ್ ಪೈ, ಉದ್ಯಮಿ

ಕಿಡಿನುಡಿ

ಇದೊಂದು ಕಲ್ಲೆದೆಯ ಕ್ರಿಮಿನಲ್ ನಡೆ. ಉಲ್ಬಣಗೊಳ್ಳುತ್ತಿರುವ ಸಾಂಕ್ರಾಮಿಕದ ನಡುವೆ ಜನರು ಬದುಕಿಗಾಗಿ ಹೋರಾಡುತ್ತಿರುವ ಈ ಸಮಯದಲ್ಲಿ, ಮೋದಿ ನೇತೃತ್ವದ ಸರ್ಕಾರವು 2021-22ರಲ್ಲಿ ಬಜೆಟ್‌ನಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಅನುದಾನದಲ್ಲಿ ಶೇ 9.8ರಷ್ಟು ಕಡಿತಗೊಳಿಸಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ವೆಚ್ಚ ಮಾಡುವುದರಲ್ಲಿ ಭಾರತವು 154ನೇ ಸ್ಥಾನದಲ್ಲಿದೆ. ಇದು ಜಾಗತಿಕವಾಗಿ ಕೊನೆಯಿಂದ 5ನೇ ಸ್ಥಾನ. ಆರೋಗ್ಯಕ್ಕೆ ಸಂಬಂಧಿಸಿದ ಬಜೆಟ್ ಮೊತ್ತವನ್ನು ಜಿಡಿಪಿಯ ಪ್ರಸ್ತುತ ಶೇ 1.25ರಿಂದ ಕನಿಷ್ಠ ಶೇ 3ರಷ್ಟು ಆದರೂ ಹೆಚ್ಚಿಸಿ.

ಸೀತಾರಾಂ ಯೆಚೂರಿ, ಸಿಪಿಎಂ ನಾಯಕ

25 ವರ್ಷಗಳ ಹಿಂದೆ

ಸೋಮವಾರ, 20-1-1997

• **ಮಧ್ಯಂತರ ಚುನಾವಣೆ ಇಲ್ಲ: ದೇವೇಗೌಡ**

ಬೆಂಗಳೂರು, ಜ. 19– ಲೋಕಸಭೆಗೆ ಮಧ್ಯಂತರ ಚುನಾವಣೆ ನಡೆಯಲಿದೆ ಎಂಬ ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಅವರ ಹೇಳಿಕೆಯನ್ನು ತಳ್ಳಿಹಾಕಿದ ಪ್ರಧಾನಿ ಎಚ್.ಡಿ.ದೇವೇಗೌಡರು, 'ಇದು ಕೇವಲ ಅಡ್ವಾಣಿ ಅವರ ಕಲ್ಪನೆ' ಎಂದು ಲೇವಡಿ ಮಾಡಿದರು.

ಚೆನ್ನೈನಿಂದ ಇಂದು ನಗರಕ್ಕೆ ಆಗಮಿಸಿದ ಅವರನ್ನು ವಿಮಾನ ನಿಲ್ದಾಣದಲ್ಲಿ ಪತ್ರಕರ್ತರು ಭೇಟಿ ಮಾಡಿ, ಎಲ್.ಕೆ. ಅಡ್ವಾಣಿ ಅವರ '1997, ಚುನಾವಣೆಗಳ ವರ್ಷವಾಗಲಿದೆ. ದೇಶ ಲೋಕಸಭೆಗೆ ಮಧ್ಯಂತರ ಚುನಾವಣೆಯನ್ನು ಎದುರಿಸಲಿದೆ' ಎಂಬ ಹೇಳಿಕೆಯತ್ತ ಗಮನ ಸೆಳೆದಾಗ, 'ಸಂಯುಕ್ತರಂಗ ಸರ್ಕಾರ ಸುಭದ್ರವಾಗಿರುವುದರಿಂದ ಲೋಕಸಭೆಗೆ ಮಧ್ಯಂತರ ಚುನಾವಣೆ ನಡೆಯುವ ಯಾವುದೇ ಸಾಧ್ಯತೆ 'ಇಲ್ಲ' ಎಂದು ಸಮರ್ಥಿಸಿಕೊಂಡರು.

50 ವರ್ಷಗಳ ಹಿಂದೆ

ಗುರುವಾರ, 20-1-1972

• **ಒತ್ತಾಯ ಹೇರುವ ವಿದೇಶಿ ನೆರವಿಗೆ ತಿರಸ್ಕಾರ: ಇಂದಿರಾ**

ಪಾಟ್ನಾ, ಜ. 19– ಹೊರದೇಶಗಳು ತಾವು ನೀಡುವ ನೆರವನ್ನು ಒತ್ತಡದ ಸಾಧನವಾಗಿ ಬಳಸುವುದಿಲ್ಲವೆಂದು ಮನವರಿಕೆಯಾಗದೇ ಅವನ್ನು ಭಾರತ ಸ್ವೀಕರಿಸುವುದಿಲ್ಲವೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ಹೇಳಿದರು.

ಇಲ್ಲಿಗೆ 12 ಕಿ.ಮೀ. ದೂರದಲ್ಲಿರುವ ಬಿಹತಾದಲ್ಲಿ ಭಾರಿ ಬಹಿರಂಗ ಸಭೆಯೊಂದನ್ನು ಉದ್ದೇಶಿಸಿ ಪ್ರಧಾನಿ ಮಾತನಾಡಿ, ಈಚಿನ ಯುದ್ಧವು ಸ್ವಾವಲಂಬಿಯಾಗಬೇಕೆಂಬ ರಾಷ್ಟ್ರದ ನಿರ್ಧಾರವನ್ನು ಮತ್ತಷ್ಟು ಬಲಪಡಿಸಿದೆಯೆಂದರು.

'ರಾಷ್ಟ್ರ ನಿರ್ಮಾಣದ ಬೃಹತ್ ಕಾರ್ಯ ನಿರ್ವಹಿಸುವುದರಲ್ಲಿ ನಾವು ಇತರ ನೆರವು ಕೋರುವುದಿಲ್ಲವೆಂದು ಇದರ ಅರ್ಥವಲ್ಲ. ನಿಬಂಧನೆಗಳಿರುವ ಯಾವುದೇ ವಿದೇಶಿ ನೆರವನ್ನಾದರೂ ನಾವು ದೃಢವಾಗಿ ತಿರಸ್ಕರಿಸುತ್ತೇವೆ' ಎಂದರವರು.

ಉತ್ತರಪ್ರದೇಶದಲ್ಲಿ ಬಿಜೆಪಿ ಮುನ್ನಡೆಸಿರುವ ಹಿಂದೂ ಮಾದರಿಯ ಸರ್ಕಾರ ಹೇಗಿದೆಯೆಂದರೆ...

'ರಾಮರಾಜ್ಯ' ನಿರ್ಮಾಣಕ್ಕಿರುವ ಅಡ್ಡಿ

ವಿಶ್ಲೇಷಣೆ

ಅರುಣ್ ಸಿನ್ಹಾ

ಮುಂದಿನ ತಿಂಗಳು ಚುನಾವಣೆ ಎದುರಿಸಲಿರುವ ಅಷ್ಟೂ ರಾಜ್ಯಗಳ ಪೈಕಿ ಬಿಜೆಪಿಗೆ ಅತಿದೊಡ್ಡ ಸವಾಲಿನದು ಉತ್ತರಪ್ರದೇಶ. ಬಿಜೆಪಿಯು ಈ ರಾಜ್ಯವನ್ನು 'ಹಿಂದೂ ಮಾದರಿ' ಸರ್ಕಾರದ ಪ್ರಯೋಗಶಾಲೆಯಾಗಿ ಬಳಸಿಕೊಂಡು ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಪ್ರಕಾರ, ಈ ಮಾದರಿಯು ಪರಂಪರೆಯನ್ನು ಅಭಿವೃದ್ಧಿಯ ಜೊತೆ ಬೆರೆಸುವಂಥದ್ದು. ಈ ಮಾದರಿಯನ್ನು ಅತ್ಯುತ್ತಮವಾಗಿ ಅನುಷ್ಠಾನಕ್ಕೆ ತರಲು ಯೋಗಿ ಆದಿತ್ಯನಾಥ ಸೂಕ್ತ ವ್ಯಕ್ತಿ ಎಂದು ಪಕ್ಷವು ಭಾವಿಸಿ, ಅವರನ್ನು ಅಲ್ಲಿನ ಮುಖ್ಯಮಂತ್ರಿಯನ್ನಾಗಿಸಿತು. ಪಕ್ಷದ ಅಂದಾಜಿನ ಪ್ರಕಾರ, ಅವರು ತಮ್ಮ ಕೆಲಸವನ್ನು ಅಸಾಮಾನ್ಯವೆಂಬಂತೆ ನಿರ್ವಹಿಸಿದ್ದಾರೆ. ಯೋಗಿ ತಮ್ಮ ಎಲ್ಲ ಭಾಷಣಗಳಲ್ಲಿ ರಾಮ ಮಂದಿರ (ಪರಂಪರೆ) ಹಾಗೂ ಎಕ್ಸ್‌ಪ್ರೆಸ್‌ವೇ ಮತ್ತು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳ (ಅಭಿವೃದ್ಧಿ) ಬಗ್ಗೆ ಉಲ್ಲೇಖಿಸುತ್ತಾರೆ.

ಹಿಂದುತ್ವ ಸಿದ್ಧಾಂತದ ಚಾಲಕ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್). ಬಿಜೆಪಿಯು ಅದರ ವಾಹನ ಮಾತ್ರ. ಪರಂಪರೆ ಮತ್ತು ಅಭಿವೃದ್ಧಿಯನ್ನು ಬೆಸೆಯುವ ಹಿಂದೂ ಮಾದರಿ ಸರ್ಕಾರವು ಆರ್‌ಎಸ್‌ಎಸ್‌ನ ಪರಿಕಲ್ಪನೆ. ರಾಮ ಮಂದಿರಕ್ಕಾಗಿನ ಹೋರಾಟದಲ್ಲಿ ಗೆಲುವು ಸಾಧಿಸಿರುವ ಸಂಘವು ಮುಂದಿನ 25 ವರ್ಷಗಳಲ್ಲಿ 'ರಾಮರಾಜ್ಯ' ಸ್ಥಾಪನೆಯ ಗುರಿ ಇಟ್ಟುಕೊಂಡಿದೆ ಎಂಬುದು ಅದರ ನಾಯಕರ ಭಾಷಣಗಳನ್ನು ಕೇಳುತ್ತಿರುವವರಿಗೆ ಗೊತ್ತಿರುತ್ತದೆ. 'ರಾಮರಾಜ್ಯ'ವೆಂಬುದು ಹಿಂದೂ ರಾಷ್ಟ್ರಕ್ಕೆ ಇರುವ ಇನ್ನೊಂದು ಹೆಸರು. ರಾಮರಾಜ್ಯದ ಪರಿಕಲ್ಪನೆಯು ಜನಸಮುದಾಯಕ್ಕೆ ಹಿಂದೂರಾಷ್ಟ್ರ ಪರಿಕಲ್ಪನೆಗಿಂತಲೂ ಹೆಚ್ಚು ಹತ್ತಿರವಾಗಬಲ್ಲದು, ಬಹುತ್ವವಾದಿಗಳ ಟೀಕೆಯಿಂದ ಸುರಕ್ಷಿತವಾಗಿಯೂ ಉಳಿಯಬಲ್ಲದು ಎಂಬುದನ್ನು ಆರ್‌ಎಸ್‌ಎಸ್ ಕಂಡುಕೊಂಡಂತಿದೆ.

ಪ್ರಧಾನಿಯವರು ಪರಂಪರೆ ಹಾಗೂ ಅಭಿವೃದ್ಧಿಯ ಮಾತು ಆಡಿದಾಗ, ಅವು ಜನಸಾಮಾನ್ಯರ ಕಣ್ಣಿಗೆ ಎರಡು ಪರಿಕಲ್ಪನೆಗಳಂತೆ ಕಾಣಿಸಬಹುದು. ಆದರೆ, ಆರ್‌ಎಸ್‌ಎಸ್‌ಗೆ ಅವು ಬೇರೆಬೇರೆ ಅಲ್ಲ. ರಾಮಭಕ್ತಿ ಎಂಬ ಒಂದೇ ಪರಿಕಲ್ಪನೆಯಿಂದ ಉದಯಿಸಿದವು ಅವು. ಆಡಳಿತ ನಡೆಸುವವನು ರಾಮನ ಭಕ್ತ ಆಗಿರಬೇಕು ಮತ್ತು ಆತ ಅಭಿವೃದ್ಧಿಯನ್ನು ಸಾಧ್ಯವಾಗಿಸಬೇಕು– ರಾಮನು ಅಯೋಧ್ಯೆಯ ರಾಜನಾಗಿ ತನ್ನ ಪ್ರಜೆಗಳನ್ನು ನೋಡಿಕೊಂಡಂತೆ. ಆ ಮೂಲಕ ರಾಮರಾಜ್ಯವನ್ನು ಸ್ಥಾಪಿಸಬಹುದು. ಇದು ಬಿಜೆಪಿಯು ಉತ್ತರಪ್ರದೇಶದಲ್ಲಿ ಸ್ಥಾಪಿಸಲು ಯತ್ನಿಸುತ್ತಿರುವ ಹಿಂದೂ ಮಾದರಿಯ ಸರ್ಕಾರ.

ಸಾಮಾಜಿಕ ಒಳಗೊಳ್ಳುವಿಕೆಯ ವಿಚಾರದಲ್ಲಿ ಸಮಾಜವಾದಿ ಪಕ್ಷದ ಸಾಮಾಜಿಕ ನ್ಯಾಯ ಮಾದರಿಗಿಂತಲೂ ಹಿಂದೂ ಮಾದರಿಯ ಅಭಿವೃದ್ಧಿ ಹೆಚ್ಚು ಉತ್ತಮ ಎಂಬುದನ್ನು ಸಾಬೀತು ಮಾಡಲು ಮೋದಿ ಮತ್ತು ಯೋಗಿ ಹರಸಾಹಸಪಡುತ್ತಿದ್ದಾರೆ. ಸಮಾಜವಾದಿ ಪಕ್ಷದ ಸರ್ಕಾರವು ಸೌಲಭ್ಯಗಳನ್ನು ಕೆಲವು ಜಾತಿಗಳಿಗೆ ಮಾತ್ರ ಒದಗಿಸಿತ್ತು. ಆದರೆ, ಹಿಂದೂ ಮಾದರಿಯು ಸೌಲಭ್ಯಗಳನ್ನು ಎಲ್ಲ ಜಾತಿಗಳು ಮತ್ತು ಸಮುದಾಯಗಳಿಗೆ ಒದಗಿಸಿದೆ ಎಂದು ಅವರು ಹೇಳುತ್ತಿದ್ದಾರೆ. ತಮ್ಮ ಆಡಳಿತ ಅವಧಿಯಲ್ಲಿ ಸಾಮಾಜಿಕ ಸೌಹಾರ್ದ ಮತ್ತು ಸಾಮಾಜಿಕ ಸಮಾನತೆ ನಿಜವಾಗಿಯೂ ಮೂಡಿದೆ ಎಂದೂ ಹೇಳುತ್ತಿದ್ದಾರೆ. ಈಚಿನ ವರ್ಷಗಳಲ್ಲಿ ಬಿಜೆಪಿಗೆ ಯಾದವೇತರ ಹಿಂದುಳಿದ ವರ್ಗಗಳು ಮತ್ತು ದಲಿತರಿಂದ ಸಿಗುತ್ತಿರುವ ಬೆಂಬಲವನ್ನು ತಮ್ಮ ಮಾತಿಗೆ ಆಧಾರವಾಗಿ ತೋರಿಸುತ್ತಿದ್ದಾರೆ. ಮೋದಿ ಮತ್ತು ಯೋಗಿ ಅವರನ್ನು ನಂಬುವುದಾದಲ್ಲಿ, ಉತ್ತರ ಪ್ರದೇಶವು ರಾಮರಾಜ್ಯವಾಗುವ ಹಾದಿಯಲ್ಲಿದೆ ಮತ್ತು ಅಲ್ಲಿ ರಾಮಭಕ್ತ ಆಡಳಿತಗಾರ ರಾಮನಂತೆಯೇ ಪ್ರಾಮಾಣಿಕವಾಗಿ, ನ್ಯಾಯಬದ್ಧವಾಗಿ, ನಿಷ್ಪಕ್ಷಪಾತವಾಗಿ ಆಡಳಿತ ನಡೆಸುತ್ತಿದ್ದಾರೆ.

ಆದರೆ ಪರಿಸ್ಥಿತಿ ಹಾಗಿಲ್ಲ ಎನ್ನುವುದು ಚುನಾವಣೆ ಘೋಷಣೆ ಆದಾಗ ಗೊತ್ತಾಯಿತು. ಯಾದವೇತರ ಹಿಂದುಳಿದ ವರ್ಗಗಳ ಬೆಂಬಲವನ್ನು ನೆಚ್ಚಿಕೊಂಡು ರಾಜಕೀಯ ಬದುಕು ಕಟ್ಟಿಕೊಂಡಿರುವ ಬಿಜೆಪಿಯ ಹಲವು ಶಾಸಕರು ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದರು. ಅವರ ಕ್ಷೇತ್ರದ ಜನ ಬಿಜೆಪಿಯ ಸಾಧನೆಯಿಂದ ಅತೃಪ್ತರಾಗಿದ್ದರು ಎಂಬುದನ್ನು ರಾಜೀನಾಮೆ ಸೂಚಿಸುತ್ತದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅಡಿ ಮನೆಗಳನ್ನು ನಿರ್ಮಿಸಿಕೊಳ್ಳಲು ಹಲವು ಗ್ರಾಮಗಳ ತಳವರ್ಗಗಳ ಜನರಿಗೆ ಹಣಕಾಸಿನ ನೆರವು ನಿರಾಕರಿಸಲಾಗಿದೆ ಎಂದು ವರದಿಗಳು ಹೇಳುತ್ತವೆ. ಸ್ಥಳೀಯ ಅಧಿಕಾರಿಗಳು ಕೇಳಿದಷ್ಟು ಲಂಚವನ್ನು ಕೊಡಲು ಇವರಿಗೆ ಸಾಧ್ಯವಾಗದ ಕಾರಣದಿಂದಾಗಿ ನೆರವು ನಿರಾಕರಣೆ ಆಗಿದೆ. ಪ್ರಧಾನಿಯವರನ್ನು ವಾರಾಣಸಿಯ ಸಂಸದರನ್ನಾಗಿ ಆಯ್ಕೆ ಮಾಡಿದ ಜಯಪುರ ಗ್ರಾಮದಲ್ಲಿಯೂ ಈ ರೀತಿ ಆಗಿದೆ. ಬಯಲು ಶೌಚ ಮುಕ್ತ ಗ್ರಾಮ ಎಂಬ ಹೆಗ್ಗಳಿಕೆ ಹೊತ್ತ ಕೆಲವು ಹಳ್ಳಿಗಳಲ್ಲಿ ಬಡವರು ಶೌಚಾಲಯ ಹೊಂದಿರಲಿಲ್ಲ.

ಮಹಿಳೆಯರ ಜೀವನವನ್ನು ಸುಭದ್ರಗೊಳಿಸಿದ್ದಾಗಿ ಯೋಗಿ ಹೇಳಿಕೊಂಡಿದ್ದರು. ಆದರೆ, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ ಪ್ರಕಾರ, 2020ರಲ್ಲಿ ಮಹಿಳೆಯ ಘನತೆಗೆ ಚ್ಯುತಿ ತರುವ ಉದ್ದೇಶದ ಒಟ್ಟು 9,864 ಪ್ರಕರಣಗಳು ವರದಿಯಾಗಿವೆ. ತಳ ವರ್ಗಗಳಿಗೆ ಅನ್ಯಾಯವಾದ ಪ್ರತೀ ಪ್ರಕರಣದಲ್ಲಿಯೂ ಅನ್ಯಾಯ ಎಸಗಿದವರು ಮೇಲ್ವರ್ಗದವರೇ ಆಗಿದ್ದಾರೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಅಡಿಯಲ್ಲಿ ಲಂಚ ಕೇಳಿದವರು, ಹಳ್ಳಿಗಳಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದವರು, ಅಪರಾಧ ಎಸಗಿದವರ ಪರವಾಗಿ ನಿಂತು ಕೆಲಸ ಮಾಡಿದ ಪೊಲೀಸರು... ಇವರೆಲ್ಲ ಮೇಲ್ವರ್ಗಗಳಿಗೆ ಸೇರಿದವರು. ಈ ತಾರತಮ್ಯವು ಯೋಗಿ ಆಡಳಿತದಲ್ಲಿ ಬದಲಾವಣೆ ಕಾಣಲಿಲ್ಲ. ಹೀಗಾಗಿ, ತಳವರ್ಗಗಳ ಜನರಲ್ಲಿ ಬಿಜೆಪಿ ಬಗ್ಗೆ ಅಸಮಾಧಾನ ಉಂಟಾಗಿದೆ.



ಅತೃಪ್ತಿಗೆ ಇಂಬು ಕೊಟ್ಟ ಇನ್ನೊಂದು ಅಂಶವೂ ಇದೆ. ಬಿಜೆಪಿಯು ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಅಧ್ಯಯನ ನಡೆಸುವ ಉದ್ದೇಶದ ಜಾತಿ ಗಣತಿಗೆ ವಿರೋಧ ವ್ಯಕ್ತಪಡಿಸಿತು. ಈ ಜಾತಿ ಗಣತಿ ನಡೆಯದ ಹೊರತು ಸರ್ಕಾರಿ ಉದ್ಯೋಗಗಳು ಹಾಗೂ ಕಾಲೇಜು ಪ್ರವೇಶಕ್ಕೆ ಸಂಬಂಧಿಸಿದ ಸೌಲಭ್ಯಗಳು ಸಮಾನವಾಗಿ ಹಂಚಿಕೆ ಆಗುವುದಿಲ್ಲ ಎಂದು ಹಿಂದುಳಿದ ವರ್ಗಗಳ ಪೈಕಿ ಬಡ ಸಮುದಾಯಗಳಿಗೆ ಸೇರಿದವರು ತೀರ್ಮಾನಿಸಿದ್ದಾರೆ. ಇತರೆ ಹಿಂದುಳಿದ ಸಮುದಾಯಗಳಿಗೆ (ಒಬಿಸಿ) ನೀಡಿರುವ ಶೇಕಡ 27ರಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗಗಳು (ಶೇ 7ರಷ್ಟು), ಹೆಚ್ಚು ಹಿಂದುಳಿದ ವರ್ಗಗಳು (ಶೇ 11ರಷ್ಟು) ಮತ್ತು ಅತಿಹೆಚ್ಚು ಹಿಂದುಳಿದ ವರ್ಗಗಳ (ಶೇ 9ರಷ್ಟು) ನಡುವೆ ಮರುಹಂಚಿಕೆ ಮಾಡಬೇಕು ಎಂದು ಸಾಮಾಜಿಕ ನ್ಯಾಯ ಸಮಿತಿ ನೀಡಿದ್ದ ಶಿಫಾರಸು ಅನುಷ್ಠಾನಕ್ಕೆ ತರುವುದಕ್ಕೂ ಯೋಗಿ ನೇತೃತ್ವದ ಸರ್ಕಾರ ಹಿಂದೇಟು ಹಾಕಿದೆ.

ಹಿಂದುತ್ವದ ಅಡಿಯಲ್ಲಿ ಎಲ್ಲ ಜಾತಿಗಳನ್ನೂ ಸುಭದ್ರವಾಗಿ ಒಂದೆಡೆ ಸೇರಿಸಬಹುದು ಎಂದು ಬಿಜೆಪಿ ಹೊಂದಿದ್ದ ಭ್ರಮೆಯನ್ನು ತಳ ವರ್ಗಗಳಲ್ಲಿ ಮೂಡಿರುವ ಅತೃಪ್ತಿಯು ಒಡೆದುಹಾಕಿದೆ. ತಳವರ್ಗಗಳಿಗೆ ಭದ್ರತೆ, ಘನತೆಯ ಬದುಕು, ಸಾಮಾಜಿಕವಾಗಿ ಮೇಲ್ಮುಖ ಚಲನೆ ಬೇಕಿದೆ. ಈ ವರ್ಗಗಳಿಗೆ ಸೇರಿದವರು ಹಿಂದೂ ಏಕತೆಗಾಗಿ ತಮ್ಮ ಈ ಬಯಕೆಗಳನ್ನು ಬಿಟ್ಟುಕೊಡುವವರಲ್ಲ. ಹಿಂದೂ ಏಕತೆ ಎಂಬುದು ಈ ವರ್ಗಗಳ ಪಾಲಿಗೆ ಮರೀಚಿಕೆ ಇದ್ದಂತೆ ಎಂಬುದು ಸಾಬೀತಾಗಿದೆ. ಅವರಿಗೆ ಹಿಂದೂ ಏಕತೆಯು ಆಳವಾದ ಸಾಮಾಜಿಕ ಮತ್ತು ಆರ್ಥಿಕ ತರತಮಗಳನ್ನು ಶಾಶ್ವತಗೊಳಿಸುವಂಥದ್ದು.

ಬಿಜೆಪಿ ನಿರ್ಮಿಸಿದ್ದ ಸಾಮಾಜಿಕ ಮೈತ್ರಿಕೂಟದ ಅಳಿದುಳಿದ ಚೂರುಗಳ ಅಡಿಯಲ್ಲಿ ಹಿಂದುತ್ವ ಮುಚ್ಚಿಹೋಗಿದೆ. ಇದರಲ್ಲಿ ಪಕ್ಷಕ್ಕೆ ಇರುವ ಬಹುದೊಡ್ಡ ಪಾಠ: ಹಿಂದುತ್ವದ ಅಡಿಯಲ್ಲಿ ಎಲ್ಲ ಜಾತಿಗಳನ್ನು ಒಗ್ಗೂಡಿಸುವ ಮೊದಲು ಪಕ್ಷವು ಮೂಲಭೂತ ಸಮಸ್ಯೆಗಳಾದ ಸಾಮಾಜಿಕ ಅನ್ಯಾಯ, ಆರ್ಥಿಕ ದಬ್ಬಾಳಿಕೆ, ಸಾಮಾಜಿಕ ಅಸಮಾನತೆ ಮತ್ತು ಆಡಳಿತಾತ್ಮಕ ತಾರತಮ್ಯ, ತಳವರ್ಗಗಳಿಗೆ ಸೇರಿದವರು ಎದುರಿಸಬೇಕಾದ ಭ್ರಷ್ಟಾಚಾರದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಆದರೆ, ಮೇಲ್ವರ್ಗದವರು ಪಕ್ಷದ ಮುಖ್ಯ ಮತಬ್ಯಾಂಕ್ ಆಗಿರುವವರೆಗೆ ಬಿಜೆಪಿಗೆ ಈ ಎಲ್ಲ ಕೆಲಸಗಳನ್ನು ಆದ್ಯತೆಯ ಮೇಲೆ ಮಾಡಲಾಗುವುದಿಲ್ಲ. ಇದರಿಂದಾಗಿ ಪಕ್ಷವು ಶಾಶ್ವತವಾಗಿ ಗೊಂದಲದ ಸ್ಥಿತಿಯಲ್ಲಿ ಇರಲಿದೆ. ಪಕ್ಷವು ಮುಂದಿನ ವರ್ಷಗಳಲ್ಲಿ ಈ ಗೊಂದಲವನ್ನು ಹೇಗೆ ಪರಿಹರಿಸಿಕೊಳ್ಳುತ್ತದೆ ಎಂಬುದನ್ನು ನೋಡಬೇಕಿದೆ.

ಚುರುಮುರಿ

ಕೌಟುಂಬಿಕ ಕಲಾಪ

• ಎಸ್.ಬಿ.ರಂಗನಾಥ್

'ಯಾಕೆ ಸಪ್ಪಗಿದೀಯೋ, ಸಂಕ್ರಾಂತಿ ಸಂಭ್ರಮದ ಹ್ಯಾಂಗೋವರ್ ಇನ್ನೂ ಕ್ಲಿಯರ್ ಆಗಿಲ್ವೇನಯ್ಯಾ?', ಚಡ್ಡಿ ದೋಸ್ತನನ್ನ ಕೇಳಿದೆ.

'ಏನು ಸಂಭ್ರಮಾನೋ, ಈ ಕೊರೊನಾ ಕಾಲ್ದಲ್ಲಿ! ನೈಟ್ ಕರ್ಫ್ಯೂ, ವೀಕೆಂಡ್ ಕರ್ಫ್ಯೂ... ಅಲ್ದೆ, ಮನೇಲಿ ಅಡಕತ್ತರೀಲಿ ಸಿಕ್ಕೊಂಡಿದೀನಿ' ಎಂದ.

'ಮತ್ತೆ ಅತ್ತೆ ಸೊಸೆಯರ ಜಗಳವೇನೋ?'

'ಹೌದಯ್ಯಾ, ಇಬ್ಬರೂ ಕೋರ್ಟ್ ಜಡ್ಜ್‌ಮೆಂಟ್‌ಗಳನ್ನ ಕೋಟ್ ಮಾಡ್ತಾರೆ!'

'ಏನಂತಾ?'

'ಹೆಂಡತಿ ಫೋನಲ್ಲಿ ಅತ್ತೆಗೆ ಬೈದಿರೋದನ್ನ, ಆಕೆಗೆ ಗೊತ್ತಾಗ್ದಂತೆ ನಾನು ರೆಕಾರ್ಡ್ ಮಾಡ್ಕೊಂಡಿರೋದು ಪಂಜಾಬ್- ಹರಿಯಾಣ ಹೈಕೋರ್ಟ್ ಪ್ರಕಾರ ಅಪರಾಧ ಅಂತಾಳೆ!'

'ಆ ತೀರ್ಪನ್ನ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದಾರಲ್ಲ... ಆ ಅಪರಾಧಕ್ಕೆ ಶಿಕ್ಷೆ ಏನು ಕೊಡ್ತಾರಂತೆ ನಿನ್ನ ಶ್ರೀಮತಿ?'

'ಅಮ್ಮ ತನಪ್ತ್ರ ಇಟ್ಕೊಂಡಿರೋ ಆಕೆ ಒಡವೆಗಳನ್ನ ವಾಪಸ್ ಕೊಡಿಸ್ಬೇಕಂತೆ...'

'ಅಮ್ಮ ಏನಂದ್ರು?'

'ಪಂಜಾಬ್ ಮಹಿಳೆಯೊಬ್ಬರ ಇಂಥ ದೂರಿನ ಬಗ್ಗೆ, ಸುಪ್ರೀಂ ಕೋರ್ಟ್ 'ಇದು ತಪ್ಪಲ್ಲ' ಎಂದಿದೆ, ಈ ತೀರ್ಪು ಕೊಟ್ಟಿರೋ ಇಬ್ಬರಲ್ಲಿ ಒಬ್ರು ಮಹಿಳಾ ನ್ಯಾಯಮೂರ್ತಿ ಅಂತ ಪೇಪರ್ ತೋರಿಸಿದ್ರು!'

'ಅದಕ್ಕೆ ನಿನ್ನ ಹೆಂಡ್ತಿ ಏನಂತಾರೋ?'

'ನಾನು ವರದಕ್ಷಿಣೆ ಕಿರುಕುಳಾಂತ ದೂರು ಕೊಡ್ತೀನಿ. ಸುಪ್ರೀಂ ಕೋರ್ಟ್ ಇದು ಶಿಕ್ಷಾರ್ಹ ಅಪರಾಧಾಂತ ಮೊನ್ನೆ ತಮಿಳುನಾಡು ಪ್ರಕರಣವೊಂದರಲ್ಲಿ ಹೇಳಿದೆಯಲ್ಲಾ. ಆ ಜಡ್ಜ್‌ಮೆಂಟ್ ಕೊಟ್ಟೋರಲ್ಲಿ ಒಬ್ರು ಕರ್ನಾಟಕದ ಮಹಿಳಾ ನ್ಯಾಯಮೂರ್ತಿಗಳು ಅಂತಾಳೆ'.

'ಹೌದು ಕಣಯ್ಯ, ಆ ಕೇಸಿನಲ್ಲಿ ಅತ್ತೆಗೆ ಒಂದು ವರ್ಷ ಜೈಲು ಶಿಕ್ಷೆ ಆಗಿದೆ'.

'ದಯವಿಟ್ಟು ನೀನು ನಮ್ಮ ಮನೆಗೆ ಬಂದು, ಫ್ಯಾಮಿಲಿ ಕೋರ್ಟ್ ನ್ಯಾಯಾಧೀಶನಾಗಿ ತೀರ್ಪಿತ್ತು ನನ್ನನ್ನು ಪಾರುಮಾಡ್ತೀಯಾ, ಪ್ಲೀಸ್'.

'ಅದಕ್ಕೆ ಫೀಸು ಕೊಡ್ಬೇಕಾಗುತ್ತೆ'.

'ಆಗ್ಲಯ್ಯಾ, ನೀನೇನು ದುಬಾರಿ ಗುಂಡು ಪಾರ್ಟಿಯಲ್ವಲ್ಲಾ, ಟೀಟೋಟಲರ್!' ಎನ್ನುತ್ತಾ ಮಿತ್ರ ಹೆಗಲ ಮೇಲೆ ಕೈಹಾಕಿ ಕರೆದೊಯ್ದ.

ಚರ್ಚೆ

'ಎಲ್ಲರ ಕನ್ನಡ': ತಕರಾರೇಕೆ?

ಅಲ್ಪಪ್ರಾಣ, ಮಹಾಪ್ರಾಣಗಳ ಮಾತುಕತೆಯ ಹಿಂದೆ 'ಸಂಸ್ಕೃತಾಂತರ'ದ ಸಾಂಸ್ಕೃತಿಕ ರಾಜಕಾರಣವಿದೆ

• ಡಾ. ಆರ್.ಚಲಪತಿ

'ಎಲ್ಲರ ಕನ್ನಡ': ಸಾಧ್ಯತೆ, ಸವಾಲು' ಎಂಬ ಲೇಖನದಲ್ಲಿ (ಪ್ರ.ವಾ., ಜ. 5) ಟಿ.ಎನ್.ವಾಸುದೇವಮೂರ್ತಿ ಅವರು ಹೇಳುವಂತೆ, ಭಾಷೆಗೆ ಸೈದ್ಧಾಂತಿಕ ಸರಿತನದ ಗೊಡವೆ ಇರುತ್ತದೆ- ಇರುವುದಿಲ್ಲ ಎನ್ನುವುದು ಚರ್ಚೆಯ ವಿಚಾರವೇ ಅಲ್ಲ. ಬದಲಾಗಿ, 'ಸಮಾಜ ಮತ್ತು ಭಾಷೆಯ ನಂಟಿನಲ್ಲಿ' ಹುಟ್ಟುಪಡೆಯುವ ಯಾವುದೇ ಒಂದು ಸಿದ್ಧಾಂತ ಆಯಾ ಸಮಾಜದ ಸಾಂಸ್ಕೃತಿಕ ಬೇರುಗಳನ್ನು ಗಟ್ಟಿಗೊಳಿಸುವುದಾಗಿರುತ್ತದೆ.

ಇಂಗ್ಲಿಷಿನ ಸಮಾಜಗಳಲ್ಲಿ ಹುಟ್ಟಿದ ಸಿದ್ಧಾಂತಗಳನ್ನು ಬಳಸುತ್ತಿರುವುದರಿಂದ ಜನದೂರ ನಿಂತಿರುವ 'ಜ್ಞಾನ'ದ ಗೋಜಲುಗಳನ್ನು ಗಮನಿಸಿದರೆ ಇದು ತಿಳಿಯುತ್ತದೆ. ಇದನ್ನು ಅರಿಯದ ಅವರು 'ಮೇಲ್ವರ್ಗದ ಸಂಸ್ಕೃತಿ, ಭಾಷೆ, ಆಚಾರ ವಿಚಾರ'ಗಳನ್ನು ಅನುಕರಿಸುವುದು, ಅಳವಡಿಸಿಕೊಳ್ಳುವುದರ ಸಾಧ್ಯತೆಯನ್ನು ಒತ್ತಾಯಿಸಿದ್ದಾರೆ. ಕನ್ನಡದ ನೆಪದಲ್ಲಿ 'ಸಂಸ್ಕೃತ ವ್ಯಾಕರಣತತ್ವ'ವನ್ನು ಕಲಿಯಲೇಬೇಕಾದ ಮತ್ತು ಕಲಿಸುತ್ತಿರುವ ಮೇಲ್ವರ್ಗದ ಆಚಾರವಿಚಾರಗಳನ್ನು ಬೆಂಬಲಿಸಿದ್ದಾರೆ. ಯಾಕೆಂದರೆ ಇವತ್ತಿಗೂ ಕನ್ನಡ ಕಲಿಯುವ ಮಕ್ಕಳು 'ಅಲ್ಪಪ್ರಾಣ, ಮಹಾಪ್ರಾಣ'ಗಳ ಮೂಲಕಾರಣದಿಂದಾಗಿಯೇ 'ಕನ್ನಡ ಸಂಧಿಗಳು, ಸಂಸ್ಕೃತ ಸಂಧಿಗಳು' ಎಂದು 'ಕನ್ನಡ ವ್ಯಾಕರಣ'ದ ಜೊತೆಯಲ್ಲಿ 'ಸಂಸ್ಕೃತ ವ್ಯಾಕರಣ'ವನ್ನೂ ಕಲಿಯಬೇಕಾದ ಇಕ್ಕಟ್ಟಿದೆ. ಇದನ್ನು ಗ್ರಹಿಸಿದರೆ 'ಎಲ್ಲರ ಕನ್ನಡ' ಎದುರಿಸುತ್ತಿರುವ ಸವಾಲು ಏನೆಂಬುದು ತಿಳಿಯುತ್ತದೆ.

ಇನ್ನು, ಲಿಪಿ ಬದಲಾವಣೆಯನ್ನು ಬಲವಂತವಾಗಿ ಮಾಡಿದರೆ ಹಳೆಯಕಾಲದ ಸಾಹಿತ್ಯವನ್ನು ಮುಂದಿನ ಪೀಳಿಗೆ ಓದಲಾಗುವುದಿಲ್ಲ ಎನ್ನುವುದು ಪ್ರತಿಭಾ ನಂದಕುಮಾರ್ ಅವರ 'ಎಲ್ಲರ ಕನ್ನಡ'ದ ಬಗೆಗಿನ ತಕರಾರು (ಚರ್ಚೆ, ಜ. 7). ಇದಕ್ಕೆ ಅವರು ಕೊಡುವ ಉದಾಹರಣೆ, ಜಗತ್ತಿನಲ್ಲಿ ಹರಡಿಕೊಂಡು ಬೆಳೆದಿರುವ ಇಂಗ್ಲಿಷಿನ ಸನ್ನಿವೇಶ. ಅವರ ಮುಖ್ಯ ಕೇಳ್ವಿಯಿರುವುದು 'ಅಲ್ಪಪ್ರಾಣ ಮಹಾಪ್ರಾಣದ ಬಳಕೆಯನ್ನೇ ಸಂಸ್ಕೃತಿಯ ವ್ಯಾಖ್ಯಾನ ಎಂದು ವಾದ' ಹೂಡುವವರ ವಿರುದ್ಧ. ಅದನ್ನು ಅವರು ನೆಗಡಿ ಬಂದರೆ ಮೂಗನ್ನೇ ಕತ್ತರಿಸುವ ಭಂಡತನ ಎಂದಿದ್ದಾರೆ. ಇರಲಿ, ನನ್ನನ್ನೂ ಒಳಗೊಂಡಂತೆ ಇದು ಜನಬದುಕುಗಳನ್ನು ಅವರಾಡುವ ಭಾಷೆಯೊಂದಿಗೆ ಸಮಗ್ರವಾಗಿ ಗ್ರಹಿಸದ ಯಾರಲ್ಲಿಯೂ ಇರಬಹುದಾದ ತೊಡಕು.

ಮುಂದಿನ ತಲೆಮಾರು ಪ್ರಾಚೀನ ಕನ್ನಡವನ್ನು ಓದಲು ಬೇಕಾಗಿರುವಂತಹ ಹೊಸಗನ್ನಡದ ಕಾಲದಲ್ಲಿ ರೂಪುಗೊಂಡಿರುವ ತಿಳಿಗನ್ನಡದ ದಾರಿಗಳು ನೂರಾರಿವೆ. ಅದರಲ್ಲಿಯೂ ಲಿಪಿ ಬಳಕೆಯ ಬದಲಾವಣೆಯ ಈ ಸವಾಲಿನಲ್ಲಿ ಪ್ರತಿಭಾ ಅವರ ಗಮನವಿರುವುದು ಸಾಹಿತ್ಯ ಮತ್ತು ಸಿನಿಮಾ ಸಾಹಿತ್ಯದ ಕಡೆಗೆ ಮಾತ್ರ. ಕನ್ನಡವನ್ನು ಬದಲಾಯಿಸುವ ಶಕ್ತಿಯಿರುವುದು ಸಾಹಿತಿಯೂ ಆಗಿರುವ ಅವರಿಗೆ, ಸಾಹಿತ್ಯಕ್ಕೆ ಮಾತ್ರ ಎಂಬಂತಿದೆ ಅವರ ವಾದ.

ವಾಣಿಜ್ಯ, ಗಣಿತ, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ, ಯಂತ್ರಜ್ಞಾನ, ವ್ಯವಸಾಯ, ವ್ಯವಹಾರ ಮೊದಲಾಗಿ ಎಷ್ಟೆಲ್ಲಾ 'ಜ್ಞಾನ'ದ ವಲಯಗಳಿವೆ. ಅವಕ್ಕೂ ಜನಬದುಕಿನಲ್ಲಿರುವ ಕನ್ನಡಕ್ಕೂ ಇರುವ ನಂಟನ್ನು 'ತಿಳಿವಿನ' ನೆಲೆಯಲ್ಲಿ, ಕಲಿಕೆ ಮತ್ತು ಬಳಕೆಯ ನೆಲೆಯಲ್ಲಿ ರೂಢಿಸಿಕೊಳ್ಳಲಾಗಿದೆಯೇ? 'ಎಲ್ಲರ ಕನ್ನಡ'ದ ತಾತ್ವಿಕ ಪ್ರಶ್ನೆಯಿರುವುದು ಇಲ್ಲಿ.

'ಅಲ್ಪಪ್ರಾಣ, ಮಹಾಪ್ರಾಣ'ಗಳ ಮಾತುಕತೆಯ ಹಿಂದೆ 'ಸಂಸ್ಕೃತಾಂತರ'ದ ಸಾಂಸ್ಕೃತಿಕ ರಾಜಕಾರಣವಿದೆ. ಆಧುನಿಕ ಕಾಲದಲ್ಲಿ ರೂಪುಗೊಂಡಿರುವ ಕನ್ನಡ ಪದನೆರಿಕೆಗಳನ್ನು (ನಿಘಂಟು) ನೋಡಿದರೆ, ಕನ್ನಡದ ನೆಪದಲ್ಲಿ ಸಂಸ್ಕೃತ ಪದಗಳು ಕನ್ನಡ ಕಲಿಕೆಯ ರಾಜ್ಯವನ್ನು ಆಳುತ್ತಿವೆ. ಗಣಿತ, ವಿಜ್ಞಾನ ಮೊದಲಾಗಿ ಅನೇಕ ಕಲಿಕೆಯ ಪುಸ್ತಕಗಳ ಸಂಸ್ಕೃತ ಪದಗಳ ತಿರುಳನ್ನು ತಿಳಿಯುವ ಸಲುವಾಗಿ ಇಂಗ್ಲಿಷಿನ ನಿಘಂಟುಗಳಿಗೆ ಮೊರೆ ಹೋಗಲಾಗುತ್ತದೆ. ಇಂಗ್ಲಿಷ್ ಮೀಡಿಯಮ್ಮನ್ನೇ ಆಯ್ಕೆ ಮಾಡಿಕೊಂಡುಬಿಟ್ಟರೆ ಈ ತೊಂದರೆಯಿಂದ ದೂರ ಸರಿದಂತಾಗುತ್ತದೆಯಲ್ಲಾ ಎನ್ನುವಂತಹ ಭಾವನೆಯೇ ಬೆಳೆದುಬಿಟ್ಟಿದೆ. ಅತಿಮಾನ್ಯತೆಯನ್ನು ಕೊಟ್ಟು ಪ್ರಾದೇಶಿಕ ಭಾಷೆಗಳೊಳಕ್ಕೆ ಸಂಸ್ಕೃತವನ್ನು ಹರಡುತ್ತಿರುವುದರ ಹಿಂದೆ, ಇಂಗ್ಲಿಷ್ ಕಲಿಕೆ ಮತ್ತು ಬಳಕೆಯ ಒತ್ತಾಯಗಳ ಹಿಂದೆ ಸಾಂಸ್ಕೃತಿಕ ಒತ್ತಾಯದ ಮತಾಂತರವೇ ಇದೆ ಎನ್ನುವುದನ್ನು ನಾವು ಅರಿಯಬಲ್ಲೆವೇ?

ಪಂಪನಾದಿಯಾಗಿ, ವಚನಕಾರರು, ಆಂಡಯ್ಯ, ತತ್ವಪದಕಾರರು, ಸರ್ವಜ್ಞ ಮೊದಲಾದವರಿಂದ ಹಿಡಿದು ಇವತ್ತು ಸ್ಥಳೀಯ ಕನ್ನಡಗಳಲ್ಲಿ ಬರೆಯುತ್ತಿರುವವರವರೆಗೆ ಗಮನಿಸಿದರೆ, ಅನೇಕರು ಜನಬದುಕುಗಳ ಭಾಷೆಯತ್ತ ಇಡೀ ಸಮಾಜವನ್ನು ಒಟ್ಟುಗೂಡಿಸುವ ಪ್ರಯತ್ನವನ್ನು ಸಾವಿರಾರು ವರ್ಷಗಳಿಂದ ಕಾಲಕಾಲಕ್ಕೆ ಮಾಡುತ್ತಲೇ ಬರುತ್ತಿದ್ದಾರೆ. ಇವುಗಳ ಗುರಿಯು ಸಮಾಜದ ತಿಳಿವಳಿಕೆ ಆ ಸಮಾಜದ ಎಲ್ಲರಿಗೆ ತಲುಪಬೇಕು ಎನ್ನುವುದು. ಇವತ್ತಿನ 'ಎಲ್ಲರ ಕನ್ನಡ'ದ ಪ್ರಯತ್ನವೂ ಇದರಿಂದ ಹೊರಗಿನದು ಎಂದು ಹುಯಿಲೆಬ್ಬಿಸುತ್ತಿರುವುದು ಯಾಕೆ? ನಾವು ತಿಳಿಯಬೇಕಾಗಿರುವುದು ಬದಲಾವಣೆ ಕೆಳಗಿನಿಂದ ಶುರುವಾಗಬೇಕು ಎನ್ನುವುದನ್ನು. ಮೇಲಿನದನ್ನು ಅನುಕರಿಸುವುದರಿಂದ ಆಗುವಂತಹುದು ಬದಲಾವಣೆ ಅಲ್ಲ.

'ಎಲ್ಲರ ಕನ್ನಡ'ವೆಂದರೆ ಯಾರದು? ಎಲ್ಲಿನದು ಎಂದು ಸಿಟ್ಟಿಗೆ ಎದ್ದು ಜಗಳಕ್ಕೆ ನಿಲ್ಲುವ ಅಗತ್ಯವಿಲ್ಲ. ಕಲಿಕೆಯ ಮೂಲಕ ಹೇರಲ್ಪಟ್ಟಿರುವ 'ಸಂಸ್ಕೃತದ ವ್ಯಾಕರಣತತ್ವ'ದಿಂದ ಬಿಡುಗಡೆಯನ್ನು ಪಡೆಯುವ ಎಲ್ಲ ಕನ್ನಡಗಳ 'ಕನ್ನಡ ವ್ಯಾಕರಣತತ್ವ' ಅದು.

ಲೇಖಕ: ಸಂಶೋಧಕ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಮೈಸೂರು

ವಾಚಕರ ವಾಣಿ

ಹಣ ಸಂದಾಯ: ಅವೈಜ್ಞಾನಿಕ ಪದ್ಧತಿ ಬದಲಾಗಲಿ

ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿರುವುದು ಸರಿಯಷ್ಟೆ. ಕೋವಿಡ್ ಸಮಯದಲ್ಲಿ ಭೌತಿಕ ತರಗತಿಗಳು ನಡೆಯದಿರುವುದರಿಂದ ಆ ಸಮಯದಲ್ಲಿ ವಿತರಣೆ ಮಾಡಬೇಕಿದ್ದ ಬಿಸಿಯೂಟದ ಬದಲಾಗಿ ಅದರ ಪರಿವರ್ತನಾ ವೆಚ್ಚವನ್ನು ಮಕ್ಕಳ ಬ್ಯಾಂಕ್ ಖಾತೆಗೆ ಸಂದಾಯ ಮಾಡಲಾಗುತ್ತಿದೆ. ಗ್ರಾಮೀಣ ಪ್ರದೇಶದ ಬಹುತೇಕ ಎಲ್ಲ ಮಕ್ಕಳು ಬ್ಯಾಂಕ್ ಖಾತೆಯನ್ನು ಹೊಂದಿದ್ದಾರೆ.

ಆದರೆ, ಹೆಚ್ಚಿನ ಮಕ್ಕಳ ಬ್ಯಾಂಕ್ ಖಾತೆಯಲ್ಲಿರುವ ಹೆಸರಿಗೂ ಇಲಾಖೆಯ ತಂತ್ರಾಂಶದಲ್ಲಿರುವ ಹೆಸರಿಗೂ ತಾಳೆಯಾಗುತ್ತಿಲ್ಲ. ಈ ಕಾರಣದಿಂದ ಬಹುತೇಕ ಫಲಾನುಭವಿ ಮಕ್ಕಳು ಈ ಪರಿವರ್ತನಾ ವೆಚ್ಚವನ್ನು ಪಡೆಯುವುದರಿಂದ ವಂಚಿತರಾಗುತ್ತಿದ್ದಾರೆ. ಅಲ್ಲದೆ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸುವಂತೆ ಶಿಕ್ಷಣ ಇಲಾಖೆಯಿಂದ ಶಾಲಾ ಮುಖ್ಯೋಪಾಧ್ಯಾಯರಿಗೆ ಒತ್ತಡವೂ ಇರುವುದರಿಂದ ಹಲವು ಮುಖ್ಯೋಪಾಧ್ಯಾಯರಿಗೆ ಇದು ತಲೆನೋವಾಗಿ ಪರಿಣಮಿಸಿದೆ. ಆದ್ದರಿಂದ ಇಲಾಖೆಯು ಬಿಸಿಯೂಟದ ಪರಿವರ್ತನಾ ವೆಚ್ಚವನ್ನು ಮಕ್ಕಳಿಗೆ ವಿತರಿಸುವ ಪದ್ಧತಿಯನ್ನು ಬದಲಿಸಿ ಸೂಕ್ತ ಮಾರ್ಗೋಪಾಯ ಹುಡುಕಬೇಕಿದೆ. ಇದರಿಂದ ಆಗುತ್ತಿರುವ ಒತ್ತಡವನ್ನು ತಪ್ಪಿಸುವುದರ ಜೊತೆಗೆ ಎಲ್ಲ ಮಕ್ಕಳಿಗೂ ಸುಗಮವಾಗಿ ಹಣ ಸಂದಾಯವಾಗುವಂತೆ ಕ್ರಮ ಕೈಗೊಳ್ಳಬೇಕಿದೆ.

ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ, ಕೊಪ್ಪಳ

ಅತಿಥಿ ಶಿಕ್ಷಕರನ್ನೂ ಪರಿಗಣಿಸಿ

ಶಾಲೆಗಳಲ್ಲಿ ಇರುವ ಶಿಕ್ಷಕರ ಕೊರತೆಯನ್ನು ನೀಗಲು ಸರ್ಕಾರವು ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು, ಪ್ರಾಥಮಿಕ ಮತ್ತು ಪ್ರೌಢಶಾಲಾ ಅತಿಥಿ ಶಿಕ್ಷಕರಿಗೆ ಮಾಸಿಕ ತಲಾ ₹ 7,500 ಮತ್ತು ₹ 8,000 ಗೌರವಧನ ನೀಡುತ್ತಿದೆ. ಕಾಲೇಜುಗಳ ಅತಿಥಿ ಉಪನ್ಯಾಸಕರ ಗೌರವಧನವನ್ನು ಈಗ ಹೆಚ್ಚಳ ಮಾಡಿ ಸಂಕ್ರಾಂತಿ ಸಿಹಿಯನ್ನು ಅವರಿಗೆ ಕೊಟ್ಟಿದೆ. ಆದರೆ ಅತಿಥಿ ಶಿಕ್ಷಕರಿಗೆ ಮಾತ್ರ ಕಹಿಯನ್ನು ನೀಡಲಾಗಿದೆ.

ಕೋವಿಡ್ ಸಂಕಷ್ಟದ ಸಮಯದಲ್ಲಿಯೂ ಖಾಸಗಿ ಶಾಲೆಯ ಶಿಕ್ಷಕರಿಗೆ ರಾಜ್ಯ ಸರ್ಕಾರ ಪರಿಹಾರ ನೀಡಿತು. ಸರ್ಕಾರಿ ಶಾಲೆಯ ಮಕ್ಕಳಿಗಾಗಿ ಅಲ್ಪ ಸಂಬಳದಲ್ಲಿ ದುಡಿಯುವ ಅತಿಥಿ ಶಿಕ್ಷಕರು ಇವರ ಕಣ್ಣಿಗೆ ಕಾಣಲಿಲ್ಲ. ಅಲ್ಪ ಗೌರವಧನದಲ್ಲಿಯೇ ಶ್ರದ್ಧೆ, ಭಕ್ತಿಯಿಂದ ಪಾಠ ಮಾಡಿ ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸುವಲ್ಲಿ ಅತಿಥಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಸೇವಾನಿರತ ಶಿಕ್ಷಕರಂತೆ ಅತಿಥಿ ಶಿಕ್ಷಕರು ಬೋಧಿಸುವ ಕೆಲಸ ಕಾರ್ಯಗಳನ್ನು ಸರಿ ಸಮನಾಗಿ ಮಾಡುತ್ತಾ ಬಂದಿದ್ದಾರೆ. ದಯಮಾಡಿ ಅತಿಥಿ ಶಿಕ್ಷಕರಿಗೂ ಗೌರವಧನ ಹೆಚ್ಚಳ ಮಾಡಬೇಕು. ಕೋವಿಡ್ ಪರಿಹಾರ ಹಣವನ್ನು ಒದಗಿಸಬೇಕು.

ಎಸ್.ಜಿ.ಸುಣಗಾರ, ಎ.ಜಿ.ಕಮತಗಿ, ಮದ್ದೂರ, ಸವದತ್ತಿ

ಸ್ಯಾನಿಟರಿ ಪ್ಯಾಡ್: ಜಾಗೃತಿ ಮೂಡಲಿ

ಕಿಶೋರಿಯರಿಗೆ ಉಚಿತವಾಗಿ ಸ್ಯಾನಿಟರಿ ಪ್ಯಾಡ್ ವಿತರಿಸುವ ಯೋಜನೆ ಸ್ಥಗಿತಗೊಂಡಿರುವ ಬಗ್ಗೆ ದೀಪಾ ಹಿರೇಗುತ್ತಿ ಅವರು ತಿಳಿಸಿಕೊಟ್ಟಿರುವುದು (ಸಂಗತ, ಜ. 19) ಅಭಿನಂದನೀಯ. ಆದರೆ ಈಗೀಗ ಹೆಚ್ಚುತ್ತಿರುವ ಮಾಲಿನ್ಯಕ್ಕೆ ಸ್ಯಾನಿಟರಿ ಪ್ಯಾಡ್ ಕೂಡ ಒಂದು ಕಾರಣ ಆಗಿದೆ. ಆದ್ದರಿಂದ ನಮ್ಮ ಹೆಣ್ಣು ಮಕ್ಕಳಿಗೆ ಪೀರಿಯಡ್ ಕಪ್‌ನ ಬಗ್ಗೆ ಮಾಹಿತಿ ಒದಗಿಸಿ, ಅವರು ಅದನ್ನು ಬಳಸುವಂತಾದರೆ, ಸ್ಯಾನಿಟರಿ ಪ್ಯಾಡ್‌ಗಳಿಂದ ಮುಕ್ತಿ ದೊರೆತಂತೆ ಆಗುತ್ತದೆ. ಕೇರಳದ ಕುಂಬಳಗಿ ಎಂಬಲ್ಲಿ ಇಡೀ ಗ್ರಾಮವೇ ಸ್ಯಾನಿಟರಿ ಪ್ಯಾಡ್‌ಮುಕ್ತ ಗ್ರಾಮವಾಗಿದೆ.

ಹಾಗಾಗಿ ಶಾಲೆಯಲ್ಲಿ ನಮ್ಮ ಹೆಣ್ಣು ಮಕ್ಕಳಿಗೂ ಈ ಕಪ್‌ಗಳನ್ನು ಉಚಿತವಾಗಿ ಕೊಟ್ಟು, ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ಪ್ಯಾಡ್‌ನಿಂದ ನಮ್ಮ ಮಕ್ಕಳೂ ಮುಕ್ತರಾಗುವಂತೆ ಮಾಡಬೇಕಾಗಿದೆ.

ಯಶಸ್ವಿನಿ ಜೆ. ಶೆಟ್ಟಿ, ಚಿಕ್ಕಮಗಳೂರು

ಏಕಮುಖ ವಿಶ್ವವಿದ್ಯಾಲಯಕ್ಕೆ ಮಣೆ ಏಕೆ?

ರಾಮನಗರದಲ್ಲಿ ಸ್ಥಾಪನೆ ಮಾಡಲು ಉದ್ದೇಶಿಸಿರುವ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ₹ 359 ಕೋಟಿ ಬಿಡುಗಡೆ ಮಾಡಲು ಹೊರಟಿರುವ ರಾಜ್ಯ ಸರ್ಕಾರದ ನಡೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ #ಸಂಸ್ಕೃತ ವಿವಿ ಬೇಡ ಎಂದು ಅಭಿಯಾನವನ್ನು ನಡೆಸಲಾಗಿ, ಇದು ಬಹಳಷ್ಟು ಟ್ರೆಂಡ್ ಆಗಿದೆ. ಕರ್ನಾಟಕದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಸರ್ಕಾರ ಬಹಳಷ್ಟು ಮಣೆ ಹಾಕುತ್ತಿರುವುದು ಸಹಜವಾಗಿ ಅನೇಕ ಕನ್ನಡಾಭಿಮಾನಿಗಳ ಕೋಪಕ್ಕೆ ತುತ್ತಾಗಿದೆ.

ರಾಜ್ಯ ಸರ್ಕಾರ ಸ್ಥಾಪಿಸಲು ಹೊರಟಿರುವ ಸಂಸ್ಕೃತ ವಿಶ್ವವಿದ್ಯಾಲಯವು ಇದೇ ಸರ್ಕಾರ ಹೆಚ್ಚು ಪ್ರಚಾರದ ಮೂಲಕ ಜಾರಿಗೆ ತಂದಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ- 2020ಕ್ಕೆ ಸಂಪೂರ್ಣ ವಿರುದ್ಧ ದಿಕ್ಕಿನಲ್ಲಿದೆ. ಈ ನೀತಿ ಪ್ರಕಾರ, ಏಕಮುಖ ವಿಷಯಗಳನ್ನು ಬೋಧಿಸುವ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸದೆ ಈಗ ಇರುವಂತಹ ಏಕಮುಖ ವಿಷಯಗಳ ವಿಶ್ವವಿದ್ಯಾಲಯಗಳನ್ನು 2040ರ ವೇಳೆಗೆ ಬಹುಶಿಸ್ತೀಯ ವಿಶ್ವವಿದ್ಯಾಲಯಗಳನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಲಾಗಿದೆ. ಏಕಮುಖ ವಿಷಯಗಳ ವಿಶ್ವವಿದ್ಯಾಲಯ ಕುರಿತಾಗಿ ಹೊಸ ನೀತಿ ಹೀಗೆ ಹೇಳುತ್ತದೆ: 'ಏಕಮುಖ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಹಂತ ಹಂತವಾಗಿ ಕಡಿಮೆ ಮಾಡಲಾಗುವುದು. ಇವೆಲ್ಲವೂ ಅತ್ಯಂತ ಚಲನಶೀಲವಾದ ಬಹುಶಿಸ್ತೀಯ ಸಂಸ್ಥೆಗಳಾಗುವತ್ತ ಮುಂದಡಿ ಇಡುತ್ತವೆ ಅಥವಾ ಚಲನಶೀಲ ಬಹುಶಿಸ್ತೀಯ ಎಚ್.ಇ.ಐ ಕ್ಲಸ್ಟರ್‌ಗಳ ಭಾಗವಾಗುತ್ತವೆ. ಇದರಿಂದ ಎಲ್ಲ ಕ್ಷೇತ್ರಗಳಲ್ಲಿ ಉನ್ನತ ಗುಣಮಟ್ಟದ ಬಹುಶಿಸ್ತೀಯ ಮತ್ತು ಎಲ್ಲ ಶೈಕ್ಷಣಿಕ ವಿಭಾಗಗಳ ಬೋಧನೆ ಮತ್ತು ಸಂಶೋಧನೆ ಸಾಧ್ಯವಾಗುತ್ತದೆ ಮತ್ತು ಅದಕ್ಕೆ ಉತ್ತೇಜನ ನೀಡಲಾಗುತ್ತದೆ'.

ದೇಶದಲ್ಲೇ ಪ್ರಥಮ ಬಾರಿಗೆ ನಮ್ಮ ರಾಜ್ಯದಲ್ಲಿ ಜಾರಿಯಾಗುತ್ತಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲೇ ಯಾವುದೇ ಏಕಮುಖ ವಿಶ್ವವಿದ್ಯಾಲಯಗಳನ್ನು ಪ್ರಾರಂಭಿಸುವುದಿಲ್ಲ ಎಂದು ನೀತಿ ನಿಯಮ ರೂಪಿಸಿ, ಈಗ ಏಕ ವಿಷಯದ ಸಂಸ್ಕೃತ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಸರ್ಕಾರ ತುದಿಗಾಲಲ್ಲಿ ನಿಂತಿರುವುದು ಏಕೆ ಎಂಬುದು ತಿಳಿಯದಾಗಿದೆ.

ವಸಂತ ರಾಜು ಎನ್., ತಲಕಾಡು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಂಜಾಬ್ ಅಖಾಡ ಕಾಂಗ್ರೆಸ್‌ಗೆ ಎಎಪಿ ಸವಾಲು

ಚನ್ನಿ

ಪಂಜಾಬ್ ವಿಧಾನಸಭೆ ಚುನಾವಣೆ ಅಖಾಡದಲ್ಲಿ ಬಿಜೆಪಿ ನೇತೃತ್ವದ ಮೈತ್ರಿಕೂಟ, ಶಿರೋಮಣಿ ಅಕಾಲಿ ದಳ-ಬಿಎಸ್‌ಪಿ ಮೈತ್ರಿಕೂಟ ಇದ್ದರೂ ನೇರ ಸ್ಪರ್ಧೆ ಇರುವುದು ಕಾಂಗ್ರೆಸ್‌–ಎಎಪಿ ನಡುವೆ ಎಂದು ಚುನಾವಣಾ ಪೂರ್ವ ಸಮೀಕ್ಷೆಗಳು ಅಂದಾಜಿಸಿವೆ. ಜತೆಗೆ, ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ಸಿಗದೇ ಇರುವ ಸಾಧ್ಯತೆಯೇ ಹೆಚ್ಚು ಎನ್ನಲಾಗಿದೆ. ಹಾಗಾಗಿ, ಪಂಜಾಬ್ ವಿಧಾನಸಭಾ ಚುನಾವಣಾ ಕಣ ಕುತೂಹಲ ಮೂಡಿಸಿದೆ



ಕಾಂಗ್ರೆಸ್‌ನ ದಲಿತ ಕೇಂದ್ರಿತ ರಾಜಕಾರಣ

• ಹಮೀದ್ ಕೆ.,ಅಮೃತ್ ಕಿರಣ್ ಬಿ.ಎಂ.

ಉತ್ತರ ಪ್ರದೇಶ ಮತ್ತು ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯತಂತ್ರವು ಜೂಜಾಟವನ್ನು ನೆನಪಿಸುವಂತಿದೆ. ಉತ್ತರ ಪ್ರದೇಶದಲ್ಲಿ ಮಹಿಳೆಯರನ್ನೇ ಕೇಂದ್ರವಾಗಿ ಇರಿಸಿಕೊಂಡು ಪಕ್ಷವು ಚುನಾವಣಾ ರಣತಂತ್ರ ಹೆಣೆದಿದೆ. ಪಂಜಾಬ್‌ನಲ್ಲಿ ಒಂದೇ ಜಾತಿಯನ್ನು ನೆಚ್ಚಿಕೊಂಡು ಚುನಾವಣೆ ಗೆಲ್ಲುವ ಲೆಕ್ಕಾಚಾರ ಮಾಡಿದೆ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಕಳೆದುಕೊಳ್ಳುವುದಕ್ಕೆ ಏನೂ ಇಲ್ಲ, ಬಂದದ್ದೆಲ್ಲವೂ ಲಾಭ ಎಂಬ ಪರಿಸ್ಥಿತಿ ಇದೆ. ಆದರೆ, ಪಂಜಾಬ್‌ನ ಸನ್ನಿವೇಶ ಹಾಗೆ ಇಲ್ಲ. ಕಾಂಗ್ರೆಸ್ ಅಧಿಕಾರದಲ್ಲಿ ಇರುವ ಮೂರು ರಾಜ್ಯಗಳಲ್ಲಿ ಪಂಜಾಬ್ ಕೂಡ ಒಂದು. ಈ ರಾಜ್ಯವನ್ನೂ ಕಳೆದುಕೊಂಡರೆ, ಮುಂದಿನ ಲೋಕಸಭಾ ಚುನಾವಣೆಯ ಹೊತ್ತಿಗೆ ವಿರೋಧ ಪಕ್ಷಗಳ ಒಕ್ಕೂಟವೇನಾದರೂ ರೂಪುಗೊಂಡರೆ ಅದರ ನಾಯಕತ್ವದ ಅವಕಾಶಕ್ಕೆ ಹಕ್ಕು ಮಂಡಿಸುವುದೇ ಕಾಂಗ್ರೆಸ್‌ಗೆ ಕಷ್ಟವಾಗಲಿದೆ.

ಪಂಜಾಬ್ ಮುಖ್ಯಮಂತ್ರಿ ಹುದ್ದೆಯಿಂದ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರನ್ನು ಚುನಾವಣೆಗೆ ಆರು ತಿಂಗಳಿರುವಾಗ ಕೆಳಗಿಳಿಸಲಾಗಿದೆ. ಅವರ ಸ್ಥಾನಕ್ಕೆ ದಲಿತ ಸಮುದಾಯದ ನಾಯಕ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ತರಲಾಗಿದೆ. ಪಂಜಾಬ್ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಗಳು ಅತ್ಯಂತ ದೊಡ್ಡ ಘಟಕ. ಈ ಸಮುದಾಯದ ಜನಸಂಖ್ಯೆ ಶೇ 32ರಷ್ಟು. ಆದರೆ, ಈ ಸಮುದಾಯದಿಂದ ಮುಖ್ಯಮಂತ್ರಿ ಹುದ್ದೆಗೇರಿದ ಮೊದಲ ವ್ಯಕ್ತಿ ಚನ್ನಿ. ಅಂದರೆ, ಈ ಸಮುದಾಯವು ಸಂಖ್ಯೆಯಲ್ಲಿ ದೊಡ್ಡದಾದರೂ ರಾಜಕೀಯವಾಗಿ ಪ್ರಭಾವಿ ಆಗಿಲ್ಲ ಎಂಬುದು ಇದರ ಅರ್ಥ. ಈ ವರ್ಗವನ್ನು ರಾಜಕೀಯವಾಗಿ ಮುನ್ನೆಲೆಗೆ ತರುವ ಮೂಲಕ ಚುನಾವಣೆ ಗೆಲ್ಲುವುದು ಕಾಂಗ್ರೆಸ್‌ನ ಕಾರ್ಯತಂತ್ರ.

ಪಂಜಾಬ್ ರಾಜ್ಯದ ಮುಖ್ಯಮಂತ್ರಿ ಹುದ್ದೆ ಎಂಬುದು ಜಾಟ್ ಸಿಖ್ ಸಮುದಾಯಕ್ಕೆ ಮೀಸಲು ಎಂಬಂತಹ ಪರಿಸ್ಥಿತಿ ಈವರೆಗೆ ಇತ್ತು. 1972–77ರ ಅವಧಿಯಲ್ಲಿ ಗ್ಯಾನಿ ಜೈಲ್ ಸಿಂಗ್ ಅವರು ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಇವರು ಜಾಟ್‌ಯೇತರ ಸಿಖ್ ಸಮುದಾಯದವರಾಗಿದ್ದರು. ಅವರ ಬಳಿಕ, ಜಾಟ್ ಸಿಖ್ ಅಲ್ಲದ ಸಮುದಾಯದಿಂದ ಮುಖ್ಯಮಂತ್ರಿ ಆದವರು ಚನ್ನಿ ಮಾತ್ರ.

ಅಮರಿಂದರ್ ಅವರನ್ನು ಮುಖ್ಯಮಂತ್ರಿ ಗದ್ದುಗೆಯಿಂದ ಕೆಳಕ್ಕೆ ಇಳಿಸಲು ಮುಖ್ಯ ಕಾರಣ ಆಗಿದ್ದವರು ನವಜೋತ್ ಸಿಂಗ್ ಸಿಧು. ಸಿಧು ಜಾಟ್ ಸಿಖ್ ಸಮುದಾಯದವರು. ಅಮರಿಂದರ್ ಕೆಳಗಿಳಿದರೆ ಮುಖ್ಯಮಂತ್ರಿ ಹುದ್ದೆಯು ತಮಗೇ ದಕ್ಕಬಹುದು ಎಂಬ ಲೆಕ್ಕಾಚಾರದಲ್ಲಿ ಸಿಧು ಇದ್ದರು. ಆದರೆ, ಅಮರಿಂದರ್ ಅವರ ಪದಚ್ಯುತಿಯಿಂದ ಜಾಟ್ ಸಿಖ್ ಸಮುದಾಯವು ಪಕ್ಷದ ವಿರುದ್ಧ ತಿರುಗಿ ಬೀಳಬಹುದು ಎಂಬ ಅನುಮಾನ ಕಾಂಗ್ರೆಸ್ ಹೈಕಮಾಂಡ್‌ಗೆ ಇತ್ತು. ಹಾಗಾಗಿಯೇ ದಲಿತ ಸಮುದಾಯದ ಮೊರೆ ಹೋಗುವ ಕಾರ್ಯತಂತ್ರವನ್ನು ಪಕ್ಷವು ಅನುಸರಿಸಿದೆ.

ಮುಖ್ಯಮಂತ್ರಿ ಹುದ್ದೆಗೆ ಏರುವವರೆಗೆ ಚನ್ನಿ ಅವರು ಪ್ರಭಾವಿ ನಾಯಕ ಎಂದು ಗುರುತಿಸಿಕೊಂಡವರೇನೂ ಅಲ್ಲ. ಆದರೆ, ಮುಖ್ಯಮಂತ್ರಿಯಾದ ಬಳಿಕ, ಸಾಮಾನ್ಯ ಜನರಲ್ಲಿ ತಾವೂ ಒಬ್ಬ ಎಂದು ತಮ್ಮನ್ನು ಬಿಂಬಿಸಿಕೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ. ಕಾಂಗ್ರೆಸ್ ಪಕ್ಷವು ಕೂಡ ಅವರಿಗೆ ಅಗತ್ಯ ಸ್ವಾತಂತ್ರ್ಯ ಕೊಟ್ಟಿದೆ. ‘ಮಹಾರಾಜ’ ಎಂದು ಕರೆಸಿಕೊಳ್ಳುತ್ತಿದ್ದ ಅಮರಿಂದರ್ ಅವರು ರಾಜ ಕುಟುಂಬಕ್ಕೆ ಸೇರಿದವರು. ಜಾಟ್ ಸಿಖ್ ಸಮುದಾಯ ಎಂದರೆ ಪಂಜಾಬ್‌ನ ಜಮೀನ್ದಾರಿ ವರ್ಗ. ಹೀಗಾಗಿಯೇ ಚನ್ನಿ ಅವರು ‘ಸಾಮಾನ್ಯ ವ್ಯಕ್ತಿ’ ಎಂದು ಗುರುತಿಸಿಕೊಂಡಿರುವುದು ಲಾಭದಾಯಕ.

ಕಾಂಗ್ರೆಸ್ ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಲ್ಲ. ಘೋಷಿಸಿದರೆ ಅದು ಪಕ್ಷದಲ್ಲಿ ಭಿನ್ನಮತಕ್ಕೆ ಕಾರಣ ಆಗಬಹುದು. ತಮ್ಮನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಬೇಕು ಎಂಬ ಇಚ್ಛೆ ಸಿಧು ಅವರಿಗೂ ಇದೆ. ಮುಖ್ಯಮಂತ್ರಿ ಎಂಬ ಕಾರಣಕ್ಕೆ ಚನ್ನಿ ಅವರ ನೇತೃತ್ವದಲ್ಲಿಯೇ ಪಕ್ಷವು ಚುನಾವಣೆ ಎದುರಿಸುತ್ತಿದೆ ಎಂಬುದು ಸಾಮಾನ್ಯವಾಗಿ ಇರುವ ಭಾವನೆ. ಚನ್ನಿ ಅವರ ಪರಿಶಿಷ್ಟ ಜಾತಿಯ ಹಿನ್ನೆಲೆ, ‘ಸಾಮಾನ್ಯ ವ್ಯಕ್ತಿ’ ಎಂಬ ವರ್ಚಸ್ಸು ಚುನಾವಣೆಯಲ್ಲಿ ಪಕ್ಷಕ್ಕೆ ನೆರವಾಗಹುದು. ಆದರೆ, ಬಹು ಜಾತಿ, ಸಂಸ್ಕೃತಿಯ ಪಂಜಾಬ್‌ನಲ್ಲಿ ಒಂದು ಜಾತಿಯನ್ನು ನೆಚ್ಚಿಕೊಂಡು ಚುನಾವಣೆ ಗೆಲ್ಲುವುದು ಸುಲಭ ಏನಲ್ಲ.

ಎಎಪಿಗೆ ಜೈ ಎಂದ ಸಮೀಕ್ಷೆಗಳು

ಪಂಜಾಬ್ ಚುನಾವಣಾ ಪೂರ್ವ ಸಮೀಕ್ಷೆಗಳು ಎಎಪಿ ಗೆಲುವಿಗೆ ಸಾಕಷ್ಟು ಅವಕಾಶಗಳಿವೆ ಎಂದು ಭವಿಷ್ಯ ನುಡಿದಿವೆ. ಎಎಪಿ 50–56 ಸ್ಥಾನಗಳನ್ನು ಗೆಲ್ಲುವ ಸಾಧ್ಯತೆಯಿದೆ ಎಂದು ರಿಪಬ್ಲಿಕ್–ಪಿಎಂಎಆರ್‌ಕ್ಯೂ ನಡೆಸಿದ ಸಮೀಕ್ಷೆ ಅಭಿಪ್ರಾಯಪಟ್ಟಿದೆ. ಕಾಂಗ್ರೆಸ್ 42–48, ಅಕಾಲಿದಳ 13ರಿಂದ 17, ಬಿಜೆಪಿಗೆ ಒಂದರಿಂದ ಮೂರು ಹಾಗೂ ಪಕ್ಷೇತರರು 1ರಿಂದ 3 ಕ್ಷೇತ್ರಗಳಲ್ಲಿ ಗೆಲ್ಲಬಹುದು ಎಂದು ಸಮೀಕ್ಷೆ ಅಂದಾಜಿಸಿದೆ.

ಎಬಿಪಿ–ಸಿವೋಟರ್ ನಡೆಸಿದ ಸಮೀಕ್ಷೆಯಲ್ಲಿ ಆಮ್ ಆದ್ಮಿ ಪಕ್ಷವು ಅತಿಹೆಚ್ಚು ಕ್ಷೇತ್ರಗಳನ್ನು ಗೆಲ್ಲಲಿದೆ ಎಂದು ಅಂದಾಜಿಸಲಾಗಿದೆ. 52–58 ಸೀಟುಗಳು ಸಿಗಲಿದ್ದು, ಪಕ್ಷವು ಬಹುಮತ ಪಡೆಯಲು ಕೆಲವು ಸೀಟುಗಳ ಕೊರತೆಯಾಗಬಹುದು ಎಂದು ಊಹಿಸಿದೆ. ಎರಡನೇ ಸ್ಥಾನ ಗಳಿಸಲಿರುವ ಕಾಂಗ್ರೆಸ್ 37ರಿಂದ 43 ಸ್ಥಾನಕ್ಕೆ ಕುಸಿಯಬಹುದು ಎಂದು ಅಂದಾಜಿಸಿದೆ.

ಬಿಜೆಪಿ ಮುಂಚೂಣಿಗೆ

ಪಂಜಾಬ್‌ನಲ್ಲಿ ಬಿಜೆಪಿಗೆ ಸ್ವಂತ ಅಸ್ತಿತ್ವ ಎಂಬುದು ಈವರೆಗೆ ಇರಲೇ ಇಲ್ಲ. ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ಕಿರಿಯ ಪಾಲುದಾರ ಪಕ್ಷವಾಗಿ 1990ರ ದಶಕದಿಂದಲೂ ಬಿಜೆಪಿ ಇದೆ. ಬಿಜೆಪಿ ಗರಿಷ್ಠ ಎಂದರೆ 23 ಕ್ಷೇತ್ರಗಳಿಗಿಂತ ಹೆಚ್ಚು ಕ್ಷೇತ್ರಗಳಲ್ಲಿ ಈವರೆಗಿನ ಯಾವ ಚುನಾವಣೆಯಲ್ಲಿಯೂ ಸ್ಪರ್ಧಿಸಿಲ್ಲ. ಆದರೆ, ಕೇಂದ್ರವು ಜಾರಿಗೆ ತಂದಿದ್ದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ, ಬಿಜೆಪಿ ಜತೆಗಿನ ಮೈತ್ರಿಯನ್ನು ಎಸ್‌ಎಡಿ 2020ರ ಸೆಪ್ಟೆಂಬರ್‌ನಲ್ಲಿ ಕಡಿದುಕೊಂಡಿತು. ಹಾಗಾಗಿ, ಪಂಜಾಬ್‌ನಲ್ಲಿ ಬಿಜೆಪಿ ಏಕಾಂಗಿಯಾಯಿತು.

ಅಮರಿಂದರ್ ಸಿಂಗ್ ಅವರು ‘ಪಂಜಾಬ್ ಲೋಕ ಕಾಂಗ್ರೆಸ್’ ಪಕ್ಷ ಸ್ಥಾಪಿಸಿದ್ದಾರೆ. ಎಸ್‌ಎಡಿಯಿಂದ ಸಿಡಿದು ಬೇರೆ ಆಗಿರುವ ಸುಖದೇವ್ ಧಿಂಡ್ಸಾ ಅವರು ಶಿರೋಮಣಿ ಅಕಾಲಿ ದಳ (ಸಂಯುಕ್ತ) ಎಂಬ ಪಕ್ಷ ಸ್ಥಾಪಿಸಿದ್ದಾರೆ. ಈ ಪಕ್ಷಗಳ ಜತೆಗೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಈ ಮೈತ್ರಿಕೂಟದಲ್ಲಿ ಬಿಜೆಪಿಯೇ ಪ್ರಮುಖ ಪಕ್ಷ. ಹಾಗಾಗಿ, ಈ ಪಕ್ಷವು ಇದೇ ಮೊದಲ ಬಾರಿಗೆ 70–80 ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ.

ಬಿಜೆಪಿಗೆ ಪಂಜಾಬ್‌ನಲ್ಲಿ ಪ್ರಭಾವಿ ನಾಯಕರೂ ಇಲ್ಲ, ಗೆಲ್ಲಬಲ್ಲ ಅಭ್ಯರ್ಥಿಗಳೂ ಇಲ್ಲ. ಹೀಗಾಗಿಯೇ ಕಾಂಗ್ರೆಸ್ ಮತ್ತು ಎಸ್‌ಎಡಿಯ ‘ಅತೃಪ್ತ’ ಮುಖಂಡರನ್ನು ಬಿಜೆಪಿಗೆ ಸೆಳೆಯಲಾಗುತ್ತಿದೆ. ಮಂಜಿಂದರ್ ಸಿಂಗ್ ಸಿರ್ಸಾ, ಜಗದೀಪ್ ಸಿಂಗ್ ನಕ್ಕೈ, ರಾಣಾ ಗುರ್ಮೀತ್ ಸಿಂಗ್ ಸೋಧಿ, ಫತೇಹ್ ಜಂಗ್ ಬಾಜ್ವಾ, ಹರ್ಜೋತ್ ಸಿಂಗ್ ಕಮಲ್ ಮುಂತಾದ ಹಲವು ಮುಖಂಡರು ಇತ್ತೀಚಿನ ವಾರಗಳಲ್ಲಿ ಬಿಜೆಪಿ ಸೇರಿದ್ದಾರೆ. ಮುಖ್ಯಮಂತ್ರಿ ಅಭ್ಯರ್ಥಿಯನ್ನು ಬಿಜೆಪಿ ಘೋಷಿಸಿಲ್ಲ. ಅಮರಿಂದರ್ ಅವರೂ ಮುಖ್ಯಮಂತ್ರಿ ಅಭ್ಯರ್ಥಿ ಆಗಬೇಕು ಎಂಬ ಉಮೇದು ಹೊಂದಿರುವುದರಿಂದ ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸುವ ಸಾಧ್ಯತೆ ಕಡಿಮೆ.

ಎಎಪಿ ಎದುರು ಅವಕಾಶ, ಸವಾಲುಗಳ ಸಾಲು

ಭಗವಂತ ಮಾನ್

2017ರ ಚುನಾವಣೆಯಲ್ಲೇ ಆಮ್ ಆದ್ಮಿ ಪಕ್ಷವು ಪಂಜಾಬ್ ಚುಕ್ಕಾಣಿ ಹಿಡಿಯಲಿದೆ ಎಂಬ ಮಾತು ಕೇಳಿ ಬಂದಿತ್ತು. 2022ರ ಚುನಾವಣೆಗೆ ಎಎಪಿ ಸರ್ವ ರೀತಿಯಲ್ಲಿ ಸಜ್ಜಾಗಿದ್ದರೂ, ಸವಾಲುಗಳು ಅಧಿಕವಾಗಿವೆ. ಕಳೆದ ಚುನಾವಣೆಯಲ್ಲಿ 20 ಕ್ಷೇತ್ರಗಳಲ್ಲಿ ಗೆದ್ದು, ಶಿರೋಮಣಿ ಅಕಾಲಿದಳ–ಬಿಜೆಪಿ ಮೈತ್ರಿಕೂಟವನ್ನು ಮೂರನೇ ಸ್ಥಾನಕ್ಕೆ ತಳ್ಳಿ ಅಚ್ಚರಿ ಮೂಡಿಸಿತ್ತು. 2014ರ ಲೋಕಸಭಾ ಚುನಾವಣೆಯಲ್ಲೇ ರಾಜ್ಯದಲ್ಲಿ ಗಮನಾರ್ಹ ಸಾಧನೆ ಮಾಡಿದ್ದ ಎಎಪಿ, ಪಂಜಾಬ್‌ನ 4 ಕ್ಷೇತ್ರಗಳಲ್ಲಿ ಗೆದ್ದಿತ್ತು. ಕೆಲವು ಕ್ಷೇತ್ರಗಳಲ್ಲಿ ಕೂದಲೆಳೆ ಅಂತರದಲ್ಲಿ ಗೆಲುವು ತಪ್ಪಿಸಿಕೊಂಡಿತ್ತು.

ಇತ್ತೀಚೆಗೆ ನಡೆದ ಪಾಲಿಕೆ ಚುನಾವಣೆಯಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದ ಎಎಪಿ, ಉತ್ಸಾಹ ಹೆಚ್ಚಿಸಿಕೊಂಡಿದೆ. ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು ರಾಜ್ಯದಲ್ಲಿ ಮಾದಕವಸ್ತು ವಿರೋಧಿ ಹೋರಾಟವನ್ನು ದೊಡ್ಡ ಮಟ್ಟದಲ್ಲಿ ನಡೆಸಿದ್ದಾರೆ. ರಾಜ್ಯದಲ್ಲಿ ಎಎಪಿಯ ಜನಪ್ರಿಯ ನಾಯಕ ಎನಿಸಿರುವ ಭಗವಂತ ಮಾನ್ ಅವರನ್ನು ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸುವ ಮೂಲಕ ಎಲ್ಲ ಪಕ್ಷಗಳಿಗಿಂತ ಒಂದು ಹೆಜ್ಜೆ ಮುಂದೆ ಸಾಗಿದೆ ಎಂದು ವಿಶ್ಲೇಷಕರು ಹೇಳುತ್ತಾರೆ.

ಆದರೆ, ಎಎಪಿ ಅಂದುಕೊಂಡಷ್ಟು ಈ ಬಾರಿ ಚುನಾವಣಾ ಕಣ ಸುಲಭವಾಗಿಲ್ಲ. ಕಾಂಗ್ರೆಸ್ ಜೊತೆ ಹಲವು ಪಕ್ಷಗಳನ್ನು ಎಎಪಿ ಎದುರಿಸಬೇಕಿದೆ. ಶಿರೋಮಣಿ ಅಕಾಲಿದಳ–ಬಿಎಸ್‌ಪಿ ಮೈತ್ರಿಕೂಟ, ಬಿಜೆಪಿ ಹಾಗೂ ಅಮರಿಂದರ್ ಸಿಂಗ್ ನೇತೃತ್ವದ ಪಂಜಾಬ್ ಲೋಕ ಕಾಂಗ್ರೆಸ್ ಪಕ್ಷಗಳ ಮೈತ್ರಿಕೂಟ, ರೈತ ಮುಖಂಡ ಬಲ್ಬೀರ್ ಸಿಂಗ್ ರಾಜೇವಾಲ್ ಅವರ ಸಂಯುಕ್ತ ಸಮಾಜ ಮೋರ್ಚಾ ಹಾಗೂ ಗುರುನಾಮ್ ಸಿಂಗ್ ಚದೂನಿ ಅವರ ಸಂಯುಕ್ತ ಸಂಘರ್ಷ ಪಕ್ಷಗಳನ್ನೂ ಎದುರಿಸಬೇಕಿದೆ. ಕೃಷಿ ಕಾಯ್ದೆಗಳನ್ನು ಖಂಡಿಸಿ ಬಿಜೆಪಿ ವಿರುದ್ಧ ಹೋರಾಟ ನಡೆಸಿದ್ದ ಪಂಜಾಬ್‌ನ ರೈತರ ಮತಗಳು ಎಎಪಿಗೆ ಬರುವ ನಿರೀಕ್ಷೆ ಪಕ್ಷಕ್ಕಿತ್ತು. ಆದರೆ ರೈತ ಮುಖಂಡರೇ ಪಕ್ಷಗಳನ್ನು ಸ್ಥಾಪಿಸಿರುವುದರಿಂದ ಆ ಮತಗಳು ವಿಭಜನೆಯಾಗುವ ಸಾಧ್ಯತೆಯಿದೆ.

ಉಚಿತ ವಿದ್ಯುತ್, ನೀರು, ಮಹಿಳೆಯರಿಗೆ ಹಣಕಾಸು ನೆರವು ಸೇರಿದಂತೆ ವಿವಿಧ ಜನಪ್ರಿಯ ಘೋಷಣೆಗಳನ್ನೂ ಪಕ್ಷ ಮಾಡಿದೆ. ನಿರುದ್ಯೋಗವು ರಾಜ್ಯದ ಪ್ರಮುಖ ಸಮಸ್ಯೆಯಾಗಿದ್ದು, ಕಾಂಗ್ರೆಸ್, ಅಕಾಲಿದಳ ಹಾಗೂ ಬಿಜೆಪಿ ಈ ಬಗ್ಗೆ ಗಮನ ಹರಿಸಿಲ್ಲ ಎಂಬ ಜನರ ಆಕ್ರೋಶವು ಅವರನ್ನು ಎಎಪಿಯತ್ತ ಕರೆತರುವ ಸಾಧ್ಯತೆಯಿದೆ. ಆಡಳಿತಾರೂಢ ಕಾಂಗ್ರೆಸ್‌ನ ಕಿತ್ತಾಟ, ಆಡಳಿತ ವಿರೋಧಿ ಅಲೆ ಹಾಗೂ ಶಿರೋಮಣಿ ಅಕಾಲಿದಳ ಶಕ್ತಿ ಕಳೆದುಕೊಂಡಿರುವ ಅಂಶಗಳು ಎಎಪಿ ಗೆಲುವನ್ನು ಸುಲಭಗೊಳಿಸುವ ಸಾಧ್ಯತೆಯಿದೆ ಎಂದು ವಿಶ್ಲೇಷಿಸಲಾಗಿದೆ.

ಅಕಾಲಿದಳ ಹೇಗಿದೆ?: 2017ರಲ್ಲಿ ಕಾಂಗ್ರೆಸ್‌ಗೆ ಅಧಿಕಾರವನ್ನು ಬಿಟ್ಟುಕೊಡುವ ಮುನ್ನ, ಎರಡು ಅವಧಿಗೆ ರಾಜ್ಯದಲ್ಲಿ ಆಡಳಿತ ನಡೆಸಿದ್ದ ಶಿರೋಮಣಿ ಅಕಾಲಿದಳದ ವರ್ಚಸ್ಸು ಈ ಬಾರಿ ಅಷ್ಟಾಗಿ ಇಲ್ಲ ಎನ್ನುತ್ತಾರೆ ವಿಶ್ಲೇಷಕರು. ಚುನಾವಣಾ ಸೋಲಿನ ಬಳಿಕ ಪ್ರಕಾಶ್‌ಸಿಂಗ್ ಬಾದಲ್ ಅವರು ತಮ್ಮ ರಾಜಕೀಯ ಚಟುವಟಿಕೆಗಳನ್ನು ಮಿತಗೊಳಿಸಿದ್ದರು. ಈಗ ಅವರು ಮತ್ತೆ ಸಕ್ರಿಯರಾಗಿದ್ದಾರೆ. 94 ವರ್ಷದ ಬಾದಲ್ ಅವರೇ ಈಗಲೂ ಪಕ್ಷವನ್ನು ಮುನ್ನಡೆಸುತ್ತಿದ್ದಾರೆ. ತಮ್ಮ ಇಳಿವಯಸ್ಸಿನಲ್ಲೂ ಅವರು ಚುನಾವಣಾ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಕೃಷಿ ಕಾಯ್ದೆ ವಿಚಾರವಾಗಿ ಬಿಜೆಪಿ ಜೊತೆಗಿದ್ದ ಮೈತ್ರಿ ಮುರಿದುಬಿದ್ದಿದ್ದು, ಸಮಾಜವಾದಿ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುತ್ತಿದೆ.

ಮುಕ್ತಿಸಾಧನ ತಿಳಿದ ವ್ಯಾಸರು

ಈಶ್ವರನ ನಾಮ ಶ್ರವಣ, ಕೀರ್ತನ, ಮನನ ಎಂಬ ಮೂರು ಮುಕ್ತಿಸಾಧನಗಳು ಬ್ರಹ್ಮಕುಮಾರನಾದ ಸನತ್ಕುಮಾರನಿಂದ ವೇದವ್ಯಾಸರಿಗೆ ಹೇಗೆ ತಿಳಿಯಿತು ಎಂಬ ವಿಚಾರವನ್ನು ಸೂತಮುನಿಯೂ ಪ್ರಯಾಗದ ಮಹಾಸತ್ರಯಾಗದ ಮುನಿಗಳಿಗೆ ಹೇಳುತ್ತಾನೆ. ಹಿಂದೆ ಪರಾಶರಮುನಿಯ ಪುತ್ರ ವ್ಯಾಸಮಹರ್ಷಿ, ಸಂಸಾರಕ್ಲೇಶದ ನಿವಾರಣೆಗಾಗಿ ಸರಸ್ವತೀನದಿ ದಡದಲ್ಲಿ ತಪಸ್ಸನ್ನು ಮಾಡುತ್ತಿರುತ್ತಾರೆ. ಆಗ ಆಕಾಶಮಾರ್ಗದಲ್ಲಿ ವಿಮಾನದಲ್ಲಿ ಸಂಚರಿಸುತ್ತಾ ಇದ್ದ ಸನತ್ಕುಮಾರ ದೇವ, ಸರಸ್ವತೀನದಿ ದಡದಲ್ಲಿ ವ್ಯಾಸಮುನಿಯ ತಪಸ್ಸು ಮಾಡುತ್ತಿರುವುದನ್ನು ನೋಡಿ ಹತ್ತಿರ ಬರುತ್ತಾನೆ. ಎಚ್ಚರಗೊಂಡ ವ್ಯಾಸಮುನಿ ಎದುರಿಗೆ ನಿಂತಿರುವ ಬ್ರಹ್ಮನ ಮಾನಸಪುತ್ರನಾದ ಸನತ್ಕುಮಾರನನ್ನು ನೋಡಿ ತುಂಬಾ ಆಶ್ಚರ್ಯಗೊಳ್ಳುತ್ತಾನೆ. ನಂತರ ಬ್ರಹ್ಮಪುತ್ರ ಸನತ್ಕುಮಾರನಿಗೆ ಅರ್ಘ್ಯವನ್ನು ಕೊಟ್ಟು ನಮಸ್ಕರಿಸುತ್ತಾನೆ.

ಆಗ ಸನತ್ಕುಮಾರ ಯಾವ ಕಾರಣಕ್ಕಾಗಿ ತಪಸ್ಸಿಗೆ ಕುಳಿತಿರುವೆ – ಎಂದು ವ್ಯಾಸಮುನಿಯನ್ನು ಕೇಳುತ್ತಾನೆ. ಓ ದೇವಮುನಿಯೇ! ನಾನು ಲೋಕದಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳು ಜನರಿಗೆ ಲಭಿಸುವಂತೆ ಮಾಡಿರುವೆ. ಹಾಗೇ, ಜನರು ವೇದಮಾರ್ಗದಲ್ಲಿ ನಡೆಯುವಂತೆ ಸಹ ಮಾಡಿರುವೆ. ಇದರಿಂದ ನಾನು ಎಲ್ಲರಿಗೂ ಗುರುವಾಗಿದ್ದರೂ, ನನಗೆ ಸಂಸಾರಕ್ಲೇಶವನ್ನು ಹೋಗಲಾಡಿಸುವ ಮುಕ್ತಿಸಾಧನ ಸಿಕ್ಕಿಲ್ಲ. ಅತಿ ಶ್ರೇಷ್ಠವಾದ, ಮುಕ್ತಿಗೆ ಸಾಧನವಾಗುವಂತಹ ಜ್ಞಾನವು ಇನ್ನೂ ನನಗೆ ಲಭಿಸಿಲ್ಲ. ಅದಕ್ಕಾಗಿ ಮುಕ್ತಿಯನ್ನು ಅರಸಿ, ತಪಸ್ಸನ್ನು ಆಚರಿಸುತ್ತಿರುವೆ. ಆದರೆ ಆ ಮುಕ್ತಿಗೆ ಸಾಧನ ಏನೆಂಬುದು ನನಗಿನ್ನೂ ತಿಳಿದಿಲ್ಲ ಅನ್ನುತ್ತಾನೆ.

ಪೂಜ್ಯನಾದ ಮತ್ತು ಜ್ಞಾನಿಯೂ ಆದ ಸನತ್ಕುಮಾರ, ಮುಕ್ತಿಯ ಸಾಧನಗಳನ್ನು ನಿಶ್ಚಯಾತ್ಮಕವಾಗಿ ತಿಳಿಯುವ ಮಾರ್ಗವನ್ನು ವೇದವ್ಯಾಸರಿಗೆ ಹೇಳುತ್ತಾನೆ. ‘ಶಂಕರನ ನಾಮಶ್ರವಣ, ಕೀರ್ತನ, ಮನನ ಎಂಬ ಮೂರು ಮುಕ್ತಿಸಾಧನಗಳಿವೆ. ಇವು ಶ್ರೋತವ್ಯೋ ಮಂತ್ರವ್ಯೊ ನಿದಿಧ್ಯಾಸಿತವ್ಯಃ ಎಂದು ಮೊದಲಾದ ಶ್ರುತಿಗಳಲ್ಲಿ ಹೇಳಲ್ಪಟ್ಟಿವೆ. ಹಿಂದೆ ನಾನು ಸಹ ನಿನ್ನಂತೆ ಜೀವನದಲ್ಲಿ ತುಂಬಾ ಭ್ರಾಂತನಾಗಿ ಮುಕ್ತಿಯನ್ನು ಪಡೆಯಲು ಯಾವುದೋ ಬೇರೆ ಸಾಧನಗಳನ್ನು ಆಶ್ರಯಿಸಿ ಮಂದಾರಪರ್ವತದ ತಪ್ಪಲಲ್ಲಿ ತಪಸ್ಸನ್ನು ಆಚರಿಸುತ್ತಿದ್ದೆ. ಆದರೆ ಯಾವುದೇ ಪ್ರಯೋಜನವಾಗಿರಲಿಲ್ಲ. ಕೆಲ ಕಾಲಾನಂತರ ಶಿವನ ಆಜ್ಞೆಯಂತೆ, ಪೂಜ್ಯನಾದ ನಂದಿಕೇಶ್ವರನು ನನ್ನ ಬಳಿಗೆ ಬಂದ. ದಯಾಳುವೂ ಪ್ರಮಥಗಣಗಳಿಗೆ ನಾಯಕನೂ ಸರ್ವಜ್ಞನೂ ಆದ ಆ ನಂದಿಕೇಶ್ವರನು ನನಗೆ ಉತ್ತಮವಾದ ಮುಕ್ತಿಸಾಧನವನ್ನು ಸ್ನೇಹಪೂರ್ವಕವಾಗಿ ಹೇಳಿದ.

ಎಲೈ ದೇವೋತ್ತಮನಾದ ಸನತ್ಕುಮಾರನೇ! ಶಂಕರನ ಶ್ರವಣ, ಮನನ, ಕೀರ್ತನ ಎಂಬೀ ಮೂರು ಸಾಧನಗಳು ಮುಕ್ತಿಗೆ ಮಾರ್ಗದರ್ಶನಗಳು – ಎಂದು ವೇದದಲ್ಲಿ ಹೇಳಿರುವುದನ್ನು ಸಾಕ್ಷಾತ್ ಶಿವನೇ ನನಗೆ ಹೇಳಿರುವನು. ಆದ ಕಾರಣ ನೀನೂ ಸಹ ಶ್ರವಣ, ಮನನ, ಕೀರ್ತನ ಎಂಬೀ ಮೂರು ಸಾಧನಗಳನ್ನು ಅನುಸರಿಸಿ, ಮುಕ್ತಿಗಾಗಿ ಧ್ಯಾನಿಸು’ ಎಂದು ನಂದಿಕೇಶ್ವರನು ನನಗೆ ಹೇಳಿದನು. ಅದರಂತೆ ನಾನು ತಪಸ್ಸು ಮಾಡಿದಾಗ ಶಿವನ ಸಾಕ್ಷಾತ್ಕಾರವಾಗಿ, ಮುಕ್ತಿ ಸಿಕ್ಕಿತು. ವ್ಯಾಸಮುನಿಯೇ! ನನ್ನಂತೆ ನೀನೂ ಸಹ ಶಿವನ ಶ್ರವಣ, ಮನನ, ಕೀರ್ತನ ಎಂಬೀ ಮೂರು ಸಾಧನಗಳನ್ನು ಅನುಸರಿಸಿ, ಮುಕ್ತಿ ಪಡೆ – ಅಂತ ತಿಳಿಸಿದ. ಸನತ್ಕುಮಾರನ ಮಾತು ಕೇಳಿ ಆನಂದಿತರಾದ ವ್ಯಾಸಮುನಿಗಳು, ಆತನಿಗೆ ಕೃತಜ್ಞತೆಯಿಂದ ನಮಸ್ಕರಿಸಿದರು. ವ್ಯಾಸರಿಂದ ಯಥೋಚಿತ ಆತಿಥ್ಯ ಸ್ವೀಕರಿಸಿದ ನಂತರ ಸನತ್ಕುಮಾರ, ತನ್ನ ವಿಮಾನದಲ್ಲಿ ಪರಮಮಂಗಳಕರವಾದ ಬ್ರಹ್ಮಲೋಕಕ್ಕೆ ತೆರಳಿದ.

ಹೀಗೆ ಸೂತಮುನಿಯು ವ್ಯಾಸರಿಗೆ ಸನತ್ಕುಮಾರದೇವನಿಂದ ತಿಳಿದ ಮುಕ್ತಿಮಾರ್ಗದ ಕತೆಯನ್ನ ಮಹಾಸತ್ರಯಾಗದ ಋಷಿಗಳಿಗೆ ಹೇಳಿದ. ‘ಎಲೈ ಋಷಿಮುನಿಗಳೇ, ಸಂಕ್ಷೇಪವಾಗಿ ವ್ಯಾಸರಿಗೆ ಸನತ್ಕುಮಾರನಿಂದ ತಿಳಿದ ಮುಕ್ತಿಮಾರ್ಗದ ವೃತ್ತಾಂತವನ್ನು ಹೇಳಿರುವೆ. ಶಿವಪುರಾಣದ ಶ್ರವಣ-ಪಠಣ-ಮನನದಿಂದ ಮುಕ್ತಿ ಪಡೆದು, ಶಿವಸನ್ನಿಧಾನ ಸೇರಿ’ ಅಂತ ಸೂತಮುನಿಯು ಮುನಿವೃಂದಕ್ಕೆ ತಿಳಿಸುವುದರೊಂದಿಗೆ ಶ್ರೀಶಿವಪುರಾಣದ ವಿದ್ಯೇಶ್ವರಸಂಹಿತೆಯ ಸಾಧ್ಯಸಾಧನಖಂಡದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ದೆಹಲಿ ಮುಖ್ಯಮಂತ್ರಿ, ಆಮ್ ಆದ್ಮಿ ಪಕ್ಷದ (ಎಎಪಿ) ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಮತ್ತು ಎಎಪಿ ಸಂಸದ ಭಗವಂತ್ ಮಾನ್ ಅವರು ಮದ್ಯದಂಗಡಿ ಮುಂದೆ ಕುಳಿತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಬಿಜೆಪಿ ನಾಯಕರಾದ ನವೀನ್ ಕುಮಾರ್ ಜಿಂದಾಲ್ ಮತ್ತು ಇಂಪ್ರೀತ್ ಸಿಂಗ್ ಭಕ್ಷಿ ಅವರು ಸೇರಿ ಹಲವರು ಈ ಚಿತ್ರವನ್ನು ಹಂಚಿಕೊಂಡಿದ್ದಾರೆ. ಇಬ್ಬರೂ ತಮ್ಮ ನಚ್ಚಿನ ಜಾಗದಲ್ಲಿ ಕುಳಿತಿದ್ದಾರೆ ಎಂಬ ಅಡಿ ಬರಹವನ್ನು ಈ ಚಿತ್ರಕ್ಕೆ ನೀಡಲಾಗಿದೆ. ಕೇಜ್ರಿವಾಲ್ ಸರ್ಕಾರದ ಮದ್ಯ ನೀತಿಯನ್ನು ಮುಂದಿಟ್ಟುಕೊಂಡು ಅವರನ್ನು ಲೇವಡಿ ಮಾಡಲಾಗಿದೆ.

ಇದು ತಿರುಚಿರುವ ಚಿತ್ರ ಎಂದು ‘ಇಂಡಿಯಾ ಟುಡೆ ಫ್ಯಾಕ್ಟ್‌ಚೆಕ್’ ವರದಿ ಮಾಡಿದೆ. ಕೆಲ ದಿನಗಳ ಹಿಂದೆ ಕೇಜ್ರಿವಾಲ್ ಮತ್ತು ಭಗವಂತ್ ಮಾನ್ ಅವರು ಪಂಜಾನ್‌ನ ರೈತರ ಜೊತೆ ಸಾಸಿವೆ ಹೊಲದಲ್ಲಿ ಸಂವಾದ ನಡೆಸಿದ್ದರು. ಈ ಕಾರ್ಯಕ್ರಮಕ್ಕೆ ಸಂಬಂಧಿಸಿದ ಕಿರು ವಿಡಿಯೊವೊಂದನ್ನು ಎಎಪಿ ತನ್ನ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿತ್ತು. ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರ ಚಮಕೌರ್ ಸಾಹಿಬ್ ಕ್ಷೇತ್ರದಲ್ಲಿ ಸಂವಾದ ನಡೆಸಿದ್ದಾಗಿ ಟ್ವಿಟರ್‌ನಲ್ಲಿ ಮಾಹಿತಿ ನೀಡಲಾಗಿತ್ತು. ಆ ಚಿತ್ರವನ್ನು ತಿರುಚಿ, ಅವರಿಬ್ಬರೂ ಮದ್ಯದಂಗಡಿ ಮುಂದೆ ಇರುವಂತೆ ಬಿಂಬಿಸಲಾಗಿದೆ ಎಂದು ‘ಇಂಡಿಯಾ ಟುಡೆ’ ವರದಿಯಲ್ಲಿ ಹೇಳಲಾಗಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಸತ್ಯದರ್ಶನ

ಬುದ್ಧಿ ಪ್ರಕಾಶದಿಂದಂತರನುಭವಶೋಧೆ |
ಸಿದ್ಧವಾ ಶೋಧೆಯಿಂ ಸತ್ಯಸಂವೀಕ್ಷೆ ||
ಶುದ್ಧಸತ್ಯವ ಜೀವಿತಪ್ರಶ್ನೆಗನ್ವಯಿಪ |
ಪದ್ಧತಿಯೆ ಧರ್ಮವೆಲೋ- ಮಂಕುತಿಮ್ಮ || 545||

ಪದ-ಅರ್ಥ: ಬುದ್ಧಿಪ್ರಕಾಶದಿಂದಂತರನುಭವ-ಶೋಧೆ = ಬುದ್ಧಿಪ್ರಕಾಶದಿಂದ + ಅಂತರ + ಅ-ನುಭವ + ಶೋಧೆ, ಸಿದ್ಧವಾ = ಸಿದ್ಧ + ಆ, ಶೋಧೆಯಿಂ = ಶೋಧೆಯಿಂದ, ಸತ್ಯಸಂವೀ-ಕ್ಷೆ = ಸತ್ಯ + ಸಂವೀಕ್ಷೆ(ನಿಜವಾದ ದರ್ಶನ), ಜೀವಿತಪ್ರಶ್ನೆಗನ್ವಯಿಪ = ಜೀವಿತಪ್ರಶ್ನೆಗೆ + ಅನ್ವಯಿ-ಪ(ಅನ್ವಯಿಸಿಕೊಳ್ಳುವ).

ವಾಚ್ಯಾರ್ಥ: ಬುದ್ಧಿಯ ಬೆಳವಣಿಗೆಯಿಂದ ಆಂತರ್ಯದಲ್ಲಿ ಅನುಭವಗಳ ಶೋಧನೆ. ಆ ಶೋಧನೆಯಿಂದ ಸತ್ಯದ ನಿಜದರ್ಶನ ಸಿದ್ಧವಾ-ಗುತ್ತದೆ. ಆ ಶುದ್ಧ ಸತ್ಯವನ್ನು ಬದುಕಿನ ಪ್ರಶ್ನೆಗಳಿಗೆ ಅನ್ವಯಿಸುವ ಪದ್ಧತಿಯೇ ಧರ್ಮ.

ವಿವರಣೆ: ಯಾವುದೇ ಜ್ಞಾನವೂ ಒಂದು ಅನುಭವವೇ. ಬುದ್ಧಿ ಅನುಭವಕ್ಕೆ ಒಂದು ಉಪಕರಣ. ಬುದ್ಧಿ ಬೆಳೆದಂತೆ, ವಿವೇಕಯು-ತವಾದಂತೆ, ಅನುಭವ ಹೆಚ್ಚು ಆಳವೂ, ಅರ್ಥಪೂರ್ಣವೂ ಆಗುತ್ತದೆ. ನಂತರ ಸಿದ್ಧವಾದ ಬುದ್ಧಿ ಅನುಭವಗಳನ್ನು ಶೋಧನೆ ಮಾಡಿ, ಇದು ಸರಿಯೇ, ಅದು ಸರಿಯೇ ಎಂದು ಪರೀಕ್ಷಿಸುತ್ತದೆ. ಇದಲ್ಲ, ಅದಲ್ಲ ಎಂದು ಹಗುರವಾದ ಅನುಭವ-ಗಳನ್ನು ತಳ್ಳಿಹಾಕುತ್ತ ಕೊನೆಗೆ ಸತ್ಯದ ನಿಜದರ್ಶನ ಮಾಡಿಕೊಳ್ಳುತ್ತದೆ.

ಶಾಸ್ತ್ರದಲ್ಲಿ ಬರುವ ‘ನೇತಿ ನೇತಿ’ ತತ್ವವನ್ನು ಶ್ರೀ ರಾಮಕೃಷ್ಣ ಪರಮಹಂಸರು ಒಂದು ಸುಂದರವಾದ ದೃಷ್ಟಾಂತದ ಮೂಲಕ ತಿಳಿಸುತ್ತಾರೆ. ಒಬ್ಬ ತರುಣಿಗೆ ಮದುವೆ ನಿಶ್ಚಯವಾಗಿದೆ. ಗೆಳತಿಯರಿಗೆ ತನ್ನ ಭಾವೀಪತಿಯನ್ನು ತೋರಿಸಬೇಕಾಗಿದೆ. ಆಕೆ ಗೆಳತಿಯರೊಂದಿಗೆ ಮರೆಯಲ್ಲಿ ನಿಂತು ಯುವಕರ ಗುಂಪಿನಲ್ಲಿ ಕುಳಿತ ತರುಣನನ್ನು ತೋರಿಸಬೇಕಾಗಿದೆ. ಆಕೆಯ ಸ್ನೇಹಿತೆಯರು ಒಬ್ಬ ತರುಣನ ಕಡೆಗೆ ಬೆರಳು ತೋರಿಸಿ “ಅವನೇ” ಎಂದಾಗ ಆಕೆ “ಅಲ್ಲ(ನೇತಿ)” ಎನ್ನುತ್ತಾಳೆ. ಇದೇ ರೀತಿ ಬೇರೆ ಬೇರೆ ಯುವಕರನ್ನು ತೋರಿಸಿದಾಗ ಮತ್ತೆ “ಅಲ್ಲ, ಅಲ್ಲ (ನೇತಿ, ನೇತಿ)” ಎನ್ನುತ್ತ, ಕೊನೆಗೆ ಸರಿಯಾದ ಯುವಕನನ್ನು ತೋರಿದಾಗ ಏನನ್ನೂ ಮಾತನಾಡದೆ, ತಲೆ ತಗ್ಗಿಸಿ, ನಾಚಿ ಸುಮ್ಮನಾಗುತ್ತಾಳೆ. ಸತ್ಯದರ್ಶನದಲ್ಲಿಯೂ ಇದೇ ವಿಧಿ. ಪ್ರತಿಯೊಂದು ಅನುಭವವನ್ನು ಬುದ್ಧಿ ಪರೀಕ್ಷಿಸಿ, ಇದೇ ಸತ್ಯವೇ ಎಂದು ಕೇಳಿ ಪರೀಕ್ಷಿಸಿ ಕೊನೆಗೆ “ನೇತಿ” (ಇದಲ್ಲ) ಎನ್ನುತ್ತದೆ. ನಿಜವಾದ ತರುಣನನ್ನು ಗುರುತಿಸಿದಾಗ ತರುಣಿಯ ಮಾತು ನಿಂತಂತೆ ಸತ್ಯದರ್ಶನವಾದಾಗ, ಮಾತು ನಿಲ್ಲುತ್ತದೆ.

ಇದರಂತೆ ಬದುಕಿನಲ್ಲಿ ಬರುವ ಅನೇಕ ಅನುಭವಗಳಾದ ಐಶ್ವರ್ಯ-ದಾರಿದ್ರ್ಯ, ಪ್ರೀತಿ-ದ್ವೇಷ, ಯಶಸ್ಸು-ವೈಫಲ್ಯ, ಕೀರ್ತಿ-ಅಪಕೀರ್ತಿ ಇವುಗಳನ್ನು ವಿವೇಕದಿಂದ ಕೂಡಿದ ಬುದ್ಧಿ ಶೋಧಿಸುತ್ತದೆ. ಇದೇ ಸತ್ಯವೇ, ಇದೇ ನನ್ನ ಬದುಕಿಗೆ ಮುಖ್ಯವೇ ಎಂದು ಪ್ರಶ್ನಿಸುತ್ತದೆ. ಜೀವನದ ಯಾವ ಯಾವ ಸಂದರ್ಭಗಳಲ್ಲಿ ಈ ಸತ್ಯವನ್ನು ಅನ್ವಯಿಸುವುದು ಎಂದು ತಾಳೆ ನೋಡುತ್ತದೆ. ಹೀಗೆ ಸರಿಯಾಗಿ ವಿವೇಕದಿಂದ ಸಂದರ್ಭಗಳನ್ನು ಪರೀಕ್ಷಿಸಿ, ಅವುಗಳ ಮೌಲ್ಯಮಾಡಿ, ಬಳಸುವುದೇ ಧರ್ಮ. ಈ ಧರ್ಮದ ನಡೆ ಜೀವಿತಕ್ಕೊಂದು ಸಾರ್ಥಕ್ಯವನ್ನು ಕೊಡುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಜನವರಿ 20, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ –ಹೇಮಂತ ಋತು ಮಕರ ಮಾಸದ 06 ನೇ ದಿನ
ತಿಥಿ: (ಪೌಷ ಕೃಷ್ಣ) ದ್ವಿತೀಯ ಗಂ. 08-06 **ನಕ್ಷತ್ರ:** ಆಶ್ಲೇಷ ಗಂ. 08-24 **ಯೋಗ:** ಆಯುಷ್ಮಾನ್ ಗಂ. 15-44, **ಕರಣ:** ಗರಜೆ ಗಂ. 08-06.
ರಾಹುಕಾಲ : ಮಧ್ಯಾಹ್ನ 01:30 – 03:00
ಸೂರ್ಯೋದಯ : 07-01 **ಸೂರ್ಯಾಸ್ತ :** 06-22
ಮುಸ್ಲಿಂ ದಿನಾಂಕ : 16 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 06, 21

ಮೇಷ: ಈ ದಿನ ಹೊಸ ಯೋಜನೆಗಳನ್ನು ಕಾರ್ಯಗತ ಗೊಳಿಸುವಲ್ಲಿ ವಿಫಲರಾಗುವಿರಿ. ಪಾಲುದಾರಿಕೆ ಅನಿವಾರ್ಯವಾಗಿ ಸಂಕಷ್ಟ ಪರಿಸ್ಥಿತಿಯಲ್ಲಿ ಕುಟುಂಬದ ಮುಂದುವರೆಸುವಂತಾಗಲಿದೆ.

ವೃಷಭ: ಆಕಸ್ಮಿಕ ರೀತಿಯಲ್ಲಿ ಉದ್ಯೋಗ ದೊರೆತು ಸಂತೋಷ. ರುಚಿಯಾದ ಭರ್ಜರಿ ಊಟ ಸವಿಯುವಿರಿ. ಮಗನಿಗಾಗಿ ಹೊಸ ವ್ಯಾಪಾರ ಮಳಿಗೆ ಆರಂಭಿಸುವುದು ಒಳ್ಳೆಯದು.

ಮಿಥುನ: ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವಿರಿ. ಮನೆಯ ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧ ಕೂಡಿ ಬರುವುದು.

ಕರ್ಕಾಟಕ: ಸುದ್ದಿ ಗೋಷ್ಠಿಗಳಲ್ಲಿ ಭಾಗವಹಿಸುವಂತಾಗಲಿದೆ. ಮಗನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು.

ಸಿಂಹ: ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ನಿಮ್ಮ ಸಮಸ್ಯೆ-ಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವ ಪ್ರಯತ್ನವನ್ನು ಮಾಡಿ.

ಕನ್ಯಾ: ಹವ್ಯಾಸಿ ಬರಹಗಾರರಿಗೆ ಹೇರಳ ಅವಕಾಶಗಾಳಿರುವುದು. ಶ್ವಾಸ ಕೋಶಕ್ಕೆ ಸಂಬಂಧ ಪಟ್ಟ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ದೂರ ಪ್ರಯಾಣ ಮಾಡ ಬೇಕಾದ ಸಂದರ್ಭ ಬರಲಿದೆ.

ತುಲಾ: ಸ್ವಯಂ ಸಾಮಥ್ರ್ಯದಿಂದ ಅವಕಾಶಗಳನ್ನು ಪಡೆದುಕೊಳ್ಳುವಂತಾ-ಗಲಿದೆ. ಜೀವನದ ಹಾದಿ ಬದಲಾಗುವುದನ್ನು ಕಾಣುವಿರಿ. ವ್ಯಾಪಾರದಲ್ಲಿ ಸಾಧಾರಣ ಲಾಭವಿದೆ.

ವೃಶ್ಚಿಕ: ಕಟ್ಟಡ ನಿರ್ಮಾಣ ಮಾಡಿಸುತ್ತಿರುವವರಿಗೆ ಲಾಭ ನಷ್ಟಗಳ ಬಗ್ಗೆ ಪುನರಾವಲೋಕನೆ ಅಗತ್ಯವೆನಿಸುವುದು. ಬಿರುಸಿನ ಕಾರ್ಯ ಚಟುವಟಿಕೆಗ-ಳಿಂದ ಬಿಡುವು ಪಡೆದು ಮನೆಯವರೊಡನೆ ಕಾಲ ಕಳೆಯಲು ಅಪೇಕ್ಷಿಸುವಿರಿ.

ಧನು: ದೇಹದ ಶ್ರಮಕ್ಕೆ ತಕ್ಕಂತಹ ಸಂಪಾದನೆ ಇಲ್ಲವಾದರೂ ನೆಮ್ಮದಿ ಇರಲಿದೆ. ಬರಬೇಕಾಗಿದ್ದ ಹಣಕ್ಕೆ ತುಸು ಅಡಚಣೆಗಳನ್ನು ನಿವಾರಿಸಿ ಕೊಳ್ಳಬೇಕಾಗುವುದು.

ಮಕರ: ನಿಮ್ಮ ಮಿತ್ರರೊಬ್ಬರು ಎಲ್ಲ ವಿಧದಲ್ಲಿಯೂ ನಿಮಗೆ ಸಹಾಯ ಮಾಡಲಿದ್ದಾರೆ. ವಿವಾದಾಸ್ಪದ ವಿಷಯಗಳಿಂದ ದೂರವಿರುವುದು ಉತ್ತಮ. ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಮಧುರ ಘಟನೆ ನಡೆಯಲಿದೆ.

ಕುಂಭ: ನಿಮಗೆ ಎದುರಾಗಿ ಬರುತ್ತಿರುವ ಅವಕಾಶವನ್ನು ವ್ಯರ್ಥವಾಗ-ದಂತೆ ಪಡೆದುಕೊಳ್ಳಲು ಪ್ರಯತ್ನಪಡುವುದು ಅಗತ್ಯ. ರಿಯಲ್ ಎಸ್ಟೇಟು ಕಸುಬುದಾರರು ಹೆಚ್ಚಿನ ಬಂಡವಾಳ ತೊಡಗಿಸಲು ಈ ದಿನ ಸಮಂಜಸವಲ್ಲ.

ಮೀನ: ನಿಮ್ಮ ಸಂಸಾರ ನಿರ್ವಹಣೆಯ ವಿಷಯದಲ್ಲಿ ಖಚಿತ ನಿರ್ಧಾರ ತೆಗೆದುಕೊಳ್ಳಬೇಕಾಗುವುದು. ಹೋಟೇಲ್ ಉದ್ದಿಮೆದಾರರಿಗೆ ಸ್ವಲ್ಪ ಮಟ್ಟಿನ ನಷ್ಟಗಳು ಸಂಭವಿಸಬಹುದು.

ಪದಬಂಧ 4844

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಾನಸಿಕ ಘರ್ಷಣೆ (3)
3.ಅತಿ ಘೋರವಾದ ವಿಷ (4)
5.ಮೃದುವಾದುದು ಇದು (3)
7.ಕರುವಿನ ಪಚನಾಂಗವಿದು (3)
9. ಬರಹಗಾರನಿಲ್ಲಿ ತಿರುಗಿದ್ದನಲ್ಲಾ? (2)
10.ಕೋವಿ ಹಿಡಿದು ಬಂದಿರುವ ವಿದ್ಯಾವಂತ (3)
11.ಅಂಕ ಗಣಿತದಲ್ಲಿರುವ ಅಂಕಿ (2)
12.ಹರನಿಂದ ಬಂದಿರುವ ಆಶೀರ್ವಾದ (3)
14.ತಿರುಗಿ ಮಾಡಿಕೊಂಡಿರುವ ಅರಿಕೆ(3)
16.ಸಮುದ್ರವನ್ನು ಹೀಗೂ ಹೇಳುವರು(4)
17.ಶಿರವನ್ನು ವಿಕ್ರಯಿಸಿದರೆ ಪೀಳಿಗೆ ಕಾಣುವುದೇ? (4)

ಮೇಲಿಂದ ಕೆಳಕ್ಕೆ
1.ತರ್ಕಬದ್ಧವಾದುದು (3)
2.ಅಭಿನಯಿಸುವವ ತಿರುಗಿದ್ದಾನಲ್ಲಾ (2)
3.ಈ ರೀತಿ ನಗೆ! (2)
4.ತಾವರೆಯಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)
6.ಡೈವೋರ್ಸ್ ಅನ್ನು ಕನ್ನಡೀಕರಿಸಿ! (7)
8.ದುಃಖಾಂತವಾದ ನಾಟಕ (5)
9.ಬ್ರಹ್ಮನ ಲಿಖಿತವಿದು (5)
11. ಬರವಿದ್ದಾಗ ದಿಟ್ಟಿಸಿ ನೋಡಿರುವ ಆಕಾಶ (3)
13.ಮಣ್ಣು ಕಲೆಸಿದ ನೀರು (3)
14 ಉಲ್ಟಾ ಮೂಡಿರುವ ಸೂರ್ಯ (2)
15.ಮಡಿವಂತ ನೀಡಿರುವ ಓಟು (2)



4843ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
5.ಸಹಾಯ 6.ವರ್ತಮಾನ
8.ಯಮಭಾರ 12.ಅಂತರಂಗ
14.ಅನುರಾಗ 15.ವಠಾರ
16.ಸಭಾತ್ಯಾಗ

ಮೇಲಿಂದ ಕೆಳಕ್ಕೆ:
1.ಅಸಭ್ಯತನ 2.ಆಯವ್ಯಯ
3.ಸರೋವರ 4.ರಸನ
7.ಮಾವ 9.ಭಾರತ
10.ಸ್ಪಷ್ಟೀಕರಣ 11.ಡಿನ
12.ಅಂಗರಾಗ 13.ಗರ್ಭವತಿ
14.ಅರಸ

ಸುಡೊಕು 5230

2		4	1	5			8	
				8		5		9
8		3			9		1	
3		9	5		1			
	6			9				
5		1	6		8			
	7			3	5	2		4
4		5						
	8			6		3		1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5229 ಸುಡೊಕು

4	7	5	3	9	8	2	6	1
1	2	9	6	4	7	5	8	3
3	6	8	5	1	2	4	9	7
9	5	2	7	8	1	3	4	6
6	4	1	9	5	3	8	7	2
8	3	7	2	6	4	1	5	9
7	1	6	4	3	5	9	2	8
5	9	3	8	2	6	7	1	4
2	8	4	1	7	9	6	3	5

ನಿರ್ಬಂಧ ಸಡಿಲಿಕೆ?

ಒಂದನೇ ಪುಟದಿಂದ

ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿದ್ದರೂ, ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಕಡಿಮೆಯೇ ಇದೆ. ಎಲ್ಲ ಆಸ್ಪತ್ರೆಗಳಲ್ಲಿ ಹೊರ ರೋಗಿಗಳ ಚಿಕಿತ್ಸಾ ವಿಭಾಗಗಳನ್ನು ಬಲಪಡಿಸಲು ಸೂಚನೆ ನೀಡಲಾಗಿದೆ. ತಜ್ಞರ ಸಲಹೆಗಳನ್ನು ಆಧರಿಸಿ ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

ಎಲ್ಲರ ವಿರುದ್ಧವೂ ಕ್ರಮ: ಕೋವಿಡ್ ನಿಯಂತ್ರಣ ಮಾರ್ಗಸೂಚಿ ಉಲ್ಲಂಘಿಸುವವರ ವಿರುದ್ಧ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುತ್ತಿದೆ. ಈ ಸಂಬಂಧ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಈಗಾಗಲೇ ಆದೇಶ ಹೊರಡಿಸಿದ್ದಾರೆ. ಈ ವಿಚಾರದಲ್ಲಿ ಪಕ್ಷ, ಸಂಘಟನೆಯ ಹೆಸರಿನಲ್ಲಿ ಭೇದವಿಲ್ಲದೇ ಕ್ರಮ ಜರುಗಿಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಬೊಮ್ಮಾಯಿ ಗುಣಮುಖ

ತಮಗೆ ಕೋವಿಡ್ ಸೋಂಕು ತಗುಲಿದ್ದರಿಂದ 12 ದಿನಗಳ ಪ್ರತ್ಯೇಕವಾಸದ ಅವಧಿ ಪೂರ್ಣಗೊಳಿಸಿ, ಪರೀಕ್ಷೆ ಮಾಡಿಸಿಕೊಂಡಿದ್ದು 'ನೆಗೆಟಿವ್' ವರದಿ ಬಂದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಕೋವಿಡ್‌ನಿಂದ ಸಂಪೂರ್ಣ ಗುಣಮುಖನಾಗಿದ್ದೇನೆ. ಬುಧವಾರದಿಂದ ದೈನಂದಿನ ಕೆಲಸಗಳಲ್ಲಿ ನೇರವಾಗಿ ಭಾಗವಹಿಸುತ್ತಿದ್ದೇನೆ' ಎಂದರು.

ಸಂಪುಟ ವಿಸ್ತರಣೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, 'ಆ ಬಗ್ಗೆ ಸಾರ್ವಜನಿಕವಾಗಿ ಚರ್ಚೆ ಮಾಡುವುದಿಲ್ಲ' ಎಂದರು.

ಬೀದಿ ನಾಯಿ ದಾಳಿ: ಮಗು ಸಾವು

ಅಥಣಿ(ಬೆಳಗಾವಿ ಜಿಲ್ಲೆ): ಅಥಣಿ ತಾಲ್ಲೂಕಿನ ಬಳವಾಡ ಗ್ರಾಮದಲ್ಲಿ ಸೌಜನ್ಯ ಮಲ್ಲಪ್ಪ ಮುತ್ತೂರ ಎಂಬ ನಾಲ್ಕು ವರ್ಷದ ಬಾಲಕಿ ಬೀದಿ ನಾಯಿ ದಾಳಿಗೆ ಸಿಲುಕಿ ಬುಧವಾರ ಸಾವನ್ನಪ್ಪಿದ್ದಾಳೆ. ನಾಯಿ ದಾಳಿಯಿಂದ ತೀವ್ರವಾಗಿ ಗಾಯಗೊಂಡ ಮಗುವನ್ನು ಅಥಣಿ ಸಮುದಾಯ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆಯೇ ಸಾವನ್ನಪ್ಪಿದ್ದಾಳೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಥಣಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

ಗುಳೆ ಹೋಗಲು ಪತಿ ನಕಾರ: ಪತ್ನಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚಿಂಚೋಳಿ (ಕಲಬುರಗಿ ಜಿಲ್ಲೆ): ಗುಳೆ ಹೋಗಲು ಪತಿ ನಿರಾಕರಿಸಿದ್ದಕ್ಕೆ ತಾಲ್ಲೂಕಿನ ರುದ್ನೂರ ಗ್ರಾಮದ ಪತ್ನಿ ಶಾಂತಮ್ಮ ಸಂತೋಷ ಧರಿಮ್ಯಾಲ್ (26) ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗ್ರಾಮದಲ್ಲಿ ಇರುವುದು ಬೇಡ, ಬೆಂಗಳೂರಿಗೆ ಹೋಗಿ ಅಲ್ಲಿಯೇ ದುಡಿದು ಬದುಕೋಣ ಎಂದು ಪತ್ನಿ ಶಾಂತಮ್ಮ ಹೇಳುತ್ತಿದ್ದಳು. ಕೋವಿಡ್ ಮುಗಿದ ಮೇಲೆ ಹೋಗೋಣ, ಈಗ ಬೇಡ ಎಂದು ಹೇಳಿದ್ದಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಪತಿ ಸಂತೋಷ ಹೇಳಿಕೆ ನೀಡಿದ್ದಾರೆ.

ದಿಗ್ಗಾಂವ್ ಗ್ರಾಮದ ಶಾಂತಮ್ಮ ಅವರನ್ನು ರುದ್ನೂರಿನ ಸಂತೋಷ ಎಂಬುವವರೊಂದಿಗೆ ವಿವಾಹ ಮಾಡಿಕೊಡಲಾಗಿತ್ತು. ಈ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಸುಲೇಪೇಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೈಲುಗಳಲ್ಲಿ ಸಾವು: ವರದಿ ಸಲ್ಲಿಸಲು ನಿರ್ದೇಶನ

ಬೆಂಗಳೂರು: 'ರಾಜ್ಯದ ಕಾರಾಗೃಹಗಳಲ್ಲಿ ಅಸ್ವಾಭಾವಿಕವಾಗಿ ಸಾವನ್ನಪ್ಪಿದ ವಿಚಾರಣಾಧೀನ ಕೈದಿಗಳ ಅವಲಂಬಿತರಿಗೆ ಪರಿಹಾರ ನೀಡಿರುವ ಕುರಿತಂತೆ ಸಮಗ್ರವಾದ ವಸ್ತುಸ್ಥಿತಿ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ 2017ರಲ್ಲಿ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, 'ವಿಚಾರಣಾಧೀನ ಕೈದಿಗಳು ಅಸ್ವಾಭಾವಿಕ ಸಾವನ್ನಪ್ಪಿದಲ್ಲಿ ಅವರ ಅವಲಂಬಿತರಿಗೆ ಈಗಾಗಲೇ ಪರಿಹಾರ ನೀಡಲಾಗುತ್ತಿದೆ. 2020ರ ನಂತರದ ಪ್ರಕರಣಗಳಲ್ಲಿ ಯಾರಿಗೆ ಎಷ್ಟು ಪರಿಹಾರ ನೀಡಲಾಗಿದೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ ನ್ಯಾಯಾಲಯಕ್ಕೆ ಸಲ್ಲಿಸಲು ಎರಡು ವಾರಗಳ ಸಮಯ ಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 8ಕ್ಕೆ ಮುಂದೂಡಿತು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ನಿಧನ ವಾರ್ತೆ

ಶ್ರೀಮತಿ. ಊರ್ಮಿಳಾ ವಿಠ್ಠಲ್

ದಿವಂಗತ ಡಾ. ಕೆ. ವಿಠ್ಠಲ್ ರವರ ಧರ್ಮಪತ್ನಿ

ಜನನ: 13-05-1940 ನಿಧನ: 18-01-2022

ಜನವರಿ 20, 2022ರಂದು 12:00 PM, ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಅಂತ್ಯಸಂಸ್ಕಾರ

ನಿಮ್ಮ ಆತ್ಮಕ್ಕೆ ಭಗವಂತ ಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ದುಃಖತಪ್ತ ಕುಟುಂಬ ಸದಸ್ಯರು ಮತ್ತು ಸ್ನೇಹಿತರು

17 ದಿನಗಳಲ್ಲಿ 18 ವರ್ಷದೊಳಗಿನ 43,463 ಜನರಿಗೆ ಸೋಂಕು

ಕೋವಿಡ್: ಮಕ್ಕಳಲ್ಲೂ ದೃಢ ಪ್ರಮಾಣ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರಾಗುವ ಮಕ್ಕಳ ಸಂಖ್ಯೆಯೂ ಹೆಚ್ಚಳವಾಗುತ್ತಿದ್ದು, 17 ದಿನಗಳಲ್ಲಿ 18ರೊಳಗಿನ ವಯೋಮಾನದ 43,463 ಜನ ಕೋವಿಡ್ ಪೀಡಿತರಾಗಿದ್ದಾರೆ.

ರಾಜ್ಯದಲ್ಲಿ ವರದಿಯಾದ ಕೋವಿಡ್ ಪ್ರಕರಣಗಳನ್ನು ಕೋವಿಡ್ ವಾರ್ ರೂಮ್ ವಿಶ್ಲೇಷಣೆಗೆ ಒಳಪಡಿಸಿದೆ. 2022ರ ಜ.1ರಿಂದ ಜ.17ರ ಅವಧಿಯಲ್ಲಿ 18 ವರ್ಷದೊಳಗಿನ 7,64,198 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಇವರಲ್ಲಿ ಸೋಂಕು ದೃಢ ಪ್ರಮಾಣ ಶೇ 5.69 ರಷ್ಟಿದೆ. ಈ ಪ್ರಮಾಣ 19 ವರ್ಷಗಳು ಮೇಲ್ಪಟ್ಟವರಲ್ಲಿ ಶೇ 13.31 ರಷ್ಟಕ್ಕೆ ಏರಿಕೆಯಾಗಿದೆ. ಈ ವಯೋಮಾನದವರಲ್ಲಿ 21.26 ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆಗಳನ್ನು ಮಾಡಲಾಗಿದ್ದು, 2.83 ಲಕ್ಷ ಮಂದಿ ಸೋಂಕಿತರಾಗಿದ್ದಾರೆ.

ಮಕ್ಕಳಲ್ಲಿನ ಸೋಂಕು ದೃಢ ಪ್ರಮಾಣ ಎರಡನೇ ಅಲೆಗೆ ಹೋಲಿಸಿದರೆ ಈಗ ಕಡಿಮೆ ಪ್ರಮಾಣದಲ್ಲಿ ಇದೆ. 2021ರ ಏಪ್ರಿಲ್‌ನಲ್ಲಿ 18 ವರ್ಷದೊಳಗಿನ 6.50 ಲಕ್ಷ ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿತ್ತು. ಅವರಲ್ಲಿ 57,442 ಮಂದಿ ಸೋಂಕಿತರಾಗಿದ್ದರು. ದೃಢ ಪ್ರಮಾಣ ಶೇ 8.82 ರಷ್ಟು ವರದಿಯಾಗಿತ್ತು. 2021ರ ಮೇ ತಿಂಗಳಲ್ಲಿ ಈ ಪ್ರಮಾಣ ಶೇ 24.61ಕ್ಕೆ ತಲುಪಿತ್ತು. 4.11 ಲಕ್ಷ ಮಂದಿಗೆ ನಡೆಸಲಾದ ಪರೀಕ್ಷೆಯಲ್ಲಿ 1.01 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದರು. ಡಿಸೆಂಬರ್ ಅಂತ್ಯಕ್ಕೆ ದೃಢ ಪ್ರಮಾಣ ಶೇ 0.22ಕ್ಕೆ ಇಳಿಕೆಯಾಗಿತ್ತು. 10.37 ಲಕ್ಷ ಮಂದಿಗೆ ನಡೆಸಲಾದ ಪರೀಕ್ಷೆಯಲ್ಲಿ 2,238 ಮಂದಿ ಸೋಂಕಿತರಾಗಿದ್ದರು.



19 ವರ್ಷಗಳು ಮೇಲ್ಪಟ್ಟವರಲ್ಲಿನ ಸೋಂಕು ದೃಢ ಪ್ರಮಾಣ 2021ರ ಮೇ ತಿಂಗಳಲ್ಲಿ ಶೇ 26.68 ರಷ್ಟಿತ್ತು. 35.49 ಲಕ್ಷ ಮಂದಿಗೆ ನಡೆಸಲಾದ ಪರೀಕ್ಷೆಯಲ್ಲಿ 9.47 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದರು. ನವೆಂಬರ್ ತಿಂಗಳಲ್ಲಿ ಈ ಪ್ರಮಾಣ ಶೇ 0.39ಕ್ಕೆ ಇಳಿಕೆಯಾಗಿತ್ತು. ಈ ಪ್ರಮಾಣ ಈಗ ಏರುಗತಿ ಪಡೆದುಕೊಂಡಿದೆ.

89 ಪೊಲೀಸ್ ಸಿಬ್ಬಂದಿಗೆ ಕೋವಿಡ್

ಬೆಳಗಾವಿ: ನಗರವೂ ಸೇರಿದಂತೆ ಜಿಲ್ಲೆಯ ವಿವಿಧ ಠಾಣೆಗಳ 89 ಪೊಲೀಸ್ ಸಿಬ್ಬಂದಿಗೆ ಬುಧವಾರ ಕೋವಿಡ್ ದೃಢಪಟ್ಟಿದೆ.

ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲೇ 39 ಸಿಬ್ಬಂದಿಗೆ ಸೋಂಕು ದೃಢಪಟ್ಟಿದೆ. ಎಪಿಎಂಸಿ ಠಾಣೆಯ 11, ಶಹಾಪುರ ಠಾಣೆಯ ಮೂವರು, ತಿಲಕವಾಡಿ ಠಾಣೆಯ ಇಬ್ಬರು ಸಿಬ್ಬಂದಿ, ಒಬ್ಬ ಇನ್‌ಸ್ಪೆಕ್ಟರ್, ಇಬ್ಬರು ಪಿಎಸ್‌ಐ ಸೋಂಕಿತರಾಗಿದ್ದಾರೆ. ಉಳಿದವರು ಡಿಎಆರ್, ಸಿಎಆರ್, ಕೆಎಸ್‌ಆರ್‌ಪಿಗೆ ಸೇರಿದವರಾಗಿದ್ದಾರೆ. ಎಲ್ಲರೂ ಹೋಂ ಕ್ವಾರಂಟೈನ್ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಂಜಾಗ್ರತಾ ಕ್ರಮವಾಗಿ ಸಿಬ್ಬಂದಿಯ ಗಂಟಲು ದ್ರವದ ಮಾದರಿಯನ್ನು ಭಾನುವಾರ ಸಂಗ್ರಹಿಸಲಾಗಿತ್ತು.

ಜೇವರ್ಗಿ: 18 ಪೊಲೀಸರಿಗೆ ಸೋಂಕು

ಜೇವರ್ಗಿ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಸೇರಿದಂತೆ ಒಟ್ಟು 18 ಸಿಬ್ಬಂದಿ ಮತ್ತು ತಾಲ್ಲೂಕಿನ ಚನ್ನೂರ ಗ್ರಾಮದ ಆದರ್ಶ ವಿದ್ಯಾಲಯದ 11 ವಿದ್ಯಾರ್ಥಿಗಳಿಗೆ ಬುಧವಾರ ಕೋವಿಡ್ ದೃಢಪಟ್ಟಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸಿದ್ದು ಪಾಟೀಲ ತಿಳಿಸಿದ್ದಾರೆ.

ಸೋಂಕಿನ ಲಕ್ಷಣಗಳು ಕಂಡು ಬಂದಿರುವ ಪೊಲೀಸ್ ಸಿಬ್ಬಂದಿ, ವಿದ್ಯಾರ್ಥಿಗಳಿಗೆ ಹೋಮ್ ಐಸೋಲೇಶನ್‌ನಲ್ಲಿ ಇರುವಂತೆ ತಿಳಿಸಲಾಗಿದೆ. ಅಗತ್ಯ ಪ್ರಮಾಣದಲ್ಲಿ ಔಷಧಿ ನೀಡಲಾಗಿದೆ ಎಂದು ಡಾ. ಸಿದ್ದು ಪಾಟೀಲ ತಿಳಿಸಿದ್ದಾರೆ.

ಚನ್ನೂರ ಹತ್ತಿರದ ಆದರ್ಶ ವಿದ್ಯಾಲಯವನ್ನು ಸಿಲ್‌ಡೌನ್ ಮಾಡಲಾಗಿದೆ. ಜೇವರ್ಗಿ ಪೊಲೀಸ್ ಠಾಣೆಯನ್ನೂ ಸಿಲ್‌ಡೌನ್ ಮಾಡಲಾಗುವುದು ಎಂದು ಅವರು ಮಾಹಿತಿ ನೀಡಿದ್ದಾರೆ.

ಕರ್ಫ್ಯೂ ಜಾರಿಗೊಳಿಸುವುದಾದರೆ ಲಸಿಕೆ ಏಕೆ ಬೇಕಿತ್ತು: ಪ್ರತಾಪಸಿಂಹ

ಮೈಸೂರು: 'ಕೊರೊನಾ ಹೆಸರಲ್ಲಿ ಲಾಕ್‌ಡೌನ್, ನೈಟ್ ಕರ್ಫ್ಯೂ, ವಾರಾಂತ್ಯ ಕರ್ಫ್ಯೂ ಜಾರಿ ಮಾಡುವುದಾದರೆ ಕೋವಿಡ್ ಲಸಿಕೆ ಏಕೆ ನೀಡಬೇಕಿತ್ತು' ಎಂದು ಸಂಸದ ಪ್ರತಾಪಸಿಂಹ ಪ್ರಶ್ನಿಸಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದಲ್ಲಿ ಮೊದಲ ಡೋಸ್‌ನಲ್ಲಿ ಶೇ 99 ಹಾಗೂ ಎರಡನೇ ಡೋಸ್‌ನಲ್ಲಿ ಶೇ 80 ಸಾಧನೆ ಮಾಡಲಾಗಿದೆ. ಈಗ ಬೂಸ್ಟರ್ ಡೋಸ್ ಬಂದಿದ್ದು, ಕೊರೊನಾ ಸೋಂಕು ಪ್ರಕರಣದ ಮೇಲೆ ನಿಯಂತ್ರಣ ಹೇರಲು ಸಾಧ್ಯವಾಗಿದೆ. ಆಸ್ಪತ್ರೆಗಳಲ್ಲಿ ಮತ್ತಷ್ಟು ಬೆಡ್ ವ್ಯವಸ್ಥೆ ಮಾಡಿ, ಆಮ್ಲಜನಕ ಘಟಕ ಸ್ಥಾಪಿಸಲಾಗಿದೆ. ಹೀಗಿದ್ದೂ, ಜನರಿಗೆ ಅನಗತ್ಯ ತೊಂದರೆ ಕೊಡಲಾಗುತ್ತಿದೆ' ಎಂದರು.

'ಜೀವದಷ್ಟೇ ಜೀವನ ಕಾಪಾಡುವುದೂ ಮುಖ್ಯ. ಉತ್ತರ ಪ್ರದೇಶ, ಗೋವಾ, ಪಂಜಾಬ್, ಉತ್ತರಾಖಂಡದಲ್ಲಿ ಚುನಾವಣೆ ನಡೆಯುತ್ತಿದೆ. ಎಲ್ಲಾ ವಿಚಾರವನ್ನು ಪರಿಗಣಿಸಿ ತೀರ್ಮಾನ ಕೈಗೊಂಡು ಚುನಾವಣಾ ಆಯೋಗ ಚುನಾವಣೆ ನಿಗದಿಪಡಿಸಿದೆ. ಹೀಗಾಗಿ, ನಿರ್ಬಂಧ ವಿಧಿಸಿ ಜನರಲ್ಲಿ ಭೀತಿ ಮೂಡಿಸಬಾರದು' ಎಂದು ಮನವಿ ಮಾಡಿದರು.

ಕೋವಿಡ್ ನಿರ್ಲಕ್ಷ್ಯ ಬೇಡ: ಎಚ್‌ಡಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಈ ಹಂತದಲ್ಲಿ ಸರ್ಕಾರವು ನಿರ್ಲಕ್ಷ್ಯ ತೋರಬಾರದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ರಾಜ್ಯದಲ್ಲಿ ಮಂಗಳವಾರ 41,000 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದು ಎಚ್ಚರಿಕೆಯ ಗಂಟೆ. ಸೋಂಕಿನ ಪ್ರಮಾಣವನ್ನು ತಡೆಯಬೇಕಿದೆ. ಜನರ ಪರಿಸ್ಥಿತಿ ಮತ್ತು ಅವರ ಜೀವನ ಗಮನದಲ್ಲಿಟ್ಟುಕೊಂಡು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದರು. ವಾರಾಂತ್ಯದ ಕರ್ಫ್ಯೂ, ರಾತ್ರಿ ಕರ್ಫ್ಯೂ ಕುರಿತು ಸರ್ಕಾರದಲ್ಲಿರುವವರಲ್ಲೇ ಸಹಮತ ಇಲ್ಲ. ಅವರೇ ಗೊಂದಲದಲ್ಲಿದ್ದರೆ ಪರಿಸ್ಥಿತಿ ಹೇಗೆ ನಿಭಾಯಿಸುತ್ತಾರೆ? ತಜ್ಞರ ವರದಿ, ಜನರ ಅಭಿಪ್ರಾಯವನ್ನೂ ಪರಿಶೀಲಿಸಿ ಸರ್ಕಾರ ತೀರ್ಮಾನ ಮಾಡಬೇಕು ಎಂದು ಹೇಳಿದರು.

ಪರಿಶೀಲನೆ ಮಹಾರಾಷ್ಟ್ರದ ಠಾಣೆಯ ಜಿಲ್ಲಾ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಲಭ್ಯವಿರುವ ಆಮ್ಲಜನಕ ಸಿಲಿಂಡರ್‌ಗಳನ್ನು ಆರೋಗ್ಯ ಕಾರ್ಯಕರ್ತರು ಬುಧವಾರ ಪರಿಶೀಲಿಸಿದರು –ಪಿಟಿಐ ಚಿತ್ರ

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮಿಸಳ್ ಹಾಪ್ಚಾ

ಬಾಲ್ಯಕ್ಕೆ 'ಅಮೃತ' ಉಣಿಸಿದ ಪೇರಲೆ

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9, ಸಂಪಾದಕೀಯ: ಬೆಳಿಗ್ಗೆ 9.30, ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233

Jerry : 9731810277 | Ravichandra : 9901641752

Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೋವಿಡ್: 5 ಪ್ರಕರಣಗಳು ದೃಢಪಟ್ಟರೆ ಕ್ಲಸ್ಟರ್

ಬೆಂಗಳೂರು: ಕೋವಿಡ್‌ನ ಐದು ಅಥವಾ ಅದಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾಗುವ ಸ್ಥಳವನ್ನು ಕ್ಲಸ್ಟರ್ ಎಂದು, 15 ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ದೃಢಪಡುವ ಪ್ರದೇಶವನ್ನು ದೊಡ್ಡ ಕ್ಲಸ್ಟರ್ ಎಂದು ಪರಿಗಣಿಸುವಂತೆ ಆರೋಗ್ಯ ಇಲಾಖೆ ನಿರ್ದೇಶನ ನೀಡಿದೆ.

ಈ ಬಗ್ಗೆ ಇಲಾಖೆಯ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ರಾಜ್ಯದಲ್ಲಿ ಕೋವಿಡ್ ವೇಗವಾಗಿ ಹರಡುತ್ತಿದೆ. ಸೋಂಕಿತರ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಹೀಗಾಗಿ, ಒಂದು ಅಥವಾ ಅದಕ್ಕಿಂತ ಹೆಚ್ಚು ಮನೆಗಳಲ್ಲಿ ಪ್ರಕರಣಗಳು ವರದಿಯಾದರೆ, ಸದರಿ ಸಾಲಿನಲ್ಲಿರುವ ಎಲ್ಲ ಮನೆಗಳು ಅಥವಾ 50 ಮೀಟರ್ ವ್ಯಾಪ್ತಿಯಲ್ಲಿರುವ ಮನೆಗಳಿಗೆ ನಿರ್ಬಂಧ ಕ್ರಮಗಳನ್ನು ಜಾರಿಗೊಳಿಸಬೇಕು ಎಂದು ಹೇಳಲಾಗಿದೆ.

ಅಪಾರ್ಟ್‌ಮೆಂಟ್ ವಸತಿ ಸಮುಚ್ಚಯಗಳಲ್ಲಿ ಪ್ರಕರಣಗಳು ವರದಿಯಾದಲ್ಲಿ ಆಯಾ ಮಹಡಿಗಳಿಗೆ ನಿರ್ಬಂಧ ವಿಧಿಸಬೇಕು. ಇಂತಹ ಪ್ರದೇಶವನ್ನು ಮೈಕ್ರೊ ಕಂಟೈನ್ಮೆಂಟ್ ವಲಯವೆಂದು ಘೋಷಿಸಬೇಕು. ಪ್ರಕರಣಗಳು ದೃಢಪಟ್ಟ ಏಳು ದಿನಗಳ ಬಳಿಕ ಹೊಸದಾಗಿ ಪ್ರಕರಣಗಳು ಪತ್ತೆಯಾಗದಿದ್ದರೆ ನಿರ್ಬಂಧಗಳನ್ನು ತೆರವು ಮಾಡಬಹುದು ಎಂದು ತಿಳಿಸಲಾಗಿದೆ.

ಋಷಿಕುಮಾರ ಸ್ವಾಮೀಜಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ): ಪಟ್ಟಣದ ಟಿಪ್ಪು (ಜಾಮಿಯಾ) ಮಸೀದಿ ಕುರಿತು ವಿವಾದಾತ್ಮಕ ಹೇಳಿಕೆ ನೀಡಿ ಮಂಗಳವಾರದಿಂದ ನ್ಯಾಯಾಂಗ ಬಂಧನದಲ್ಲಿದ್ದ ಅರಸೀಕೆರೆಯ ಕಾಳಿಕಾಮಠದ ಋಷಿಕುಮಾರ ಸ್ವಾಮೀಜಿ ಅವರಿಗೆ ಪಟ್ಟಣದ ಹೆಚ್ಚುವರಿ ಕಿರಿಯ ಶ್ರೇಣಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಬುಧವಾರ ಜಾಮೀನು ನೀಡಿದೆ.

ಜತೆಗೆ, ₹ 1 ಲಕ್ಷ ಮೌಲ್ಯದ ಬಾಂಡ್, ಪ್ರಕರಣದ ಸಾಕ್ಷಿಗಳನ್ನು ಬೆದರಿಸಬಾರದು ಎಂಬ ಷರತ್ತು ವಿಧಿಸಿ ನ್ಯಾಯಾಧೀಶರಾದ ಎ ಯ ೀ ಪಾ ಪಿ . ಮ ಹೇ ಶ್ ಜಾ ಮೀ ನ ು ಮ ಂ ಜೂ ರು ಮಾಡಿದ್ದಾರೆ.

ಋಷಿಕುಮಾರ ಸ್ವಾಮೀಜಿ

ಕೋ ರ್ಟ್ ಮು ಸಾ ಮ ರ ಸ್ಯ ಕದಡುವ ಹೇಳಿಕೆ ನೀಡಿದ್ದ ಆರೋಪದ ಮೇಲೆ ಪಟ್ಟಣ ಠಾಣೆ ಪೊಲೀಸರು ಸ್ವಾಮೀಜಿ ವಿರುದ್ಧ ಪ್ರಕರಣ ದಾಖಲಿಸಿ ಮಂಗಳವಾರ ಬಂಧಿಸಿದ್ದರು.

ಸ್ವಾಮೀಜಿಗೆ ಜಾಮೀನು ನೀಡುವಂತೆ ಪಟ್ಟಣದ ವಕೀಲರಾದ ಎಸ್.ಆರ್. ಸಿದ್ದೇಶ್, ಟಿ.ಬಾಲರಾಜು ಮತ್ತು ಎ.ಟಿ. ಜಯಕುಮಾರ್ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಸ್ವಾಮೀಜಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ, ಜಾಮೀನು ನೀಡುವ ಆದೇಶವನ್ನು ಬುಧವಾರಕ್ಕೆ ಕಾಯ್ದಿರಿಸಿತ್ತು.

'ಸ್ವಾಮೀಜಿಗೆ ಜಾಮೀನು ಸಿಕ್ಕಿರುವುದು ಸಂತಸ ತಂದಿದೆ. ನ್ಯಾಯಾಲಯದ ಆದೇಶವನ್ನು ಮಂಡ್ಯ ಉಪ ಕಾರಾಗೃಹದ ಅಧಿಕಾರಿಗಳಿಗೆ 'ಇ- ಮೇಲ್' ಮೂಲಕ ಕಳುಹಿಸಲಾಗಿದೆ. ಬುಧವಾರ ರಾತ್ರಿಯ ಒಳಗೆ ಸ್ವಾಮೀಜಿ ಬಿಡುಗಡೆಯಾಗಲಿದ್ದಾರೆ' ಎಂದು ವಕೀಲ ಟಿ.ಬಾಲರಾಜು ಅವರು ತಿಳಿಸಿದರು.

23,209 ಮಂದಿ ಗುಣಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 40,499 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕಿತರ ಪೈಕಿ ಹೊಸದಾಗಿ 23,209 ಮಂದಿ ಚೇತರಿಸಿಕೊಂಡಿದ್ದಾರೆ.

ಒಂದು ದಿನದ ಅವಧಿಯಲ್ಲಿ 2.15 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 18.80 ರಷ್ಟಿದೆ. ನಾಲ್ಕು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 22 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ.

ಬೆಂಗಳೂರಿನಲ್ಲಿ 24,135 ಪ್ರಕರಣಗಳು ದೃಢಪಟ್ಟರೆ, ಉಳಿದ ಜಿಲ್ಲೆಗಳಿಂದ 16,364 ಪ್ರಕರಣಗಳು ಪತ್ತೆಯಾಗಿವೆ.

ಈ ತಿಂಗಳ 19 ದಿನಗಳಲ್ಲಿ 3.20 ಲಕ್ಷ ಮಂದಿಗೆ ಕೊರೊನಾ ಸೋಂಕು ತಗುಲಿದೆ. ಈ ಅವಧಿಯಲ್ಲಿ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 33.29 ಲಕ್ಷಕ್ಕೆ ಏರಿಕೆಯಾಗಿದೆ.

ತುಮಕೂರಿನಲ್ಲಿ 1,804, ಹಾಸನದಲ್ಲಿ 1,785, ಮೈಸೂರಿನಲ್ಲಿ 1,341 ಹಾಗೂ ಮಂಡ್ಯದಲ್ಲಿ 1,340 ಮಂದಿ ಹೊಸದಾಗಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಾವಿರಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬುಧವಾರ ಚೇತರಿಸಿಕೊಂಡವರಲ್ಲಿ 18,081 ಮಂದಿ ಬೆಂಗಳೂರಿನವರೇ ಆಗಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 30.23 ಲಕ್ಷ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚಳವಾಗಿದ್ದು, 2.67 ಲಕ್ಷ ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೋವಿಡ್ ಪೀಡಿತರಲ್ಲಿ 21 ಮಂದಿ ಮೃತಪಟ್ಟಿದ್ದಾರೆ. ಬೆಂಗಳೂರಿನಲ್ಲಿ ಐದು ಮಂದಿ, ಮೈಸೂರಿನಲ್ಲಿ ನಾಲ್ವರು, ದಕ್ಷಿಣ ಕನ್ನಡದಲ್ಲಿ ಮೂರು ಮಂದಿ, ಬಾಗಲಕೋಟೆ, ಬೆಳಗಾವಿ, ಚಿಕ್ಕಬಳ್ಳಾಪುರ, ಗದಗ, ಹಾಸನ, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು ಹಾಗೂ ವಿಜಯಪುರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

32,29,199	ಒಟ್ಟು ಸೋಂಕಿತರು
2,67,650	ಸಕ್ರಿಯ ಪ್ರಕರಣಗಳು
30,23,034	ಗುಣಮುಖರಾದವರು
38,486	ಒಟ್ಟು ಸಾವು

ದಿನದ ಮಾಹಿತಿ

ಹೊಸ ಪ್ರಕರಣ	40,499
ಗುಣಮುಖ	23,209
ಸಾವು	21

ಆಧಾರ: ರಾಜ್ಯ ಆರೋಗ್ಯ ಇಲಾಖೆ ಪ್ರಜಾವಾಣಿ ಗ್ರಾಫಿಕ್

ನಾಲ್ವರು ಐಪಿಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮನಗರ ಎಸ್‌ಪಿ ಎಸ್. ಗಿರೀಶ್ ಸೇರಿದಂತೆ ನಾಲ್ವರು ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಬುಧವಾರ ಆದೇಶ ಹೊರಡಿಸಲಾಗಿದೆ.

ಗಿರೀಶ್ ಅವರನ್ನು ಬೆಂಗಳೂರು ನಗರದ ವೈಟ್‌ಫೀಲ್ಡ್ ವಿಭಾಗದ ಡಿಸಿಪಿಯನ್ನಾಗಿ, ಗುಪ್ತದಳದ ಎಸ್‌ಪಿ ಹುದ್ದೆಯಲ್ಲಿದ್ದ ಕೆ. ಸಂತೋಷ್ ಬಾಬು ಅವರನ್ನು ರಾಮನಗರದ ನೂತನ ಎಸ್‌ಪಿಯನ್ನಾಗಿ ನೇಮಿಸಲಾಗಿದೆ. ಚಿತ್ರದುರ್ಗ ಎಸ್‌ಪಿ ಹುದ್ದೆಯಲ್ಲಿದ್ದ ಜಿ. ರಾಧಿಕಾ ಅವರನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ನಿರ್ದೇಶಕರ (ಭದ್ರತೆ ಮತ್ತು ವಿಚಕ್ಷಣೆ) ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಸ್‌ಪಿ ಹುದ್ದೆಯಲ್ಲಿದ್ದ ಕೆ. ಪರಶುರಾಮ ಅವರನ್ನು ಚಿತ್ರದುರ್ಗ ಎಸ್‌ಪಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರಯೋಜನಕಾರಿ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಭವಿಷ್ಯ

Astrology

★॥ಶ್ರೀ॥ ವಶೀಕರಣ ಸ್ಪೆಷಲಿಸ್ಟ್॥★ ಉದ್ಯೋಗ, ವ್ಯಾಪಾರ,ಸಾಲಬಾಧೆ, ಸ್ತ್ರೀವಶೀಕರಣ, ಗಂಡಹೆಂಡತಿ ಸಮಸ್ಯೆ ಇನ್ನೂಯಾವುದೇ ಸಮಸ್ಯೆಗಳಿಗೆ 1100 ರೂಗಳಲ್ಲಿ ಶಾಶ್ವತ ಪರಿಹಾರ. ಪಂಡಿತ್.ಮಂಜುನಾಥಭಟ್. 9008968867

ಸ್ತ್ರೀವಶೀಕರಣ, ಪುರುಷ ವಶೀಕರಣ, ಪ್ರೀತಿ ಪ್ರೇಮ ಇಷ್ಟಪಟ್ಟವರ ಸಮಸ್ಯೆಗಳನ್ನು 11 ಗಂಟೆಗಳಲ್ಲಿ ಸ್ವಾಮಿಯವರ ಕಾಮ ವಿರ್ಜಿನ್ಯದಿಂದ ಪರಿಹಾರ 9845544363

★॥ಶ್ರೀಶಕ್ತಿ ಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್ ಕಛೇರಿ, ಸಾಲಬಾಧೆ, ಯಾವುದೇ ಸಮಸ್ಯೆಯಿದ್ದರು 100% ಶಾಶ್ವತ ಪರಿಹಾರ. 9591588881

ಶ್ರೀ ಲಕ್ಷ್ಮಿ ಗಣಪತಿ ಜ್ಯೋತಿಷ್ಯ ಮಂದಿರ ನಿಮ್ಮೆಲ್ಲಾ ಸರ್ವ ಸಮಸ್ಯೆಗಳಿಗೆ 2ದಿನದಲ್ಲಿ ಪೂಜಿನ ಮೂಲಕ ಪರಿಹಾರ ಲಕ್ಷ್ಮಿಕಾಂತ ಭಟ್7760909072 ಗಣನಾಥಪುರ

★ಅಂಬಿಕಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೇಗಾಲದ no.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳನ್ನು ಕೇವಲ 2ದಿನದಲ್ಲಿ ಪರಿಹಾರ.9886755306

ಪ್ರವಾಸ

Travel

21-1-2022 ಕಾಶಿ, ಗಯಾ, ಅಯೋಧ್ಯ 8ದಿನ. 2-2-2022 ಕಾಶಿ, ಆಗ್ರಾ, ದೆಹಲಿ 13ದಿನ. 25-3-2022 ಗ್ಯಾಂಗ್ಟಕ್, ಡಾರ್ಜಿಲಿಂಗ್, ಕಲ್ಕತ್ತಾ, ಭುವನೇಶ್ವರ 12ದಿನ. ನಂದಿನಿ ಟೂರ್ಸ್ 9916574089.

ಉದ್ಯೋಗಾವಕಾಶ

General

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ ssle puc degree ಸಂಬಳ 15000 to 28000 ಸಂಪರ್ಕಿಸಿ 9980814578, 9980812378

BANKING, TELLCALLERS, Work from Home, Field Executive, Accountants, Salary16000/- - 26000/-. SSLC, PUC, Degree. 8951939589.

ಟಯೋಟಾ, ಟಾಟಾ ಮೋಟಾರ್ಸ್, ಬ್ರಿಟಾನಿಯಾ ಆನ್‌ಲೈನ್ ಕಂಪನಿಗಳಿಗೆ 5ನೇ, 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 18,000-62,000/- ವೇತನಯುಕ್ತದೊಂದಿಗೆ 7204396011, 8197650569

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಗಳಿಸಬಹುದು.ಕೊರಿಯರ್ ಸೌಲಭ್ಯವಿದೆ.8884777502, 8884777503

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲಿಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಓದುಗರ ಗಮನಕ್ಕೆ

Classifieds

Book Your Classifieds Ads

Online Log in to dhclassifieds.com

For More Details Call 9880856233 • 9886213331

Email: Santhoshkumar@deccanherald.co.in

ಸುನೀಲ್‌ಕುಮಾರ್, ಮಾಲೀಕಯ್ಯ ಗುತ್ತೇದಾರ್ ಕಿಡಿ

'ಸಿದ್ದರಾಮಯ್ಯರಿಂದ ಜಾತಿ ವೈಷಮ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ಗುರುಗಳ ವಿಚಾರದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಜಾತಿ ವೈಷಮ್ಯ ಹುಟ್ಟು ಹಾಕುತ್ತಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನೀಲ್ ಕುಮಾರ್ ಮತ್ತು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ್ ಆರೋಪ ವ್ಯಕ್ತಪಡಿಸಿದ್ದಾರೆ.

ನಾರಾಯಣ ಗುರುಗಳ ಸ್ತಬ್ಧಚಿತ್ರವನ್ನು ಕೇರಳ ಕಳುಹಿಸಿದ ಬಳಿಕ ಅದನ್ನು ಕಾರಣಕ್ಕೆ ಕೇಂದ್ರ ತಿರಸ್ಕರಿಸಿಲ್ಲ, ನಾರಾಯಣ ಗುರುಗಳ ವಿಚಾರದಲ್ಲಿ ಪ್ರಧಾನಿ ಮತ್ತು ಬಿಜೆಪಿಗೆ ಅತಿ ಹೆಚ್ಚು ಗೌರವವಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಮೋದಿಯವರು ಪ್ರಧಾನಿಯಾದ ಬಳಿಕ 2015 ರ ಡಿ.15 ರಂದು ನಾ ರಾ ಯ ಣ ಗುರುಗಳ ಸಂಕಲ್ಪ ಕೇಂದ್ರ ವಾದ ಶಿವಗಿರಿಗೆ ಭೇಟಿ ಕೊಟ್ಟಿದ್ದರು. 'ಒಂದು ಕಾಲದಲ್ಲಿ ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ಕೇರಳದಲ್ಲಿ ಮೇಲು- ಕೀಳು, ಜಾತಿ– ಧರ್ಮಗಳ ತಾರತಮ್ಯದ ಸೆಣೆಸಾಟದ ನೆಲದಲ್ಲಿ ನಾರಾಯಣ ಗುರುಗಳು ತಂದ ಸಾಮಾಜಿಕ ಪರಿವರ್ತನೆಯಿಂದ ಕೇರಳದಲ್ಲಿ ಸಮಾನತೆ ಬಂದಿದೆ. ನಾರಾಯಣ ಗುರುಗಳ ಆದರ್ಶವು ಜಗತ್ತಿಗೆ ಬೆಳಕು ನೀಡಬಲ್ಲದು' ಎಂದು ಹೇಳಿ ನಾರಾಯಣ ಗುರುಗಳ ಭಾವಚಿತ್ರ

ಸುನೀಲ್ ಕುಮಾರ್

ಅನಾವರಣ ಮಾಡಿದ್ದರು ಎಂದು ಹೇಳಿದ್ದಾರೆ.

'ಹಿಂದೆ ಕಮ್ಯುನಿಸ್ಟ್ ಪಕ್ಷ ನಾರಾಯಣ ಗುರುಗಳ ಮೂರ್ತಿಯನ್ನು ಭಗ್ನ ಮಾಡಿತ್ತು, ಅವರೇ ಈಗ ರಾಜಕೀಯ ಕಾರಣಕ್ಕಾಗಿ ಅವರ ಬಗ್ಗೆ ಮಾತನಾಡುತ್ತಿದ್ದಾರೆ. ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಪಕ್ಷ ತಿಳಿದುಕೊಳ್ಳದೇ ಬೆಂಕಿ ಹಚ್ಚುವ ಕೆಲಸ ಮಾಡುವುದು ಸರಿಯಲ್ಲ. ರಾಜ್ಯದಲ್ಲಿರುವ ನಾರಾಯಣ ಗುರುಗಳ ಭಕ್ತರು ಮತ್ತು ಅನುಯಾಯಿಗಳಿಗೆ ತಪ್ಪು ಸಂದೇಶ ನೀಡುತ್ತಿದ್ದಾರೆ' ಎಂದರು.

'ನಾರಾಯಣ ಗುರುಗಳ ಸ್ತಬ್ಧಚಿತ್ರವನ್ನು ತಿರಸ್ಕರಿಸಿ ಶಂಕರಾಚಾರ್ಯರ ಸ್ತಬ್ಧಚಿತ್ರವನ್ನು ಕಳುಹಿಸುವಂತೆ ಕೇಂದ್ರ ಸರ್ಕಾರ ಹೇಳಿದೆ ಎಂಬುದು ಸುಳ್ಳು' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಡಾ. ಇಮ್ರಾಪುರಗೆ ಅಂಬಿಕಾತನಯದತ್ತ ಪ್ರಶಸ್ತಿ

ಧಾರವಾಡ: ಬೇಂದ್ರೆ ಸಾಹಿತ್ಯ ಮತ್ತು ಭಾಷೆಯನ್ನು ಸುಮಾರು 4 ದಶಕಗಳ ಕಾಲ ತಮ್ಮ ಕಾವ್ಯದಲ್ಲಿ ಅನುಸರಿಸಿದ ಡಾ.ಸೋಮಶೇಖರ ಇಮ್ರಾಪುರ ಅವರಿಗೆ 2022ನೇ ಸಾಲಿನ 'ಅಂಬಿಕಾತನಯದತ್ತ' ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಈ ವಿಷಯವನ್ನು ಬುಧವಾರ ತಿಳಿಸಿದ ಡಾ.ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಅಧ್ಯಕ್ಷ ಡಾ. ಡಿ.ಎಂ.ಹಿರೇಮಠ ಅವರು, '₹1 ಲಕ್ಷ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿರುವ ಈ ಪ್ರಶಸ್ತಿಯನ್ನು ಬೇಂದ್ರೆ ಅವರ ಜನ್ಮದಿನವಾದ ಜ.31ರಂದು ನಗರದ ಬೇಂದ್ರೆ ಭವನದಲ್ಲಿ ಪ್ರದಾನ ಮಾಡಲಾಗುವುದು' ಎಂದರು.

'ನಾಡಿನ 12 ಸಾಹಿತಿಗಳ

ಸೋಮಶೇಖರ ಇಮ್ರಾಪುರ

ಹೆಸರುಗಳನ್ನು ಈ ಬಾರಿ ಪ್ರಶಸ್ತಿ ಸಮಿತಿಯು ಆಯ್ಕೆ ಮಾಡಿತ್ತು. ಇದರಲ್ಲಿ ಡಾ.ಸೋಮಶೇಖರ ಇ ಮ್ರಾ ಪು ರ, ಡಾ.ಮಲ್ಲಿಕಾ ಘಂಟಿ ಮತ್ತು ಡಾ. ಜಿನದತ್ತ ದೇಸಾಯಿ ಅವರ ಹೆಸರುಗಳನ್ನು ಅಂತಿಮ ಹಂತಕ್ಕೆ ಆಯ್ಕೆ ಮಾಡಲಾಗಿತ್ತು. ಬೆಳಗಾವಿಯ ಡಾ.ಗುರುದೇವಿ ಹುಲ್ಲೆಪ್ಪನವರಮಠ ಅವರ ಅಧ್ಯಕ್ಷತೆಯ ಆಯ್ಕೆ ಸಮಿತಿಯು ಡಾ.ಇಮ್ರಾಪುರ ಅವರ ಹೆಸರನ್ನು ಅಂತಿಮಗೊಳಿಸಿತು. ಸಮಿತಿಯಲ್ಲಿ ಹಂಪಿಯ ಡಾ.ವೆಂಕಟಗಿರಿ ದಳವಾಯಿ ಮತ್ತು ಕಾಗವಾಡದ ಡಾ.ಎಂ.ಬಿ.ಹೂಗಾರ 'ಇದ್ದರು' ಎಂದು ತಿಳಿಸಿದರು.

ಅಂತರರಾಷ್ಟ್ರೀಯ ವಿಮಾನ ಸಂಚಾರ ನಿರ್ಬಂಧ ವಿಸ್ತರಣೆ

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಪ್ರಯಾಣಿಕ ವಿಮಾನಗಳ ಮೇಲಿನ ನಿರ್ಬಂಧವನ್ನು ಫೆಬ್ರುವರಿ 28 ರವರೆಗೆ ವಿಸ್ತರಿಸಲಾಗಿದೆ ಎಂದು ನಾಗರಿಕ ವಿಮಾನಯಾನದ ಮಹಾನಿರ್ದೇಶನಾಲಯ (ಡಿಜಿಸಿಎ) ಹೇಳಿದೆ. 2020ರ ಮಾರ್ಚ್ 23 ರಿಂದ ಭಾರತದಲ್ಲಿ ಅಂತರರಾಷ್ಟ್ರೀಯ ವಿಮಾನಗಳಿಗೆ ನಿರ್ಬಂಧ ವಿಧಿಸಲಾಗಿದೆ.

ಆದರೆ ಭಾರತ ಮತ್ತು ಸುಮಾರು 40 ರಾಷ್ಟ್ರಗಳ ನಡುವೆ ಕಳೆದ 2020ರ ಜುಲೈನಿಂದ ವಿಶೇಷ ಪ್ರಯಾಣಿಕ ವಿಮಾನಗಳು ಕಾರ್ಯನಿರ್ವಹಿಸುತ್ತಿವೆ.

'ಭಾರತದಿಂದ ಬರುವ ಮತ್ತು ಹೋಗುವ ನಿಗದಿತ ಅಂತರರಾಷ್ಟ್ರೀಯ ವಿಮಾನ ಸೇವೆಗಳ ನಿರ್ಬಂಧವನ್ನು ಫೆ. 28ರವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ' ಎಂದು ಬುಧವಾರ ಹೊರಡಿಸಿದ ಸುತ್ತೋಲೆಯೊಂದರಲ್ಲಿ ತಿಳಿಸಿದೆ.

ಡಿಜಿಸಿಎ ಅನುಮತಿಸಿದ ಎಲ್ಲಾ ಸರಕು ಕಾರ್ಯಾಚರಣೆಯ ವಿಮಾನಗಳಿಗೆ ನಿರ್ಬಂಧಗಳು ಅನ್ವಯಿಸುವುದಿಲ್ಲ. ವಾಯುಯಾನ ವ್ಯವಸ್ಥೆಗಳಡಿ ಕಾರ್ಯನಿರ್ವಹಿಸುವ ವಿಮಾನಗಳಿಗೂ ತೊಂದರೆಯಿಲ್ಲ ಎಂದು ಅದು ಉಲ್ಲೇಖಿಸಿದೆ. 2021ರ ಡಿ. 15 ರಂದು ಅಂತರರಾಷ್ಟ್ರೀಯ ವಿಮಾನ ಸೇವೆಗಳನ್ನು ಆರಂಭಿಸುವುದಾಗಿ ನ. 26 ರಂದು ಘೋಷಿಸಿತ್ತು. ಕೋವಿಡ್ ಹೆಚ್ಚಳದ ಹಿನ್ನೆಲೆ ಡಿಸೆಂಬರ್ 1 ರಂದು ತನ್ನ ಘೋಷಣೆಯನ್ನು ಹಿಂಪಡೆದಿತ್ತು.

ಜಗತ್ತಿನ ಹಿರಿಯಜ್ಜ ಇನ್ನಿಲ್ಲ

ಮ್ಯಾಡ್ರಿಡ್ (ಎಪಿ): ಜಗತ್ತಿನ ಹಿರಿಯಜ್ಜ ಎಂದು ಕಳೆದ ಸೆಪ್ಟೆಂಬರ್‌ನಲ್ಲಿ ಗಿನ್ನೆಸ್ ದಾಖಲೆ ಪುಸ್ತಕದಲ್ಲಿ ದಾಖಲಾಗಿದ್ದ ಸ್ಪೇನ್‌ನ ಸಟುರ್ನಿನೊ ಡೆ ಲ ಫೆಂಟೆ (112) ಸ್ಪೇನ್‌ನ ವಾಯವ್ಯ ಬಾಗದ ಲಿಯೊನ್ ನಗರದ ತಮ್ಮ ಮನೆಯಲ್ಲಿ ಮಂಗಳವಾರ ನಿಧನರಾದರು.

ಚಮ್ಮಾರ ವೃತ್ತಿ ಮಾಡುತ್ತಿದ್ದ ಫೆಂಟೆ ಅವರು ಹುಟ್ಟಿದ್ದು 1909ರ ಫೆಬ್ರುವರಿ 11ರಂದು. 1918ರ ಸ್ಪ್ಯಾನಿಷ್ ಫ್ಲೂ ಪಿಡುಗಿನಿಂದ ಬಚಾವಾಗಿದ್ದ ಅವರಿಗೆ ಪತ್ನಿ, ಎಂಟು ಮಂದಿ ಮಕ್ಕಳು, 14 ಮೊಮ್ಮಕ್ಕಳು ಹಾಗೂ 22 ಮಂದಿ ಮರಿಮೊಮ್ಮಕ್ಕಳು ಇದ್ದಾರೆ ಎಂದು ಇಎಫ್‌ಇ ಸುದ್ದಿಸಂಸ್ಥೆ ತಿಳಿಸಿದೆ.

ಕ್ಲಬ್‌ಹೌಸ್‌ನಲ್ಲಿ ಮುಸ್ಲಿಂ ಮಹಿಳೆಯರ ಅವಹೇಳನ: ವಿವರ ಕೇಳಿದ ಪೊಲೀಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬುಲ್ಲಿ ಬಾಯಿ ಆ್ಯಪ್‌ನ ನಂತರ ಮುಸ್ಲಿಂ ಮಹಿಳೆಯರ ತೇಜೋವಧೆಗೆ ಮಾತಿನ ಕೂಟ ಎಂದು ಜನಪ್ರಿಯವಾದ ಕ್ಲಬ್‌ಹೌಸ್ ಅನ್ನು ವೇದಿಕೆ ಮಾಡಿಕೊಳ್ಳಲಾಗಿದೆ. ಇಲ್ಲಿ ಮಹಿಳೆಯರ ಬಗ್ಗೆ ಅವಹೇಳನಕಾರಿ ಚರ್ಚಾಕೂಟವೊಂದು ನಡೆದಿದೆ. ಈ ಸಂಬಂಧ ಚರ್ಚಾಕೂಟವನ್ನು ಆಯೋಜಿಸಿದ ಸಂಘಟಕರ ವಿವರ ಕೋರಿ ದೆಹಲಿ ಪೊಲೀಸರು ಕ್ಲಬ್‌ಹೌಸ್‌ಗೆ ಬುಧವಾರ ಪತ್ರ ಬರೆದಿದ್ದಾರೆ.

ದೆಹಲಿ ಪೊಲೀಸ್ ವಿಭಾಗದ ಗುಪ್ತಚರ ಮತ್ತು ಕಾರ್ಯತಂತ್ರ ಕಾರ್ಯಾಚರಣೆ ಘಟಕವು ಚರ್ಚಾಕೂಟ ನಡೆಸಿದ ಅಪರಿಚಿತ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಿದ ಒಂದು ದಿನದ ನಂತರ ಈ ಬೆಳವಣಿಗೆ ನಡೆದಿದೆ.

ಕ್ಲಬ್‌ಹೌಸ್‌ನಲ್ಲಿ ಸೋಮವಾರ ಮಧ್ಯಾಹ್ನ ಚರ್ಚೆ ನಡೆಸಲಾಗಿದೆ. ಗುಂಪಿನಲ್ಲಿ ಸದಸ್ಯರು ಕೆಲವು ವಿಚಾರಗಳ ಕುರಿತು ಚರ್ಚೆ ನಡೆಸಿದ್ದಾರೆ. 'ಈ ಆ್ಯಪ್‌ನಲ್ಲಿ ಮುಸ್ಲಿಂ ಮಹಿಳೆಯರ ವಿರುದ್ಧ ಕೆಲವರು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಇವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ದೆಹಲಿ ಮಹಿಳಾ ಆಯೋಗವು ಪತ್ರ ಬರೆದ ಬಳಿಕ ದೆಹಲಿ ಪೊಲೀಸರು ಈ ಕ್ರಮ ಕೈಗೊಂಡಿದ್ದಾರೆ.

'ಮುಸ್ಲಿಂ ಹುಡುಗಿಯರು ಹಿಂದೂ ಹುಡುಗಿಯರಿಗಿಂತ ಹೆಚ್ಚು ಸುಂದರವಾಗಿದ್ದಾರೆ' ಎಂಬ ಚರ್ಚೆಯ ಕೆಲವು ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದ ನಂತರ ಪ್ರಕರಣ ಬೆಳಕಿಗೆ ಬಂದಿದೆ. ಚರ್ಚೆಯು ಮಹಿಳೆಯರ ಅವಹೇಳನಕಾರಿ ಮತ್ತು ಸಮುದಾಯ ಕೇಂದ್ರಿತವಾಗಿತ್ತು ಎನ್ನಲಾಗಿದೆ. ಚರ್ಚೆಯಲ್ಲಿ ಭಾಗವಹಿಸಿದವರನ್ನು ಪತ್ತೆ ಹಚ್ಚಲು ಪೊಲೀಸರು ಪ್ರಯತ್ನಿಸುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದರು.

'ಈ ಚರ್ಚಾಕೂಟದಲ್ಲಿ ಮುಸ್ಲಿಂ ಮಹಿಳೆಯರನ್ನು ಎಲ್ಲಿ ಅವಹೇಳನಕಾರಿಯಾಗಿ ಉಲ್ಲೇಖಿಸಲಾಗಿದೆ ಎಂಬುದನ್ನು ಗುರುತಿಸಲಾಗಿದೆ. ಈ ಸಂಭಾಷಣೆಯಲ್ಲಿ ಭಾಗವಹಿಸಿದವರು ಮುಸ್ಲಿಂ ಮಹಿಳೆಯರು ಮತ್ತು ಹುಡುಗಿಯರನ್ನು ಗುರಿಯಾಗಿಟ್ಟುಕೊಂಡು ಅಶ್ಲೀಲ, ಅಸಭ್ಯ ಮತ್ತು ಅವಹೇಳನಕಾರಿಯಾಗಿ ಹೇಳಿಕೆ ನೀಡಿರುವುದು ಸ್ಪಷ್ಟವಾಗಿ ಕೇಳಿಸಿದೆ. ಆಯೋಗವು ಇದನ್ನು ಗಂಭೀರವಾಗಿ ಪರಿಗಣಿಸಿದೆ. ದೆಹಲಿ ಪೊಲೀಸರು ಈ ಬಗ್ಗೆ ತುರ್ತು ಮತ್ತು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು' ಎಂದು ದೆಹಲಿ ಮಹಿಳಾ ಆಯೋಗವು ನೋಟಿಸ್‌ನಲ್ಲಿ ಕೋರಿದೆ.

'ಸುಲ್ಲಿ ಬಾಯಿ ನಂತರ ಬುಲ್ಲಿ ಬಾಯಿ ಮತ್ತು ಈಗ ಕ್ಲಬ್‌ಹೌಸ್‌ನಲ್ಲಿ ಮುಸ್ಲಿಂ ಮಹಿಳೆಯರ ವಿರುದ್ಧ ಅಸಭ್ಯ ಟೀಕೆಗಳು! ಎಷ್ಟು ಕಾಲ ಇವು ಮುಂದುವರೆಯುತ್ತವೆ?' ಎಂದು ಆಯೋಗದ ಮುಖ್ಯಸ್ಥೆ ಸ್ವಾತಿ ಮಲಿವಾಲ್ ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಮಾಘ ಮೇಳ ಅಲಹಾಬಾದ್‌ನಲ್ಲಿ ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮ ಸ್ಥಳದ ಬಳಿ ವಾರ್ಷಿಕ ಉತ್ಸವ 'ಮಾಘ ಮೇಳ' ತಿಂಗಳವರೆಗೂ ನಡೆಯುತ್ತದೆ. ಮೇಳದಲ್ಲಿ ಪಾಲ್ಗೊಳ್ಳಲು ಬರುವ ಯಾತ್ರಿಕರಿಗೆ ತಂಗಲು ಅನುಕೂಲ ಆಗುವಂತೆ ಡೇರೆಗಳನ್ನು ಹಾಕಲಾಗಿದೆ —ಎಎಫ್‌ಪಿ ಚಿತ್ರ

ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ ಪರಿಣಾಮ

ಗಣರಾಜ್ಯೋತ್ಸವ: ಈ ಬಾರಿಯೂ ಹೊರದೇಶದ ಅತಿಥಿಗಳು ಇಲ್ಲ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಹೊರ ದೇಶದ ಗಣ್ಯರು ಈ ವರ್ಷವೂ ಪಾಲ್ಗೊಳ್ಳುವುದಿಲ್ಲ ಎಂದು ಮೂಲಗಳು ಬುಧವಾರ ಹೇಳಿವೆ.

ಕೋವಿಡ್ ಪ್ರಕರಣಗಳ ಹೆಚ್ಚಳದ ಹಿನ್ನೆಲೆ ಸತತ ಎರಡನೇ ವರ್ಷವೂ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹೊರ ದೇಶದ ಅತಿಥಿ ಭಾಗವಹಿಸುತ್ತಿಲ್ಲ.

27 ರಂದು ಭಾರತ-ಮಧ್ಯ ಏಷ್ಯಾ ಶೃಂಗಸಭೆ: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರುಇದೇ 27 ರಂದು ಭಾರತ-ಮಧ್ಯ ಏಷ್ಯಾದ ಮೊದಲ ಶೃಂಗಸಭೆಯನ್ನು ವರ್ಚುವಲ್ ಸ್ವರೂಪದ ಮೂಲಕ ಆಯೋಜಿಸಿದ್ದಾರೆ.

ಈ ಸಂದರ್ಭದಲ್ಲಿ ವಿವಿಧ ದೇಶಗಳ ನಾಯಕರು ತಮ್ಮಲ್ಲಿನ ಬಾಂಧವ್ಯವನ್ನು ಮತ್ತಷ್ಟು ವಿಸ್ತರಿಸುವ ಮತ್ತು ಪ್ರಾದೇಶಿಕ ಭದ್ರತಾ ಪರಿಸ್ಥಿತಿಯನ್ನು ಕಾಪಾಡುವ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ವರ್ಚುವಲ್ ಶೃಂಗಸಭೆಯಲ್ಲಿ ಕಝಕಿಸ್ತಾನದ ಅಧ್ಯಕ್ಷರಾದ ಕಾಸಿಮ್-ಜೋಮಾರ್ಟ್ ಟೊಕಾಯೆವ್, ಉಜ್ಬೇಕಿಸ್ತಾನದ ಅಧ್ಯಕ್ಷ ಶವ್ಕತ್ ಮಿರ್ಜಿಯೊಯೆವ್, ತಜಿಕಿಸ್ತಾನದ ಅಧ್ಯಕ್ಷ ಎಮೋಮಾಲಿ ರಹ್ಮನ್, ತುರ್ಕಮೆನಿಸ್ತಾನದ ಅಧ್ಯಕ್ಷ ಗುರ್ಬಂಗುಲಿ ಬರ್ದಿಮುಹಮೆಡೋವ್ ಮತ್ತು ಕಿರ್ಗಿಸ್ ರಿಪಬ್ಲಿಕ್‌ನ ಅಧ್ಯಕ್ಷ ಸಾದಿರ್ ಜಾಪರೋವ್ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಹೇಳಿಕೆಯಲ್ಲಿ ತಿಳಿಸಿದೆ.

ಶೃಂಗಸಭೆಯು, ಭಾರತದ 'ವಿಸ್ತೃತ ನೆರೆಹೊರೆಯ' ಭಾಗವಾಗಿರುವ ಮಧ್ಯ ಏಷ್ಯಾದ ದೇಶಗಳೊಂದಿಗೆ ಭಾರತದ ಬೆಳೆಯುತ್ತಿರುವ ಬಾಂಧವ್ಯದ ಪ್ರತಿಬಿಂಬವಾಗಿದೆ ಎಂದು ಎಂಇಎ ಹೇಳಿದೆ.

ಈ ಶೃಂಗಸಭೆಯು ಭಾರತ ಮತ್ತು ಮಧ್ಯ ಏಷ್ಯಾದ ದೇಶಗಳ ನಾಯಕರು ಸಮಗ್ರ ಮತ್ತು ನಿರಂತರವಾದ ಭಾರತ-ಮಧ್ಯ ಏಷ್ಯಾ ಪಾಲುದಾರಿಕೆಗೆ ನೀಡಿದ ಪ್ರಾಮುಖ್ಯತೆಯ ಸಂಕೇತವಾಗಿದೆ ಎಂದೂ ಹೇಳಿಕೆ ತಿಳಿಸಿದೆ.

ಕೇಂದ್ರದಿಂದ ತಿರಸ್ಕೃತ ಸ್ತಬ್ಧಚಿತ್ರವೇ ಈ ಬಾರಿಯ ಆಕರ್ಷಣೆ: ಸ್ಟಾಲಿನ್

ಚೆನ್ನೈ (ಪಿಟಿಐ): ನವದೆಹಲಿಯ ಗಣರಾಜ್ಯೋತ್ಸವ ಸ್ತಬ್ಧಚಿತ್ರದ ಪಟ್ಟಿಯಿಂದ ತಿರಸ್ಕೃತಗೊಂಡಿರುವ, ತಮಿಳುನಾಡಿನ ಸ್ವಾತಂತ್ರ್ಯ ಹೋರಾಟಗಾರರ ಕೊಡುಗೆಯನ್ನು ಪರಿಚಯಿಸುವ ಸ್ತಬ್ಧಚಿತ್ರವೇ ಈ ಬಾರಿಯ ರಾಜ್ಯದ ಗಣರಾಜ್ಯೋತ್ಸವ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಲಿದ್ದು, ಈ ಮೂಲಕ ಕೇಂದ್ರ ಸರ್ಕಾರಕ್ಕೆ ಪರೋಕ್ಷವಾಗಿ ತಿರುಗೇಟು ನೀಡಲು ಡಿಎಂಕೆ ಸರ್ಕಾರ ನಿರ್ಧರಿಸಿದೆ.

ಚೆನ್ನೈಯಲ್ಲಿ ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರದರ್ಶನಗೊಳ್ಳಲಿರುವ ಈ ಸ್ತಬ್ಧಚಿತ್ರವನ್ನು ಬಳಿಕ ರಾಜ್ಯದ ವಿವಿಧ ಭಾಗಗಳಿಗೆ ಕಳುಹಿಸಿ, ಪ್ರದರ್ಶನ ನೀಡಲು ಸಹ ಕ್ರಮ ಕೈಗೊಳ್ಳಲಾಗಿದೆ. ಜತೆಗೆ ದೇಶದ ಸ್ವಾತಂತ್ರ್ಯಕ್ಕೆ ತಮಿಳುನಾಡಿನ ಕೊಡುಗೆ ಕುರಿತು ಈಚೆಗೆ ಹಮ್ಮಿಕೊಂಡಿದ್ದ ಪ್ರದರ್ಶನವೊಂದರ ಫೋಟೊಗಳನ್ನು ದೇಶದ ವಿವಿಧ ನಗರಗಳಲ್ಲಿ ಪ್ರದರ್ಶನಕ್ಕೆ ಇಡಲಾಗುವುದು ಎಂದು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತಿಳಿಸಿದ್ದಾರೆ. 'ರಾಜ್ಯದ ಸ್ತಬ್ಧಚಿತ್ರ ತಿರಸ್ಕೃತಗೊಳ್ಳುವುದಕ್ಕೆ ಕೇಂದ್ರವು ಯಾವುದೇ ಕಾರಣವನ್ನೂ ನೀಡಿಲ್ಲ. ಇದೊಂದು ಆಘಾತಕಾರಿ ಸಂಗತಿಯಾಗಿದೆ' ಎಂದು ಸ್ಟಾಲಿನ್ ಅವರು ಬೇಸರ ವ್ಯಕ್ತಪಡಿಸಿದ್ದರು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಂದ ಪತ್ರ ಬಂದ ಬಳಿಕ ಸ್ಟಾಲಿನ್ ಅವರು ಪ್ರಧಾನಿ ಅವರ ಮಧ್ಯಪ್ರವೇಶಕ್ಕೂ ಕೋರಿಕೆ ಸಲ್ಲಿಸಿದ್ದರು. ಆದರೆ ಈ ಪ್ರಯತ್ನವೂ ವಿಫಲವಾಗಿದೆ.

ದೆಹಲಿ: 2 ಶಂಕಾಸ್ಪದ ಚೀಲಗಳು ಪತ್ತೆ

ನವದೆಹಲಿ (ಪಿಟಿಐ): ಗಣರಾಜ್ಯೋತ್ಸವದ ಸಂಭ್ರಮಾಚರಣೆಗೆ ಮೊದಲೇ ಪೂರ್ವ ದೆಹಲಿಯ ತ್ರಿಲೋಕಪುರಿ ಪ್ರದೇಶದಲ್ಲಿ ಬುಧವಾರ ಎರಡು ಶಂಕಾಸ್ಪದ ಚೀಲಗಳು ಪತ್ತೆಯಾಗಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ತ್ರಿಲೋಕಪುರಿಯ 15ನೇ ಬ್ಲಾಕ್‌ನ ಮೆಟ್ರೊ ಸ್ತಂಭ 59ರ ಬಳಿ ಇರುವ ಚೀಲಗಳ ಕುರಿತು ತಮಗೆ ಕರೆ ಬಂದಿತ್ತು. ಪರಿಶೀಲನೆ ನಡೆಸಲಾಗುತ್ತಿದೆ ಎಂದು ಅಗ್ನಿಶಾಮಕ ಅಧಿಕಾರಿಗಳು ಹೇಳಿದರು.

ಗಾಜಿಪುರದ ಹೂವಿನ ಮಾರುಕಟ್ಟೆಯಲ್ಲಿ ಶಂಕಿತ ಚೀಲದಲ್ಲಿ ಆರ್‌ಡಿಎಕ್ಸ್ ಮತ್ತು ಅಮೋನಿಯಂ ನೈಟ್ರೇಟ್ ತುಂಬಿದ ಸುಧಾರಿತ ಸ್ಫೋಟಕ ಸಾಧನವು (ಐಇಡಿ) ಕಳೆದ ವಾರ ಪತ್ತೆಯಾಗಿತ್ತು.

ಪಠಾಣ್‌ಕೋಟ್-ಜಮ್ಮು ರಾಷ್ಟ್ರೀಯ ಹೆದ್ದಾರಿಯಲ್ಲಿ ತೀವ್ರ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಜಮ್ಮು: ಗಣರಾಜ್ಯೋತ್ಸವ ಆಚರಣೆ ಹಿನ್ನೆಲೆಯಲ್ಲಿ ಭಯೋತ್ಪಾದಕ ದಾಳಿಯ ಮುನ್ನಚ್ಚರಿಕೆ ಹಾಗೂ ಶಂಕಾಸ್ಪದ ಚಲನವಲನದ ಮೇಲೆ ನಿಗಾವಹಿಸಲು ಇಲ್ಲಿನ ಪಠಾಣ್‌ಕೋಟ್ -ಜಮ್ಮು ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ತೀವ್ರ ಕಟ್ಟೆಚ್ಚರ ವಹಿಸಲಾಗಿದ್ದು, ಹೆಚ್ಚಿನ ಭದ್ರತಾ ಪಡೆಗಳನ್ನು ನಿಯೋಜಿಸಿ ಬಿಗಿ ಭದ್ರತೆ ಕೈಗೊಳ್ಳಲಾಗಿದೆ.

'ಹಿಮಾಚಲ ಪ್ರದೇಶ-ಪಂಜಾಬ್ ಗಡಿಯ ಚೆಕ್‌ಪೋಸ್ಟ್‌ಗಳಲ್ಲಿ ಗಡಿ ಭದ್ರತಾ ಪಡೆ(ಬಿಎಸ್ ಎಫ್)ಯನ್ನು ನಿಯೋಜಿಸಲಾಗಿದೆ. ಹೆದ್ದಾರಿಯುದ್ದಕ್ಕೂ ತಪಾಸಣೆಯನ್ನು ತೀವ್ರಗೊಳಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದರು.

'ರಾಷ್ಟ್ರವಿರೋಧಿ ಚಟುವಟಿಕೆ ಹಾಗೂ ಒಳ ನುಸುಳುವಿಕೆಯ ಪ್ರದೇಶಗಳಲ್ಲಿ ಬಿಗಿಭದ್ರತೆಯನ್ನು ತೀವ್ರಗೊಳಿಸಲಾಗಿದೆ. ರಾಷ್ಟ್ರ ವಿರೋಧಿ ಕೃತ್ಯಗಳನ್ನು ತಡೆಯುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿ ಹಾದು ಹೋಗುವ ಅವಳಿ ಗಡಿ ಜಿಲ್ಲೆಗಳಾದ ಕತುವಾ ಮತ್ತು ಸಾಂಬಾ ಜಿಲ್ಲೆಯಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಹೆದ್ದಾರಿಯುದ್ದಕ್ಕೂ ಅನುಮಾನಸ್ಪಾದ ಚಟುವಟಿಕೆಗಳ ಮೇಲೆ ನಿಗಾವಹಿಸಲು ಗಸ್ತು ಹೆಚ್ಚಿಸಲಾಗಿದೆ. ಜಮ್ಮುವಿನ ರೈಲು ನಿಲ್ದಾಣ ಹಾಗೂ ವಿಮಾನ ನಿಲ್ದಾಣಗಳಲ್ಲಿ ಭದ್ರತೆಯನ್ನು ತೀವ್ರಗೊಳಿಸಲಾಗಿದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಟೊಂಗಾ ಸುನಾಮಿ– 3 ಸಣ್ಣ ದ್ವೀಪಗಳಲ್ಲಿ ಭಾರಿ ಹಾನಿ

ಸಿಡ್ನಿ (ಎಪಿ): ಪೆಸಿಫಿಕ್ ಸಮುದ್ರದಾಳದಲ್ಲಿ ಜ್ವಾಲಾಮುಖಿ ಸ್ಫೋಟಿಸಿದ್ದರಿಂದ ಉಂಟಾದ ಸುನಾಮಿ ಟೊಂಗಾದ ಮೂರು ಸಣ್ಣ ದ್ವೀಪಗಳಲ್ಲಿ ಭಾರಿ ಹಾನಿ ಉಂಟುಮಾಡಿದೆ ಎಂದು ರೆಡ್ ಕ್ರಾಸ್ ಮತ್ತು ರೆಡ್ ಕ್ರೆಸೆಂಟ್ ಸೊಸೈಟಿಗಳು ಹೇಳಿವೆ.

ಸುನಾಮಿಯಿಂದ 15 ಮೀಟರ್ (49 ಅಡಿ) ಎತ್ತರದ ಅಲೆಗಳು ಟೊಂಗಾದ ದ್ವೀಪಗಳ ದಡಗಳಿಗೆ ಅಪ್ಪಳಿಸಿದ್ದವು. ಇದರಿಂದ ನೊಮುಕ, ಮಂಗೊ ಮತ್ತು ಫೊನೊಫಿವಾ ಎಂಬ ದ್ವೀಪಗಳಲ್ಲಿ ಭಾರಿ ಹಾನಿ ಸಂಭವಿಸಿದೆ ಎಂದು ಟೊಂಗಾ ದ್ವೀಪಗಳಲ್ಲಿ ಆಗಿರುವ ಹಾನಿಯ ಬಗ್ಗೆ ಅಂದಾಜಿಸಲು ಹಡಗಿನಲ್ಲಿ ಸಂಚರಿಸಿದ ರೆಡ್‌ಕ್ರಾಸ್ ತಂಡದ ಮುಖ್ಯಸ್ಥರಾದ ಕಟ್ಟೆ ಗ್ರೀನ್‌ವುಡ್ ಅವರು ತಿಳಿಸಿದ್ದಾರೆ.

ಉಗ್ರರ ಬೆಂಬಲಿಗರಿಗೆ ಪಂಚತಾರಾ ಆತಿಥ್ಯ: ಭಾರತ ಆಕ್ಷೇಪ

ನ್ಯೂಯಾರ್ಕ್ (ಪಿಟಿಐ): ಮುಂಬೈಯಲ್ಲಿ 1993ರಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟಕ್ಕೆ ಕಾರಣಕರ್ತರಾದ ಅಪರಾಧ ಜಾಲದವರು ಪಾಕಿಸ್ತಾನದಲ್ಲಿ ಪಂಚತಾರಾ ಆತಿಥ್ಯ ಪಡೆಯುತ್ತಿದ್ದು, ಸರ್ಕಾರವೇ ಅವರಿಗೆ ರಕ್ಷಣೆಯನ್ನೂ ನೀಡುತ್ತಿದೆ ಎಂದು ವಿಶ್ವಸಂಸ್ಥೆಯಲ್ಲಿರುವ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ ಆರೋಪಿಸಿದ್ದಾರೆ.

ಇಲ್ಲಿ ಮಂಗಳವಾರ ಗ್ಲೋಬಲ್ ಕೌಂಟರ್ ಟೆರರಿಸಂ ಕೌನ್ಸಿಲ್ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಭಯೋತ್ಪಾದನೆ ನಿಗ್ರಹ ಸಮಾವೇಶ 2022ರಲ್ಲಿ ಮಾತನಾಡಿದ ಅವರು, ಪಾಕಿಸ್ತಾನದಲ್ಲಿ ಎಲ್‌ಇಟಿ ಮತ್ತು ಜೆಇಎಂ ಸಂಘಟನೆಗಳೂ ಬಲಗೊಳ್ಳುತ್ತಿವೆ. ಅಫ್ಗಾನಿಸ್ತಾನದಲ್ಲಿ ಈಚೆಗೆ ನಡೆದಿರುವ ಬೆಳವಣಿಗೆಗಳಿಂದ ಉಗ್ರ ಸಂಘಟನೆಗಳಿಗೆ ಮತ್ತೆ ಶಕ್ತಿ ಬರುವಂತಾಗಿದೆ ಎಂದರು.

ಸ್ಪೇನ್‌ನ ನರ್ಸಿಂಗ್ ಹೋಂನಲ್ಲಿ ಬೆಂಕಿ– 6 ಸಾವು

ಮ್ಯಾಡ್ರಿಡ್ (ಎಪಿ): ಸ್ಪೇನ್‌ನ ಪೂರ್ವ ಭಾಗದ ವೆಲೆಂಸಿಯಾ ಪ್ರದೇಶದ ಮೊಂಕಾಡಾ ಎಂಬಲ್ಲಿ ಬುಧವಾರ ನರ್ಸಿಂಗ್ ಹೋಂ ಒಂದರಲ್ಲಿ ಬೆಂಕಿ ಆಕಸ್ಮಿಕ ಸಂಭವಿಸಿ ಆರು ಮಂದಿ ಮೃತಪಟ್ಟಿದ್ದಾರೆ ಹಾಗೂ 17 ಮಂದಿ ಗಾಯಗೊಂಡಿದ್ದಾರೆ.

ಬೆಂಕಿ ಆಕಸ್ಮಿಕ ಸಂಭವಿಸಿದಾಗ ನರ್ಸಿಂಗ್ ಹೋಂನಲ್ಲಿ 70 ಮಂದಿ ಇದ್ದರು. ಅಪಾಯದಲ್ಲಿ ಸಿಲುಕಿದ್ದ 25 ಮಂದಿಯನ್ನು ರಕ್ಷಿಸಲಾಯಿತು ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಬೆಂಕಿಗೆ ಕಾರಣ ಏನು ಎಂಬುದನ್ನು ಅಧಿಕಾರಿಗಳು ಬಹಿರಂಗಪಡಿಸಿಲ್ಲ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,113
ಇಂದಿನ ಅಂತ್ಯ	17,938
▼	174
ದಿನದ ಗರಿಷ್ಠ	17,884

ವಿನಿಮಯ ದರ

$ ಡಾಲರ್	74.44
£ ಪೌಂಡ್	101.35
€ ಯುರೊ	84.41
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹63
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1310 (1330)
ಸೋಯಾ (ರಿಫೈನ್ಡ್)	₹1210 (1205)
ಸೂರ್ಯಕಾಂತಿ (ರಿಫೈನ್ಡ್)	₹1230 (1230)
ಪಾಮೋಲಿನ್	₹1172 (1162)

'ಸೆಬಿ' ಅಧ್ಯಕ್ಷ ಅಜಯ್ ತ್ಯಾಗಿ ಮಾಹಿತಿ

ಕೆವೈಸಿ ಪ್ರಕ್ರಿಯೆ, ಮ್ಯೂಚುವಲ್ ಫಂಡ್, ಹೂಡಿಕೆದಾರರ ಸಮಸ್ಯೆ ಇತ್ಯರ್ಥಪಡಿಸುವ ವ್ಯವಸ್ಥೆ ಸೇರಿದಂತೆ ಹಲವು ಅಂಶಗಳ ಬಗ್ಗೆ ಈ ಆ್ಯಪ್ ಅರಿವು ಮೂಡಿಸಲಿದೆ.

ಹೂಡಿಕೆದಾರರ ಅನುಕೂಲಕ್ಕೆ 'ಸಾರಥಿ' ಆ್ಯಪ್ ಬಿಡುಗಡೆ

ನವದೆಹಲಿ (ಪಿಟಿಐ): ಷೇರುಪೇಟೆ ವಹಿವಾಟನ್ನು ಮೊಬೈಲ್ ಮೂಲಕ ನಡೆಸುವುದು ಹೆಚ್ಚಾಗುತ್ತಿರುವುದನ್ನು ಗಮನದಲ್ಲಿ ಇಟ್ಟುಕೊಂಡು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) 'ಸಾರಥಿ' (Saa₹thi) ಎನ್ನುವ ಮೊಬೈಲ್ ಆ್ಯಪ್ ಬಿಡುಗಡೆ ಮಾಡಿದೆ.

ಸೆಬಿ ಅಧ್ಯಕ್ಷ ಅಜಯ್ ತ್ಯಾಗಿ ಅವರು ಆ್ಯಪ್ ಬಿಡುಗಡೆ ಮಾಡಿ ಮಾತನಾಡಿದರು. ಸೆಕ್ಯುರಿಟಿ ಮಾರುಕಟ್ಟೆಯ ಬಗ್ಗೆ ಅರಿವು ಮೂಡಿಸುವ ಜೊತೆಗೆ ಹೂಡಿಕೆದಾರರನ್ನು ಸಬಲಗೊಳಿಸುವ ಉದ್ದೇಶದಿಂದ ಈ ಆ್ಯಪ್ ಬಿಡುಗಡೆ ಮಾಡಲಾಗಿದೆ ಎಂದರು.

ಮಾರುಕಟ್ಟೆಯಲ್ಲಿ ವೈಯಕ್ತಿಕ ಹೂಡಿಕೆದಾರರ ಭಾಗವಹಿಸುವಿಕೆಯು ಈಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ, ಹೆಚ್ಚಿನ ಪ್ರಮಾಣದ ವಹಿವಾಟು ಮೊಬೈಲ್ ಮೂಲಕವೇ ನಡೆಯುತ್ತಿದೆ. ಹೀಗಾಗಿ ಅಗತ್ಯ ಮಾಹಿತಿಗಳನ್ನು ಪಡೆಯಲು ಈ ಆ್ಯಪ್ ಹೆಚ್ಚು ಉಪಯುಕ್ತವಾಗಲಿದೆ ಎಂದು ಅವರು ತಿಳಿಸಿದರು.

ಈಗ ಈ ಆ್ಯಪ್, ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಲಭ್ಯವಿದೆ. ಮುಂಬರುವ ದಿನಗಳಲ್ಲಿ ಕೆಲವು ಪ್ರಾದೇಶಿಕ ಭಾಷೆಗಳಲ್ಲಿಯೂ ಈ ಆ್ಯಪ್ ಲಭ್ಯವಾಗಲಿದೆ ಎಂದು ತ್ಯಾಗಿ ತಿಳಿಸಿದ್ದಾರೆ. ಆ್ಯಂಡ್ರಾಯ್ಡ್ ಮತ್ತು ಐಒಎಸ್‌ನಲ್ಲಿ ಇದು ಲಭ್ಯವಿದೆ.

ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ ವರದಿ

ಕೇಬಲ್ ಬ್ರಾಡ್‌ಬ್ಯಾಂಡ್: ಮೊದಲ ಸ್ಥಾನಕ್ಕೆ ಜಿಯೊ

ನವದೆಹಲಿ (ಪಿಟಿಐ): ಕೇಬಲ್ ಮೂಲಕ ಬ್ರಾಡ್‌ಬ್ಯಾಂಡ್ ಸೇವೆ ಒದಗಿಸುವುದನ್ನು ಆರಂಭಿಸಿದ ಎರಡು ವರ್ಷಗಳಲ್ಲಿ ರಿಲಯನ್ಸ್ ಜಿಯೊ ಕಂಪನಿಯು, ಈ ವಲಯದಲ್ಲಿ ಮುಂಚೂಣಿ ಸ್ಥಾನಕ್ಕೆ ಬಂದಿದೆ. 20 ವರ್ಷಗಳಿಂದ ಈ ವಲಯದಲ್ಲಿ ಮೊದಲ ಸ್ಥಾನವನ್ನು ಕಾಯ್ದುಕೊಂಡಿದ್ದ ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್ ಕಂಪನಿಯನ್ನು ಜಿಯೊ ಎರಡನೆಯ ಸ್ಥಾನಕ್ಕೆ ತಳ್ಳಿದೆ.

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ಬಿಡುಗಡೆ ಮಾಡಿರುವ ತಿಂಗಳ ಅಂಕಿ–ಅಂಶಗಳ ಪ್ರಕಾರ, ಜಿಯೊ ಕಂಪನಿಯು ಕೇಬಲ್ ಮೂಲಕ ಬ್ರಾಡ್‌ಬ್ಯಾಂಡ್ ಸೇವೆ ಒದಗಿಸುವ ಕ್ಷೇತ್ರದಲ್ಲಿ 43.4 ಲಕ್ಷ ಗ್ರಾಹಕರನ್ನು ಹೊಂದಿ ಮೊದಲ ಸ್ಥಾನದಲ್ಲಿ ಇದೆ.

ಕೇಬಲ್ ಬ್ರಾಡ್‌ಬ್ಯಾಂಡ್ ವಿಭಾಗದಲ್ಲಿ ಅಕ್ಟೋಬರ್‌ನಲ್ಲಿ 41.6 ಲಕ್ಷ ಗ್ರಾಹಕರನ್ನು ಹೊಂದಿದ್ದ ಜಿಯೊ, ನವೆಂಬರ್‌ನಲ್ಲಿ ಗ್ರಾಹಕರ ಒಟ್ಟು ಸಂಖ್ಯೆಯನ್ನು 43.4 ಲಕ್ಷಕ್ಕೆ ಹೆಚ್ಚಿಸಿಕೊಂಡಿದೆ. ಅಕ್ಟೋಬರ್‌ನಲ್ಲಿ 47.2 ಲಕ್ಷ ಇದ್ದ ಬಿಎಸ್‌ಎನ್‌ಎಲ್ ಗ್ರಾಹಕರ ಸಂಖ್ಯೆ ನವೆಂಬರ್‌ನಲ್ಲಿ 42 ಲಕ್ಷಕ್ಕೆ ಇಳಿಕೆಯಾಗಿದೆ. ಭಾರ್ತಿ ಏರ್‌ಟೆಲ್‌ನ ಗ್ರಾಹಕರ ಸಂಖ್ಯೆಯು ನವೆಂಬರ್‌ನಲ್ಲಿ 40.8 ಲಕ್ಷ ಆಗಿತ್ತು.

ಜಿಯೊ ಕಂಪನಿಯು ತನ್ನ ಕೇಬಲ್ ಬ್ರಾಡ್‌ಬ್ಯಾಂಡ್ ಸೇವೆಗಳನ್ನು ವಾಣಿಜ್ಯ ಬಳಕೆಗೆ 2019ರ ಸೆಪ್ಟೆಂಬರ್‌ನಲ್ಲಿ ಮುಕ್ತವಾಗಿಸಿತು. ಆ ಸಂದರ್ಭದಲ್ಲಿ ಬಿಎಸ್‌ಎನ್‌ಎಲ್ ಒಟ್ಟು 86.9 ಲಕ್ಷ ಕೇಬಲ್ ಬ್ರಾಡ್‌ಬ್ಯಾಂಡ್ ಗ್ರಾಹಕರನ್ನು ಹೊಂದಿತ್ತು. ಈ ಸಂಖ್ಯೆಯು 2021ರ ನವೆಂಬರ್ ವೇಳೆಗೆ ಅರ್ಧದಷ್ಟಕ್ಕೆ ಕುಸಿತ ಕಂಡಿದೆ.

ಇದೇ ಅವಧಿಯಲ್ಲಿ ಭಾರ್ತಿ ಏರ್‌ಟೆಲ್ ಗ್ರಾಹಕರ ಪ್ರಮಾಣವು ಶೇಕಡ 70ರಷ್ಟು ಏರಿಕೆ ಕಂಡಿದೆ. ಇದೇ ಪ್ರಮಾಣದಲ್ಲಿ ಭಾರ್ತಿ ಏರ್‌ಟೆಲ್ ಗ್ರಾಹಕರನ್ನು ಪಡೆಯುತ್ತ ಸಾಗಿದಲ್ಲಿ, ಅದು ಬಿಎಸ್‌ಎನ್‌ಎಲ್ ಕಂಪನಿಯನ್ನು ಶೀಘ್ರದಲ್ಲಿಯೇ ಹಿಂದಿಕ್ಕಲಿದೆ.

ಬಿಎಸ್‌ಇ ಸೆನ್ಸೆಕ್ಸ್ 656 ಅಂಶ ಇಳಿಕೆ

ಮುಂಬೈ (ಪಿಟಿಐ): ಜಾಗತಿಕ ಷೇರುಪೇಟೆಗಳ ಪ್ರಭಾವಕ್ಕೆ ಒಳಗಾಗಿ ದೇಶಿ ಷೇರುಪೇಟೆಗಳಲ್ಲಿ ಬುಧವಾರ ಸೂಚ್ಯಂಕಗಳು ಇಳಿಕೆ ಕಂಡವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 656 ಅಂಶ ಇಳಿಕೆ ಕಂಡು 60,098 ಅಂಶಗಳಿಗೆ ಇಳಿಕೆ ಆಯಿತು. ಜನವರಿ 7ರ ನಂತರದ ಕನಿಷ್ಠ ಮಟ್ಟ ಇದಾಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 174 ಅಂಶ ಇಳಿಕೆ ಕಂಡು 17,938 ಅಂಶಗಳಿಗೆ ತಲುಪಿತು.

ಬಿಎಸ್‌ಇನಲ್ಲಿ ಇನ್ಫೊಸಿಸ್ ಷೇರು ಶೇ 2.77ರಷ್ಟು ಗರಿಷ್ಠ ಇಳಿಕೆ ಕಂಡಿತು. ಬಿಎಸ್‌ಇ ಮಿಡ್ ಕ್ಯಾಪ್ ಶೇ 0.34ರವರೆಗೆ ಇಳಿಕೆ ಕಂಡಿತು. ಬಿಎಸ್‌ಇನಲ್ಲಿ ಐ.ಟಿ. ಸೂಚ್ಯಂಕ ಶೇ 1.95ರಷ್ಟು, ತಂತ್ರಜ್ಞಾನ ಶೇ 1.79ರಷ್ಟು, ಬ್ಯಾಂಕಿಂಗ್ ಶೇ 0.52ರಷ್ಟು ಮತ್ತು ದೂರಸಂಪರ್ಕ ಶೇ 0.97ರಷ್ಟು ಇಳಿಕೆ ಕಂಡಿದೆ.

ರೂಪಾಯಿ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 14 ಪೈಸೆ ಏರಿಕೆ ಕಂಡಿದ್ದು ಒಂದು ಡಾಲರ್‌ಗೆ ₹ 74.44ರಂತೆ ವಿನಿಮಯಗೊಂಡಿತು.

ಕರಗಿದ ಸಂಪತ್ತು: ಎರಡು ದಿನಗಳ ನಕಾರಾತ್ಮಕ ವಹಿವಾಟಿನಿಂದಾಗಿ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 5.24 ಲಕ್ಷ ಕೋಟಿಯಷ್ಟು ಕರಗಿದೆ. ಇದರಿಂದ ಷೇರುಪೇಟೆ ನೋಂದಾಯಿತ ಕಂಪನಿಗಳ ಬಂಡವಾಳ ಮೌಲ್ಯವು ಬುಧವಾರದ ವಹಿವಾಟಿನಲ್ಲಿ ₹ 274.77 ಲಕ್ಷ ಕೋಟಿಗೆ ಇಳಿಕೆ ಕಂಡಿತು.

ಬೆಳ್ಳಿ ದರ ₹ 1,603 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಬೆಳ್ಳಿ ಬೆಲೆಯು ಕೆ.ಜಿ.ಗೆ ₹ 1,603ರಷ್ಟು ಹೆಚ್ಚಾಗಿದ್ದು ₹ 63,435ರಂತೆ ಮಾರಾಟವಾಯಿತು.

ಚಿನ್ನದ ಬೆಲೆಯು 10ಗ್ರಾಂಗೆ ₹ 16ರಷ್ಟು ಹೆಚ್ಚಾಗಿ ₹ 47,878ಕ್ಕೆ ತಲುಪಿತು.

ಟಿಯಾಗೊ, ಟಿಗಾರ್‌ನ ಸಿಎನ್‌ಜಿ ಟ್ರಿಮ್ ಬಿಡುಗಡೆ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ತನ್ನ ಟಿಯಾಗೊ ಮತ್ತು ಟಿಗಾರ್ ಕಾರುಗಳ ಸಿಎನ್‌ಜಿ ಅವತರಣಿಕೆಯನ್ನು ಬುಧವಾರ ಬಿಡುಗಡೆ ಮಾಡಿದೆ. ದೆಹಲಿಯಲ್ಲಿ ಈ ಕಾರುಗಳ ಎಕ್ಸ್ ಷೋರೂಂ ಬೆಲೆ ಕ್ರಮವಾಗಿ ₹ 6.09 ಲಕ್ಷ ಮತ್ತು ₹ 8.41 ಲಕ್ಷ ಇದೆ.

ಟಿಯಾಗೊ ಐಸಿಎನ್‌ಜಿ ಬೆಲೆಯು ₹ 6.09 ಲಕ್ಷದಿಂದ ₹ 7.64 ಲಕ್ಷದವರೆಗಿದೆ. ಮೂರು ಆವೃತ್ತಿಗಳ ಟಿಗಾರ್ ಐಸಿಎನ್‌ಜಿ ಬೆಲೆಯು ಕ್ರಮವಾಗಿ ₹ 7.69 ಲಕ್ಷ, ₹ 8.29 ಲಕ್ಷ ಮತ್ತು ₹ 8.41 ಲಕ್ಷ ಇದೆ.

ಮುಂದಿನ ಐದು ವರ್ಷಗಳಲ್ಲಿ ಸಿಎನ್‌ಜಿ ವಿಭಾಗವು ಉತ್ತಮ ಬೆಳವಣಿಗೆ ಕಾಣಲಿದೆ ಎನ್ನುವುದು ಸ್ಪಷ್ಟವಾಗಿದೆ. ಬೇಡಿಕೆ ಹೆಚ್ಚಾಗಲಿರುವುದಕ್ಕೆ ಅನುಗುಣವಾಗಿ ಎರಡು ಮಾದರಿಗಳ ಸಿಎನ್‌ಜಿ ಅವತರಣಿಕೆ ಬಿಡುಗಡೆ ಮಾಡಲಾಗಿದೆ ಎಂದು ಕಂಪನಿಯ ಪ್ರಯಾಣಿಕ ವಾಹನ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ತಿಳಿಸಿದ್ದಾರೆ.

ಬಿಎಸ್6 ಮಾನದಂಡವು ಜಾರಿಗೆ ಬಂದ ಬಳಿಕ ಸಿಎನ್‌ಜಿ ವಾಹನಗಳಿಗೆ ಭಾರಿ ಬೇಡಿಕೆ ಬರುತ್ತಿದೆ. ಇದೇ ಹೊತ್ತಿನಲ್ಲಿ ಡೀಸೆಲ್ ಚಾಲಿತ ಹ್ಯಾಚ್‌ಬ್ಯಾಕ್ ಮತ್ತು ಕಾಂಪ್ಯಾಕ್ಟ್ ಸೆಡಾನ್ ಕಾರುಗಳ ಬೇಡಿಕೆ ಕುಸಿಯುತ್ತಿದೆ ಎಂದು ಅವರು ಹೇಳಿದ್ದಾರೆ.

ಸಿಎನ್‌ಜಿ ಅವತರಣಿಕೆಗಳು 1.2 ಲೀಟರ್ ಸಾಮರ್ಥ್ಯದ, ಬಿಎಸ್6 ಎಂಜಿನ್ ಹೊಂದಿದ್ದು, ಗರಿಷ್ಠ 73 ಪಿಎಸ್ ಶಕ್ತಿ ಉತ್ಪಾದಿಸಬಲ್ಲದು ಎಂದು ಕಂಪನಿಯು ತಿಳಿಸಿದೆ.

ರ‍್ಯಾಮ್ಕೊ ಸಿಮೆಂಟ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರ‍್ಯಾಮ್ಕೊ ಸಿಮೆಂಟ್‌ನ ಅಳತ್ತಿಯೂರ್ ಘಟಕಕ್ಕೆ 2021ನೇ ಸಾಲಿನ 'ಅಪೆಕ್ಸ್ ಇಂಡಿಯಾ ಆಕ್ಯುಪೇಷನಲ್ ಹೆಲ್ತ್ ಆ್ಯಂಡ್ ಸೇಫ್ಟಿ ಗೋಲ್ಡ್ ಪ್ರಶಸ್ತಿ' ಲಭಿಸಿದೆ.

ಸಿಮೆಂಟ್, ವಿದ್ಯುತ್, ಉಕ್ಕು, ಆಟೊಮೊಬೈಲ್ ಸೇರಿದಂತೆ ಬೇರೆ ಬೇರೆ ವಲಯಗಳ 120ಕ್ಕೂ ಹೆಚ್ಚಿನ ಕಂಪನಿಗಳು ಈ ಪ್ರಶಸ್ತಿಗಾಗಿ ಸ್ಪರ್ಧಿಸಿದ್ದವು.

ಬೇರೆ ಬೇರೆ ಕಂಪನಿಗಳ ಪ್ರತಿನಿಧಿಗಳು ತಮ್ಮಲ್ಲಿನ ಸುರಕ್ಷತೆ ಕುರಿತು ನೀಡಿದ ವಿವರಣೆಗಳನ್ನು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯದ ಮಾಜಿ ನಿರ್ದೇಶಕ ಡಾ.ಆರ್.ಕೆ. ಸೂರಿ ಮತ್ತು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾದ ಮಾಜಿ ಮಹಾನಿರ್ದೇಶಕ ಸುಭಾಷ್ ಚಂದ್ರ ಭಾಸಿನ್ ನೇತೃತ್ವದ ಸಮಿತಿ ಪರಿಶೀಲಿಸಿತು.

ಗೋವಾದಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

19-1-2022

ಜಾವಾ 70/80(ಹೊಸ)	11150-11200
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1320 (1340)
ಒಂದು ವಾರದ ಡೆಲಿವರಿ	1315 (1335)
ಸೋಯಾ ಕಚ್ಚಾ	1152 (1140)
ಪಾಮ್ ವಾರದ ಡೆಲಿವರಿ	1170 (1160)
ಸೂರ್ಯಕಾಂತಿ ಎಣ್ಣೆ ಕಚ್ಚಾ	1175 (1175)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,150 (47,950)
ಬೆಳ್ಳಿ ಕೆ.ಜಿ	63,600 (61,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಕುಮಟ	
ಚಿಪ್ಪು	23899-33339
ಕೋಕ	20509-27109
ಫ್ಯಾಕ್ಟರಿ	12509-18112
ಹೊಸಚಾಲಿ	36209-41199
ಹಳೆಚಾಲಿ	47869-50109
ಸಿದ್ದಾಪುರ	
ಬಿಳಿಗೋಟು	22699-37899
ಚಾಲಿ	44611-48099
ಕೋಕ	22399-35899
ಹೊಸಚಾಲಿ	32009-40639
ಕೆಂಪುಗೋಟು	28699-36899
ರಾಶಿ	44009-46809
ತಟ್ಟಿಬೆಟ್ಟೆ	34009-43899
ರಾಮನಗರ ರೇಷ್ಮೆ	
ಮಿಶ್ರತಳಿ	400-670
ದ್ವಿತಳಿ	101-888

ಮೂಡಿಗೆರೆ ಕಾಫಿ (₹ 50ಕೆ.ಜಿಗೆ)	
	ಮುದ್ರೆಮನೆ
ಎಪಿ	15600
ಎಸಿ	7280
ಆರ್‌ಪಿ	6800
ಆರ್‌ಸಿ	4000



feedback@sudha.co.in

ಮೊದಲ ಏಕದಿನ ಪಂದ್ಯ: ದ್ವಿಶತಕದ ಜೊತೆಯಾಟವಾಡಿದ ತೆಂಬಾ ಬವುಮಾ– ಡಸೆನ್

ದಕ್ಷಿಣ ಆಫ್ರಿಕಾಕ್ಕೆ ಮಣಿದ ರಾಹುಲ್ ಬಳಗ

ಪರ್ಲ್, ದಕ್ಷಿಣ ಆಫ್ರಿಕಾ (ಪಿಟಿಐ): ನಾಯಕತ್ವದ ಹೊಣೆ ಇಲ್ಲದೆ ನಿರಾಳವಾಗಿ ಬ್ಯಾಟ್ ಬೀಸಿದ ವಿರಾಟ್ ಕೊಹ್ಲಿ ಮತ್ತು ಎಡಗೈ ಬ್ಯಾಟರ್ ಶಿಖರ್ ಧವನ್ ಅವರು ಅಮೋಘ ಜೊತೆಯಾಟದ ಮೂಲಕ ಮಿಂಚಿದರು. ಆದರೆ ಇನ್ನುಳಿದ ಬ್ಯಾಟರ್‌ಗಳು ವೈಫಲ್ಯ ಅನುಭವಿಸಿದರು. ಹೀಗಾಗಿ ಭಾರತ ತಂಡ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಸೋಲಿನ ಕಹಿಯುಂಡಿತು.

ಬೊಲ್ಯಾಂಡ್ ಪಾರ್ಕ್‌ನಲ್ಲಿ 297 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೆ.ಎಲ್.ರಾಹುಲ್ ಬಳಗ 8 ವಿಕೆಟ್ ಕಳೆದುಕೊಂಡು 265 ರನ್ ಗಳಿಸಿತು. ಈ ಮೂಲಕ 31 ರನ್‌ಗಳ ಸೋಲೊಪ್ಪಿಕೊಂಡಿತು.

ಧವನ್ ಜೊತೆ ಮೊದಲ ವಿಕೆಟ್‌ಗೆ 46 ರನ್‌ಗಳನ್ನು ಸೇರಿಸಿ ಹಂಗಾಮಿ ನಾಯಕ ರಾಹುಲ್ ಔಟಾದರು. ನಂತರ ಧವನ್ ಮತ್ತು ಕೊಹ್ಲಿ 92 ರನ್‌ಗಳನ್ನು ಸೇರಿಸಿದರು. ಇಬ್ಬರೂ ಅರ್ಧಶತಕಗಳನ್ನು ಗಳಿಸಿದರು. ಈ ಜೊತೆಯಾಟ ಮುರಿದ ನಂತರ ಸತತವಾಗಿ ವಿಕೆಟ್‌ಗಳು ಉರುಳಿದವು. ಎಂಟನೇ ಕ್ರಮಾಂಕದ ಶಾರ್ದೂಲ್ ಠಾಕೂರ್ ಅರ್ಧಶತಕ ಗಳಿಸಿದರೂ ಅಷ್ಟರಲ್ಲಿ ಕಾಲ ಮಿಂಚಿತ್ತು.

ಬವುಮಾ–ಡಸೆನ್ ಆಸರೆ: ಟಾಸ್ ಗೆದ್ದು ಬ್ಯಾಟಿಂಗ್ ಆರಿಸಿಕೊಂಡ ದಕ್ಷಿಣ ಆಫ್ರಿಕಾ ಆರಂಭದಲ್ಲಿ ಕೊಂಚ ಎಡವಿದರೂ ನಾಯಕ, ಮೂರನೇ ಕ್ರಮಾಂಕದ ತೆಂಬಾ ಬವುಮಾ (110; 143 ಎಸೆತ, 8 ಬೌಂಡರಿ) ಮತ್ತು ಐದನೇ ಕ್ರಮಾಂಕದ ರಸಿ ವ್ಯಾನ್ ಡೆರ್ ಡಸೆನ್ (ಔಟಾಗದೆ 129; 96 ಎಸೆತ, 9 ಬೌಂಡರಿ, 4 ಸಿಕ್ಸರ್) ಅವರ ಅಮೋಘ ಶತಕಗಳ ಬಲದಿಂದ ಸವಾಲಿನ ಮೊತ್ತ ಕಲೆ ಹಾಕಿತು. ಬವುಮಾ ಮತ್ತು ಡಸೆನ್ ಭಾರತದ ವಿರುದ್ಧ ಎರಡನೇ ವಿಕೆಟ್‌ಗೆ ದಾಖಲೆಯ 204 ರನ್‌ಗಳನ್ನು ಸೇರಿಸಿದರು. ಆರನೇ ಓವರ್‌ನಲ್ಲಿ ಬೂಮ್ರಾ ಅವರ ಮೋಹಕ ಔಟ್‌ಸ್ವಿಂಗರ್‌ಗೆ ಜೇನ್‌ಮ್ಯಾನ್ ಮಲಾನ್ ವಿಕೆಟ್ ಕಳೆದುಕೊಂಡರು. ಮೊದಲ ಪವರ್ ಪ್ಲೇ ಮುಗಿದಾಗ ತಂಡ ಒಂದು ವಿಕೆಟ್‌ಗೆ 39 ರನ್ ಗಳಿಸಿತ್ತು.

ಕ್ವಿಂಟನ್ ಡಿ ಕಾಕ್ ಅವರು ಬವುಮಾ ಜೊತೆಗೂಡಿ ಇನಿಂಗ್ಸ್ ಕಟ್ಟಲು ಶ್ರಮಿಸಿದರು. ಆದರೆ ಫಲ ಸಿಗಲಿಲ್ಲ. 2017ರ ಜೂನ್ ನಂತರ ಮೊದಲ ಏಕದಿನ ಪಂದ್ಯ ಆಡಿದ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರ ಎಸೆತವನ್ನು ಕಟ್ ಮಾಡಲು ಪ್ರಯತ್ನಿಸಿದ ಡಿ ಕಾಕ್ ವಿಕೆಟ್ ಕಳೆದುಕೊಂಡರು.

18 ಓವರ್ ಆಗುವಷ್ಟರಲ್ಲಿ ತಂಡ 3 ವಿಕೆಟ್ ಕಳೆದುಕೊಂಡಿತು. ಆಗ ಸ್ಕೋರ್ ಕಾರ್ಡ್‌ನಲ್ಲಿದ್ದ ಮೊತ್ತ 68 ಮಾತ್ರ. ವೆಂಕಟೇಶ್ ಅಯ್ಯರ್ ಅವರ ನೇರ ಎಸೆತಕ್ಕೆ ಏಡನ್ ಮರ್ಕರಮ್ ರನೌಟ್ ಆಗಿ ಮರಳಿದ್ದರು. ಈ ಹಂತದಲ್ಲಿ ದಕ್ಷಿಣ ಆಫ್ರಿಕಾ 200 ರನ್ ಗಳಿಸುವುದು ಕಷ್ಟ ಎನಿಸಿತ್ತು. ಆದರೆ ಬವುಮಾ ಮತ್ತು ಡಸೆನ್ ಪಂದ್ಯದ ಗತಿಯನ್ನೇ ಬದಲಿಸಿದರು. ಸ್ವೀಪ್ ಮತ್ತು ರಿವರ್ಸ್ ಸ್ವೀಪ್‌ಗಳೊಂದಿಗೆ ಸ್ಪಿನ್ನರ್‌ಗಳನ್ನು ಎದುರಿಸಿದ ಡಸೆನ್ ಭರ್ಜರಿ ಹೊಡೆತಗಳೊಂದಿಗೆ ಮಿಂಚಿದರು. ಬವುಮಾ ತಾಳ್ಮೆಯಿಂದ ರನ್ ಗಳಿಸಿದರು. ಅವರು 45ನೇ ಓವರ್‌ನಲ್ಲಿ ಮೂರಂಕಿ ದಾಟಿದರೆ ಡಸೆನ್ 48ನೇ ಓವರ್‌ನಲ್ಲಿ ಶತಕ ಪೂರೈಸಿದರು. ಶಾರ್ದೂಲ್ ಠಾಕೂರ್ ಒಟ್ಟು 72 ರನ್ ಕೊಟ್ಟರು.

ರಸಿ ವ್ಯಾನ್ ಡರ್ ಡಸೆನ್ ಬ್ಯಾಟಿಂಗ್ ರೀತಿ – ರಾಯಿಟರ್ಸ್ ಚಿತ್ರ

ಸಚಿನ್ ಹಿಂದಿಕ್ಕಿದ ವಿರಾಟ್ ಕೊಹ್ಲಿ

ವಿರಾಟ್ ಕೊಹ್ಲಿ:

ವಿರಾಟ್ ಕೊಹ್ಲಿ, ವಿದೇಶಿ ನೆಲದಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಭಾರತದ ಆಟಗಾರ ಎನಿಸಿಕೊಂಡರು. ಬುಧವಾರದ ಪಂದ್ಯದಲ್ಲಿ 51 ರನ್ ಗಳಿಸಿದ ಅವರು ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿದ್ದ ದಾಖಲೆ ಹಿಂದಿಕ್ಕಿದರು. ಸಚಿನ್ 5065 ಗಳಿಸಿದ್ದಾರೆ. ಪಂದ್ಯದಲ್ಲಿ 27 ರನ್ ಗಳಿಸಿದಾಗ ದಕ್ಷಿಣ ಆಫ್ರಿಕಾ ಎದುರು ಅತಿಹೆಚ್ಚು ರನ್ ಗಳಿಸಿದ ಆಟಗಾರ ಎಂಬ ಶ್ರೇಯವೂ ಕೊಹ್ಲಿ ಅವರದಾಯಿತು. ಸೌರವ್ ಗಂಗೂಲಿ ಮತ್ತು ರಾಹುಲ್ ದ್ರಾವಿಡ್ ಅವರನ್ನು ಕೊಹ್ಲಿ ಹಿಂದಿಕ್ಕಿದರು.

ಒಟ್ಟಾರೆಯಾಗಿ ವಿದೇಶಿ ನೆಲದಲ್ಲಿ ಹೆಚ್ಚು ರನ್ ಗಳಿಸಿದವರ ಪಟ್ಟಿಯ ಮೊದಲ ಸ್ಥಾನದಲ್ಲಿ ಶ್ರೀಲಂಕಾದ ಕುಮಾರ ಸಂಗಕ್ಕಾರ (5518) ಇದ್ದಾರೆ. ದಕ್ಷಿಣ ಆಫ್ರಿಕಾ ಎದುರು ಅತಿ ಹೆಚ್ಚು ರನ್ ಗಳಿಸಿವರ ಪಟ್ಟಿಯ ಮೊದಲ ಸ್ಥಾನದಲ್ಲಿ ಸಚಿನ್ (2001 ರನ್) ಇದ್ದಾರೆ. ರಿಕಿ ಪಾಂಟಿಂಗ್ (ಆಸ್ಟ್ರೇಲಿಯಾ–1879), ಕುಮಾರ ಸಂಗಕ್ಕಾರ (1789)ನಂತರದ ಸ್ಥಾನಗಳಲ್ಲಿದ್ದಾರೆ.

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ 4ಕ್ಕೆ 296 (50 ಓವರ್)

ಡಿಕಾಕ್ ಬಿ ಅಶ್ವಿನ್ 27 (41 ಎ, 4x2), ಮಲಾನ್ ಸಿ ಪಂತ್ ಬಿ ಬೂಮ್ರಾ 6 (10 ಎ, 4x1), ಬವುಮಾ ಸಿ ರಾಹುಲ್ ಬಿ ಬೂಮ್ರಾ 110 (143 ಎ, 4x8), ಮರ್ಕರಮ್ ರನೌಟ್ (ವೆಂಕಟೇಶ್ ಅಯ್ಯರ್) 4 (11 ಎ), ಡುಸೆನ್ ಔಟಾಗದೆ 129 (96 ಎ, 4x9, 6x4), ಮಿಲ್ಲರ್ ಔಟಾಗದೆ 2 (2 ಎ)

ಇತರೆ (ಲೆಗ್ ಬೈ 6, ನೋಬಾಲ್ 3, ವೈಡ್ 9) 18

ವಿಕೆಟ್ ಪತನ: 1-19 (ಜೇನ್‌ಮ್ಯಾನ್ ಮಲಾನ್, 4.2), 2-58 (ಕ್ವಿಂಟನ್ ಡಿಕಾಕ್, 15.1), 3-68 (ಏಡನ್ ಮರ್ಕರಮ್, 17.4), 4-272 (ತೆಂಬಾ ಬವುಮಾ, 48.1)

ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 10–0–48–2, ಭುವನೇಶ್ವರ್ ಕುಮಾರ್ 10–0–64–0, ಶಾರ್ದೂಲ್ ಠಾಕೂರ್ 10–1–72–0, ರವಿಚಂದ್ರನ್ ಅಶ್ವಿನ್ 10–0–53–1, ಯುಜುವೇಂದ್ರ ಚಾಹಲ್ 10–0–53–0

ಭಾರತ 8ಕ್ಕೆ 265 (50 ಓವರ್)

ರಾಹುಲ್ ಸಿ ಡಿಕಾಕ್ ಬಿ ಮರ್ಕರಮ್ 12 (17 ಎ), ಶಿಖರ್ ಬಿ ಕೇಶವ್ 79 (84 ಎ, 4x10), ವಿರಾಟ್ ಸಿ ಬವುಮಾ ಬಿ ಶಂಸಿ 51 (63 ಎ, 4x3), ರಿಷಭ್ ಸ್ಟಂಪ್ಡ್ ಡಿ ಕಾಕ್ ಬಿ ಪಿಶುವಾಯೊ 16 (22 ಎ, 4x1), ಶ್ರೇಯಸ್ ಸಿ ಡಿಕಾಕ್ ಬಿ ಗಿಡಿ 17 (17 ಎ, 4x1), ವೆಂಕಟೇಶ್ ಸಿ ಡಸೆನ್ ಬಿ ಗಿಡಿ 2 (7 ಎ), ರವಿಚಂದ್ರನ್ ಬಿ ಪಿಶುವಾಯೊ 7 (13 ಎ), ಶಾರ್ದೂಲ್ ಔಟಾಗದೆ 50 (43ಎ, 4X5, 6X1), ಭುವನೇಶ್ವರ್ ಸಿ ಬವುಮಾ ಬಿ ಶಂಸಿ 4 (11 ಎ), ಜಸ್‌ಪ್ರೀತ್ ಔಟಾಗದೆ 14 (23ಎ, 4X1)

ಇತರೆ (ಬೈ 2, ವೈಡ್ 11) 13

ವಿಕೆಟ್ ಪತನ: 1-46 (ಕೆ.ಎಲ್. ರಾಹುಲ್, 8.3), 2-138 (ಶಿಖರ್ ಧವನ್, 25.3), 3-152 (ವಿರಾಟ್ ಕೊಹ್ಲಿ, 28.2), 4-181 (ಶ್ರೇಯಸ್ ಅಯ್ಯರ್, 33.5), 5-182 (ರಿಷಭ್ ಪಂತ್, 34.1), 6-188 (ವೆಂಕಟೇಶ್ ಅಯ್ಯರ್, 35.5), 7-199 (ರವಿಚಂದ್ರನ್ ಅಶ್ವಿನ್, 38.3), 8-214 (ಭುವನೇಶ್ವರ್ ಕುಮಾರ್, 42.2)

ಬೌಲಿಂಗ್: ಏಡನ್ ಮರ್ಕರಮ್ 6–0–30–1, ಮಾರ್ಕೊ ಜ್ಯಾನ್ಸೆನ್ 9–0–49–0, ಕೇಶವ್ ಮಹಾರಾಜ್ 10–0–42–1, ಲುಂಗಿ ಗಿಡಿ 10–0–64 –2, ತಬ್ರೇಜ್ ಶಂಸಿ 10–1–52–2, ಆ್ಯಂಡಿಲೆ ಪಿಶುವಾಯೊ 5–0–26–2

ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 31 ರನ್‌ಗಳ ಜಯ

ಶಿಖರ್ ಧವನ್ –ಪಿಟಿಐ ಚಿತ್ರ

ಆರು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳ ಒಡತಿ ಈ ಮೂಗುತಿ ಸುಂದರಿ

ಮೆಲ್ಬರ್ನ್ (ಪಿಟಿಐ): ಭಾರತದ ಟೆನಿಸ್ ಕ್ಷೇತ್ರದದಲ್ಲಿ ವಿಶಿಷ್ಟ ಛಾಪು ಮೂಡಿಸಿದ ಮತ್ತು ಮಹಿಳಾ ಟೆನಿಸ್‌ನ ಪ್ರೇರಣಾ ಶಕ್ತಿಯಾಗಿರುವ ಹೈದರಾಬಾದ್‌ನ ಮೂಗುತಿ ಸುಂದರಿ ಸಾನಿಯಾ ಆರು ಗ್ರ್ಯಾನ್ ಸ್ಲಾಂ ಪ್ರಶಸ್ತಿಗಳ ಒಡತಿ. ಸಿಂಗಲ್ಸ್‌ನಲ್ಲಿ ನಾಲ್ಕು ಗ್ರ್ಯಾನ್‌ಸ್ಲಾಂ ಟೂರ್ನಿಗಳಲ್ಲೂ ಆಡಿ ಗರಿಷ್ಠ ನಾಲ್ಕನೇ ಸುತ್ತು ಪ್ರವೇಶಿಸಿರುವ ಅವರು ಮಹಿಳೆಯರ ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ನಲ್ಲಿ ಅಪರೂಪದ ಸಾಧನೆ ಮಾಡಿದ್ದಾರೆ. ವಿಂಬಲ್ಡನ್ ಸೇರಿದಂತೆ ನಾಲ್ಕು ಸ್ಲಾಂಗಳಲ್ಲೂ ಪ್ರಶಸ್ತಿ ಗೆದ್ದಿದ್ದಾರೆ.

ಸ್ವಿಟ್ಜರ್ಲೆಂಡ್‌ನ ಖ್ಯಾತ ಆಟಗಾರ್ತಿ ಮಾರ್ಟಿನಾ ಹಿಂಗಿಸ್ ಜೊತೆ ಅತ್ಯಂತ ಯಶಸ್ವಿಯಾಗಿ ಡಬಲ್ಸ್ ಪಂದ್ಯಗಳನ್ನು ಆಡಿರುವ ಅವರು ಭಾರತದ ಮಹೇಶ್ ಭೂಪತಿ ಅವರೊಂದಿಗೆ ಮಿಶ್ರ ಡಬಲ್ಸ್‌ನಲ್ಲೂ ಮಿಂಚಿದ್ದಾರೆ. ಡಬಲ್ಸ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ ಒಂದನೇ ಸ್ಥಾನಕ್ಕೇರಿದ ಶ್ರೇಯಸ್ಸು ಕೂಡ ಅವರದಾಗಿದೆ.

'ಮೆಲ್ಬರ್ನ್ ಅಂಗಣದಲ್ಲಿ ನೆನಪುಗಳ ಬುತ್ತಿ ಇದೆ. ಸಿಂಗಲ್ಸ್, ಡಬಲ್ಸ್ ಮತ್ತು ಮಿಶ್ರ ಡಬಲ್ಸ್‌ಗಳಲ್ಲಿ ಮಹತ್ವದ ಪಂದ್ಯಗಳನ್ನು ಇಲ್ಲಿ ಆಡಿದ್ದೇನೆ. ಆದರೆ ವೈರಸ್ ದಾಳಿಯ ನಂತರ ದೇಹ ಬಳಲುತ್ತಿದೆ. ಯಾವುದನ್ನೂ ಖಚಿತವಾಗಿ ಹೇಳಲು ಆಗುತ್ತಿಲ್ಲ' ಎಂದರು.

ಭಾರತದ ಪ್ರಮುಖರ ಜೊತೆ ಕಣಕ್ಕೆ ಇಳಿದಿರುವ ಸಾನಿಯಾ ಮಿರ್ಜಾ 2016ರ ರಿಯೊ ಒಲಂಪಿಕ್ಸ್‌ನಲ್ಲಿ ಪದಕದ ಸನಿಹ ತಲುಪಿದ್ದರು. ರೋಹನ್ ಬೋಪಣ್ಣ ಜೊತೆ ಮಿಶ್ರ ಡಬಲ್ಸ್‌ನಲ್ಲಿ ಸೆಮಿಫೈನ್ ಪ್ರವೇಶಿಸಿದ್ದ ಅವರು ಅಮೆರಿಕ ಜೋಡಿ ವೀನಸ್ ವಿಲಿಯಮ್ಸ್ ಮತ್ತು ರಾಜೀವ್ ರಾಮ್‌ಗೆ ಮಣಿದಿದ್ದರು.

ಮಹೇಶ್ ಭೂಪತಿ ಜೊತೆ ಎರಡು ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದಾರೆ. 2009ರಲ್ಲಿ ಆಸ್ಟ್ರೇಲಿಯನ್ ಓಪನ್ ಮತ್ತು 2102ರಲ್ಲಿ ಫ್ರೆಂಚ್ ಓಪನ್ ಪ್ರಶಸ್ತಿಗಳು ಈ ಜೋಡಿಯ ಮುಡಿಗೇರಿವೆ.

ಸಾನಿಯಾ ಮಿರ್ಜಾ ಮತ್ತು ಮಾರ್ಟಿನಾ ಹಿಂಗಿಸ್ –ಎಎಫ್‌ಪಿ ಚಿತ್ರ

ಸಾನಿಯಾ ಮಿರ್ಜಾ

ಜನನ	1986ರ ನವೆಂಬರ್ 15; ಮುಂಬೈ
ವಾಸ	ಹೈದರಾಬಾದ್
ವೃತ್ತಿಜೀವನ ಆರಂಭ	2003
ವಿವಾಹ	2010; ಪಾಕಿಸ್ತಾನದ ಕ್ರಿಕೆಟಿಗ ಶೋಯೆಬ್ ಮಲಿಕ್
ಸಿಂಗಲ್ಸ್ ಸಾಧನೆ	
ಪಂದ್ಯ 271	ಜಯ 161
ಪ್ರಶಸ್ತಿ	1 (ಹೈದರಾಬಾದ್, 2005)
ಫೈನಲ್	2005 (ಫಾರೆಸ್ಟ್ ಹಿಲ್ಸ್), 2007 (ಸ್ಟಾನ್‌ಫಾರ್ಡ್), 2009 (ಪಟ್ಟಾಯ)
ಗರಿಷ್ಠ ರ್‍ಯಾಂಕಿಂಗ್	27 (2007)
ಗ್ರ್ಯಾಂಡ್‌ಸ್ಲಾಂ ಟೂರ್ನಿ	
ಆಸ್ಟ್ರೇಲಿಯನ್ ಓಪನ್	3ನೇ ಸುತ್ತು (2005, 2008)
ಫ್ರೆಂಚ್ ಓಪನ್	2ನೇ ಸುತ್ತು (2007, 2011)
ವಿಂಬಲ್ಡನ್	2ನೇ ಸುತ್ತು (2005, 2007, 2008, 2009)
ಅಮೆರಿಕ ಓಪನ್	4ನೇ ಸುತ್ತು (2005)
ಒಲಿಂಪಿಕ್ಸ್ 1ನೇ ಸುತ್ತು	(2008)

ಡಬಲ್ಸ್ ಸಾಧನೆ	
ಪಂದ್ಯ 511	ಜಯ 230
ಪ್ರಶಸ್ತಿ	43
ಗರಿಷ್ಠ ರ್‍ಯಾಂಕಿಂಗ್	1 (2015)
ಸದ್ಯದ ರ್‍ಯಾಂಕಿಂಗ್	68 (ಸೆಪ್ಟೆಂಬರ್ 27, 2021ರಿಂದ)
ಆಸ್ಟ್ರೇಲಿಯನ್ ಓಪನ್	ಪ್ರಶಸ್ತಿ (2016)
ಫ್ರೆಂಚ್ ಓಪನ್	ರನ್ನರ್ ಅಪ್ (2011)
ವಿಂಬಲ್ಡನ್	ಪ್ರಶಸ್ತಿ (2015)
ಅಮೆರಿಕ ಓಪನ್	ಪ್ರಶಸ್ತಿ (2015)
ಟೂರ್ ಫೈನಲ್ಸ್	ಪ್ರಶಸ್ತಿ (2014, 2015)
ಒಲಿಂಪಿಕ್ಸ್	2ನೇ ಸುತ್ತು (2008)
ಮಿಶ್ರ ಡಬಲ್ಸ್ ಸಾಧನೆ	
ಪ್ರಶಸ್ತಿ	3
ಆಸ್ಟ್ರೇಲಿಯನ್ ಓಪನ್	ಪ್ರಶಸ್ತಿ (2009)
ಫ್ರೆಂಚ್ ಓಪನ್	ಪ್ರಶಸ್ತಿ (2012)
ಅಮೆರಿಕ ಓಪನ್	ಪ್ರಶಸ್ತಿ (2014)
ವಿಂಬಲ್ಡನ್	8ರ ಘಟ್ಟ (2011, 2013, 2015)
ಒಲಿಂಪಿಕ್ಸ್	ಸೆಮಿಫೈನಲ್ (2016)

ನಡಾಲ್, ಒಸಾಕ, ಬಾರ್ಟಿ ಜಯದ ಓಟ

ಆಸ್ಟ್ರೇಲಿಯನ್ ಓಪನ್: ಯಾನಿಕ್, ಮ್ಯಾಡಿಸನ್ ಬ್ರೆಂಗಲ್‌ಗೆ ಸೋಲು

ಮೆಲ್ಬರ್ನ್ (ರಾಯಿಟರ್ಸ್/ಎಪಿ): ಸ್ಪೇನ್‌ನ ರಫೆಲ್ ನಡಾಲ್, ಸ್ಥಳೀಯ ಆಟಗಾರ್ತಿ ಆ್ಯಶ್ಲಿ ಬಾರ್ಟಿ ಮತ್ತು ಹಾಲಿ ಚಾಂಪಿಯನ್ ಜಪಾನ್‌ನ ನವೊಮಿ ಒಸಾಕ ಅವರು ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಮೂರನೇ ದಿನವೂ ಪಾರಮ್ಯ ಮೆರೆದಿದ್ದಾರೆ.

ಗಾಯದಿಂದಾಗಿ ಕೆಲವು ತಿಂಗಳು ವಿಶ್ರಾಂತಿ ಪಡೆದುಕೊಂಡಿದ್ದ ರಫೆಲ್ ನಡಾಲ್ ಈಚೆಗೆ ಪ್ರತಿ ಪಂದ್ಯದಲ್ಲೂ ತಮ್ಮ ಸಾಮರ್ಥ್ಯ ವೃದ್ಧಿಯಾಗುತ್ತಿದೆ ಎಂದು ಹೇಳಿದ್ದರು. ಈ ಮಾತಿಗೆ ತಕ್ಕಂತೆ ಬುಧವಾರ ಆಡಿದ ಅವರು ಜರ್ಮನಿಯ ಯಾನಿಕ್ ಹಂಫ್‌ಮ್ಯಾನ್ ವಿರುದ್ಧ 6-2 6-3 6-4ರ ಜಯ ಸಾಧಿಸಿದರು.

ನಡಾಲ್ ಮುಂದೆ ವಿಶ್ವ ರ್‍ಯಾಂಕಿಂಗ್‌ನಲ್ಲಿ 126ನೇ ಸ್ಥಾನದಲ್ಲಿರುವ ಹಂಫ್‌ಮ್ಯಾನ್ ನಿರುತ್ತರರಾದರು. ಅರ್ಹತಾ ಸುತ್ತಿನಲ್ಲಿ ಆಡಿ ಬಂದಿದ್ದ ಅವರು ರಾಡ್ ಲೇವರ್ ಅರೆನಾದಲ್ಲಿ ಮೂರೂ ಗೇಮ್‌ಗಳಲ್ಲೂ ನಡಾಲ್ ತಂತ್ರಗಳಿಗೆ ಪ್ರತಿತಂತ್ರಗಳನ್ನು ಹೆಣೆಯಲಾಗದೆ ಸೋಲೊಪ್ಪಿಕೊಂಡರು. 30 ವಿನ್ನರ್‌ಗಳನ್ನು ಸಿಡಿಸಿದ ನಡಾಲ್ ನಾಲ್ಕು ಬಾರಿ ಎದುರಾಳಿಯ ಸರ್ವ್ ಮುರಿದರು. ಲಭಿಸಿದ ಎರಡೂ ಬ್ರೇಕ್‌ಪಾಯಿಂಟ್‌ಗಳನ್ನು ಉಳಿಸಿಕೊಂಡರು.

ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ 6-4, 6-4, 6-0ರಲ್ಲಿ ಆಸ್ಟ್ರೇಲಿಯಾದ ಜಾನ್ ಮಿಲ್‌ಮ್ಯಾನ್ ಎದುರು ಜಯ ಗಳಿಸಿದರು.

ನೇಷನ್ಸ್ ಡೇಯಲ್ಲಿ ಮಿಂಚಿದ ಬಾರ್ಟಿ: ನೇಷನ್ಸ್ ಡೇ ಆಚರಿಸಿದ ಆಸ್ಟ್ರೇಲಿಯಾಗೆ ಆ್ಯಶ್ಲಿ ಬಾರ್ಟಿ ಗೆಲುವಿನ ಉಡುಗೊರೆ ನೀಡಿದರು. ಮೆಲ್ಬರ್ನ್ ಪಾರ್ಕ್‌ನಲ್ಲಿ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನ ಒಂದನೇ ಸ್ಥಾನದಲ್ಲಿರುವ ಬಾರ್ಟಿ ಇಟಲಿಯ ಲೂಸಿಯಾ ಬ್ರಾನ್ಸೆಟಿ ವಿರುದ್ಧ 6-1, 6-1ರಲ್ಲಿ ಜಯ ಗಳಿಸಿದರು.

ಹಾಲಿ ಚಾಂಪಿಯ್ ನವೊಮಿ ಒಸಾಕ ಅಮೆರಿಕದ ಮ್ಯಾಡಿಸನ್ ಬ್ರೆಂಗಲ್ ವಿರುದ್ಧ ಜಯ ಗಳಿಸಿದರು. ಮೊದಲ ಸೆಟ್‌ನಲ್ಲಿ ಏಕಪಕ್ಷೀಯ 6-0 ಗೇಮ್‌ಗಳ ಗೆಲುವು ದಾಖಲಿಸಿದ ಅವರಿಗೆ ಎರಡನೇ ಸೆಟ್‌ನಲ್ಲಿ ಭಾರಿ ಸವಾಲು ಎದುರಾಯಿತು. ಕೊನೆಗೆ 6-4ರಲ್ಲಿ ಗೆದ್ದರು.

ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಸ್ವಿಟ್ಜರ್ಲೆಂಡ್‌ನ ಜಿಲ್ ಟೀಚ್‌ಮನ್ ವಿರುದ್ಧ 6-1, 6-2ರಲ್ಲಿ ಜಯ ಗಳಿಸಿದರು. ಉಕ್ರೇನ್‌ನ ಎಲಿನಾ ಸ್ವಿಟೋಲಿನಾ 6-3, 5-7, 5-1ರಲ್ಲಿ (ನಿವೃತ್ತಿ) ಹಾರ್ಮನಿ ಟ್ಯಾನ್ ಎದುರು ಗೆದ್ದರು. ಅಮೆರಿಕದ ಮ್ಯಾಡಿಸನ್ ಕೀಸ್ 6-2, 7-5ರಲ್ಲಿ ರುಮೇನಿಯಾದ ಜಾಕ್ವೆಲಿನ್ ಅಡಿನಾ ಕ್ರಿಸ್ಟಿಯನ್ ಅವರನ್ನು ಮಣಿಸಿದರು.

ರಫೆಲ್ ನಡಾಲ್ ಸಂಭ್ರಮ –ಪಿಟಿಐ ಚಿತ್ರ

ಬೋಪಣ್ಣ ಕನಸು ಭಗ್ನ

ಡಬಲ್ಸ್ ವಿಭಾಗದಲ್ಲಿ ಭಾರತದ ರೋಹನ್ ಬೋಪಣ್ಣ ಮತ್ತು ಸಾನಿಯಾ ಮಿರ್ಜಾ ಅವರ ಕನಸು ಭಗ್ನಗೊಂಡಿತು. ಪುರುಷರ ವಿಭಾಗದಲ್ಲಿ ರೋಹನ್ ಬೋಪಣ್ಣ ಮತ್ತು ಫ್ರಾನ್ಸ್‌ನ ಎಡ್ವರ್ಡ್ ರೋಜರ್ ವ್ಯಾಸೆಲಿನ್ ಜೋಡಿ ವೈಲ್ಡ್ ಕಾರ್ಡ್ ಮೂಲಕ ಪ್ರವೇಶಿಸಿದ್ದ ಕ್ರಿಸ್ಟೋಫರ್ ಲುಂಕಟ್ ಮತ್ತು ಟ್ರೀಟ್ ಹ್ಯೂ ವಿರುದ್ಧ 6-3, 6-7(2), 2-6ರಲ್ಲಿ ಸೋತರು. ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಕ್ರೊವೇಷ್ಯಾದ ದರಿಜಾ ಜುರಕ್ ಶೀಬರ್ ಜೊತೆಯೂ ಸಾನಿಯಾ ಮಿರ್ಜಾ ಅಮೆರಿಕದ ರಾಜೀವ್ ರಾಮ್ ಜೊತೆಯೂ ಆಡಲಿದ್ದಾರೆ.

ಗ್ಲೆನ್ ಮ್ಯಾಕ್ಸ್‌ವೆಲ್ –ಎಎಫ್‌ಪಿ ಚಿತ್ರ

ಮ್ಯಾಕ್ಸ್‌ವೆಲ್ ದಾಖಲೆ ರನ್

ಮೆಲ್ಬರ್ನ್ (ರಾಯಿಟರ್ಸ್): ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಬಿಗ್‌ಬ್ಯಾಷ್ ಲೀಗ್ ಟ್ವೆಂಟಿ20 ಕ್ರಿಕೆಟ್‌ನಲ್ಲಿ ವೈಯಕ್ತಿಕ ಗರಿಷ್ಠ ರನ್ ಗಳಿಸಿದ ದಾಖಲೆ ಬರೆದರು. ಬುಧವಾರ ನಡೆದ ಪಂದ್ಯದಲ್ಲಿ ಮೆಲ್ಬರ್ನ್ ಸ್ಟಾರ್ಸ್ ಪರ 64 ಎಸೆತಗಳಲ್ಲಿ 154 ರನ್ ಗಳಿಸಿದ ಅವರು ತಂಡ 2 ವಿಕೆಟ್‌ಗಳಿಗೆ 273 ರನ್ ಕಲೆ ಹಾಕಲು ನೆರವಾದರು. ಇದು ಟ್ವೆಂಟಿ20 ಕ್ರಿಕೆಟ್ ಲೀಗ್‌ನಲ್ಲಿ ತಂಡವೊಂದು ಗಳಿಸಿದ ಗರಿಷ್ಠ ಮೊತ್ತವಾಗಿದ್ದು ಚುಟುಕು ಕ್ರಿಕೆಟ್‌ನಲ್ಲಿ ಒಟ್ಟಾರೆ ಮೂರನೇ ಗರಿಷ್ಠ ಮೊತ್ತವಾಗಿದೆ. ಮ್ಯಾಕ್ಸ್‌ವೆಲ್ ಇನಿಂಗ್ಸ್‌ನಲ್ಲಿ 22 ಬೌಂಡರಿಗಳು ಮತ್ತು 4 ಸಿಕ್ಸರ್‌ಗಳು ಒಳಗೊಂಡಿದ್ದವು.

ಮಹಿಳಾ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿ ಇಂದಿನಿಂದ

ಭಾರತ ತಂಡಕ್ಕೆ ಇರಾನ್ ಸವಾಲು

ನವಿ ಮುಂಬೈ (ಪಿಟಿಐ): ಫಿಫಾ ವಿಶ್ವಕಪ್ ಪ್ಲೇ ಆಫ್‌ಗೆ ಸ್ಥಾನ ಗಳಿಸುವ ಗುರಿಯಿಟ್ಟುಕೊಂಡು ಭಾರತ ಮಹಿಳಾ ತಂಡವು ಎಎಫ್‌ಸಿ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದು, ಗುರುವಾರ ಮೊದಲ ಪಂದ್ಯದಲ್ಲಿ ಇರಾನ್ ಸವಾಲು ಎದುರಿಸಲಿದೆ.

1979ರ ಬಳಿಕ ಇದೇ ಮೊದಲ ಬಾರಿ ಟೂರ್ನಿಯ ಆತಿಥ್ಯ ವಹಿಸಿರುವ ಭಾರತವು, ಕ್ವಾರ್ಟರ್‌ಫೈನಲ್‌ಗೆ ಅರ್ಹತೆ ಗಳಿಸುವ ಛಲದಲ್ಲಿದೆ. 12 ತಂಡಗಳ ಈ ಟೂರ್ನಿಯಲ್ಲಿ ಭಾಗವಹಿಸಲಿವೆ.

1979 ಮತ್ತು 1983ರಲ್ಲಿ ರನ್ನರ್‌ಅಪ್ ಆಗಿದ್ದ ಭಾರತ ತಂಡವು 1981ರಲ್ಲಿ ಮೂರನೇ ಸ್ಥಾನ ಗಳಿಸಿತ್ತು.

ಡಿ. ವೈ. ಪಾಟೀಲ್ ಕ್ರೀಡಾಂಗಣದಲ್ಲಿ, ತನಗಿಂತ ಕೆಳ ರ್‍ಯಾಂಕಿನ ಇರಾನ್ ಎದುರು ಗೆದ್ದರೆ ಭಾರತ 'ಎ' ಗುಂಪಿನಲ್ಲಿ ಕನಿಷ್ಠ ಮೂರನೇ ಸ್ಥಾನ ಖಚಿತಪಡಿಸಲಿದೆ. ಫಿಫಾ ರ್‍ಯಾಂಕಿಂಗ್‌ನಲ್ಲಿ ಇರಾನ್ 70ನೇ ಸ್ಥಾನದಲ್ಲಿದ್ದರೆ, ಭಾರತದ ಕ್ರಮಾಂಕ 55.

ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿರುವ ಪ್ರಮುಖ ಆಟಗಾರ್ತಿ ಬಾಲಾ ದೇವಿ ಈ ಪಂದ್ಯದಲ್ಲಿ ಆಡುತ್ತಿಲ್ಲ. ಆಶಾಲತಾ ದೇವಿ ತಂಡದ ನಾಯಕತ್ವ ವಹಿಸಿದ್ದಾರೆ. ಇರಾನ್ 2005ರಲ್ಲಿ ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ಪದಾರ್ಪಣೆ ಮಾಡಿದೆ.

ಇನ್ನೊಂದು ಪಂದ್ಯದಲ್ಲಿ ಚೀನಾ ತೈಪೆ ತಂಡವು ಚೀನಾವನ್ನು ಎದುರಿಸಲಿದೆ.

ಇಬ್ಬರು ಆಟಗಾರ್ತಿಯರಿಗೆ ಸೋಂಕು: ಪಂದ್ಯಕ್ಕೂ ಮೊದಲೇ ಭಾರತ ತಂಡದ ಇಬ್ಬರು ಆಟಗಾರ್ತಿಯರಿಗೆ ಸೋಂಕು ಇರುವುದು ಖಚಿತವಾಗಿದೆ. ಹೀಗಾಗಿ ಅವರನ್ನು ಪ್ರತ್ಯೇಕವಾಸಕ್ಕೆ ಕಳುಹಿಸಲಾಗಿದೆ.ಈ ವಿಷಯವನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಟ್ವೀಟ್ ಮಾಡಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಯೂರೊ ಸ್ಪೋರ್ಟ್

ಕೆಎಸ್‌ಎಫ್‌ಎ ಫುಟ್‌ಬಾಲ್: ಮಿಸಾಕ ಜಯಭೇರಿ

ಬೆಂಗಳೂರು: ಮಿಸಾಕ ಯುನೈಟೆಡ್ ಎಫ್‌ಸಿಯು ಕೆಎಸ್‌ಎಫ್‌ಎ ಮಹಿಳಾ ಫುಟ್‌ಬಾಲ್ ಲೀಗ್‌ನಲ್ಲಿ ಭರ್ಜರಿ ಜಯ ಸಾಧಿಸಿತು.

ಬುಧವಾರ ನಡೆದ ಪಂದ್ಯದಲ್ಲಿ 4–0ಯಿಂದ ಬೆಂಗಳೂರು ಯುನೈಟೆಡ್ ಎಫ್‌ಸಿಯನ್ನು ಮಣಿಸಿತು. ಲಾಲ್‌ರಿನ್ಮುವಾನಿ 58 ಮತ್ತು 83ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ಲಾಲ್ತನ್ ಸಂಗಾಯಿ (73ನೇ ನಿ.) ಮತ್ತು ಲಾಲ್‌ಮಿಂಗ್ ಮಾವಿ (85ನೇ ನಿ.) ತಲಾ ಒಂದು ಗೋಲು ಹೊಡೆದರು.

ಐಎಸ್‌ಎಲ್ ಟೂರ್ನಿ: ಈಸ್ಟ್ ಬೆಂಗಾಲ್‌ಗೆ ಜಯ

ಬ್ಯಾಂಬೊಲಿಮ್: ನೋರೆಮ್ ಸಿಂಗ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಎಸ್‌ಸಿ ಈಸ್ಟ್ ಬೆಂಗಾಲ್ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಬುಧವಾರ ನಡೆದ ಪಂದ್ಯದಲ್ಲಿ 2–1ರಿಂದ ಎಫ್‌ಸಿ ಗೋವಾ ತಂಡವನ್ನು ಮಣಿಸಿತು. ನೋರೆಮ್ ಒಂಬತ್ತು ಮತ್ತು 42ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ಗೋವಾ ಪರ ಆಲ್ಬರ್ಟ್ ನೊಗ್ವೆರಾ (37ನೇ ನಿ.) ಗೋಲು ಹೊಡೆದರು.

ಎಟಿಕೆಎಂಬಿ–ಕೇರಳ ಪಂದ್ಯ ಮುಂದೂಡಿಕೆ: ವಾಸ್ಕೊಡಗಾಮದಲ್ಲಿ ಗುರುವಾರ ನಡೆಯಬೇಕಿದ್ದ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ಮತ್ತು ಕೇರಳ ಬ್ಲಾಸ್ಟರ್ಸ್ ನಡುವಣ ಪಂದ್ಯವನ್ನು ಕೋವಿಡ್ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ. ಐಎಸ್‌ಎಲ್‌ನ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಲಾಗಿದೆ.

ಬ್ಯಾಡ್ಮಿಂಟನ್: ಸಿಂಧುಗೆ ಗೆಲುವು

ಪಿ.ವಿ. ಸಿಂಧು

ಲಖನೌ (ಪಿಟಿಐ): ಸುಲಭ ಜಯ ಸಂಪಾದಿಸಿದ ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ, ಭಾರತದ ಪಿ.ವಿ. ಸಿಂಧು ಅವರು ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡನೇ ಸುತ್ತಿಗೆ ಕಾಲಿಟ್ಟರು.

ಬಾಬು ಬನಾರಸಿ ದಾಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ಸುತ್ತಿನ ಹಣಾಹಣಿಯಲ್ಲಿ ಬುಧವಾರ ಸಿಂಧು 21-9, 21-9ರಿಂದ ಸ್ವದೇಶದ ಆಟಗಾರ್ತಿ ತಾನಿಯಾ ಹೇಮಂತ್ ಅವರನ್ನು ಸೋಲಿಸಿದರು.

ಸಿಂಧು ಅವರಿಗೆ ಮುಂದಿನ ಸುತ್ತಿನಲ್ಲಿ ಅಮೆರಿಕದ ಲಾರೆನ್ ಲ್ಯಾಮ್ ಸವಾಲು ಎದುರಾಗಲಿದೆ.

ಮತ್ತೊಂದು ಪಂದ್ಯದಲ್ಲಿ ಭಾರತದ ಕನಿಕಾ ಕನ್ವಾಲ್ 21-15, 16-21, 21-6ರಿಂದ ಅಮೆರಿಕದ ದಿಶಾ ಗುಪ್ತಾ ವಿರುದ್ಧ ಗೆದ್ದರು. ಮೊದಲ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಸಮಿಯಾ ಇಮದ್ ಫಾರೂಕಿ 17-21, 21-11, 21-10ರಿಂದ ಶ್ರುತಿ ಮುಂಡಾದ ಎದುರು, ಸಾಯಿ ಉತ್ತೇಜಿತಾ ರಾವ್ 21-9, 21-12ರಿಂದ ಅಂಜನಾ ಕುಮಾರಿ ವಿರುದ್ಧ ಗೆಲುವು ಸಾಧಿಸಿದರು. ಪ್ರೇರಣಾ ನೀಲೂರಿ, ಸ್ಮಿತಾ ತೋಶ್ನಿವಾಲ್ ಕೂಡ ಎರಡನೇ ಸುತ್ತು ಪ್ರವೇಶಿಸಿದರು.

ಪುರುಷರ ಸಿಂಗಲ್ಸ್‌ನಲ್ಲಿ ಕುಶಾಲ್ ಧರ್ಮಾಮೆರ್ 14-21, 21-1,1 21-16ರಿಂದ ಸಿಂಗಪುರದ ಜಿಯಾ ಹೆಂಗ್ ಜೇಸನ್ ತೆಹ್ ಎದುರು, ಚಿರಾಗ್ ಸೇನ್ 21-9, 21-6ರಿಂದ ಅನ್ಸಲ್ ಯಾದವ್ ವಿರುದ್ಧ ಗೆಲುವು ಸಾಧಿಸಿ ಮುನ್ನಡೆದರು. ಮಿಥುನ್ ಮಂಜುನಾಥ್ ಮತ್ತು ರಘು ಮರಿಸ್ವಾಮಿ ಕೂಡ ಜಯ ಸಾಧಿಸಿ ಎರಡನೇ ಸುತ್ತು ಪ್ರವೇಶಿಸಿದರು. ಮಹಿಳಾ ಡಬಲ್ಸ್‌ನಲ್ಲಿ ತ್ರೀಶಾ ಜೋಲಿ– ಗಾಯತ್ರಿ ಗೋಪಿಚಂದ್ 21-1, 21-4ರಿಂದ ಮಹೇಕ್ ನಾಯಕ್– ಸೌಮ್ಯಾ ಸಿಂಗ್ ಎದುರು ಜಯಿಸಿದರು. ಪುರುಷರ ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್– ಧ್ರುವ ಕಪಿಲ ಕೂಡ ಎರಡನೇ ಸುತ್ತಿಗೆ ಕಾಲಿಟ್ಟರು

ಭಾರತ ಕಿರಿಯರ ಕ್ರಿಕೆಟ್ ತಂಡದಲ್ಲಿ ಕೋವಿಡ್!

ತರೌಬಾ, ಟ್ರಿನಿಡಾಡ್ (ಪಿಟಿಐ): 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಲ್ಗೊಂಡಿರುವ ಭಾರತ ತಂಡದಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡಿದೆ. ನಾಯಕ ಯಶ್ ಧುಲ್, ಉಪನಾಯಕ ಶೇಕ್ ರಶಿದ್, ಬ್ಯಾಟರ್ ಆರಾಧ್ಯ ಯಾದವ್, ವಸು ವತ್ಸ್, ಮಾನವ್ ಪಾರಖ್ ಮತ್ತು ಸಿದ್ಧಾರ್ಥ್ ಯಾದವ್ ಅವರಿಗೆ ಕೋವಿಡ್ ಇರುವುದು ದೃಢಪಟ್ಟಿದೆ.

ಈ ನಾಲ್ವರು ಬುಧವಾರ ನಡೆದ ವಿಶ್ವಕಪ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಕಣಕ್ಕೆ ಇಳಿಯಲಿಲ್ಲ. ನಿಶಾಂತ್ ಸಿಂಧು ತಂಡವನ್ನು ಮುನ್ನಡೆಸಿದರು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 19 ವರ್ಷದೊಳಗಿನವರ ತಂಡ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 307 ರನ್ ಗಳಿಸಿತು. ಹರ್ನೂರ್ ಸಿಂಗ್ (88; 101 ಎಸೆತ, 4X12) ಮತ್ತು ಅಂಕೃಷ್ ರಘುವಂಶಿ (79; 79 ಎ, 4X10, 6X2) ಭರ್ಜರಿ ಅರ್ಧಶತಕಗಳನ್ನು ಗಳಿಸಿದರು. ಮೊದಲ ವಿಕೆಟ್‌ಗೆ ಇವರಿಬ್ಬರು 164 ರನ್ ಸೇರಿಸಿದರು.

ಅಂಕೃಷ್ ಔಟಾದ ನಂತರ ಹರ್ನೂರ್ ಜೊತೆಗೂಡಿದ ರಾಜ್ ಬಾವ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ನಿಶಾಂತ್ ಸಿಂಧು ಮತ್ತು ರಾಜ್‌ವರ್ಧನ್ ಹಂಗರಗೇಕರ್ ಮಧ್ಯಮ ಕ್ರಮಾಂಕದಲ್ಲಿ ಮಿಂಚಿದರು.

ಪ್ರೊ ಕಬಡ್ಡಿ ಲೀಗ್: ಹರಿಯಾಣ ಸ್ಟೀಲರ್ಸ್ ಜಯಭೇರಿ

ಟೈಟನ್ಸ್‌ಗೆ ಮೊದಲ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತತ ಸೋಲಿನಿಂದ ಕಂಗೆಟ್ಟಿದ್ದ ತೆಲುಗು ಟೈಟನ್ಸ್ ತಂಡ ಪ್ರೊ ಕಬಡ್ಡಿ ಲೀಗ್‌ನ ಎಂಟನೇ ಆವೃತ್ತಿಯಲ್ಲಿ ಮೊದಲ ಜಯ ದಾಖಲಿಸಿತು. ವೈಟ್‌ಫೀಲ್ಡ್‌ನ ಶೆರಟಾನ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಈ ತಂಡ ಜೈಪುರ್ ಪಿಂಕ್ ಪ್ಯಾಂಥರ್ಸ್ ವಿರುದ್ಧ 35–34ರಲ್ಲಿ ಜಯ ಗಳಿಸಿತು.

ಡಿಫೆಂಡರ್ ಆದರ್ಶ್ 9 ಪಾಯಿಂಟ್ ಗಳಿಸಿದರೆ ರೇಡರ್ ರಜನೀಶ್ 7, ಸುರಿಂದರ್ ಸಿಂಗ್ 4 ಮತ್ತು ರಾಕೇಶ್ ಗೌಡ 3 ಪಾಯಿಂಟ್ ಕಲೆ ಹಾಕಿದರು. ಜೈಪುರ್ ಪರ ಅರ್ಜುನ್ ದೇಶ್ವಾಲ್ (13 ಪಾಯಿಂಟ್) ಅವರ 'ಸೂಪರ್ ಟೆನ್' ವ್ಯರ್ಥವಾಯಿತು. ದೀಪಕ್ ಹೂಡ 8 ಪಾಯಿಂಟ್ ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಆಲ್‌ರೌಂಡ್ ಆಟವಾಡಿದ ಹರಿಯಾಣ ಸ್ಟೀಲರ್ಸ್ 37–30ರಲ್ಲಿ ಪುಣೇರಿ ಪಲ್ಟನ್ ತಂಡವನ್ನು ಮಣಿಸಿತು. ರೇಡರ್ ವಿಕಾಸ್ ಖಂಡೋಲ ಅವರ ಅಮೋಘ ದಾಳಿ ಮತ್ತು ಜೈದೀಪ್ ಅವರ ಮೋಹಕ್ ಟ್ಯಾಕ್ಲಿಂಗ್ ತಂಡದ ಗೆಲುವಿಗೆ ಕಾರಣವಾಯಿತು. ಮೊದಲಾರ್ಧದಲ್ಲಿ ಉಭಯ ತಂಡಗಳೂ ನಿಧಾನಗತಿಯಲ್ಲಿ ಪಾಯಿಂಟ್ ಗಳಿಸಿದವು. ಹೀಗಾಗಿ ಸಮಬಲದ ಹೋರಾಟ ನೀಡಿದವು. ಆದರೆ ದ್ವಿತೀಯಾರ್ಧದಲ್ಲಿ ಪುಣೇರಿ ಮಿಂಚಿತು.

ವಿಕಾಸ್ ಖಂಡೋಲ ಎಂಟು ಟಚ್ ಪಾಯಿಂಟ್ ಕಲೆ ಹಾಕಿದರೆ ಜೈದೀಪ್ ಒಂಬತ್ತು ಟ್ಯಾಕಲ್‌ಗಳಲ್ಲಿ 7 ಪಾಯಿಂಟ್ ಗಳಿಸಿದರು. ಅವರಿಗೆ ಮೋಹಿತ್ ಉತ್ತಮ ಸಹ ಕಾರ ನೀಡಿದರು. ಅವರು ಎಂಟು ಟ್ಯಾಕ ಲ್‌ಗಳ ಮೂಲಕ 7 ಪಾಯಿಂಟ್ ತಂದುಕೊಟ್ಟರು. ಪುಣೇರಿಗಾಗಿ ವಿಶ್ವಾಸ್ ಎಸ್ ಮೂರು ಬೋನಸ್ ಸೇರಿದಂತೆ 7 ರೇಡಿಂಗ್ ಪಾಯಿಂಟ್ ಗಳಿಸಿಕೊಟ್ಟರು.

ಇಂದಿನ ಪಂದ್ಯ (ರಾತ್ರಿ)

ತಮಿಳ್ ತಲೈವಾಸ್ Vs ಗುಜರಾತ್ ಜೈಂಟ್ಸ್ 7.30

ಬೆಂಗಳೂರು ಬುಲ್ಸ್ Vs ಬೆಂಗಾಲ್ ವಾರಿಯರ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	11	7	2	2	42
ಪಟ್ನಾ ಪೈರೇಟ್ಸ್	11	7	3	1	40
ಬೆಂಗಳೂರು ಬುಲ್ಸ್	11	7	3	1	39
ಯುಪಿ ಯೋಧಾ	11	4	4	3	33
ಜೈಪುರ್ ಪಿಂಕ್ ಪ್ಯಾಂಥರ್ಸ್	11	5	5	1	32
ಯು ಮುಂಬಾ	11	3	3	5	31
ತಮಿಳ್ ತಲೈವಾಸ್	10	3	2	5	30
ಬೆಂಗಾಲ್ ವಾರಿಯರ್ಸ್	11	5	5	1	30
ಹರಿಯಾಣ ಸ್ಟೀಲರ್ಸ್	11	4	5	2	29
ಗುಜರಾತ್ ಜೈಂಟ್ಸ್	10	2	5	3	23
ಪುಣೇರಿ ಪಲ್ಟನ್	11	4	7	-	22
ತೆಲುಗು ಟೈಟನ್ಸ್	11	1	8	2	17

(ಬುಧವಾರದ ಪಂದ್ಯಗಳ ಅಂತ್ಯಕ್ಕೆ)

ಹೈದರಾಬಾದ್ ರೇಸ್

ಸೋಲೊಯಿಸ್ಟ್ ಗೆಲ್ಲುವ ನಿರೀಕ್ಷೆ

ಆರ್.ಎಂ.ರೆಡ್ಡಿ ಮೆಮೋರಿಯಲ್ ಟ್ರೋಫಿ ಗುರುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸೋಲೊಯಿಸ್ಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸಿಲ್ವರ್ ಸೆಟ್ 4, ಹಾರ್ಸ್ ಓ ವಾರ್ 2, ಸೋಲ್ ಎಂಪ್ರೆಸ್ 3

2ನೇ ರೇಸ್: ಲೈನ್‌ವೈಲರ್ 1, ಸನ್ ಡ್ಯಾನ್ಸರ್ 4, ಕರ್‌ಕ್ಯುಮಿನ್ 2

3ನೇ ರೇಸ್: ಬೆಲ್ಲಾಗಿಯೊ 3, ಪ್ಲೆರೋಮಾ 7, ಲೇಡಿ ಡಿ 5

4ನೇ ರೇಸ್: ಸೋಲೊಯಿಸ್ಟ್ 3, ಒನ್ ವಿಶ್ 2, ಅಕಿಡೊ 4

5ನೇ ರೇಸ್: ಬ್ಯೂಟಿ ಆನ್ ಪರೇಡ್ 4, ಮಿನಿಲ್ಲಿ 2, ಚಕಿಟ್ 1

6ನೇ ರೇಸ್: ಲೈಟ್ನಿಂಗ್ ಫೇರಿ 7, ಸ್ಟಾರ್ ಬೇಬ್ 1. ರಾಯಲ್ ಗ್ರೇಸ್ 3

ಉತ್ತಮ ಬೆಟ್: ಬೆಲ್ಲಾಗಿಯೊ

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	3,4,5,6	1,2,3	4,5,6